TIGHT BINDING BOOK

UNIVERSAL
LIBRARY
OU_200122
UNIVERSAL
LIBRARY

**OSMANIA UNIVERSITY LIBRARY**

Call No. K83/I355 Accession No. K3922

Author [illegible]

Title [illegible]

This book should be returned on or before the date last marked below

NOW SHE IS BUT A STORY THAT IS TOLD
BESIDE THE FIRE

ವಿ. ಎಂ. ಇನಾಂದಾರ್

ಮಾಲೆಯ ೧೯೫೧ ಅಕ್ಟೋಬರ್ ಸಂಚಿಕೆ.

ಮಾಲೆಯ ಆರನೆಯ ವರುಷದ ಮೊದಲನೆಯ ಕಾದಂಬ

[ಎಲ್ಲ ಹಕ್ಕುಗಳು ಗ್ರಂಥಕರ್ತರವು.]

**ಬೆಲೆ: ರೂ. ೨—೧೨—೦**

## ಅರಿಕೆ

ಈ ಕಾದಂಬರಿಯ ವಿಧಾನ–ವಿಚಾರಗಳನ್ನು ಕುರಿತು ಹೇಳಬೇಕೆನ್ನಿಸಿದ ಕೆಲವು ಮಾತುಗಳನ್ನು ‘ಹಿನ್ನುಡಿ’ಯಲ್ಲಿ ಹೇಳಿದ್ದೇನೆ. ಆ ಮಾತುಗಳನ್ನು ಇಲ್ಲಿಯೇ ಹೇಳಬಹುದಾಗಿತ್ತು. ಆದರೆ ಹಿನ್ನುಡಿಯಲ್ಲಿ ಚರ್ಚೆಯ ಅನುಕೂಲಕ್ಕೆಂದು ಕೆಲವೆಡೆ ಕಥಾಭಾಗವನ್ನು ಸಂಕ್ಷೇಪವಾಗಿ ಹೇಳಬೇಕಾಗಿ ಬಂದಿದೆ. ಕಾದಂಬರಿಯನ್ನು ಓದುವ ಮೊದಲೇ ಅದನ್ನು ಓದಿದವರಿಗೆ ಕಥೆಯ ಕುತೂಹಲ ಕಳೆಯಬಹುದು ಎಂದೆನಿಸಿದ್ದರಿಂದ ಆ ಭಾಗವನ್ನು ಕೊನೆಯಲ್ಲಿರಿಸಲಾಗಿದೆ. ಇದಲ್ಲದೆ, ಹಿನ್ನುಡಿಯಲ್ಲಿಯ ವಿಷಯ ಕಾದಂಬರಿಗಿಂತಲೂ ಹೆಚ್ಚಾಗಿ ಅದಕ್ಕೆ ಹಿನ್ನೆಲೆಯಾಗಿದ್ದ ಕೆಲವೊಂದು ವಿಚಾರಗಳ ಚರ್ಚೆಗೆ ಸಂಬಂಧಿಸಿದ್ದು. ಕಾದಂಬರಿಯನ್ನು ಓದಬೇಕೆಂದವರೆಲ್ಲರಿಗೂ ಅದನ್ನು ಓದಲೇಬೇಕೆಂಬ ಇಚ್ಛೆ ಇರಬೇಕಾದುದಿಲ್ಲ. ಬೇಡವಾದವರು ಬಿಟ್ಟುಬಿಡುವಂತೆ ಮುನ್ನುಡಿಯನ್ನು ಹಿನ್ನುಡಿಯನ್ನಾಗಿಸಿದ್ದೇನೆ.

ಎಂದಿನಂತೆ ನನ್ನ ಬರವಣಿಗೆಯ ವಿಷಯದಲ್ಲಿ ಆಸ್ಥೆಯನ್ನು ತೋರಿಸಿ ಈ ಕಾದಂಬರಿಯನ್ನು ತಮ್ಮ ಮಾಲೆಯಲ್ಲಿ ಪ್ರಕಟಗೊಳಿಸಿದ್ದಕ್ಕಾಗಿ ಶ್ರೀ ಪಬ್ಬು ಅವರಿಗೆ ನನ್ನ ವಂದನೆಗಳು.

ಅಹಮ್ಮದಾಬಾದ
೮—೯—೫೧

ವಿ. ಎಂ. ಇನಾಂದಾರ್

# ನಮ್ಮ ಮಾತು

ಶ್ರೀ ವಿ. ಎಂ. ಇನಾಂದಾರರ 'ಸ್ವರ್ಗದ ಬಾಗಿಲು' ಕಾದಂಬರಿಯೊಡನೆ ನಮ್ಮ ಮಾಲೆಯು ಆರನೆಯ ವರುಷ ಆರಂಭವಾಗುತ್ತದೆ. 'ಕನಸಿನ ಮನೆ', 'ಮೂರಾಬಟ್ಟೆ' ಮತ್ತು 'ವಿಜಯಯಾತ್ರೆ' ಕಾದಂಬರಿಗಳನ್ನು ಈಗಾಗಲೇ ಕನ್ನಡ ಓದುಗರಿಗೆ ಒದಗಿಸಿಕೊಟ್ಟಿದ್ದಾರೆ. ಅವೆಲ್ಲ ಜನಮೆಚ್ಚುಗೆಯನ್ನು ಪಡೆದಿರುವವೆಂಬುದರಲ್ಲಿ, ಇಷ್ಟು ತೀವ್ರದಲ್ಲೆ ಅವೆಲ್ಲ ಕಾದಂಬರಿಗಳು ಎರಡನೆಯ ಮುದ್ರಣಕ್ಕೆ ಸಿದ್ಧವಾಗಿವೆ ಎಂಬುದೆ ನಿದರ್ಶನ. ಶ್ರೀಯುತರ ರಸಶೈಲಿಯನ್ನು ಮೆಚ್ಚಿದ ಕನ್ನಡಿಗರು ಪ್ರಕೃತ ಕಾದಂಬರಿ 'ಸ್ವರ್ಗದ ಬಾಗಿಲು'ನ್ನು ಆದರದಿಂದ ಸ್ವೀಕರಿಸುವರೆಂದು ನಂಬಿದ್ದೇವೆ. ಈ ಕಾದಂಬರಿಯನ್ನು ನಮ್ಮ ಮಾಲೆಯಲ್ಲಿ ಪ್ರಕಟಿಸಲು ಅನುಮತಿ ಕೊಟ್ಟುದಕ್ಕಾಗಿ ಶ್ರೀ ಇನಾಂದಾರರಿಗೆ ನಾವು ಋಣಿ.

ಕಳೆದ ಐದು ವರುಷಗಳಿಂದ ನೆರವಿತ್ತು ಪ್ರೋತ್ಸಾಹಿಸಿದ ಚಂದಾದಾರರಿಗೂ ಲೇಖಕರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ನಮ್ಮ ಮಾಲೆಯ ಮುಂದಿನ ಕಾದಂಬರಿ ಶ್ರೀಯುತ ಎಂ. ವಿ ಸೀತಾರಾಮಯ್ಯನವರು ಬರೆದ '**ನಂಜಿನ ಸವಿ**' ಎಂದು ತಿಳಿಸಲು ಸಂತೋಷವಾಗುತ್ತದೆ. 'ನಂಜಿನ ಸವಿ'—ಸುಮಾರು ೨೦೦ ಪುಟ—ಇದೆ ಡಿಸೆಂಬರ್‌ನಲ್ಲಿ ಪ್ರಕಟವಾಗುವುದು.

ತಮ್ಮ,

**ಪ್ರಕಾಶಕ**

## ೧

ಸಂಜೆಯ ಹೊಂಬಿಸಿಲು ಕ್ಷಣಕ್ಷಣಕ್ಕೂ ಬಾಡುತ್ತಿತ್ತು. ಬಾಗಿಲು ಕೋಟೆಯ ಚಿಕ್ಕ ಬೀದಿಯೊಂದರ ಮೂಲೆಯಲ್ಲಿಯ ತನ್ನ ಮನೆಯೆದುರಿನ ಬಾಗಿಲಲ್ಲಿ ಕಾವೇರಿ ತೀರ ವಿಮನಸ್ಕಳಾಗಿ ಕುಳಿತಿದ್ದಳು. ಆ ಕ್ಷಣಕ್ಕೆ ಆಕೆಯನ್ನು ನೋಡಿದ ಯಾರಿಗೂ ಮರುಕವೆನಿಸದಿರುತ್ತಿರಲಿಲ್ಲ. ಯಾವುದೋ ಒಂದು ಬಗೆಯ ಅತೃಪ್ತಿ ದಿನದಿನಕ್ಕೂ ಆಕೆಯ ಬದುಕನ್ನು ಕವಿಯುತ್ತಿತ್ತೆಂಬುದು ಆಕೆಯ ಮುಖದಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ಆ ಮುಖವನ್ನು ವರ್ಣಿಸುವುದು ಸಾಧ್ಯವಿಲ್ಲವೆಂದು ಕಾಣುತ್ತದೆ. ದುಷ್ಯಂತ ರಾಜಧಾನಿಗೆ ಮರಳಿದ ದಿನ ಶಕುಂತಲೆ ದುರ್ವಾಸ ಬರುವ ಮುನ್ನ ತನ್ನ ಗುಡಿಸಲ ಬಾಗಿಲಲ್ಲಿ ಕುಳಿತಿರಲಿಲ್ಲವೆ? ಕಾವೇರಿ ಶಕುಂತಲೆಯಷ್ಟು ಚೆಲುವೆಯಲ್ಲದಿದ್ದರೂ ಎಂಟು ವರ್ಷಗಳ ಮುಂಚೆ ಶ್ರೀನಿವಾಸನೊಡನೆ ಮದುವೆಯಾದಾಗ ಆಕೆ ಚೆಲುವೆಯಾಗಿರಲೇಬೇಕೆಂಬುದನ್ನು ಆಕೆಯ ಮುಖ ಇಂದಿಗೂ ಸಾರಿ ಹೇಳುತ್ತಿತ್ತು. ಆದರೆ ಬಾಡಿಹೋದ ಆ ಮುಖದಲ್ಲಿ ಇಂದು ಕಾಣುತ್ತಿರುವುದು ಕಳೆದ ಕೆಲವು ವರುಷಗಳಲ್ಲಿಯ ಬದುಕಿನ ಕಷ್ಟನಿಷ್ಠುರಗಳ ಛಾಯೆ ಮಾತ್ರ. ಆ ಕಣ್ಣುಗಳಲ್ಲಿ ಅಪಾರವಾದ ದುಃಖವಿದೆ, ಮರುಕವಿದೆ. ಆದರೆ ಯಾಕೆ? ಏನು? ಎಂದು ಕೇಳುವವರಿಲ್ಲ. ಕೇಳಿದರೂ ಆಕೆ ಉತ್ತರವನ್ನು ಏನು ಹೇಳಬಲ್ಲಳು? ಜೀವನದ ದೊಡ್ಡ ಸುಖವನ್ನೂ ಆಕೆ ಪಡೆದವಳಲ್ಲ; ಬಯಸಿದವಳೂ ಅಲ್ಲ. ಆದ್ದರಿಂದ ದುಃಖವೇ ಮೈಗೂಡಿ ಹೋಗಿದೆ. ಅದೇ ಜೀವನದ ಕ್ರಮವಾಗಿದೆ. ಇನ್ನೊಬ್ಬರ ಜೀವನದಲ್ಲಿ ಸುಖವಿದೆ, ಅಂಥ ಸುಖ ತನಗೂ ದೊರೆಯಬೇಕೆಂಬ ಆಸೆ ಆಗಾಗ ತಲೆಯೆತ್ತುತ್ತಿತ್ತಾದರೂ ಸುಖವಾಗಿದ್ದವರು ಬೇರೆಯೆ, ಅವರ ಪಂಕ್ತಿಯೆ ಬೇರೆ ಎಂಬ ಭಾವನೆ ಆಕೆಯಲ್ಲಿ ಬೇರೂರಿರಬೇಕು. ಅಂತೆಯೆ, ಆಕೆಯಲ್ಲಿ ಅಂಥವರ ವಿಚಾರದಲ್ಲಿ ತಿಲಮಾತ್ರವೂ ಅಸೂಯೆ ಇರಲಿಲ್ಲ. ತನ್ನ ಬದುಕು ತನ್ನದು, ಇನ್ನೊಬ್ಬರದು ಇನ್ನೊಂದು ರೀತಿ ಎಂಬ ತಾತ್ವಿಕ

ಸಮಾಧಾನ ಪಡೆಯಬಲ್ಲ ವಿದ್ಯಾಭ್ಯಾಸವೂ ಅವಳಿಗಿರಲಿಲ್ಲ. ಏನೋ ಒಂದು ರೀತಿ ಬದುಕು ಸಾಗಿತ್ತು; ಅದರಲ್ಲಿ ಸುಖವಿರಲಿಲ್ಲ, ಅಥವಾ ಬದುಕು ಬೆಳೆಸಿಕೊಳ್ಳಬೇಕು ಎಂಬ ಒಂದು ಯೋಜನೆಯ ಹೊರತು ಬೇರೆ ಯಾವ ಯೋಚನೆಯೂ ಆಕೆಯಲ್ಲಿ ಇರಲಿಲ್ಲವೆಂದು ತೋರುತ್ತಿತ್ತು. ಅಥವಾ ಈ ಯೋಚನೆಗಳಾದರೂ ಆಕೆಯಲ್ಲಿ ಇದ್ದವೊ ಇಲ್ಲವೊ ಯಾರು ಹೇಳಬೇಕು?

ಆಕೆ ದುಷ್ಯಂತನನ್ನು ಬೀಳ್ಕೊಟ್ಟ ಶಕುಂತಲೆಯಂತಿದ್ದಳೆಂದು ಹೇಳಿದೆಯಲ್ಲವೆ? ವ್ಯತ್ಯಾಸವಿಷ್ಟೆ. ಕಾವೇರಿ ಶ್ರೀನಿವಾಸನನ್ನು ಬೀಳ್ಕೊಟ್ಟು ಮೂರೂವರೆ ತಿಂಗಳಾಗಿತ್ತು. ಬೆಳಗಾಂವಿಯ ಅಂಚೆ-ತಂತಿ ಕಚೇರಿಯೊಂದರಲ್ಲಿ ಕೆಲಸಮಾಡುತ್ತಿದ್ದ ಆತ ಬಿಡುವಿಲ್ಲದ್ದಕ್ಕಾಗಿ ಮಾತು ಕೊಟ್ಟು ಎಷ್ಟೋ ಸಾರೆ ಬಂದಿರಲಿಲ್ಲ. ಕಳೆದ ನಾಲ್ಕಾರು ವರ್ಷವೂ ಆತ ರಿಲೀವ್ಹಿಂಗ್ ಕ್ಲಾರ್ಕನಾಗಿ ಕೆಲಸ ಮಾಡುತ್ತಿದ್ದನಾದ್ದರಿಂದ ಸರಿಯಾಗಿ ಹದಿನೈದು ದಿನವೂ ಒಂದೂರಿನಲ್ಲಿ ಇರಲಾಗುತ್ತಿರಲಿಲ್ಲ. ಅದಕ್ಕಾಗಿಯೆ ಕಾವೇರಿಗೆ ತನ್ನ ಅತ್ತೆಯೊಡನೆ ಬಾಗಿಲುಕೋಟೆಯಲ್ಲಿಯೆ ಇರಬೇಕಾಗಿದ್ದಿತು. ತಾಯಿತಂದೆಗಳಿಲ್ಲದೆ, ಸೋದರತ್ತೆಯ ಆಶ್ರಯದಲ್ಲಿ ಮದುವೆಗೆ ಮೊದಲು ಬೆಳೆದ ಆಕೆಗೆ ತವರು ಎಂಬುದೇ ಇರಲಿವಾದ್ದರಿಂದ ಏನಾದರೂ ಆಕೆ ಅತ್ತೆಯ ಮನೆಯಲ್ಲಿಯೆ ಇರಬೇಕು. ಆದರೆ ಅಲ್ಲಿ ಸಂತೋಷವಿರಲಿಲ್ಲ—ಭಾಗವ್ವನ ವಿಚಿತ್ರವಾದ ಸ್ವಭಾವದ ಮೂಲಕ. ಸಾಲದುದಕ್ಕೆ ಕಾವೇರಿಗೆ ಮಕ್ಕಳಾಗಿರಲಿಲ್ಲ! ಮಗುವೊಂದಿದ್ದರೆ ತನ್ನ ಕಷ್ಟವನ್ನು ಮರೆಯಲು ಒಂದು ಸಾಧನವಾಗುತ್ತಿತ್ತಲ್ಲವೆ? ಬಹುಶಃ ಭಾಗವ್ವನ ಜತೆಯಲ್ಲಿಯ ಬಾಳು ಇಷ್ಟು ಕಹಿಯೂ ಆಗುತ್ತಿರಲಿಲ್ಲವೇನೊ. ಅಂತೆಯೆ [illegible]ದನ್ನು ಬಯಸದ ಆಕೆ ತನ್ನ ಎದೆಯಲ್ಲಿ ಆ ಬಯಕೆಯೊಂದನ್ನು ಇತ್ತೀಚೆಗೆ ಬೆಳೆಸಿಕೊಂಡಿದ್ದಳು. ಅದರ ಜತೆಗೆ ಇತ್ತೀಚಿನ ಮೂರು ತಿಂಗಳಲ್ಲಿ ಶ್ರೀನಿವಾಸನಿಗೆ ಕೆಲಸ ಕಾಯಂ ಆಗಿ ಒಂದೇ ಊರ ಆಫೀಸಿನಲ್ಲಿ ಕೆಲಸಮಾಡುವ ಅನುಕೂಲ ಒದಗಿದ್ದಿತಾದ್ದರಿಂದ ಇನ್ನು ಕೆಲವೇ ದಿವಸಗಳಲ್ಲಿ ಶ್ರೀನಿವಾಸ ತನ್ನನ್ನು ತನ್ನೆಡೆಗೆ ಕರೆದೊಯ್ಯುವುದೆಂಬ ಆಸೆಯೂ ಮಿನುಗುತ್ತಿತ್ತು.

ತನ್ನ ಕೆಲಸ ಕಾಯಂ ಆದ ಮರುದಿನವೇ ಶ್ರೀನಿವಾಸ ಹಾತೊರೆದು ಬಾಗಿಲುಕೋಟೆಗೆ ಬಂದು ಸಂತೋಷದ ಸಮಾಚಾರವನ್ನು ತಿಳಿಸಿರಲಿಲ್ಲವೆ?

ಮತ್ತೆ ಹೊರಡುವಾಗ ಏನೆಂದು ಹೇಳಿದ್ದ? ನಿತ್ಯವೂ ಮುಚ್ಚಂಜೆಯ ಸಮಯಕ್ಕೆ ಮನೆಯ ಕೆಲಸವೆಲ್ಲವೂ ಮುಗಿದನಂತರ ಬಾಗಿಲಲ್ಲಿ ಕುಳಿತು ಮತ್ತೆ ಅದೇ ಮಾತನ್ನು, ಅದೇ ದೃಶ್ಯವನ್ನು ನೆನೆಯುವುದೆ ಒಂದು ಕೆಲಸವಾಗಿತ್ತು ಕಾವೇರಿಗೆ.

ತೀರ ಬಡಕಲಾಗಿ ಹೋದ ತನ್ನ ಮೈಮೇಲೆ ಶ್ರೀನಿವಾಸ ಕೈಯಾಡಿಸಿ 'ಇನ್ನು ನೀನು ಯೋಚಿಸಬೇಡ, ಕಾವಿ. ಮನೆ ಸಿಗುವುದೊಂದೇ ತಡ, ನಿನ್ನನ್ನು ಕರೆದುಕೊಂಡು ಹೋಗುತ್ತೇನೆ' ಎಂದಿದ್ದ. ಆಗ ಆಕೆಯ ಕಣ್ಣಲ್ಲಿ ಚಿಮ್ಮಿದ ಹನಿಗಳನ್ನು ಶ್ರೀನಿವಾಸ ಒರೆಸಿ ಎಷ್ಟೋ ಪರಿಯಿಂದ ಸಮಾಧಾನದ ಮಾತು ಹೇಳಿದ್ದ. ಆ ಕ್ಷಣ, ಕಾವೇರಿಗೆ ಮುಂಬರುವ ತನ್ನ ಜೀವನದಲ್ಲಿಯ ಸುಖಕ್ಕೊಂದು ಸಂಕೇತವಾಗಿ ನಿಂತಿತ್ತು. ಆದರೆ ಆ ಸುಖದ ಆಸೆ ಇನ್ನೂ ಉಕ್ಕೇರುವ ಆಸೆಯಾಗಿಯೆ ಉಳಿದಿತ್ತು. ಎಷ್ಟು ಹುಡುಕಿದರೂ ಶ್ರೀನಿವಾಸನಿಗೆ ಮನೆ ಸಿಕ್ಕಿರಲಿಲ್ಲ. ವಾರಕ್ಕೊಮ್ಮೆಯೊ ಎರಡು ವಾರಕ್ಕೊಮ್ಮೆಯೊ ಸಿಕ್ಕುತ್ತಿದ್ದ ಒಂದು ಬಿಡುವಿನ ದಿನವನ್ನು ಕಾವೇರಿಯ ಜೊತೆಯಲ್ಲಿ ಕಳೆಯಬೇಕೆಂದರೆ ಹಣ ವೆಚ್ಚ, ತೊಂದರೆಯ ಪ್ರವಾಸ. ಹೀಗಾಗಿ ಒಂದೆಡೆ ಆತನಾದರೆ, ಒಂದೆಡೆ ಈಕೆಯಾಗಿ, ಎದೆಯಲ್ಲಿಯ ಬಯಕೆಗಾಗಿ ಬಡವಾಗಿದ್ದರು. ಇಂದು ಸಾಯಂಕಾಲ ಕಾವೇರಿಯ ಮನಸ್ಸು ತೀರ ವಿಹ್ವಲವಾಗುವುದಕ್ಕೆ ಬೇರೆ ಕಾರಣಗಳೂ ಇದ್ದವು. ಆದರೆ ಕಳೆದ ಹದಿನೈದು ದಿನಗಳಲ್ಲಿ ಶ್ರೀನಿವಾಸನಿಂದ ಯಾವ ಕಾಗದವಾಗಲಿ, ಸಮಾಚಾರವಾಗಲಿ ಇಲ್ಲದ್ದೇ ಮುಖ್ಯವಾಗಿತ್ತು. ಯೋಚಿಸಿ ಯೋಚಿಸಿ, ಕಣ್ಣು ತೇವಗೊಂಡವು. ಕವಿಯುತ್ತಿದ್ದ ಮುಚ್ಚಂಜೆ ಮನಸ್ಸನ್ನಾವರಿಸಿತು. ಅದಕ್ಕೆಂದೇ ದೂರ್ವಾಸನಂತೆ (ಮನೆಗೆ ಹಿಂತಿರುಗಿ) ಬರುತ್ತಿದ್ದ ಅತ್ತೆ ಭಾಗಮ್ಮನನ್ನು ನೋಡದೆಯೆ ಸೆರಗಿನ ತುದಿಯಿಂದ ಕಣ್ಣೊರಸಿಕೊಂಡಳು. ಭಾಗಮ್ಮನಿಗೂ ಅಷ್ಟೇ ಸಾಕಾಯಿತು.

"ನಿನಗೇನು ಧಾಡಿಯೆ? ಶುಕ್ರವಾರ. ಮೂರೂಸಂಜೆ ಮನೆಯೆದುರು ಕೂತು ಅಳುತ್ತಿದ್ದೀಯೆ" ಎಂಬ ಆಕ್ರೋಶದಿಂದಲೆ ಕಾವೇರಿ ಎಚ್ಚತ್ತಳು. ಲಗುಬಗೆಯಿಂದ ಮನೆಯ ಒಳಕ್ಕೆ ಹೋಗಿ ದೀಪವನ್ನು ಉರಿಸುತ್ತಿರುವಾಗಲೆ ಭಾಗಮ್ಮ ಮತ್ತೆ ಅರಚಿದಳು.

"ಕತ್ತಲಾದರೂ ಮನೆಯಲ್ಲಿ ದೀಪ ಹಚ್ಚಬೇಕೆಂದು ಕೂಡ ತಿಳಿಯುವುದಿಲ್ಲವೆ, ನಿನಗೆ? ಎಷ್ಟು ಹೇಳಿದರೂ ಅಷ್ಟೆ."

ಆದರೆ ವೇಳೆಯ ಪರಿವೆಯಿಲ್ಲದೆ, ಎಲ್ಲವನ್ನೂ ಮರೆತು ಕುಳಿತ ಕಾವೇರಿಗೆ ಈ ಮಾತಾಗಲಿ, ಮಾತಿನ ರೀತಿಯಾಗಲಿ ಹೊಸದಾಗಿರಲಿಲ್ಲ. ಅಂಥ ಮಾತು ಸುಮಾರಾಗಿ ಮುಂಜಾವಿನಿಂದ ಸಂಜೆಯ ವರೆಗೆ ಪ್ರತಿಯೊಂದು ಸಂದರ್ಭದಲ್ಲಿಯೂ ನಡೆಯುತ್ತಿದ್ದವು. ಆ ರೀತಿಯ ವಾಡಿಕೆಯಾಗಿದ್ದರೂ ಮನಸ್ಸಿಗೆ ದುಃಖವಾಗದಿರುತ್ತದೆಯೆ? ಅದರಲ್ಲಿಯೂ ಸುಖದ ಕನಸನ್ನು ಕಾಣುತ್ತ ಹಗುರಾಗಿದ್ದ ಮನಸ್ಸಿಗೆ ಇಂಥ ಮಾತಿನ ಇರಿತ ಇನ್ನೂ ತೀಕ್ಷ್ಣವಾಗಿ ನೋವು ಮಾಡಿತು. ಆದರೆ ತನ್ನ ಮಾತಿನಿಂದ ಇನ್ನೊಬ್ಬರು ಯಾವ ಬಗೆಯಲ್ಲಿ ನೊಂದುಕೊಳ್ಳಬಹುದೆಂಬ ಯೋಚನೆ ಇಲ್ಲದ ಭಾಗಮ್ಮನಿಗೆ ಇದಾವುದೂ ತಿಳಿಯುತ್ತಿರಲಿಲ್ಲ. ಅಲ್ಲದೆ, ಕಾವೇರಿ ಸೊಸೆ! ಅತ್ತೆಯ ಮಾತನ್ನು ನುಂಗಿಕೊಂಡು ಸುಮ್ಮನೆ ಹಲ್ಲು ಕಚ್ಚಿಕೊಂಡಿರಬೇಕು. ಕಾವೇರಿ ಹಾಗಿರುತ್ತಿದ್ದಳೆಂದೆ ಭಾಗಮ್ಮನಿಗೆ—ಕೃತಿಯ ಮಾತು ಹಾಗಿರಲಿ—ಮಾತಿನಲ್ಲಿಯೂ ಯಾವ ಪ್ರತಿಭಟನೆಯಾಗುತ್ತಿರಲಿಲ್ಲ.

ಕಾವೇರಿ ಸುಮ್ಮನೆ ಎದ್ದು ಒಳಗಡೆ ಪಡಸಾಲೆಯಲ್ಲಿ ಚಿಮಣಿಯನ್ನು ಹಚ್ಚಿಟ್ಟು ದೇವರ ಮನೆಯಲ್ಲಿ ದೀಪ ಉರಿಸುವುದಕ್ಕೆ ಹೋದಳು. ಭಾಗಮ್ಮನ ಕರ್ಕಶವಾದ ದನಿ ಮತ್ತೆ ಮುಚ್ಚಂಜೆಯ ಆ ಶಾಂತತೆಯನ್ನು ಇರಿಯಿತು. "ನಿನಗೆ ದೇವರೂ ಅಷ್ಟೆ, ದೆವ್ವವೂ ಅಷ್ಟೆ. ದೆವ್ವದ ಹಾಗೆ ಕೂತಿದ್ದೀಯಾ. ದೇವರ ಮುಂದಾದರೂ ಒಂದು ದೀಪ ಹಚ್ಚಿ ಕುಳಿತಿದ್ದರೆ ನಿನಗೇನು ಕೈ ಕಡಿದು ಬೀಳುತ್ತಿತ್ತೆ? ಇಂಥ ನಿನಗೆ ಯಾವ ದೇವರು ಮಕ್ಕಳನ್ನು ಕೊಡಬೇಕು?"....ಎಂದು ಗೊಣಗುತ್ತ ಹಿತ್ತಲಲ್ಲಿ ಹೋದಳು. ಇಂಥ ಪ್ರಸಂಗಗಳಲ್ಲಿ ಕಾವೇರಿ ಯಾವಾಗಲೂ ಮೌನವಾಗಿಯೆ ಇರುತ್ತಿದ್ದಳು. ಮಾತಾಡಿ ಏನು ಪ್ರಯೋಜನ ಎಂಬ ನಿರಾಶೆ ಒಂದೆಡೆಯಾದರೆ, ಇನ್ನೊಂದೆಡೆ ಮಾತಾಡಿದರೆ ಮಾತಿಗೆ ಪ್ರತಿಯಾಗಿ ಇನ್ನೂ ಹೆಚ್ಚಿನ ಬೈಗುಳಗಳನ್ನು ಕೇಳಬೇಕಾಗುತ್ತದಲ್ಲಾ ಎಂಬ ಹೆದರಿಕೆ. ಆದರೆ ಕಾವೇರಿಯ ಮೌನ ಭಾಗಮ್ಮನನ್ನು ಹೆಚ್ಚಾಗಿಯೆ ಕೆರಳಿಸುತ್ತಿತ್ತು.

ಆಕೆಯ ಮನಃಸ್ಥಿತಿಯನ್ನು ತಿಳಿಯದೆ ಕಾವೇರಿ ತನ್ನ ಮಾತಿಗೆ ಯಾವ ಗಮನವನ್ನೂ ಕೊಡದ ಸೊಕ್ಕಿನವಳು ಎಂದೇ ತಿಳಿಯುತ್ತಿದ್ದಳು.

ಮನಸ್ಸು ತೀರ ನೊಂದಾಗ ಕಾವೇರಿ ಆಗೀಗ ಯೋಚಿಸುತ್ತಿದ್ದಳು ಮುಂಜಾವಿನಿಂದ ಸಂಜೆಯವರೆಗೆ ಒಂದು ಕೆಲಸವನ್ನೂ ತಪ್ಪದೆ ಮಾಡಿದರೂ ತನ್ನ ಅತ್ತೆ ಮತ್ತೆ ಯಾವುದಾದರೊಂದು ನೆಪವನ್ನು ಹೂಡಿ ತನ್ನನ್ನು ಆಡಿಕೊಳ್ಳುತ್ತಿರುವುದು ಏಕೆ? ಎಂದು ಅತ್ತೆಯ ಇಚ್ಛೆಗೆ ಇದಿರಾಗಿ ಯಾವ ಒಂದನ್ನೂ ಮಾಡುತ್ತಿರಲಿಲ್ಲ. ಮುಂಜಾವಿನಿಂದ ಸಂಜೆಯವರೆಗೆ ದೇಹ ದಣಿದು ಕುಸಿಯುವ ವರೆಗೆ ಮನೆಯ ಪ್ರತಿಯೊಂದು ಕೆಲಸವನ್ನು ಪೂರೈಸುತ್ತಿದ್ದಳು. ಹೀಗಿದ್ದರೂ....ತನಗೆ ಮಕ್ಕಳಾಗದಿದ್ದರೆ ತಾನೇನು ಮಾಡಬಲ್ಲಳು? ಅವರವರ ದೈವ. ಹೀಗೆ ಯೋಚಿಸುತ್ತಿದ್ದಾಗಲೆಲ್ಲವೂ ಕಾವೇರಿಯ ಹೃದಯದಲ್ಲಿ ಒಂದು ಭಾವನೆ ಉಕ್ಕೇರಿ ದುಃಖಪಡಿಸುತ್ತಿತ್ತು. ಅದೇನೆಂದರೆ, ತನಗೆ ಒಂದು ಒಳ್ಳೆಯ ಮಾತನ್ನು ಕೂಡ ಆಡುವವರು ಯಾರೂ ಇಲ್ಲವಲ್ಲಾ ಎಂದು. ತಾಯಿ-ತಂದೆಗಳ ಮುಖವನ್ನು ಕಾಣದ ಆಕೆ ವಾತ್ಸಲ್ಯವನ್ನು ಅರಿಯದವಳಾಗಿದ್ದಳು. ನೆರೆಹೊರೆಯವರ ಕೂಡ ಒಂದು ಮಾತನ್ನು ಹೆಚ್ಚುಕಡಿಮೆ ಆಡಿದರೆ—ಅವರ ಕೂಡ ಏನಾದರೊಂದು ಬಗೆಯ ಸಲಿಗೆ ಬೆಳೆದರೆ—ಅದು ಒಂದಿಲ್ಲೊಂದು ದಾರಿಯಿಂದ ಭಾಗವ್ವನಿಗೆ ತಿಳಿದುಬಂದು ಅದೂ ಒಂದು ಮನಸ್ತಾಪಕ್ಕೆ ಕಾರಣವಾಗುತ್ತಿದ್ದುದು ಆಕೆಯ ಅನುಭವವಾಗಿದ್ದರಿಂದ ಕಾವೇರಿ ಹೆಚ್ಚುಕಡಿಮೆ ಮನೆಯ ಹೊಸ್ತಿಲವನ್ನು ದಾಟುತ್ತಿರಲಿಲ್ಲ. ದಾಟುತ್ತಿರಲಿಲ್ಲವೆಂದರೂ ಬಟ್ಟೆಬರೆ ಒಗೆದುಕೊಂಡು ಬರಲಿಕ್ಕೆಂದು ಹೊಳೆಗೆ ಹೋಗುವುದನ್ನು ಹೊರತುಪಡಿಸಿದರೆ, ಅಲ್ಲಿಗೆ ಹೋದಾಗ ಮಾತ್ರ ಯಾರ ಒಬ್ಬಿಬ್ಬರ ಕೂಡ ಮಾತನಾಡಲು ಸಂದರ್ಭ ಸಿಕ್ಕುತ್ತಿತ್ತು. ಇಂಥ ಸಂದರ್ಭ ಸಿಕ್ಕಾಗ ಕಾವೇರಿ ಮನಬಿಚ್ಚಿ ಮಾತನಾಡುವುದು ಹಿಂದಿನ ಓಣಿಯ ಚಂಪಕ್ಕನ ಕೂಡ. ಉಳಿದವರೊಡನೆ ಆಕೆ ಮಾತನಾಡುವುದೂ ಅಷ್ಟಕ್ಕಷ್ಟೆ.

ಇಂಥ ಬರಡು ಜೀವನವನ್ನು ನಡೆಯಿಸುವ ಯಾರ ಮುಖದಲ್ಲಿ ಗೆಲುವಿದ್ದೀತು? ಏನಾದರೊಂದು ಸಂತೋಷದ ಕ್ಷಣವನ್ನು ಆಕೆ ಅಪೇಕ್ಷಿಸುವು

ದಾದರೆ ಅದು ಶ್ರೀನಿವಾಸನ ಸಾನ್ನಿಧ್ಯದಲ್ಲಿ. ಆದರೆ ಅವನಿಂದ ಬರಬೇಕಾದ ಕಾಗದ ಕೂಡ ಬಂದಿರಲಿಲ್ಲ. ಆದ್ದರಿಂದ ಮೊದಲೆ ವಿಮನಸ್ಕಳಾದ ಆಕೆ ಭಾಗಮ್ಮನ ಬಿರುನುಡಿಗಳಿಂದ ಇನ್ನಷ್ಟು ನೊಂದುಕೊಂಡು ಶ್ರೀನಿವಾಸನನ್ನೆ ನೆನೆಯುತ್ತ ಬಾಗಿಲಲ್ಲಿ ಮೈಮರೆತು ಕುಳಿತಿದ್ದರೆ ಆಶ್ಚರ್ಯವೇನು?

೨

ಕಾವೇರಿ ಶ್ರೀನಿವಾಸನನ್ನು ಈ ರೀತಿ ನೆನೆಯುತ್ತಿದ್ದಾಗ ಶ್ರೀನಿವಾಸ ತನ್ನ ಸಹೋದ್ಯೋಗಿಗಳೊಡನೆ ವಾಡಿಕೆಯಂತೆ ಆಫೀಸಿನ ಕೆಲಸ ಮುಗಿದ ಮೇಲೆ 'ಜಗದಂಬಾ ಭವನ'ವನ್ನು ಸೇರುತ್ತಿದ್ದ. ಸಂಜೆಯು ಆರೂವರೆಯ ನಂತರ ಎಲ್ಲಗೂ ಸೇರಿ ಅಲ್ಲಿ ಚಹವನ್ನು ಮುಗಿಸಿ ಕ್ಯಾಂಟೋನ್‌ಮೆಂಟ್ ಕಡೆಗೆ ಸುತ್ತಾಡಿ, ಏನಾದರೊಂದು ಹರಟೆಯಲ್ಲಿ ದಿನದ ಕೆಲಸದ ಹೊರೆಯನ್ನು ಮರೆಯುವುದು ಶ್ರೀನಿವಾಸನ ಸಹೋದ್ಯೋಗಿಗಳ ಪರಿಪಾಠವಾಗಿತ್ತು. ಆಂತೆಯೇ ಶ್ರೀನಿವಾಸನು ತನ್ನ ಕೆಲಸ ಕಾಯಂ ಆದಾಗ ಆತನು ಈ ಗುಂಪಿಗೆ ಸೇರಿಕೊಂಡಿದ್ದ. ಪ್ರತಿನಿತ್ಯವೂ ೮-೯ ಗಂಟೆ ಕಾಲ ಏಕಾಗ್ರವಾಗಿ ಕೆಲಸಮಾಡುವ ಈ 'ಹಾಡು ಕಲಿಯದ ಹಕ್ಕಿಗಳಿಗೆ' ಹರಟೆಯೆ ಒಂದು ಮನೋರಂಜನೆ. ಒಮ್ಮೊಮ್ಮೆ ಈ ಹರಟೆ ಒಳ್ಳೆ ಕುರುಸಿನದಾಗಿರುತ್ತಿತ್ತು. ಇಂದು ಸಾಯಂಕಾಲವೂ ಅಷ್ಟೆ. ಎರಡು ಮೂರು ದಿನ ಮೊದಲು ಎಲ್ಲರೂ ನೇರಿ ನೋಡಿಬಂದ ಚಿತ್ರಪಟವೊಂದನ್ನು ಕುರಿತು ಮಾತು ಬೆಳೆದಿತ್ತು ಶ್ರೀನಿವಾಸ ಹೇಳುತ್ತಿದ್ದ:

"ನೀವೇನೂ ಹೇಳಬಹುದು. ನಾನು ಒಪ್ಪುವುದು ಸಾಧ್ಯವಿಲ್ಲ ಎಷ್ಟಾದರೂ ಜನ್ಮ ಕೊಟ್ಟವಳು ತಾಯಿ. ಆಕೆಗೂ ಕೈಹಿಡಿದವಳಿಗೂ ಎಲ್ಲಿಯ ಸಾಮ್ಯ?"

"ಹೀಗೆ ಹೇಳುವವರು ನಿಜವಾಗಿಯೂ ಮದುವೆಯನ್ನು ಮಾಡಿಕೊಳ್ಳಬಾರದು. ಮದುವೆ ಮಾಡಿಕೊಂಡು ಎಲ್ಲಿಂದಲೋ ಕರೆತಂದ ಬಡಪಾಯಿಯನ್ನು ದುಃಖಕ್ಕೆ ಗುರಿಮಾಡುವುದಕ್ಕಿಂತ—"

ಸಹೋದ್ಯೋಗಿ ಗಂಗಾಧರನ ದನಿ ಅದು. ದುಡ್ಡಿನಿಂದ ಅನುಕೂಲವಿಲ್ಲದ್ದಕ್ಕಾಗಿ ಕಾಲೇಜಿನ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಬಿಡಬೇಕಾಗಿ ಬಂದು ಈ ಕೆಲಸವನ್ನು ಸೇರಿದ್ದ. ತನ್ನ ಅಸಹಾಯತೆ ಬಡತನಗಳೆಲ್ಲವೂ ಹಿಂದಿನವರಿಂದ, ವಿಶೇಷವಾಗಿ ಹಿರಿಯರಿಂದ ಬಂದವುಗಳೆಂದು ನಂಬಿಕೆ. ಆತನಲ್ಲಿ ಹಿಂದಿನ ತಲೆಮಾರಿನವರ ವಿಷಯವಾಗಿಯೆ ಒಂದು ಬಗೆಯ ಅನಾಸ್ಥೆ ಅನಾದರಗಳು ನೆಲೆಗೊಂಡಿದ್ದವು. 'ತಂದೆತಾಯಿಗಳ ಸುಖದುಃಖ

ಗಳು ಅವರವರ ಪಾಲಿಗೆ ಬಂದು ಮುಗಿದುಹೋದವು. ಅವರ ಸುಖದುಃಖಗಳ ಛಾಯೆ ನಮ್ಮ ಜೀವನವನ್ನು ಆವರಿಸುವುದು ಬೇಡ' ಎಂಬುದು ಆತನಿಗೊಂದು ತತ್ವಜ್ಞಾನವೆ ಆಗಿತ್ತು. ಆದರೆ ಆತನ ಅಭಿಪ್ರಾಯವನ್ನು ಒಪ್ಪದ ಶ್ರೀನಿವಾಸ ಹೇಳಿದ:

"ದುಃಖಕ್ಕೇನು ಗುರಿಮಾಡುವುದು? ಹಾಗೆ ತಿಳಿದುಕೊಳ್ಳುವುದೇ ತಪ್ಪು. ಹಿರಿಯರಾದವರಿಗೆ ಚಿಕ್ಕವರಿಂದ ಸಹಾಯ ಮನ್ನಣೆ ಬೇಡವೆ? ನಮಗಾಗಿ ದುಡಿದ, ದಣಿದ, ಬದುಕಿನಲ್ಲಿ ಹಣ್ಣಾದವರಿಗೆ ಅವರ ಕೊನೆಯ ದಿನಗಳಲ್ಲಿ ನಮ್ಮಿಂದ ಒಂದಿಲ್ಲೊಂದು ಬಗೆಯ ಸೇವೆ ಸಲ್ಲುವುದು ತಪ್ಪೆ?"

"ನಮಗಾಗಿ ದುಡಿದರು, ಹಣ್ಣಾದರು ಎಂಬ ಮಾತನ್ನೇ ನಾನು ಒಪ್ಪುವುದಿಲ್ಲ, ಶ್ರೀನಿವಾಸ್. ತಮ್ಮ ಬದುಕಿನಲ್ಲಿನ ಪರಿಸ್ಥಿತಿಗಳಿಗೆ ಅನುಸರಿಸಿ, ಕಾಲಕ್ಕೆ ತಕ್ಕಂತೆ ಅವರು ಬಾಳಿದರು. ಅವರು ಸುಖಿಗಳಾಗಿದ್ದರೆ ಅವರ ದೈವ, ದುಃಖಿಗಳಾಗಿದ್ದರೂ ಅವರ ದೈವ. ಅದನ್ನೆಲ್ಲ ನಾವು ಕಟ್ಟಿಕೊಂಡು ಮಾಡಬೇಕಾದದ್ದೇನು? ಅಲ್ಲದೆ, ಅವರು ನಮಗಾಗಿ ಮಾಡಿದ್ದೆಲ್ಲವೂ ಒಂದು ಪ್ರತಿಫಲದ ಅಪೇಕ್ಷೆಯಿಂದಲ್ಲವಲ್ಲ?"

"ಅವರು ಅಪೇಕ್ಷಿಸಲಿ, ಅಪೇಕ್ಷಿಸದೆ ಇರಲಿ. ನಾವು ನಡೆಸಿಕೊಡುವುದು ನಮ್ಮ ಕರ್ತವ್ಯ. ಗಂಗಾಧರಾ, ನಿನ್ನ ವಿಚಾರಸರಣಿ ಹೊಳೆಯನ್ನು ದಾಟಿದವನ ವಿಚಾರಸರಣಿ."

"ಪ್ರತಿಯೊಬ್ಬನಿಗೂ ಕೈಹಿಡಿದು ಆಚೆಯ ದಡಕ್ಕೆ ಮುಟ್ಟಿಸಲು ಯಾರೂ ಇರುವುದಿಲ್ಲ. ಯಾರೂ ಇರದಿದ್ದರೂ ಮನುಷ್ಯನಾದವ ಹೇಗಾದರೂ ದಡವನ್ನು ಮುಟ್ಟುತ್ತಾನೆ. ಅಂದಮೇಲೆ—"

ಇದುವರೆಗೆ ಸುಮ್ಮನಿದ್ದು ಕೇಳುತ್ತಿದ್ದ ಕಾಮೇಶರಾಯ ಮುಂದೆ ಬಂದ. ಅವನಂದ: "ನೀವಿಬ್ಬರೂ ಪಕ್ಷಪಾತಿಗಳು. ಹೀಗೆ ಪಕ್ಷಪಾತಿಗಳಾಗಿ ಯಾರೂ ಬದುಕನ್ನು ನಡೆಸುವುದು ಸಾಧ್ಯವಿಲ್ಲ."

"ಸಾಧ್ಯವಿಲ್ಲವೆ? ಇರದೆ ಏನು?" ಎಂದ ಶ್ರೀನಿವಾಸ.

"ಯಾವಾಗಲೂ ಸಾಧ್ಯವಿದೆ. ಖಂಡಿತವಾಗಿ ಇದೆ" ಎಂದ ಗಂಗಾಧರ.

"ಹಾಗಾದರೆ—ಹೋಗಲಿಬಿಡಿ. ಯಾಕೆ ಸುಮ್ಮನೆ?" ಎಂದು ಕಾಮೇಶರಾಯ ಅನುಮಾನಿಸಿ ಸುಮ್ಮನಾದ. ಆದರೆ ಗಂಗಾಧರನಿಗೆ ಸುಮ್ಮನಿರುವುದು ಸಾಧ್ಯವಾಗಲಿಲ್ಲ. ಅವನಂದ:

"ಸುಮ್ಮನೇಕಾದೆ ಕಾಮೇಶ್? ಆದರೆ ನೀನು ಹೇಳದಿರುವುದು ನಮ್ಮಲ್ಲಿ ಯಾರಿಗೆ ತಿಳಿಯದ ವಿಷಯ? ನಿನ್ನದು ಯಾವಾಗಲೂ ಮಧ್ಯಮ ಮಾರ್ಗ ಅಲ್ಲವೆ?"

"ನೀನು ಹಾಗೆನ್ನಬಹುದು ಆದರೆ ಇನ್ನಾವ ವಿಷಯದಲ್ಲಿಯಲ್ಲ ದಿದ್ದರೂ ಈ ವಿಷಯದಲ್ಲಿಯಂತೂ ಮಧ್ಯಮ ಮಾರ್ಗದ ಹೊರತು ಬೇರೆ ಉಪಾಯವೆ ಇಲ್ಲ"

"ಇದರಲ್ಲಿ ಮಧ್ಯಮಮಾರ್ಗ ಹೇಗೆ ಸಾಧ್ಯ, ಕಾಮೇಶ್? ಅಲ್ಲದೆ, ಹಿರಿಯರು ಹೇಳುವುದಾದರೂ ಏನು? ನಮಗೆ ಕೆಡಕಾಗಲಿ ಎಂದು ಹೇಳು ತ್ತಾರೆಯೆ?" ಎಂದು ಶ್ರೀನಿವಾಸ ಮುಂದರಿದ.

"ನಮಗೆ ಕೆಡಕಾಗಲಿ ಎಂದು ಹೇಳುತ್ತಾರೊ ಇಲ್ಲವೊ! ನಮಗೆ ಕೆಡ ಕಾಗದಿರಲಿ, ಎನ್ನುವುದಕ್ಕಿಂತ ತಮಗೆ ಅನುಕೂಲವಾಗಲಿ, ಎಂಬುದ ಕ್ಕಂತೂ ಖಂಡಿತವಾಗಿ ಹೇಳುತ್ತಾರೆ" ಎಂದು ಗಂಗಾಧರನ ವಾದ.

"ಹಾಗಲ್ಲ, ಗಂಗಾಧರ. ಯಾವ ಹಿರಿಯರಿಗೆ ತಮ್ಮ ಮಕ್ಕಳು ಮರಿಗಳಿಗೆ ದುಃಖವಾಗಲಿ, ಕಷ್ಟವಾಗಲಿ, ಎಂದೆನಿಸೀತು?"

"ಕಷ್ಟವಾಗಲಿ, ಎಂದು ಅವರಿಗೆ ಅನಿಸದಿದ್ದರೂ, ತಮ್ಮ ಅಪೇಕ್ಷೆ ಗಳಿಂದ ಆಚರಣೆಯಿಂದ ಕಷ್ಟವಾಗುತ್ತಿದೆ, ಆಗಬಹುದು ಎಂಬ ಅರಿವು ಮಾತ್ರ ಅವರಿಗೆ ಇರುವುದಿಲ್ಲ" ಎಂದು ಗಂಗಾಧರ ತನ್ನ ಅಭಿಪ್ರಾಯವನ್ನು ಹೇಳಿದ.

ಕಾಮೇಶನಿಗೆ ಒಂದು ಕಾರಣಕ್ಕಾದರೆ ಶ್ರೀನಿವಾಸನಿಗೆ ಇನ್ನೊಂದು ಕಾರಣಕ್ಕಾಗಿ ಈ ಅಭಿಪ್ರಾಯ ಸಮ್ಮತನಾಗುವಂತಿರಲಿಲ್ಲ. ಶ್ರೀನಿವಾಸ ಹೇಳಿದ:

"ಕಷ್ಟವಾಗುತ್ತದೆ, ಆಗಬಹುದು ಎಂದು ಹೇಳಿದೆಯಲ್ಲಾ, ಏನು ಹಾಗೆಂದರೆ? ನಿನ್ನ ಮಾತನ್ನು ಒಪ್ಪುವುದಾದರೆ ಮುದುಕರಾದವರು ದುಡಿ

ಯುತ್ತಲೇ ಇರಬೇಕು—ತಮ್ಮ ದಿನ ಕಳೆಯುವ ವರೆಗೆ ಅಲ್ಲವೆ? ಅವರಿಗೆ ಬದುಕಿನಲ್ಲಿ ವಿಶ್ರಾಂತಿ ಬೇಡವೆ?"

"ವಿಶ್ರಾಂತಿ ಬೇಡ ಎಂದು ಹೇಳುವುದಿಲ್ಲ, ನಾನು. ಅದನ್ನು ಅವರು ಪಡೆಯಬೇಕು. ಬೇಡಿ ಕಸಿದುಕೊಳ್ಳಬಾರದು, ಅಷ್ಟೆ."

ಕಾಮೇಶನಿಗೆ ಸಂಧಿ ಸಿಕ್ಕಿತು. ಅವನಂದ:

"ಅದೇ. ಬೇಡುವುದು, ಕಸಿದುಕೊಳ್ಳುವುದು ಎಂಬಷ್ಟರ ಮಟ್ಟಿಗೆ ಪರಿಸ್ಥಿತಿ ಬಂದುಬಿಟ್ಟರೆ, ಇಬ್ಬರಲ್ಲಿಯೂ ಇರಬೇಕಾದ ಸಹಕಾರಬುದ್ಧಿ ಮಾಯವಾಗಿದೆ ಎಂದಲ್ಲವೆ ಅರ್ಥ? ಆಷ್ಟಾದ ಮೇಲೆ ಸಿಕ್ಕರೂ ಅಷ್ಟೆ, ಸಿಕ್ಕದಿದ್ದರೂ ಅಷ್ಟೆ. ಮುಖ್ಯವಾಗಿ ಒಬ್ಬರೊಬ್ಬರ ಸೌಕರ್ಯಗಳನ್ನು ನೋಡಿ ಹೊಂದಿಕೊಂಡು ಹೋದರೆ ಇಬ್ಬರಿಗೂ ಸುಖ."

"ಅದೊಂದು ಬಯಕೆ, ಆದರ್ಶ ಮಾತ್ರ!" ಗಂಗಾಧರನ ಮಾತಿನ ರೀತಿಯಲ್ಲಿ ಕುತ್ಸಿತ ಇಣುಕುತ್ತಿತ್ತು. ಆದರ್ಶವೆಂಬುದು ಯಾವಾಗಲೂ ಬರಿಯ ಮಾತಿನಲ್ಲಿರತಕ್ಕದು, ವಾಸ್ತವ ಪ್ರಪಂಚಕ್ಕೆ ಅದರ ಯಾವ ಸಂಬಂಧವೂ ಇರುವುದಿಲ್ಲ ಎಂಬ ಸೂಚನೆ ಸ್ಪಷ್ಟವಾಗಿದ್ದಿತು. ಆ ಸೂಚನೆ ಕಾಮೇಶನಿಗೆ ತಿಳಿಯದೆ ಇರಲಿಲ್ಲ. ಅಂತೆಯೆ ಆತ ಕೇಳಿದ:

"ಈ ರೀತಿ ಹೊಂದಿಕೊಂಡು ಅತ್ತೆ-ಸೊಸೆಯರು ಸುಖದಿಂದ ಇದ್ದ ಉದಾಹರಣೆಗಳನ್ನು ಬೇಕಾದಷ್ಟು ಹೇಳಬಹುದು."

"ಬೇಕಾದಷ್ಟೆ? ಸಾವಿರಕ್ಕೊಂದು ಸಿಕ್ಕರೂ ಇಂದಿಲ್ಲ ನಾಳೆ ಈ ಅನ್ಯಾಯ ಅಳಿಯಬಹುದು ಎಂಬ ಆಸೆಯನ್ನಿಟ್ಟುಕೊಳ್ಳಬಹುದು. ನನ್ನ ಮಟ್ಟಿಗಂತೂ ನಾನೆಲ್ಲಿಯೂ ಕೇಳಿಲ್ಲ. ನೀನು ಹೇಳುವ ಹಾಗೆ ಎಲ್ಲಿಯಾದರೂ ಇದ್ದರೆ ಅದು ನಿಯಮಕ್ಕೊಂದು ಅಪವಾದ ಮಾತ್ರ."

ಒಂದೆರಡು ನಿಮಿಷ ತಡೆದು ಗಂಗಾಧರನೆಂದ.

"ಈ ವಿಷಯವನ್ನು ಕುರಿತು ಯೋಚಿಸಬೇಕಾದ ಸಂದರ್ಭ ನನಗೆಯೆ ಹತ್ತು ಬಾರಿ ಬಂದಿದೆ. ಅಂತೆಯೆ ಖಂಡಿತವಾಗಿ ಹೇಳಬಲ್ಲೆ. ಈ ಅತ್ತೆ-ಸೊಸೆ ಸಮಸ್ಯೆಗೆ ಮುಖ್ಯವಾಗಿ ಎರಡು ಕಾರಣ—ನನ್ನ ಪ್ರಕಾರ. ಹಿಂದಿನ ಕಾಲದಲ್ಲಿ ತಾನು ಸೊಸೆಯಾಗಿದ್ದಾಗ ಕಷ್ಟ ಸಹಿಸಿದ್ದಕ್ಕಾಗಿ ತನಗೆ ಸೊಸೆಯಾಗಿ ಬಂದವಳೂ ಹಾಗೆಯೆ ಸಹಿಸಬೇಕು ಎಂಬ ಬಯಕೆ.

ಸೊಸೆಗೆ ಕಷ್ಟವಾಗಲಿ ಎನ್ನುವುದಕ್ಕಿಂತ ತನಗೆ ಕಷ್ಟವಾಗದಿರಲಿ ಎಂಬ ಸ್ವಾರ್ಥವೊ, ಅನುಕರಣ ಬುದ್ಧಿಯೊ, ವಿಚಾರದ ಪರಂಪರೆಯೊ ಅಲ್ಲಿ ಬಲವಾಗಿರುತ್ತದೆ. ಎರಡನೆಯದೆಂದರೆ, ತಮ್ಮ ಆಚಾರವಿಚಾರಗಳಿಂದ ಇನ್ನೊಂದು ಜೀವಕ್ಕೆ ಯಾವ ಕಷ್ಟವಾಗಬಹುದು ಎಂಬ ಯೋಚನೆಯೆ ಇಲ್ಲದ ವಿಚಾರಶೂನ್ಯತೆ...."

ಶ್ರೀನಿವಾಸನಂತೆ ಕಾಮೇಶನಿಗೂ ಈ ವಿಚಾರಸರಣಿ ಹಿಡಿಸಲಿಲ್ಲ. ಅಂತೆಯೆ ಆತ ಹೇಳಿದ: "ಇದು ನೋಡು ಗಂಗಾಧರಾ, ನೀನು ಹೇಳುವಂತೆ ವಿಷಯ ಇಷ್ಟು ಸರಳವಾಗಿಲ್ಲ ನೀನು ಹೇಳುವಂತೆಯೆ ನಡೆಯಬೇಕಾದರೆ ವಯಸ್ಸಿನಿಂದ ಮುಪ್ಪಾಗಿ ಅಸಹಾಯರಾದವರನ್ನೂ ಕೂಡ ಹೊರದೂಡಬೇಕಾದೀತು. ಅಥವಾ ಒಂದು ವೇಳೆ ಹೊರದೂಡದಿದ್ದರೂ ಅವರು ಚಿಕ್ಕವರಿಂದ ಯಾವ ಸಹಾನುಭೂತಿಯನ್ನೂ ಅಪೇಕ್ಷೆ ಮಾಡಬಾರದಾಯಿತು, ಅಲ್ಲವೆ? ಇನ್ನಾವ ಯೋಚನೆ ಇಲ್ಲದಿದ್ದರೂ ಅಸಹಾಯಕರ ವಿಷಯದಲ್ಲಿ ಕರುಣೆಯಾದರೂ ಬೇಡವೆ?"

ಅರೆನಿಮಿಷ ಯೋಚಿಸಿ ಗಂಗಾಧರ ಹೇಳಿದ:

"ವಾತ್ಸಲ್ಯದ ಮೂಲಕ ಹಿರಿಯರಾದವರು ಅಪೇಕ್ಷಿಸಿ ಪಡೆಯಬೇಕಾದುದನ್ನು ಕರುಣೆ, ಸಹಾನುಭೂತಿಗಳ ಮೂಲಕ ಬೇಡಬೇಕಾದಾಗ ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿರುತ್ತದೆ ಎಂಬುದನ್ನು ಯೋಚಿಸಿರುವಿಯಾ?"

"ಯೋಚಿಸಿದ್ದೇನೆ. ಆದರೆ ಅದಕ್ಕೆ ಹೊಣೆ ಕೇವಲ ಹಿರಿಯರದೆ ಆಗಿರುತ್ತದೆ ಎಂಬುದನ್ನು ಮಾತ್ರ ನಾನು ಒಪ್ಪುವುದಿಲ್ಲ" ಎಂದು ಕಾಮೇಶರಾಯ.

"ಕ್ವೈಟ್ ರೈಟ್" ಎಂದ ಶ್ರೀನಿವಾಸ.

ಬಾಯಿಂದ ಶ್ರೀನಿವಾಸ ಹಾಗೆ ಹೇಳಿದರೂ ಆತನ ಒಲವು ಬೇರೆಯಾಗಿಯೆ ಇದ್ದಿತು. ಗಂಗಾಧರನ ಅಭಿಪ್ರಾಯಗಳನ್ನು ಆತ ಎಷ್ಟು ಮಾತ್ರವೂ ಒಪ್ಪುತ್ತಿರಲಿಲ್ಲ. ಇದಕ್ಕೆ ಆತನ ಹಿಂದಿನ ಅನುಭವವೆ ಕಾರಣವಾಗಿತ್ತು. ತನಗೆ ತಿಳಿದಾಗಿನಿಂದಲೂ ತಾಯಿಯೊಬ್ಬಳ ಹೊರತಾಗಿ ಬೇರೆಯಾರೊಡನೆಯೂ ಮನೆಯಲ್ಲಿ ನಿಕಟವಾದ ಸಂಬಂಧ ಬಂದಿರದ ಆತನಿಗೆ

ತಾಯಿಯೆ ಸರ್ವಸ್ವವಾಗಿದ್ದಳು. ಮೊದಲಿನಿಂದಲೂ ಬಡತನದಲ್ಲಿಯೆ ಬಾಳಿ ನಡುವಯಸ್ಸಿನಲ್ಲಿಯೆ, ಶ್ರೀನಿವಾಸ ಇನ್ನೂ ಚಿಕ್ಕವನಾಗಿದ್ದಾಗಲೆ, ಗಂಡನನ್ನು ಕಳೆದುಕೊಂಡು ತನ್ನನ್ನು ದೊಡ್ಡವನನ್ನಾಗಿ ಮಾಡುವುದರಲ್ಲಿ ಸವೆದುಹೋದ ತಾಯಿಯನ್ನು ನೆನೆದಾಗ ಶ್ರೀನಿವಾಸನಿಗೆ ನೋವಾಗುತ್ತಿತ್ತು. ಆಕೆ ಕಷ್ಟಪಟ್ಟಿರದಿದ್ದರೆ ತಾನು ಮ್ಯಾಟ್ರಿಕ್ ಪರೀಕ್ಷೆ ಕೂಡ ಪಾಸಾಗುವುದು ಸಾಧ್ಯವಿರಲಿಲ್ಲ. ಆದ್ದರಿಂದ ತನಗೆ ತಿಳಿವು ಬಂದಾಗಿನಿಂದ 'ಏನಾದರೂ ಆಗಲಿ, ತಾಯಿ ಸುಖವಾಗಿರಬೇಕು' ಎಂಬ ನಿಶ್ಚಯವನ್ನು ಒಳಮನಸ್ಸಿನಲ್ಲಿ ಮಾಡಿಕೊಂಡಿದ್ದ.

ಆದರೆ ಕೆಲಸ ಕಾಯಂ ಆಗಿ, ತಾನು ಒಂದೆಡೆಯಲ್ಲಿ ಬಿಡಾರವಮಾಡಿಕೊಂಡು ಇರಲು ಅನುಕೂಲವಾದಾಗಿನಿಂದ ಶ್ರೀನಿವಾಸನನ್ನು ಬೇರೆ ಯೋಚನೆಗಳೂ ಕಾಡುತ್ತಿದ್ದವು. ಗಂಗಾಧರನ ಅಭಿಪ್ರಾಯಗಳನ್ನು ಒಪ್ಪದಿದ್ದರೂ ಆತ ತನ್ನ ಮಡದಿಯೊಡನೆ ಸ್ವತಂತ್ರವಾಗಿ, ಸ್ವಚ್ಛಂದವಾಗಿ ಇರುತ್ತಿದ್ದುದನ್ನು ನೋಡಿದವನಾದ್ದರಿಂದ ಒಮ್ಮೊಮ್ಮೆ ತಾನಾದರೂ ಹಾಗೇಕೆ ಇರಬಾರದು ಎಂದುಕೊಳ್ಳುತ್ತಿದ್ದ. ತಾನಿಬ್ಬರೇ ಬೇರೆಯಾಗಿ ಚಿಕ್ಕದೊಂದು ಮನೆಯನ್ನು ಹುಡುಕಿಕೊಂಡು ಇದ್ದರೆ 'ಹೊಸ ಬಾಳು' ನಿಜವಾಗಿಯೂ ಸುಖವಾಗಿ ಸಾಗಬಹುದು ಎಂದು ಎಣಿಕೆ ಹಾಕುತ್ತಿದ್ದ. ಆದರೆ ತಾಯಿ ಒಬ್ಬಳನ್ನೆ ಬಾಗಿಲುಕೋಟೆಯಲ್ಲಿ ಆಕೆಯ ಪಾಡಿಗೆ ಬಿಟ್ಟು ಇರಲು ಮನಸ್ಸು ಒಪ್ಪುತ್ತಿರಲಿಲ್ಲ. ಅಂತೆಯೆ, ಒಂದೆರಡು ಸಲ ಈ ವಿಷಯದಲ್ಲಿ ತಾಯಿಯ ಅಭಿಪ್ರಾಯವೇನೆಂದು ತಿಳಿದುಕೊಳ್ಳಲು ಹವಣಿಸಿ ಮಾತನಾಡಿದಾಗ ತಾಯಿ ಖಂಡಿತವಾಗಿ ಹೇಳಿದ್ದಳು: 'ನೀವೇನು ಬೇಕಾದುದನ್ನು ಮಾಡಿರಿ, ಬೇಕಾದಲ್ಲಿಗೆ ಹೋಗಿರಿ. ನಾನೇನೂ ಈ ಮನೆಯನ್ನು ಬಿಟ್ಟು ಬರುವಂತಿಲ್ಲ' ಎಂದು. ಆಕೆ ಹಾಗೆ ಹೇಳಿದ್ದು ಸಿಡುಕಿನಲ್ಲಿಯೊ ಹೇಗೆ ಎಂಬುದು ಶ್ರೀನಿವಾಸನಿಗೆ ಆಗ ತಿಳಿದಿರಲಿಲ್ಲ. ಏನಿದ್ದರೂ ಆಕೆ ಬರುವುದು ಎಂಥ ಮಾತೊ? ಹಾಗೆಂತಲೆ ಇತ್ತೀಚಿನ ಕೆಲವು ತಿಂಗಳುಗಳಲ್ಲಿ ಈ ಇಬ್ಬಗೆಯ ತೊಡಕಿನಲ್ಲಿ ಸಿಕ್ಕು ತೊಳಲಾಡುತ್ತಿದ್ದ. ಒಂದೆಡೆ ಮಡದಿಯೊಡನೆ ಸುಖವಾಗಿರಬೇಕೆಂಬ ಯೌವನಕ್ಕೆ ಸಹಜವಾದ ಆಸೆ; ಇನ್ನೊಂದೆಡೆ ತಾಯಿಯೊಬ್ಬಳನ್ನೆ ಬಿಟ್ಟುಬಿಡಲಾಗದ ಮರುಕ, ಕೃತಜ್ಞತೆ. ಆದರೆ

ಹೀಗೆಯೆ ಎಷ್ಟು ದಿನ ಇರುವುದು? ತನ್ನವರೊಡನೆ ಕೂಡಿಕೊಂಡು ಅನುಕೂಲವಾಗಿ ಇರಲಿಕ್ಕೂ ಆಗದಿದ್ದರೆ ಈ ಕೆಲಸವನ್ನು ಮಾಡುವುದಾದರೂ ಏತಕ್ಕೆ? ಎಂದೂ ಕೇಳಿಕೊಳ್ಳುವಂತಾಗುತ್ತಿದ್ದ.

ಸಾಯಂಕಾಲದ ಚರ್ಚೆ ಶ್ರೀನಿವಾಸನ ಮನಸ್ಸನ್ನು ಆ ರಾತ್ರಿ ಕಾವೇರಿಯೆಡೆಗೆ ಎಳೆದೊಯ್ಯಿತು. ಅದೇಕೋ ಯಾರು ಬಲ್ಲರು? ಆ ಕ್ಷಣಕ್ಕೆ ಆಕೆಯನ್ನು ನೆನೆದ ಹಾಗೆ ಶ್ರೀನಿವಾಸನ ಹೃದಯ ಅಪಾರವಾದ ಕರುಣೆಯಿಂದ ತುಂಬಿ ಬಂದಿತು. ತನಗೆ ಸರ್ವಸ್ವವೆನಿಸಿದ ತಾಯಿಯನ್ನು ಮರೆತ. ಕಾವೇರಿ! ಆಕೆಗಾಗಿ ತಾನೇನು ಮಾಡಿದ್ದ? ಆಕೆಯನ್ನು ಮದುವೆಯಾದ ನಂತರ ಎಂಟು ವರ್ಷಗಳಲ್ಲಿ ಆಕೆಗಾಗಿ—ಆಕೆ ಸುಖವಾಗಿರಲೆಂದು—ತಾನೇನು ಮಾಡಿದ್ದ? ಪ್ರತಿಸಲವೂ ತಾನು ಊರಿಗೆ ಹೋಗಿ ತಿರುಗಿ ಹೊರಟಾಗ ಬೀಳ್ಕೊಡುವಾಗಿನ ಆಕೆಯ ಅಸಹಾಯವಾದ ಮುಖವನ್ನು ನೆನೆದು ಅಸಹಾಯನಾದ. ಪಾಪ! ತನಗಾಗಿ ಯಾವ ಆತುರದಿಂದ ಆಕೆ ಕಾಯುತ್ತಿರುತ್ತಾಳೆ! ತಾನು ಹೋದ ದಿನ ಎಂಥ ಸಂಭ್ರಮದಿಂದ ಇರುತ್ತಾಳೆ! ಆಕೆಯನ್ನು ಕಂಡು ಸುಮಾರು ಮೂರು ತಿಂಗಳಾಯಿತು. ಹೇಗಿದ್ದಾಳೋ? ಸಾಧ್ಯವಾದರೆ ಬರುವ ವಾರ ಎರಡು ಮೂರು ದಿನಗಳ ರಜೆಯನ್ನು ಪಡೆದುಕೊಂಡು ಊರಿಗೆ ಹೋಗಿಬರಬೇಕು ಎಂದು ಕನಸಿನ ಕುದುರೆಯನ್ನೇರಿದ....

## ೩

ಬೆಳಗಿನ ಹನ್ನೊಂದು ಗಂಟೆಯಾದರೂ ರಾತ್ರಿ ಪ್ರಾರಂಭವಾದ ಮಳೆ ಇನ್ನೂ ಚಿಟಿಚಿಟಿ ಉದುರುತ್ತಲೆ ಇತ್ತು. ಅಂಥ ಮಳೆಯಲ್ಲಿ ತಪತಪನೆ ತೊಯ್ದು ಕಾವೇರಿ ನದಿಯಿಂದ ಬಟ್ಟೆಬರೆಗಳನ್ನು ಒಗೆದು, ಪಾತ್ರೆಗಳನ್ನು ತಿಕ್ಕಿಕೊಂಡು ಬಂದಳು. ತಲೆಯ ಮೇಲೆ ಒಗೆದ ಬಟ್ಟೆಗಳ ಹಿಂಡಿಕೆಗಳು, ಸೊಂಟದ ಮೇಲೊಂದು ಕೊಡ. ಇನ್ನೊಂದು ಕೈಯಲ್ಲಿ ಇನ್ನೇನೊ ಒಂದೆರಡು ಪಾತ್ರೆಗಳು, ಸೀರೆ ತೊಯ್ದು ಮೈಗೆ ಅಂಟಿಕೊಂಡಿತ್ತು. ಮುಖದ ಮೇಲಿಂದ ನೀರ ಹನಿಗಳು ಉರುಳುತ್ತಿದ್ದವು. ಬಾಗಿಲಲ್ಲಿ ಒಂದು ಕೈ ತೆರವಿಲ್ಲದ್ದಕ್ಕಾಗಿ ಕಾಲಿನಿಂದಲೇ ಬಾಗಿಲನ್ನು ದೂಡಿದಳು. ದೂಡಿದ ಬಾಗಿಲು ಥಡಾರನೆ ಸದ್ದುಮಾಡಿ ತೆರೆಯಿತು. ಆ ಸದ್ದೇ ಅಡಿಗೆಮನೆಯಲ್ಲಿ ಏನನ್ನೊ ಮಾಡುತ್ತಿದ್ದ ಭಾಗಮ್ಮನ ತೀವ್ರವಾದ ದನಿಯನ್ನು ಕರೆತಂದಿತ — "ಯಾರವರು ?" ಎಂದು.

"ನಾನೇ" ಎಂದಳು ಕಾವೇರಿ ಬಾಗಿಲಲ್ಲಿಯೆ. ಆ ನಮ್ರವಾದ ದನಿ ಭಾಗಮ್ಮನಿಗೆ ಕೇಳಿಸಿತೊ ಇಲ್ಲವೊ. ಕೇಳಿಸಿದ್ದರೂ ಮುಂದಿನ ಮಾತು ಬರುವಂತೆಯೆ ಬಂದಿತು.

"ಯಾವ ಪರಿ, ಬಾಗಿಲನ್ನು ನೂಕುವುದು ? ಮೈಯಲ್ಲಿ ದೆವ್ವಗಿವ್ವ ಏನಾದರೂ ಬಂದಿದೆಯೆ ?"

ಕಾವೇರಿಗೆ ಇದು ಯಾವುದೂ ಅನಿರೀಕ್ಷಿತವಾಗಿರದ್ದರಿಂದ ಕಾಲಿನಿಂದಲೆ ತೆರೆದ ಬಾಗಿಲನ್ನು ಹಿಂದೆ ಸರಿಸುವುದರಲ್ಲಿದ್ದಳು. ಆದರೆ ಏನು ಮಾಡಿದರೂ ಬಾಗಿಲು ಸರಿಯಲಿಲ್ಲವಾದ್ದರಿಂದ ಮೈಮೇಲಿನ ಹೊರೆಯನ್ನು ಒಳಗಡೆ ಇಳಿಸಿ ಆಮೇಲೆ ಬಾಗಿಲು ಇಕ್ಕಿದರಾಯಿತೆಂದು ನಡುಮನೆಯ ಕಡೆಗೆ ಸಾಗಿದಳು. ಮತ್ತೆ ಭಾಗಮ್ಮನ ದನಿ ಗದರಿಸಿತು.

"ಆ ಬಾಗಿಲ ಅಷ್ಟು ಹಾಕಿಕೊಂಡು ಹೋಗವ್ವಾ. ಅಷ್ಟು ಮಾಡಿದರೆ ನಿನ್ನ ಕೈ ಏನೂ ಮುರಿಯುವುದಿಲ್ಲ" ಎಂದು.

ನಿಜವಾಗಿಯೂ ನದಿಯಿಂದ ಉದ್ದಕ್ಕೂ ಒಂದು ಕೈಯಲ್ಲಿ ಕೊಡವನ್ನೂ ಇನ್ನೊಂದರಲ್ಲಿ ಪಾತ್ರೆಗಳನ್ನೂ ಹೊತ್ತು ತಂದ ಕಾವೇರಿಯ ಕೈಗಳು

ಮುರಿದುದಕ್ಕಿಂತ ಹೆಚ್ಚಾಗಿ ನೋಯುತ್ತಿದ್ದುದರಿಂದ ಕೊಡವನ್ನು ಕೆಳಗೆ ಇಡುವಾಗ ಅದು ದಬಕ್ಕನೆ ನೆಲಕ್ಕಿಳಿದಿರಬೇಕು. ಆದರೆ ಆ ಸದ್ದು ಭಾಗಮ್ಮನ ಕಿವಿಗಳಿಗೆ ತಗಲದಿರಲಿಲ್ಲ. ಅದಕ್ಕೊಂದು ಅಪಾರ್ಥವೂ ಸಿದ್ಧವಾಗಿಯೆ ಇತ್ತು.

"ನಿನ್ನ ಸಿಟ್ಟು ಕೊಡದ ಮೇಲೆ ತೆಗೆದರೆ ಕೊಡ ಏನು ಮಾಡೀತು! ಕೊಡ ತಂದು ವರುಷ ಕೂಡಾ ಆಗಲಿಲ್ಲ. ಮುದ್ದೆ ಮಾಡಿಟ್ಟಿದ್ದೀಯ. ಇಷ್ಟು ಸಿಟ್ಟುಮಾಡಿ, ದುಮುದುಮು ಉರಿದು, ಏನು ಮಾಡಬೇಕೂಂತ ಮಾಡಿದ್ದೀ? ಇದು ಒಳ್ಳೆಯದಲ್ಲ, ಹತ್ತುಸಾರಿ ಹೇಳಿದ್ದೇನೆ...." ಭಾಗಮ್ಮನ ಗೊಣಗಾಟ ನಡೆದೇ ಇತ್ತು. ಕಾವೇರಿ ನಡುಮನೆಯಲ್ಲಿ ತನ್ನ ತೊಯ್ದ ಕೂದಲುಗಳನ್ನು ಜಾಡಿಸಿ, ಒರಸಿಕೊಳ್ಳುತ್ತಿದ್ದಳು.

ಕೂದಲು ಒರಸಿಕೊಂಡು ಬಾಗಿಲನ್ನು ಇಕ್ಕಲು ಬರಬೇಕೆನ್ನುವಷ್ಟರಲ್ಲಿ ಅದೇ ಬಾಗಿಲಲ್ಲಿ ತಂಗಮ್ಮನ ದನಿ ಕೇಳಿಸಿತು.

"ಭಾಗಮ್ಮನವರೆ...."

ಇನ್ನೂ ನಾಲ್ಕು ಹೆಜ್ಜೆ ಒಳಗಡೆ ಬಂದು, ನಡುಮನೆಯಲ್ಲಿ ಕಾವೇರಿಯನ್ನು ಕಂಡು ಕೇಳಿದಳು:

"ನಿಮ್ಮ ಅತ್ತೆ ಮನೆಯಲ್ಲಿ ಇಲ್ಲೇನೆ?"

"ಇದ್ದಾರೆ."

"ಭಾಗಮ್ಮನವರೆ— ಏನು ನಡೆಸಿದ್ದೀರಿ? ಆಂ?...."

ಯಾವುದಕ್ಕೊ ಹಿಂದಿನ ಅಂಗಳದ ಕಡೆಗೆ ಹೋಗಿದ್ದ ಭಾಗಮ್ಮ ತಂಗಮ್ಮನ ದನಿ ಕೇಳಿ ಪಡಸಾಲೆಯ ಕಡೆಗೆ ಬರುತ್ತಲೆ ಹೇಳಿದಳು:

"ನಡೆಸುವುದೇನು ಮಣ್ಣು? ಇದ್ದೇ ಇದೆಯಲ್ಲ ದಿನದ ಕೊಳಚೆ ಕೆಲಸ. ಎಷ್ಟು ಮಾಡಿದರೂ ಅಷ್ಟೆ...."

"ಸುಮ್ಮನೆ ಕೆಲಸ ಮಾಡಿ ಮಾಡಿ ಸಣ್ಣಾಗುವ ಸ್ವಭಾವ ನಿಮ್ಮದೂ, ಭಾಗಮ್ಮ. ಇಷ್ಟು ವಯಸ್ಸಾದ ಮೇಲೂ ನಾವೇ ದುಡಿಯಬೇಕು ಅಂದರೆ ಮಕ್ಕಳು ಸೊಸೆ ಅನ್ನುವುದು ಯಾತಕ್ಕೆ? ನಾನಂತೂ ಎಲ್ಲ ಬಿಟ್ಟುಕೊಟ್ಟಿದ್ದೇನೆ. ನೋಡಬಾರದೆ?"

ತಂಗೆಮ್ಮನ ಮಾತಿನಲ್ಲಿ ತಿಲಮಾತ್ರವೂ ಸತ್ಯಾಂಶವಿರಲಿಲ್ಲ. ಆದರೂ ಅದೊಂದು ಮಾತನಾಡುವ ಬಗೆ, ಅಷ್ಟೆ. ಅದರಲ್ಲಿಯೂ ತನಗೆ ಬೇಕಾದವಳಾದ ಭಾಗಮ್ಮನ ಕೂಡ ಮಾತನಾಡಿ ಆಕೆಯನ್ನು ಬೇಕೆಂತಲೆ ರೇಗಿಸುವ ಬಗೆ. ಆದರೆ ಸದ್ಯಕ್ಕೆ ಭಾಗಮ್ಮ ರೇಗಿಕೊಂಡೇ ಇದ್ದಳು. ತಂಗೆಮ್ಮನ ಪ್ರೋತ್ಸಾಹ ಬೇಕಿರಲೆ ಇಲ್ಲ ಭಾಗಮ್ಮ ಹೇಳಿದಳು :

"ಮಕ್ಕಳು, ಸೊಸೆ! ನಿಮಗಿನ್ನೂ ಭ್ರಮೆ, ತಂಗೆಮ್ಮ! ಯಾರು ಯಾತಕ್ಕೆ ಮಾಡಿಯಾರು? ಈಗ ಅದನ್ನೇ ಹೇಳುತ್ತಿದ್ದೆ. ಎರಡು ಗಂಟೆ ಹೊಳೆಗೆ ಎಂದು ಹೋಗಿ ಇದೀಗ ಬಂದಿದ್ದಾಳೆ. ಹಿತ್ತಲಲ್ಲಿ ಹೋಗಿ ನೋಡಿದರೆ ಎಲ್ಲ ಪಾತ್ರೆಗಳಲ್ಲಿ ಹೊಲಸು ಹಾಗೆಯೆ. ಇನ್ನು ಮೇಲೆ ಮತ್ತೆ ತೊಳೆದುಕೊಳ್ಳಬೇಕು. ಹೀಗಿದ್ದರೂ ಯಾಕೆ ಎಂದು ಕೇಳುವ ಹಾಗಿಲ್ಲ."

ಈ ಯಾವ ಮಾತಿನಲ್ಲಿ ಸತ್ಯಾಂಶವಿರಲಿಲ್ಲ. ಆದರೂ ಸೊಸೆಯ ವಿಚಾರದಲ್ಲಿ ಭಾಗಮ್ಮ ಮಾತನಾಡುವ ರೀತಿಯದು. ಇದೆಲ್ಲವನ್ನು ಕೇಳುತ್ತಿರುವಾಗ—ಹಿಂದೆ ನೂರಾರು ಬಾರಿ ಕೇಳಿದಾಗ—ಕಾವೇರಿಗೆ ಯೋಚನೆಯಾಗುತ್ತಿತ್ತು. 'ಯಾಕೆ ಇವರೆಲ್ಲರೂ ಈ ಪರಿ ಬದುಕಿನುದ್ದಕ್ಕೂ ಸಿಡಿಮಿಡಿಗೊಂಡೆ ಇರುತ್ತಾರೆ? ಸುಖವಾಗಿ ಸಮಾಧಾನವಾಗಿ ಇರಲಾಗುವುದೆ ಇಲ್ಲವೆ?' ಎಂದು. ಆದರೆ ಅದೇ ಪ್ರಶ್ನೆಯನ್ನು ಆಕೆ ತನ್ನ ಬಾಯಿಂದ ಯಾರನ್ನು ಕೇಳಬೇಕು?

ಅಡಿಗೆಯ ವೇಳೆಯಲ್ಲಿ ತಂಗೆಮ್ಮ ಬಂದದ್ದು ಯಾತಕ್ಕೆ ಎಂಬುವನ್ನು ಆಕೆಯನ್ನು ಬಲ್ಲವರು ಯೋಚಿಸಬೇಕಾಗಿಯೆ ಇರಲಿಲ್ಲ ಬೆಳಗಿನ ಒಂಬತ್ತರಿಂದ ಹನ್ನೆರಡರ ವರೆಗೆ ನಾಲ್ಕಾರು ಮನೆಯ 'ಕಾರುಭಾರ' ನೋಡಿಕೊಂಡು ಆಮೇಲೆ ಮನೆಗೆ ಮರಳಿ, ಮೈ ತೊಳೆಯುವ ವಿಚಾರಕ್ಕೆ ತೊಡಗುವುದು ತಂಗೆಮ್ಮನಿಗೆ ವಾಡಿಕೆಯಾಗಿತ್ತು ಯಾವ ಮನೆಗೆ ಹೋದರೂ ಹೋಗುವುದಕ್ಕೊಂದು ನೆಪವಿರದೆ ಇರುತ್ತಿರಲಿಲ್ಲ. ಆಕೆ ಹೋಗುವ ಮನೆಗಳಲ್ಲಿಯ ಯಾರೂ ಆಕೆಯನ್ನು 'ಯಾಕೆ?' ಎಂದು ಕೇಳುತ್ತಲೂ ಇರಲಿಲ್ಲ—ಆಕೆ ಬರುವುದು ವಾಡಿಕೆಯೆ ಆದ್ದರಿಂದ. ಭಾಗಮ್ಮನೂ ಕೂಡ ಕೇಳಲಿಲ್ಲ. ಅಲ್ಲದೆ ತಂಗೆಮ್ಮ ಬಂದ ಕೂಡಲೆ ಭಾಗಮ್ಮ ಹೇಳಿದ ಸಿಡುಕಿನ

ಸನ್ನಿವೇಶದ ಮೂಲಕ ಯಾವ ನೆಪವನ್ನೂ ಆಕೆ ಹೂಡಬೇಕಾಗಿರಲಿಲ್ಲ. ಭಾಗಮ್ಮ ತನ್ನ 'ಪುರಾಣ'ವನ್ನೆ ಮುಂದರಿಸಿದಳು.

"ಇದೇ ನೀವು ಬಂದಿರಲ್ಲಾ. ಬರುವ ಮುಂಚೆ ಈಕೆ ನದಿಯಿಂದ ಬಂದಳು. ಬರುವಾಗ ಬಾಗಿಲ ಮುಂದೆ ಮಾಡಿಕೊಂಡು ಬರಬೇಡವೆ? ಅಷ್ಟು ಹೇಳಿದ್ದಕ್ಕೆ ಈಗ ಅರ್ಧ ಗಂಟೆ ಉರಿಯುತ್ತಿದ್ದಾಳೆ. ಬಂದವಳೇ ಕೊಡ ನೆಗ್ಗಿಹೋಗುವಂತೆ ಅಪ್ಪಳಿಸಿದಳು. ಈ ಪರಿ ಸಿಟ್ಟು ಸೆಡವು ಮಾಡ ಲಿಕ್ಕೆ ಇವರಿಗೆ ಅಂಥದೇನು ಬಂದಿರುತ್ತದೆಯೊ?"

"ಹಾಗೆಲ್ಲಾ ಮಾಡಬಾರದು, ತಾಯಿಾ. ಹಿರಿಯರ ಮೇಲೆ ಸಿಟ್ಟು ಮಾಡಬಾರದು. ಅವರೇನು ಹೇಳಿದ್ದು ಕೆಟ್ಟದ್ದಕ್ಕೆ ಹೇಳುತ್ತಾರೆಯೆ?" ಎಂದು ಮುಂತಾಗಿ ಹರಿಯಿತು ತಂಗೆಮ್ಮನ ಉಪದೇಶಾಮೃತ. ಕಾವೇರಿ ಬಾಗಿಲ ಹಿಂದಿನಿಂದಲೆ ಕೇಳುತ್ತಿದ್ದಳು.

"ಪನ್ನೆರಡಾಗಿರಬೇಕು. ಹೊರಡುತ್ತೇನೆ...." ಎಂದಳು ತಂಗೆಮ್ಮ.

"ಅದೇನು? ಹೀಗೆ ಬಂದು ಹೀಗೆಯೆ ಹೊರಟಿರಲ್ಲಾ?"

"ಹಾಂ! ಮರೆತೇ ಇದ್ದೆ ಇತ್ತೀಚೆಗಂತೂ ಹೀಗೇ ಆಗುತ್ತದೆ. ಬಂದ ಕೆಲಸವನ್ನೆ ಮರೆತುಬಿಡುತ್ತೇನೆ....ಹುಂ....ನಿಮ್ಮ ಸೊಸೆಯ ಕಡೆಯಿಂದ ಈ ಕಾಗದ ಓದಿಸಬೇಕು ಅಂತ ಬಂದಿದ್ದೆ. ಎಲ್ಲಿದ್ದಾಳೆ?"

"ಯಾರ ಕಾಗದ?"

"ಯಾರದು ಯಾರಿಗೆ ಗೊತ್ತು? ನಿಮ್ಮ ಸೊಸೆಯೆ ಹೇಳಬೇಕು"

"ಕಾವೇರೀ...."

ಕಾವೇರಿ ನಡುಮನೆಯ ಬಾಗಿಲಿಂದ ಹೊರಬಂದಳು. ಬರುವು ದೊಂದೇ ತಡ, ಭಾಗಮ್ಮನ ಬಾಯಿಗೆ ಮಾತ್ರ ಸಿಟ್ಟುವಂತಾಯಿತು.

"ನೋಡಿದಿರಾ? ಮಾನಮರ್ಯಾದೆ ಅನ್ನುವುದರ ಪರಿವೆಯೇ ಉಳಿಯು ಲಿಲ್ಲ. ತಲೆಯ ಮೇಲಷ್ಟು ಸೆರಗು ಹಾಕಿಕೊಳ್ಳೆ ...ನಿನ್ನ ಕೂದಲು ಬಹಳ ಸುಂದರವಾಗಿವೆ; ಗೊತ್ತು ಎಲ್ಲಾರಿಗೂ...."

ಕಾವೇರಿ ನಾಲಗೆ ಕಚ್ಚಿಕೊಂಡು ತಲೆಯ ಮೇಲೆ ಸೆರಗು ಹೊದ್ದಳು. ತನ್ನನ್ನು ಅಲ್ಲಿಗೆ ಕರೆದದ್ದು ಯಾಕೆಂಬುದು ಗೊತ್ತಿದ್ದರೂ ಅದನ್ನು ತೋರ ಗೊಡುವಂತಿರಲಿಲ್ಲ. ಹಾಗೆ ಮಾಡಿದ್ದರೆ ಅವರ ಮಾತನ್ನು ಬಾಗಿಲ ಹಿಂದಿ

ನಿಂದ ಕೇಳಿದ ಆರೋಪಕ್ಕೆ ಗುರಿಯಾಗಬೇಕಾಗುತ್ತಿತ್ತು. ಅದ್ದರಿಂದ 'ಮರ್ಯಾದೆಗೆ ಸರಿಯಾದ' ಅಂತರದಲ್ಲಿ ಸರಿಯಾಗಿ ತಲೆತಗ್ಗಿಸಿಕೊಂಡು ನಿಂತಳು. ಆದರೆ ಪತ್ರವನ್ನೋದಿಸಿಕೊಳ್ಳಬಂದ ತಂಗೆಮ್ಮನ ಲಕ್ಷ್ಯ ಆಕೆಯ ಕಡೆಗೆ ಇರಲೇ ಇಲ್ಲ.

"ಹೀಗೆಲ್ಲಾ ಈಗಿನ ಸೊಸೆಯಂದಿರು ನಡೆದುಕೊಳ್ಳುವುದು ಯಾಕೆ ಅಂತೀರಾ? ನನಗೆ ಕೇಳಿದರೆ, ಗಂಡಂದಿರು ಇವರನ್ನು ಹುಚ್ಚುಚ್ಚಾಗಿ ಪ್ರೀತಿಸುತ್ತಾರೆ; ಇವರು ಹೇಳಿದ ಹಾಗೆ ಕುಣಿಯುತ್ತಾರೆ. ಅಂದಮೇಲೆ ಮನೆಯಲ್ಲಿಯ ಹಿರಿಯರ ಮಾನಮರ್ಯಾದೆ ಎಲ್ಲಿ ಉಳಿಯಿತು? ಯಾಕೆ ಉಳಿದೀತು?"

"ನೀವು ಹೇಳೋದು ಹಾಗೂ ಇರಬಹುದು. ಆದರೆ ನಮ್ಮ ಶೀನೂ ನನಗೆ ಗೊತ್ತಿಲ್ಲವೆ? ಈಕೆಯನ್ನು ಏನು ಪ್ರೀತಿ ಮಾಡಿಯಾನು? ಮದುವೆ ಆಗಿ ಎಂಟು ವರ್ಷ ಆಗಿಹೋದರೂ ಹಣೆಬರಹಕ್ಕೆ ಒಂದು ಮಗು ಇಲ್ಲ"

ಕಾವೇರಿಗೆ ಈ ಮಾತಾದರೂ ಅನಿರೀಕ್ಷಿತವಾಗಿರಲಿಲ್ಲ. ಆದರೂ ಮನಸ್ಸು ನೊಂದುಕೊಂಡಿತು. ಮುದುಡಿತು ಇನ್ನೊಂದೆಡೆ ಮುಖ ತಿರುವಿ ನಿಂತಳು. ತಂಗೆಮ್ಮ ಆಕೆಯನ್ನು ಸೂಕ್ಷ್ಮವಾಗಿ ನೋಡಿ ಹೇಳಿದಳು:

"ಮಕ್ಕಳೇನು, ಆಗಬಹುದು. ನಿಮ್ಮ ಕಾವೇರಿಗೇನು ಮಕ್ಕಳಾಗದಷ್ಟು ವಯಸ್ಸಾಯಿತೆ? ಏನೋ, ಒಬ್ಬೊಬ್ಬರಿಗೆ ತಡವಾಗಿ ಆಗಬಹುದು. ದೇವರು ದಿಂಡರು ಸೇವೆ ಮಾಡಿಸಬೇಕು, ಅಷ್ಟೆ"

"ಎಲ್ಲ ಆಯಿತು ದೇವರಾಯಿತು, ಸೇವೆಯಾಯಿತು. ಮುಖ್ಯ ಹಣೆಯಲ್ಲಿ ಬರೆದಿರಬೇಕು, ತಂಗೆಮ್ಮ ಅಲ್ಲಿಯೆ ಇಲ್ಲದಿದ್ದರೆ ಏನಾಗಬೇಕು."

"ಆದಾಗ್ಲಿ, ಬಿಡಿರಿ, ಭಾಗಮ್ಮ. ಮಕ್ಕಳೇನು? ಒಮ್ಮೆ ಸುರು ಆಯಿತೆಂದರೆ....ಆ ನಮ್ಮ ನೆರೆಮನೆಯ ರಕುಮಾಬಾಯರ ಸೊಸೆ ನೋಡಿದಿರಾ ಹೇಗೆ ಗೋಳಾಡುತ್ತಾಳೆ. 'ಸಾಕು ಮಾಡು ದೇವರೆ' ಎಂದು ದಿನ ನಿತ್ಯ ಬೇಡಿಕೊಳ್ಳುತ್ತಾಳೆ."

"ಅದೇ. ನನ್ನ ಹಣೆಬರಹ! ಮೊಮ್ಮಕ್ಕಳನ್ನು ಕಾಣೋ ಭಾಗ್ಯ ನನಗಿಲ್ಲ ಅದು ಮುಖ್ಯ....ಯಾರೇನು ಮಾಡುವುದು?"

ಭಾಗಮ್ಮನ ದನಿಯಲ್ಲಿ ನಿಜವಾಗಿಯೂ ಮರುಕ ಮೂಡಿತ್ತು. ಮೊಮ್ಮಕ್ಕಳಿಲ್ಲದ್ದು ನಿಜವಾಗಿ ತನ್ನ ದುರ್ದೈವ ಎಂದು ಆಕೆಗೆ ಆ ಕ್ಷಣಕ್ಕೆ ಅನಿಸಿರಬೇಕು. ಕಾವೇರಿಗೆ ಇವರಿಬ್ಬರ ಈ ಮಾತು ಯಾವಾಗ ಹೇಗೆ ಮುಗಿಯಬಹುದೆಂಬುದು ತೋಚಲಿ ಇಲ್ಲ. ಅಲ್ಲದೆ, ಈ ಮಾತು ನಡೆದಾಗ ತಾನು ಅಲ್ಲಿ ನಿಲ್ಲುವುದೂ ಕಷ್ಟ, ಹೊರಟುಹೋಗುವುದೂ ಕಷ್ಟ. ಹೀಗಿರುವಾಗ ಏನು ಮಾಡಬೇಕೆಂದುಕೊಳ್ಳುವಷ್ಟರಲ್ಲಿಯೆ ತಂಗೆಮ್ಮ ತನ್ನ ಸೀರೆಯಲ್ಲಿ ಮಡಿಸಿಟ್ಟ ಒಂದು ಕಾಗದವನ್ನು ತೆಗೆದು ಕಾವೇರಿಯ ಕೈಗಿಟ್ಟಳು. ಕಾವೇರಿ ಕಾಗದದ ಮೇಲೆ ಕಣ್ಣೋಡಿಸುತ್ತಿರುವಾಗ ಆ ಇಬ್ಬರೂ ತನ್ನನ್ನೆ ನೋಡುತ್ತಿರುವರೆಂಬುದು ಕಾವೇರಿಗೆ ಒಂದು ಬಗೆಯ ಸಂಕೋಚವನ್ನುಂಟು ಮಾಡುತ್ತಿತ್ತು. ಒಂದು ಬಾರಿ ಓದಿಕೊಂಡು ಮೇಲ್ಗಡೆಯಲ್ಲಿ ಬರೆದ ತಾರೀಖನ್ನು ನೋಡಿದಳು. ತಂಗೆಮ್ಮ ತಂದ ಕಾಗದ ಸುಮಾರು ಮೂರು ಮೂರೂವರೆ ತಿಂಗಳು ಹಿಂದಿನದಾಗಿತ್ತು. ಅದರಲ್ಲಿ ಬರೆದುದನ್ನು ನಿಧಾನವಾಗಿ ಓದಿ ಹೇಳಿದಳು. ಆದರೆ ತಂಗೆಮ್ಮ ಅದನ್ನು ಓದಿಸಿಕೊಂಡುದೇಕೆ ಎಂಬ ವಿಷಯವಾಗಲಿ, ಅದರಲ್ಲಿ ಬರೆದ ವಿಷಯ ಸಂಬಂಧ ಸೂತ್ರವೇನೆಂಬುದಾಗಲಿ ಆಕೆಗೆ ತಿಳಿಯಲಿ ಇಲ್ಲ. ಯಾವನೊ ಒಬ್ಬ ರೈತ ತಂಗೆಮ್ಮನ ಮಗನ ಹೆಸರಿಗೆ ಬರೆದ ಆ ಕಾಗದದಲ್ಲಿ ಕೊಡಬೇಕಾದ ಹಣದ ವಿಚಾರ ಏನೇನೋ ಇದ್ದಿತು. ಪೂರ್ವಾಪರ ಸಂಬಂಧ ತಿಳಿಯದೆ ಸಮಗ್ರವಾಗಿ ಅರ್ಥ ಮಾಡಿ ಹೇಳಲು ಕಾವೇರಿಗೆ ಸಾಧ್ಯವಾಗದ್ದರಿಂದ ಕೇಳುತ್ತಿದ್ದ ಭಾಗಮ್ಮ ತಂಗೆಮ್ಮ ಅವರಿಗೆ ಸಮಾಧಾನವಾಗಲಿಲ್ಲ. ಕೊನೆಗೆ ಆ ದೋಷವೂ ಕಾವೇರಿಯ ಪಾಲಿಗೆ ಬಂದಿತು. ಅದನ್ನು ಯಾರೂ ಆಡಿ ತೋರಿಸಲಿಲ್ಲವೆಂಬುದೊಂದೆ ಸಮಾಧಾನ.

“ನಾನಿನ್ನು ಹೊರಡುತ್ತೇನೆ. ಮಧ್ಯಾಹ್ನ ಒಂದಿಷ್ಟು ಬೇಗನೆ ಬಂದುಬಿಡುತ್ತೀರಾ” ಎಂದಳು ತಂಗೆಮ್ಮ ಹೊರಡಲನುವಾಗಿ. ಹೊರಡುತ್ತಿರುವಾಗ ಆ ಹಳೆಯ ಕಾಗದವನ್ನು ಆಕೆ ಜೋಪಾನವಾಗಿ ಸೊಂಟಕ್ಕೆ ಸಿಕ್ಕಿಸುತ್ತಿರುವುದನ್ನು ನೋಡಿದರೆ ವಿಚಿತ್ರವೆನಿಸುತ್ತಿತ್ತು. ತನ್ನ ಮಗನ ಹಣಕಾಸಿನ ವಿಚಾರದಲ್ಲಿ ಆಕೆ ಯಾವ ಬಗೆಯ ಸಂಶಯಿತ ವೃತ್ತಿಯನ್ನು ತಾಳುತ್ತಿದ್ದಳೆಂಬುದೂ ತಿಳಿಯುವಂತಿತ್ತು.

"ಬೇಗನೆ ಏನು? ನಿತ್ಯ ಬರುವ ಹೊತ್ತಿಗೆ ಬರುತ್ತೇನೆ."

ಕಾವೇರಿ ಒಳಗಡೆ ತನ್ನ ಕೆಲಸದಲ್ಲಿ ತೊಡಗಿದ್ದಳು. "ನಾನು ಮೈ ತೊಳೆದುಕೊಂಡು ಬೇಳೆಗೆ ಇಡಲೆ?" ಎಂದು ಕೇಳಿದ್ದಕ್ಕೆ "ಏನೂ ಬೇಡ, ನಾನೇ ಇದೇ ಮೈ ತೊಳೆದುಕೊಳ್ಳುತ್ತೇನೆ" ಎಂದಿದ್ದಳು ಭಾಗಮ್ಮ. ಆದ್ದರಿಂದ ಕಾವೇರಿಗೆ ಒಗೆದು ತಂದ ಒಟ್ಟೆಗಳನ್ನು ಒಣಗಹಾಕುವುದರ ಹೊರತು ಬೇರೆ ಕೆಲಸವಿರಲಿಲ್ಲ. ಮುಂದೆ ಸುಮಾರು ಮುಕ್ಕಾಲು ಗಂಟೆ ಭಾಗಮ್ಮ ತಂಗೆಮ್ಮ ಹರಟೆ ಹೊಡೆಯುತ್ತಲೆ ಇದ್ದರು. ಏನು ವಿಷಯ ಎಂಬುದು ಕಾವೇರಿಗೆ ತಿಳಿಯಲೆ ಇಲ್ಲ, ತಿಳಿಯಬೇಕೆಂಬ ಕುತೂಹಲವೂ ಆಕೆಯಲ್ಲಿರಲಿಲ್ಲ.

ತಂಗೆಮ್ಮ ಹೊರಟುಹೋದನಂತರ ಭಾಗಮ್ಮ ಮತ್ತೆ ಹಿಂದಿನ ಅಂಗಣಕ್ಕೆ ಬಂದು ಕಾವೇರಿ ತೊಳೆದು ತಂದ ಪಾತ್ರೆಗಳನ್ನೆ ವತ್ತೆ ತನ್ನ ಮುಂದಿರಿಸಿಕೊಂಡು ಗೊಣಗಾಟಕ್ಕೆ ಮೊದಲುಮಾಡಿದಳು. "ಇವರಿಗೆ ಕೆಲಸ ಮಾಡಿರಿ ಎಂದು ಹೇಳುವದೆ ನಮ್ಮ ಮೂರ್ಖತನ. ಮಾಡಿಯಾರೆಂದು ಕಾಯ್ದು ಮತ್ತೆ ಅದನ್ನೇ ಮಾಡಿಕೊಳ್ಳಬೇಕಾದರೆ ನಮ್ಮ ಹಣೆಬರಹ ಅಲ್ಲವೆ?"

"ಏನಾಯಿತು ಈಗ? ಆದದ್ದಾದರೂ ಏನು" ಎಂದಳು ಕಾವೇರಿ—ಆ ಮಾತಿನ ಅನಗತ್ಯವಾದ ಸರಣಿಯನ್ನು ತಡೆಯಲಾಗದೆ.

"ಆಗುವುದೇನು ಮಣ್ಣು? ದೇವರು ನಮ್ಮಗೆ ಕಣ್ಣು ಮುಚ್ಚಬೇಕು, ಅಷ್ಟೆ. ಆದರೆ ಆ ದೇವರಿಗೆಲ್ಲಿ ಕಣ್ಣು?"

"ನಾನೇ ಇನ್ನೊಮ್ಮೆ ತಿಕ್ಕುತೇನೆ, ಏಳಿರಿ...."

"ಒಮ್ಮೆ ತಿಕ್ಕಿಕೊಂಡು ಬಂದು ಬಹಳ ದಣಿದಿದ್ದೀಯು, ಸಾಕಲ್ಲ" ಇಷ್ಟರಲ್ಲಿ ಹಿತ್ತಲಲ್ಲಿ ಒಣಗಹಾಕಿದ ಬಟ್ಟೆಗಳ ಮೇಲೆ ಭಾಗಮ್ಮನ ಲಕ್ಷ್ಯ ಹರಿಯಿತು. ಮತ್ತೊಂದು ಮಾತಿಗೆ ಅನುಕೂಲವಾಯಿತು.

"ನಿನಗೆ ಎಷ್ಟು ಸಲ ಹೇಳಲಿಲ್ಲ, ನಾನು—ಆ ಮುಳ್ಳುತಂತಿಯ ಮೇಲೆ ಸೀರೆ ಒಣಗಹಾಕಬೇಡ ಎಂದು? ಎರಡು ಸಲ ಹೀಗೆಯೆ ಹರಿದು ಹೋಯಿತು....ಹರಿದರೆ ನಿನಗೇನು ಬಿಡು. ಸೀರೆ ಇಲ್ಲ, ಎಂದು ನಿಂತು ಬಿಟ್ಟರೆ ಆಯಿತು. ತರುವವ ಹೇಗಾದರೂ ತಂದುಕೊಡುತ್ತಾನೆ...."

ಭಾಗಮ್ಮನ ಮಾತು ನಡೆದೇ ಇತ್ತು.

"ಒಳಗಡೆ ಒಣಗುವುದಿಲ್ಲ. ಇದೇ ಏನೋ ಒಂದಿಷ್ಟು ಬಿಸಿಲು ಬಿದ್ದಿತ್ತು ಎಂದು ಹಾಕಿದ್ದೆ...."

"ಬೇರೆ ಜಾಗ ಇಲ್ಲವೆ? ತಂತಿಯ ಮೇಲೆ ಹಾಕಬೇಡ ಅಂದೆ.... ಅಷ್ಟೂ ಹೇಳಬಾರದೇನು ನಾನು?"

ಹೆಚ್ಚಿಗೆ ಮಾತನಾಡಿ ಮಾತು ಬೆಳೆಸುವುದಕ್ಕಿಂತ ಒಣಗಹಾಕಿದ ಸೀರೆಯನ್ನು ಎತ್ತಿಕೊಂಡು ಒಳಗೆ ಹೋಗುವುದೆ ಲೇಸೆನಿಸಿ ಕಾವೇರಿ ತಂತಿ ಬೇಲಿಯ ಮೇಲಿನ ಸೀರೆಯನ್ನು ನಿಧಾನವಾಗಿ ಬಿಡಿಸಿಕೊಂಡಳು. ಬಿಡಿಸುತ್ತಿರುವಾಗ ಕಣ್ಣು ತಪ್ಪಿಸಿ ಭಾಗಮ್ಮ ನೋಡುತ್ತಿರಬಹುದೆಂಬುದರಲ್ಲಿ ಕಾವೇರಿಗೆ ಸಂದೇಹವೆ ಇರಲಿಲ್ಲ.

## ೪

ಮಿಕ್ಕ ದಿನಗಳಲ್ಲಿ ಭಾಗಮ್ಮ ಎಷ್ಟು ಒದರಾಡಿದರೂ, ಎಂಥ ಮಾತನ್ನಾಡಿದರೂ ಕಾವೇರಿಗೆ ಒಳಮನಸ್ಸಿನಲ್ಲಿಯಾದರೂ ಒಂದು ಬಗೆಯ ಸಮಾಧಾನವಿರುತ್ತಿತ್ತು. ತಾನು ಯಾವ ಅಪರಾಧವನ್ನೂ ಮಾಡಿಲ್ಲವಲ್ಲ ಎಂಬ ಅರಿವೆ ಒಂದು ಸಮರ್ಥನೆಯಾಗಿರುತ್ತಿದ್ದುದರಿಂದ ಆಕೆಗೆ ಅಷ್ಟು ಅನ್ನಿಸಿಕೊಂಡು ಸುಮ್ಮನಿರಲು ಸಾಧ್ಯವಾಗುತ್ತಿತ್ತು. ಆದರೆ ಆ ದಿನ ಮುಂಜಾವಿನಲ್ಲಿ ನಡೆದ ಪ್ರಸಂಗದಿಂದ ಕಾವೇರಿಗೆ ಆ ಬಗೆಯ ಸಮಾಧಾನ ಸಹಜವಾಗಿ ಸಿಕ್ಕುವಂತಿರಲಿಲ್ಲ. ಆಕೆ ಮಾಡಿದ್ದು ಯಾವ ದೊಡ್ಡ ಅಪರಾಧವಲ್ಲದಿದ್ದರೂ ಅದನ್ನು ಮಾಡದಿದ್ದರೆ ಸರಿಯಾಗಿತ್ತು ಎಂದುಕೊಳ್ಳುವಂತಾಯಿತು. ನೇರವಾಗಿ ಆಕೆಯ ಬಾಯಿಗೆ ಬಿದ್ದಂತಾಯಿತಲ್ಲ ಎಂದು ಮನಸ್ಸು ನೊಂದುಕೊಳ್ಳುವಂತಾಯಿತು.

ಆ ದಿನ ಬೆಳಗ್ಗೆ ನಡೆದದ್ದು ಇಷ್ಟು.

ಯಾವ ಕಾರಣಕ್ಕೋ ಆ ಬೆಳಗಿನಲ್ಲಿ ಭಾಗಮ್ಮ ತಾನಾಗಿಯೆ ಹೊಳೆಗೆ ಬಟ್ಟೆಗಳನ್ನು ಕಟ್ಟಿಕೊಂಡು ಹೋಗಿದ್ದಳು. ತಿರುಗಿ ಬರುತ್ತಿದ್ದಾಗ ಎಂಟು ಗಂಟೆಯಾಗಿರಬೇಕು. ಆದರೆ ಬಾಗಿಲೆದುರು ಬರುತ್ತಿರುವಷ್ಟರಲ್ಲಿ ಅದೇ ಬಾಗಿಲೆಡೆಗೆ ಹೊರಟ ಅಕ್ಕಸಾಲಿಗ ಸಂಕಪ್ಪನನ್ನು ನೋಡಿ ಆಕೆಗೆ ವಿಪರೀತ ಆಶ್ಚರ್ಯವಾಯಿತು. ಬರುತ್ತಿದ್ದ ಭಾಗಮ್ಮನನ್ನು ನೋಡಿ ಸಂಕಪ್ಪ ಬಾಗಿಲಲ್ಲಿಯೆ ತಡೆದ. ಭಾಗಮ್ಮ ಕೇಳಿದಳು:

"ಏನು ಸಂಕಪ್ಪ, ಈ ಕಡೆಗೆ ಬಂದೆ?"

"ಬಾಯಿಯವರ ಕಡೆಗೆ ಒಂದು ಸ್ವಲ್ಪ ಕೆಲಸವಿತ್ತು."

"ಬಾಯಿಯವರ ಕಡೆಗೆ! ಯಾವ ಬಾಯಿಯವರು?"

"ನಿಮ್ಮ ಸಣ್ಣ ಬಾಯಿಯವರು?"

"ಹುಂ!...."

ಸಂಕಪ್ಪನಿಗೆ ಆ ಧ್ವನಿಯ ಧ್ವನಿ ಅರ್ಥವಾಯಿತೊ ಇಲ್ಲವೊ. 'ಕಳ್ಳ ಚಿನ್ನಾಟವೂ ನಡೆದಿದೆಯೆ? ಓಹೋ!' ಎನ್ನುವಂತಿತ್ತು ಆ ಒಂದು ಹುಂಕಾರ. ಭಾಗಮ್ಮನಿಗೆ ವಿಪರೀತ ಸಿಟ್ಟು ಬಂದಿರಬೇಕು. ಆದರೆ ಆ

ಸಿಟ್ಟನ್ನು ತೋರಗೊಟ್ಟರೆ ತಿಳಿಯಬೇಕಾದದ್ದೂ ತಿಳಿಯಲಿಕ್ಕಿಲ್ಲವೆಂದು ಕೊಂಡು ಸೋಗಿನ ಸಮಾಧಾನದ ದನಿಯಲ್ಲಿ ಸಂಕಪ್ಪನಿಗೆ ಹೇಳಿದಳು :

"ನಾನು ಇದೇ ಬಂದೆ, ತಡೆ, ಸಂಕಪ್ಪ ; ಈ ಬಟ್ಟೆಗಳನ್ನಷ್ಟು ಒಳ ಗಡೆ ಇಟ್ಟು ಬರುತ್ತೇನೆ."

ಸಂಕಪ್ಪನ ಹೆಸರನ್ನೂ, ಇನ್ನಾರೊ ಹೊರಗೆ ಪಡಸಾಲೆಯಲ್ಲಿ ಬಂದ ಹೆಜ್ಜೆಗಳ ಸದ್ದನ್ನೂ ಕಾವೇರಿ ತನ್ನ ಮಲಗುವ ಕೋಣೆಯೊಳಗಿಂದ ಕೇಳಿ, ಹೊರಗೆ ಬಂದು ಕುಳಿತವ ಅಕ್ಕಸಾಲಿಗ ಸಂಕಪ್ಪನೆಂದು ತಿಳಿದಾಗ ಹೆಚ್ಚು ಕಡಿಮೆ ಅವಾಕ್ಕಾದಳು. ತನ್ನ ಪತ್ರಿ ಆತನಿಗೆ ಉಳ್ಳಿರಹೇಳಿದ್ದರಿಂದ ತನ್ನ ಕೆಲಸಕ್ಕಾಗಿ ಆತ ಬಂದಿರಲಿಕ್ಕಿಲ್ಲವಷ್ಟೆ ಎಂಬ ಆಸೆಯೂ ಸುಳಿದು ಹೋಯಿತು. ಆದರೆ ಆತನನ್ನು ಮಾತನಾಡಿಸಬೇಕೆನ್ನುವುದರಲ್ಲಿಯೆ ಭಾಗಮ್ಮ ಪಡಸಾಲೆಗೆ ಬಂದದ್ದರಿಂದ ಕಾವೇರಿ ಹಾಗೆಯೆ ನಿಲ್ಲಬೇಕಾಯಿತು. ಭಾಗಮ್ಮ ಕೇಳಿದಳು—ಕಾವೇರಿ ಬಂದು ನಿಂತುದನ್ನು ನೋಡಿಯೂ ನೋಡದ ಹಾಗೆ :

"ಏನು ಸಂಕಪ್ಪಾ, ಏನು ಮಾಡಿಕೊಂಡು ಬಂದಿದ್ದೀ ?"

"ಏನಿಲ್ಲ. ಒಂದು ಜೋಡಿ ಬಳೆ ಮಾಡು ಎಂದಿದ್ದರು ಬಾಯಿ ಯವರು."

"ಬಳೆಗಳೆ !"

ಭಾಗಮ್ಮನಿಗೆ ಆಶ್ಚರ್ಯವಾಯಿತು ಸಂಕಪ್ಪ ಒಮ್ಮೆ ಕಾವೇರಿಯ ಕಡೆಗೆ, ಮತ್ತೊಮ್ಮೆ ಭಾಗಮ್ಮನ ಕಡೆಗೆ ನೋಡಿದ. ಆತನಿಗೆ ಆ ಪ್ರಶ್ನೆ ದಿಗಿಲಾಗಿತ್ತು.

"ಹುಂ.... ಚಿಕ್ಕ ಮಗುವಿಗೆ ಎಂದು ಹೇಳಿದ್ದರು...."

ಅತ್ತೆಯ ಬೆಂಗಡೆಯಲ್ಲಿ ನಿಂತ ಕಾವೇರಿ ಸಂಕಪ್ಪನಿಗೆ ಏನೇನೊ ಸನ್ನೆಯಿಂದ ತಿಳಿಸಬೇಕೆಂದರೂ ಸಂಕಪ್ಪ ಆಕೆಯ ಕಡೆಗೆ ನೋಡುತ್ತಲೆ ಇರಲಿಲ್ಲ. ನೋಡುತ್ತಿದ್ದಾಗ ಸನ್ನೆ ಮಾಡುವ ಧೈರ್ಯ ಕಾವೇರಿಗೆ ಉಳಿಯು ತ್ತಿರಲಿಲ್ಲ. ಕೊನೆಗೆ ನಿರ್ವಾಹವಿಲ್ಲದೆ ಹೇಳಬೇಕಾಯಿತು :

"ಹೌದು, ನಾನೇ ಹೇಳಿದ್ದೆ. ಒಂದು ಚಿಕ್ಕ ಜೊತೆ ಮಾಡಿಕೊಂಡು ಬಾ ಎಂದು."

ಭಾಗಮ್ಮ ಹಿಂದಿರುಗಿ ಸೊಸೆಯನ್ನು ದುರದುರನೆ ನೋಡಿದಳು. ಸಂಕಪ್ಪ ಒಂದು ತೆಳುವಾದ ಕೆಂಪು ಕಾಗದದ ಮಡಿಕೆಯೊಳಗಿಂದ ಒಂದು ಜೊತೆ ಮಾಟವಾದ ಚಿನ್ನದ ಬಳೆಗಳನ್ನು ತೆಗೆಯುತ್ತಿದ್ದ.

"ಎಷ್ಟು ಮಾಟವಾಗಿ ಮಾಡಿದ್ದೀಯಲ್ಲೋ, ಸಂಕಪ್ಪಾ ?"

"ನನ್ನ ಕೆಲಸಾ ಅಂದರೆ—"

"ಹೌದೇಳಪ್ಪಾ, ನಿನ್ನ ಕೆಲಸ. ನನಗೆ ಗೊತ್ತಿಲ್ಲವೆ ? ಕೊಟ್ಟ ಬಂಗಾರ ಎಲ್ಲಾ ಬೂದಿಯಲ್ಲೇ—"

"ಹಹ...." ಎಂದು ಸಂಕಪ್ಪ ತನಗೆ ದೊರಕಿದ ಉಡುಗೊರೆಯನ್ನು ಸಹಜವಾಗಿಯೆ ಒಪ್ಪಿಕೊಳ್ಳುವಂತೆ ನಕ್ಕು ಮಾತು ತೇಲಿಸಿಬಿಟ್ಟ. ಕಾವೇರಿಗೆ ಆ ಚೊಕ್ಕಟವಾದ ಒಡವೆಗಳನ್ನು ಎತ್ತಿಕೊಳ್ಳಬೇಕೆಂಬ ಆಸೆ ಅನಿವಾರ್ಯವಾಗಿ "ಈ ಕಡೆ ಕೊಡು, ನೋಡುವ" ಎಂದಳು. ಭಾಗಮ್ಮ ಏನೂ ಮಾತಾಡಲಿಲ್ಲ. ಕಾವೇರಿಗೆ ಇಷ್ಟರಲ್ಲಿಯೆ ಪ್ರಸಂಗ ವಿಷಮಕ್ಕೆ ಹೋಗಬಹುದೆಂದೆನಿಸಿತ್ತಾದ್ದರಿಂದ ಅತ್ತೆಯ ಸಹನೆ-ಸಾವಧಾನಗಳು ಆಶ್ಚರ್ಯವನ್ನುಂಟುಮಾಡಿದ್ದವು. ಈಗಲ್ಲದಿದ್ದರೂ ಇನ್ನಾವಾಗಲೊ ಈ ವಿಷಯ ಚರ್ಚೆಗೆ—ಅಂದರೆ ಮಾತಿಗೆ—ಕಾರಣವಾಗದೆ ಇರಲಾರದು ಎಂಬ ಹೆದರಿಕೆಯೂ ಇಣಿಕಿಹೋಯಿತು. ಬಳೆಗಳನ್ನು ಕೈಯಲ್ಲೆತ್ತಿಕೊಳ್ಳುತ್ತಲೆ ಕಾವೇರಿ 'ಚನ್ನಾಗಿವೆ' ಎಂಬ ಸೂಸುನಗೆಯನ್ನು ಸಂಕಪ್ಪನಿಗೆ ಬೀರಿ ಕೈಸನ್ನೆಯಿಂದಲೆ ತಿಳಿಸಿದಳು. 'ಈಗ ನೀನು ಹೊರಟುಹೋಗು. ಕೂಲಿಯನ್ನು ಆಮೇಲೆ ಕೊಡುವೆ ಇಲ್ಲಿ ನಿಲ್ಲಬೇಡ' ಎಂದು. ಅಷ್ಟರಲ್ಲಿಯೆ ಸಂಕಪ್ಪನಿಗೆ ಸನ್ನಿವೇಶದ ಅರ್ಥವಾಗಿರಬೇಕೆಂಬೆ ಆತ ಏಳಲನುವಾದ. ಬೆನ್ನ ಹಿಂದೆ ಮಡಿಸಿಟ್ಟ ತನ್ನ ಕೊಡೆಗಾಗಿ ಕೈಯಾಡಿಸಿದ. ಕಾವೇರಿ ಅಲ್ಲಿ ನಿಲ್ಲದೆಯೆ ತನ್ನ ಕೋಣೆಯ ಕಡೆಗೆ ತೆರಳಿದಳು. ಒಂದೆಡೆ ಆ ಬಳೆಗಳನ್ನು ಕಂಡ ಸಂತೋಷವಾದರೆ, ಅತ್ತೆ ಸಂಕಪ್ಪನೆದುರು ತನ್ನನ್ನು ಬಯಲಿಗೆಳೆದು ರಾದ್ಧಾಂತ ಮಾಡಲಿಲ್ಲವಲ್ಲ ಎಂಬ ಸಮಾಧಾನ ಇನ್ನೊಂದೆಡೆ.

ಆದರೆ ಆ ಸಮಾಧಾನ ತೀರ ಕ್ಷಣಿಕವಾಗಿತ್ತು. ಸಂಕಪ್ಪ ಪೂರ್ತಿ ಮನೆಯ ಹೊರಗಿನ ಪಾವಟಿಗೆಗಳನ್ನಾದರೂ ಇಳಿದು ಹೋಗಿದ್ದನೊ ಇಲ್ಲವೊ, ಭಾಗಮ್ಮನ ದನಿ ಕೇಳಬಂದಿತು.

"ಕಾವೇರೀ...."

ಒಂದು ಕ್ಷಣ ಕಾವೇರಿಯ ಎದೆ ನಡುಗಿತು. ಪರೀಕ್ಷೆಯ ಕಾಲ ಬಂದೇ ಬಿಟ್ಟಿತೆಂದುಕೊಂಡಳು. ಆದರೂ ಬಂದುದನ್ನು ಎದುರಿಸದ ಹೊರತು ಬೇರೆ ಮಾರ್ಗವಿಲ್ಲೆಂಬುದನ್ನು ಆಕೆ ಸುಂಕಪ್ಪನನ್ನು ಪಡಸಾಲೆಯಲ್ಲಿ ಕಂಡ ಕ್ಷಣ ನಿರ್ಧರಿಸಿಕೊಂಡವಳಾದ್ದರಿಂದ, ಬಾಗಿಲ ಹತ್ತಿರ ಬಂದು ಕೇಳಿದಳು :

"ಏನು ?...."

"ಆ ಬಳೆ ಜೊತೆ ಮಾಡಲಿಕ್ಕೆ ನೀನು ಹೇಳಿದ್ದೆಯಾ ?"

"ಹೌದು...."

"ಯಾರಿಗಾಗಿ ?"

ಆ ಒಂದು ಮಾತಿನಲ್ಲಿ ಭಾಗಮ್ಮನ ಕುತ್ಸಿತ ಸ್ಪಷ್ಟವಾಗಿದ್ದಿತು. 'ನಿನಗಂತೂ ಮಕ್ಕಳಿಲ್ಲ, ಅಂದಮೇಲೆ ಇಂಥ ಒಡವೆಯೇಕೆ ?' ಎಂಬ ಧ್ವನಿ ಇದ್ದಿತು. ಅಲ್ಲದೆ 'ನಿನಗೆ ಮಕ್ಕಳಿಲ್ಲವೆಂದಮೇಲೆ ಇವನ್ನು ಮಾಡಿಸಿದ್ದು ಇನ್ನಾರಿಗೋ ಕೊಡಲಿಕ್ಕೆ ಅಷ್ಟು ಸಿರಿವಂತೆಯೆ ನೀನು—ಚಿನ್ನದ ಬಳೆಗಳನ್ನು ಉಚಿತವಾಗಿ ಕೊಡುವಷ್ಟು !' ಎಂಬ ಸೂಚನೆಯೂ ಅದರಲ್ಲಿರಬೇಕೆಂದು ಕಾವೇರಿಗೆ ಭಾಸವಾಯಿತು. ಅಂತೆಯೆ, ಅರೆನಿಮಿಷ ತಡೆದು ಆಕೆ ಹೇಳಿದಳು :

"ಕಿಟ್ಟೂನ ಸಲುವಾಗಿ ಮಾಡಹೇಳಿದ್ದೆ."

"ಕಿಟ್ಟೂ ಯಾರು ಮತ್ತೆ ?"

ಪ್ರಶ್ನೆ ಅನಾವಶ್ಯಕವಾಗಿತ್ತೆಂಬುದನ್ನು ಇಬ್ಬರೂ ತಿಳಿದವರಾಗಿದ್ದರು. ಪುರೋಹಿತರ ಸೊಸೆಯಾದ ಚಂಪಕ್ಕನ ಚಿಕ್ಕ ಮಗುವಾದ ಕಿಟ್ಟುವನ್ನು ಕಾವೇರಿ ನೂರಾರು ಬಾರಿ ಎತ್ತಿಕೊಂಡು, ಮುದ್ದಾಡಿಸಿ ಆಡಿಸಿದ್ದನ್ನೂ ಭಾಗಮ್ಮ ನೋಡಿರಲಿಲ್ಲವೆ ?

"ಚಂಪಕ್ಕನ ಕೂಸಿಗೆ ಮಾಡಿಸಿಕೊಡುತ್ತೇನೆ ಅಂದಿದ್ದೆ...."

"ಹುಂ...."

ಮತ್ತೆ ಅದೇ ತಾತ್ಸಾರದ—ಅಸಮಾಧಾನದ ಹುಂಕಾರ.

"ಆಕೆ ದುಡ್ಡು ಕೊಟ್ಟಿದ್ದಾಳೆಯೆ?"

"ಆಕೆ ಏನು ಕೊಡುತ್ತಾಳೆ—ಪಾಪ!"

"ಅಂದರೆ? ನೀನೇ ಎಲ್ಲದಕ್ಕೂ ದುಡ್ಡು ಕೊಟ್ಟು ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದೆಯಾ?"

"ಹೂಂ...."

ಭಾಗಮ್ಮನಿಗೆ ಕ್ಷಣಕ್ಷಣಕ್ಕೂ ಸಿಟ್ಟು ಪುಟಿದೇಳುತ್ತಿತ್ತು. ತನಗೆ—ಮನೆಯ ಮುಖ್ಯಸ್ಥಳಿಗೆ—ತಿಳಿಸದೆ ಇಂಥ ವಿಷಯವನ್ನು ತನಗೆ ಸೊಸೆಯಾದವಳು ನಡೆಸಿದ್ದಾಳೆ ಎಂದು ಒಂದೆಡೆಯಾದರೆ, ತನಗೆ ಯಾವ ಸಂಬಂಧವೂ ಇಲ್ಲದ ಆ ಕೂಸಿಗೆ ಕೈಯಿಂದ ದುಡ್ಡು ಕೊಟ್ಟು ಒಡವೆ ಮಾಡಿಸಿದಳು ಎಂಬ ರೊಚ್ಚು ಇನ್ನೊಂದೆಡೆಯಾಗಿ ಅರೆಸವಿಷ ಸರ್ಪವಾಗಿ ಬಿಟ್ಟಳು. ಆದರೆ ಕಾವೇರಿ ತನಗೆ ಅಚ್ಚುಮೆಚ್ಚಿನ ಮಗುವೆ ಆಗಿದ್ದ ಕಿಟ್ಟೂನ ಸಲುವಾಗಿ ಏನನ್ನೂ ಎದುರಿಸಲು ಸಿದ್ಧವಾದಂತಿತ್ತು.

"ನಿನಗೇನು ಬಂದಿದೆ ಅಂಥಾ ಮಹಾ ದೌಲತ್ತು? ದುಡ್ಡು ಎಂದರೇನು ನಿನಗೆ ಕಾಲುಕಸವಾಗಿದ್ದ ಹಾಗಿದೆಯಲ್ಲ? ಯಾರು ಹೇಳಿದರು ನಿನಗೆ ಈ ಎಲ್ಲ ಕಾರುಭಾರ?"

ಕಾವೇರಿ ಸುಮ್ಮನಾಗಿಯೆ ಇದ್ದಳು.

"ಅಷ್ಟು ದುಡ್ಡಾದರೂ ಎಲ್ಲಿಂದ ಬಂತು?"

ಕಾವೇರಿ ಏನನ್ನೋ ಹೇಳಬೇಕೆಂದಿದ್ದಳು. ಆದರೆ ಭಾಗಮ್ಮ ಮತ್ತೆ ಪ್ರಾರಂಭಿಸಿದಳು:

"ತಿಂಗಳ ಖರ್ಚಿಗೆ ಇನ್ನು ಐದು ರೂಪಾಯಿ ಕಳಿಸು ಎಂದರೆ ನೂರು ನೆಪ ಹೇಳುತ್ತಾನೆ ಆತ. ಒಳ್ಳೇ ಕಿವಿ ತುಂಬಿ ಇಟ್ಟಿದ್ದೀಯ. ಹೋದ ತಿಂಗಳು 'ವರ್ಷಕ್ಕೆ ಬೇಕಾಗುವ ಬೆಲ್ಲ, ಹುಣಿಸೆಹಣ್ಣು ತೆಗೆದುಕೊಳ್ಳಬೇಕಾಗಿದೆ; ಹತ್ತು ರೂಪಾಯಿ ಕೊಡು' ಎಂದು ಬಂದಾಗ ಕೇಳಿದರೆ 'ಇಲ್ಲ' ಎಂದ. ಇನ್ನೊಮ್ಮೆ ಆತ ಬಂದಾದರೂ ಬರಲಿ, ಕೇಳಿಯೆ ಬಿಡುತ್ತೇನೆ."

" ಇದಕ್ಕಾಗಿ ನಾನು ಅವರಿಂದ ದುಡ್ಡು ಇಸಿದುಕೊಂಡಿಲ್ಲ."

" ನಿನ್ನ ಪೆಟ್ಟಿಗೆಯಲ್ಲಿ ಹುಟ್ಟಿತೇನು ಹಾಗಾದರೆ ? "

" ಪೆಟ್ಟಿಗೆಯಲ್ಲೇನು ಹುಟ್ಟುತ್ತದೆ ? " ಕಾವೇರಿ ಅರೆಮುರ್ಧ ಸಿಡುಕಿನಲ್ಲಿಯೆ ಹೇಳಿದಳು. " ನನ್ನ ಹತ್ತಿರ ಸ್ವಲ್ಪ ಹಳೆಯ ಬಂಗಾರ ಇದ್ದಿತು. ಇಟ್ಟಾದರೂ ಏನು ಮಾಡುವುದು ? ಮಾಡಿಸಿದರೆ ಮಗು ಹಾಕಿಕೊಂಡೀತು ಎಂದು ಮಾಡಿಸಿಕೊಡುತ್ತೇನೆಂದು ಹೇಳಿದ್ದೆ...."

" ಬಹಳ ದೊಡ್ಡ ಕೆಲಸ ಮಾಡಿದೆ. ಮನೆಯಲ್ಲಿ ಇದ್ದುದನ್ನೆಲ್ಲಾ ಒಯ್ದು ಕೊಟ್ಟುಬಿಡು. ನನಗೇನ ಮಾಡುವುದು ? ದುಡ್ಡಿಗೆ ದುಡ್ಡು ಲೆಕ್ಕ ಹಾಕಿ ದಿನ ನೂಕುವುದು ಹೇಗೆ ಎಂದು ನಾನು ಸಾಯುತ್ತಿರುವಾಗ ನೀನು ಇದ್ದುದನ್ನು ಇನ್ನೊಬ್ಬರಿಗೆ ತೂರಿಬರುತ್ತೀರು. ಹೀಗಾದರೆ ಎಲ್ಲ ಸರಿಯಾಗಿ ನಡೆಯುತ್ತದೆ."

" ಅಂಥದೇನು ದೊಡ್ಡ ಒಡವೆ ಅಂತ ಇಷ್ಟು ಮಾತು ? "

" ಹೌದೇ, ಹೌದು. ಏನು ದೊಡ್ಡ ಒಡವೆ ! ನೀನೆ, ಬಹಳ ದೊಡ್ಡವಳಾಗಿದ್ದೀಯೆ. ಏನು ದೊಡ್ಡ ಒಡವೆ ಅಂತ ನನ್ನನ್ನೇ ತಿರುಗಿ ಕೇಳುತ್ತೀಯಾ ? ಹೋದ ವರ್ಷ ಯಾಕೆ ಬರಲಿಲ್ಲ ಈ ಮಾತು ? ನನ್ನ ತಂಗಿಯ ಮಗನ ಮದುವೆಗೆ ಅಂತ ಹೋಗಿ ಇಬ್ಬರೂ ಕೈ ಜಾಡಿಸಿಕೊಂಡು ಬಂದಿರಿ. ಒಂದು ಉಡುಗೊರೆ ಕೊಡುವುದು ಆಗಲಿಲ್ಲ ನಿಮಗೆ, ಅಲ್ಲವೆ ? ಹೌದು, ನನ್ನ ತಂಗಿಯ ಮಗ ಅಂದರೆ ನಿನಗೆ ಯಾರು ? ಬೀದಿಯ ಮಕ್ಕಳೆ ನಿನಗೆ ಬೇಕಾದವರು ! "

" ಅಲ್ಲಾ...."

" ಸಾಕು ಮಾಡು. ನನಗೆ ಎದುರು ಹೇಳಬೇಡ. ಸುಮ್ಮನೆ ಇದ್ದ ಹಾಗೆ ಹೆಚ್ಚೇ ಆಗುತ್ತದೆ. ನನಗೆ ತಿಳಿಸಿ ಹೇಳಲಿಕ್ಕೆ ಬರುತ್ತೀಯಾ ? ನನಗೆಲ್ಲಾ ತಿಳಿದಿದೆ. ಶ್ರೀನಿವಾಸ ಬಂದಾದರೂ ಬರಲಿ...."

" ಅಲ್ಲ. ಅಂಥಾದ್ದು ಆದದ್ದಾದರೂ ಏನು ? ಯಾಕೆ ಸುಮ್ಮನೆ ಸಿಟ್ಟು ಮಾಡುತ್ತೀರಿ ? ನೀವು ಬೇಡ ಅಂದರೆ ನಾನೇನೂ ಕೊಡುವುದಿಲ್ಲ. ಆಯಿತೆ ? "

"ನಿನಗೆ ಹೇಳಲಿಕ್ಕೆ ನಾನು ಯಾರೆ? ನಾನು ಬೇಡ ಅಂದರೆ ಕೊಡುವುದಿಲ್ಲವಂತೆ! ಮಾಡಲಿಕ್ಕೆ ಹೋಗುವ ಮುಂದೆ ನನ್ನನ್ನೆ ಕೇಳಿದ್ದೆ ಏನು? ಕೊಡಬೇಕಾದುದನ್ನು ಕೊಡು, ಬೇಕಾದಷ್ಟು ಕೊಡು. ನಿಮ್ಮಿಬ್ಬರಿಗೂ ನಾನೇ ಬೇಡವಾಗಿದ್ದೇನೆ. ಅಂದಮೇಲೆ—"

ಯಾವ ಮಾತೂ ಕೊನೆಗೆ ಅಲ್ಲಿಗೆ ಬರುತ್ತದೆಂದು ತಿಳಿದ ಕಾವೇರಿ ಇನ್ನು ಮಾತನಾಡಿ ಪ್ರಯೋಜನವಿಲ್ಲವೆಂದು ಸುಮ್ಮನಾದಳು

ಈ ಬಳೆಗಳ ವಿಷಯದಲ್ಲಿಯೂ ಹಗರಣದ ಮೂಲಕ ಕಾವೇರಿ ಇಡಿ ದಿವಸ, ಮರುದಿವಸ ಕೂಡ ವಿಮನಸ್ಕಳಾಗಿಯೆ ಇದ್ದಳು. ತಾನಾದರೂ ತನ್ನ ಅತ್ತೆಗೆ ತಿಳಿಯದಂತೆ ಈ ವ್ಯವಹಾರದಲ್ಲಿ ತೊಡಗಿದ್ದು ಒಂದು ದೃಷ್ಟಿಯಿಂದ ತಪ್ಪು ಎನಿಸುತ್ತಿತ್ತು ಒಮ್ಮೊಮ್ಮೆ. ಆದರೇನು? ಹೋದ ಸಲ ಶ್ರೀನಿವಾಸ ಬಂದಾಗ ಆತನನ್ನು ಕೇಳಿ ಆತನ ಸಮ್ಮತಿ ಪಡೆದಿರಲಿಲ್ಲವೆ? ಶ್ರೀನಿವಾಸನೇನೊ ಸಮ್ಮತಿಸಿದ್ದು ನಿಜ. ಆದರೆ ಅದೂ ಅರೆಮನರ್ಧವೆ. 'ಸುಮ್ಮನೆ ಯಾರಿಗಾದರೂ ಚಿನ್ನದ ಒಡವೆ ಮಾಡಿಸಿಕೊಡುತ್ತಾರೆಯೆ?' ಎಂದು ಮುಂತಾಗಿ ಹೇಳಿ—'ಕೊಡುವುದು ಬೇಡ' ಎಂದು ಖಂಡಿತವಾಗಿ ಹೇಳಿರದಿದ್ದರೂ ಕೊಡದಿರುವುದು ಒಳ್ಳೆಯದು ಎಂದೂ ಸೂಚಿಸಿದ್ದ. ಕೊಟ್ಟರೂ ಶ್ರೀನಿವಾಸನೇನೂ ತನ್ನ ಅತ್ತೆಯಂತೆ ಸಿಟ್ಟಿಗೇಳುವುದಿಲ್ಲವೆಂಬ ಭರವಸೆ ಕಾವೇರಿಗೆ ಅನಿಸಿದ್ದರಿಂದಲೆ ಈ ವ್ಯವಹಾರದಲ್ಲಿ ತೊಡಗಿದ್ದಳು. ನದಿಯ ಕಡೆಗೆ ಹೋಗುತ್ತಿದ್ದಾಗ ದಾರಿಯಲ್ಲಿಯೆ ಇದ್ದ ಸಂಕಪ್ಪನಿಗೆ ಆ ಬಳೆಯ ಜೊತೆ ಮಾಡಲು ಹೇಳಿದ್ದಳು. ತನ್ನ ಅತ್ತೆ ಮತ್ತು ಗಂಡನ ಸಮ್ಮತಿ-ಅಸಮ್ಮತಿಗಿಂತಲೂ ಕಿಟ್ಟೂನ ವಿಷಯಕ್ಕೆ ಆಕೆಗಿದ್ದ ಮಮತೆ ವಾತ್ಸಲ್ಯಗಳೆ ಆಕೆಯನ್ನು ಎಲ್ಲವನ್ನೂ ಮರೆಯುವಂತೆ ಮಾಡಿ ಮುಂದೂಡಿದ್ದವು. ಇನ್ನೊಬ್ಬರ ಮಕ್ಕಳಿಗೆ ಅಕ್ಕರೆ ತೋರಿಸಿದರೆ—ಬಡ ಮಕ್ಕಳಿಗೆ ಬಟ್ಟೆ-ಬರೆ, ಒಡವೆ-ವಸ್ತುಗಳನ್ನು ಕೊಟ್ಟರೆ—ತನಗೂ ಮಕ್ಕಳಾಗಬಹುದೆಂಬ ನಂಬಿಕೆ ಕಾವೇರಿಯ ಒಳಮನಸ್ಸಿನಲ್ಲಿ ಇರದಿರಲಿಲ್ಲವೆಂದೂ ಹೇಳಬಹುದಾಗಿತ್ತು ಯಾಕೆಂದರೆ ಶ್ರೀನಿವಾಸ 'ಯಾಕೆ ಸುಮ್ಮನೆ, ಯಾರಿಗೊ ಚಿನ್ನದ ಒಡವೆ ಕೊಡುವುದು?' ಎಂದು ಕೇಳಿದ್ದಕ್ಕೆ, ಕಾವೇರಿ ತನ್ನ ಕುರುಡು ನಂಬಿಗೆಯನ್ನೆ ಮುಂದುಮಾಡಿ ಹೇಳಿದ್ದಳು.

'ನಿನಗೇನು ಹುಚ್ಚು ಕಾವಿ? ಇನ್ನೊಬ್ಬರ ಮಕ್ಕಳಿಗೆ ಒಡವೆ ಮಾಡಿಸಿದರೆ ನಮಗೆ ಮಕ್ಕಳಾಗುತ್ತವೆಯೆ?' ಎಂದಿದ್ದ ಶ್ರೀನಿವಾಸ.

'ಹಾಗೆಲ್ಲಿ ಹೇಳಿದೆ ನಾನು? ಕಿಟ್ಟೂನ ಕಂಡರೆ ನನಗೆ ತುಂಬಾ ಅಕ್ಕರೆ. ಆ ಬಡವರು ಒಡವೆ ಎಲ್ಲಿಂದ ತರಬೇಕು?' ಎಂದು ತಾನು ಮಾತು ಹಾರಿಸಿದ್ದಳು.

' ಒಡವೆ ಹಾಕಲೇಬೇಕು ಎಂದು ಹಟ ಯಾಕೆ ? '

' ಬೇಕು ಎಂದು ಆ ಮಗು ಹಟ ಮಾಡಿದೆಯೆ ? '

' ಮಗು ಮಾಡದಿದ್ದರೂ ನೀನು ಮಾಡುತ್ತಿದ್ದೀಯಲ್ಲ ! '

' ಮಗು ಮುದ್ದಾಗಿ ಕಾಣಲಿ ಎಂದು ! '

' ಮಂದಿಯ ಮಕ್ಕಳು ಮುದ್ದಾಗಿ ಕಂಡರೂ ನಿನಗೆ ಸಂತೋಷವೆ ? '

' ಯಾರ ಮಕ್ಕಳಾದರೇನು ? ಮಕ್ಕಳು ಯಾವಾಗಲೂ ಮುದ್ದು ! '

' ಹುಚ್ಚು ನಿನಗೆ ! '

ಎಂದು ಶ್ರೀನಿವಾಸ ಮಾತನ್ನು ಅಲ್ಲಿಗೆ ಮುಗಿಸಿದ್ದ. ಆದರೆ ಶ್ರೀನಿವಾಸನೆದುರು ಕಾವೇರಿ ಆ ಕ್ಷಣ ಸುಮ್ಮನಾಗಿದ್ದರೂ ಮಕ್ಕಳ ಬಗೆಯಲ್ಲಿ ನೂರಾರು ಕಾಲ್ಪನಿಕ ಚಿತ್ರಗಳನ್ನು ಕಟ್ಟಿಕೊಂಡು ಸಮಾಧಾನ ತಂದುಕೊಳ್ಳುತ್ತಿದ್ದಳು. ತನಗೊಂದು ಮಗುವಾದರೆ ಅದನ್ನು ಸಿಂಗರಿಸಬಹುದಾದ ಸಾವಿರ ಸಡಗರಗಳಲ್ಲಿ ತನ್ನನ್ನೆ ಮರೆಯುತ್ತಿದ್ದಳು

ಎರಡು ದಿನವೂ ಆಕೆಯನ್ನು ವಿಮನಸ್ಕಳಾಗಿ ಮಾಡಿದ್ದು ಇದೇ. ತನ್ನ ಗೆಳತಿಯ ಮಗುವಿಗೆ ಆ ಬಳೆಗಳನ್ನು ಕೊಟ್ಟು ಕೈಯಲ್ಲಿ ಹಾಕಿ ನೋಡಿ ಪಡಬಹುದಾದ ಸಂತೋಷವೂ ತನಗಿರಬಾರದೆ ? ಅಷ್ಟಕ್ಕೂ ತನ್ನ ಅತ್ತೆಯಿಂದ ಪ್ರತಿಬಂಧವಾಯಿತಲ್ಲ ? ' ಶ್ರೀನಿವಾಸ ಬರಲಿ ' ಎಂಬ ಅತ್ತೆಯ ಒಂದು ಮಾತಿನಿಂದ ಕಾವೇರಿ ಪೂರ್ತಿಯಾಗಿ ಆ ವಿಚಾರದಿಂದ ಹಿಂತೆಗೆದಿದ್ದಳು. ಶ್ರೀನಿವಾಸ ಬಂದು ಆ ಸಮಾಚಾರವನ್ನೆಲ್ಲ ತಾಯಿಯಿಂದ ತಿಳಿದು ತನ್ನ ಮೇಲೆ ರೇಗಿಕೊಳ್ಳಬಹುದೆಂಬ ಹೆದರಿಕೆಯಿಂದಲ್ಲ. ಎಂಟು ವರ್ಷ ಆತನಿಗೆ ಹೆಂಡತಿಯಾಗಿದ್ದವಳಿಗೆ ಅಂಥ ಹೆದರಿಕೆಯಿರಬೇಕಾಗಿರಲಿಲ್ಲ. ಆದರೆ ಒಂದೆರಡು ದಿನದ ಬಿಡುವು ಮಾಡಿಕೊಂಡು ಬೇಸತ್ತು ಮನೆಗೆ ಬಂದಾಗ ಈ ವಿಷಯ ಬಂದರೆ ಸುಮ್ಮನೆ ಆತನಿಗೆ ಅಸಂತೋಷ, ತಮ್ಮಿಬ್ಬರಲ್ಲಿ ಕ್ಷಣಿಕವಾದರೂ ನಿಷ್ಕಾರಣವಾದ ವಿರಸ ಬೇಡ ಎಂಬ ವಿಚಾರಕ್ಕಾಗಿ. ಆತ ಇಲ್ಲಿಗೆ ಬಂದಾಗ ಅತ್ತೆ ಹೇಳುವ ಮೊದಲೆ ನಡೆದ ವಿಷಯವನ್ನೆಲ್ಲಾ ಕಾಗದ ಬರೆದು ಮರುದಿನವೆ ತಿಳಿಸಿಬಿಡುವುದು, ಆಮೇಲೆ ಆತ ತಿಳಿಸಿದ ಹಾಗೆ ಮಾಡುವುದು, ಎಂಬ ನಿರ್ಧಾರಕ್ಕೆ ಬಂದಿದ್ದಳು.

ಆದರೂ ಮರುದಿನ ಮುಂಜಾನೆ ನದಿಗೆ ಹೋದಾಗ ಚಂಪಕ್ಕನ ಕೂಡ ಮಾತನಾಡಲಿಕ್ಕೆ ಒಂದು ಬಗೆಯ ಸಂಕೋಚವೆನಿಸುತ್ತಿತ್ತು ಕಾವೇರಿಗೆ— ಪ್ರತಿನಿತ್ಯವೂ ನದಿಯ ದಡದ ಮೇಲೆ ಭೆಟ್ಟಿಯಾಗಿ ಎದೆಯ ದುಗುಡಗಳೆಲ್ಲ ವನ್ನೂ ಒಬ್ಬರೊಬ್ಬರೆದುರು ತೋಡಿಕೊಳ್ಳುವುದು ಇಬ್ಬರಿಗೂ ವಾಡಿಕೆ ಯಾಗಿದ್ದರಿಂದ ಕಳೆದ ಒಂದೆರಡು ದಿನಗಳ ಸಂಕೋಚದ ಮಾತಿನ ರೀತಿ ಚಂಪಕ್ಕನಿಗೆ ಕುತೂಹಲಕ್ಕಲ್ಲದೆ ಸಂಶಯಕ್ಕೂ ಈಡುಮಾಡಿತ್ತು. ಕೊನೆಗೆ, ತಡೆಯಲಾಗದೆ ಕಾವೇರಿಯನ್ನು ಕೇಳಿಯೆ ಬಿಡೋಣವೆಂದು ಚಂಪಕ್ಕ ಮೊದಲುಮಾಡಿದಳು :

"ಏನೆ, ಏನಾಗಿದೆ ನಿನಗೆ? ಎರಡು ದಿನವೂ ನೋಡುತ್ತಿದ್ದೇನೆ. ಸರಿಯಾಗಿ ಒಂದು ಮಾತು ಕೂಡ ಆಡುವುದಿಲ್ಲ ?"

"ಯಾಕೆ ? ಆಡುತ್ತಿದ್ದೇನಲ್ಲ."

ಆ ಒಂದು ಸಣ್ಣ ಮಾತಿನಲ್ಲಿಯೆ ಚಂಪಕ್ಕ ಹೇಳಿದ್ದು ಸರಿ, ತಾನು ಹೇಳಿದ್ದು ಏನೋ ಒಂದು ಮಾತು ಎಂಬುದು ಕಾವೇರಿಗೆ ತಿಳಿಯು ವಂತಿರಲಿಲ್ಲ.

"ಹೌದು. ಮಾತನಾಡುತ್ತೀ. ಆದರೆ ನಾನು ನಿನ್ನನ್ನು ಮಾತ ನಾಡಿಸಬೇಕು, ಏನಾದರೂ ಕೇಳಬೇಕು. ಆಗ ನೀನು ಏನಾದರೊಂದು ಉತ್ತರ ಹೇಳುತ್ತೀ. ಅಷ್ಟೂ ತಿಳಿಯುವುದಿಲ್ಲವೆ ನನಗೆ ?"

"ಏನೊ ತಾಯಿ, ತೀರಾ ಬೇಜಾರಾಗಿ ಹೋಗಿದೆ."

"ಬೇಜಾರಾಗಿದೆಯೊ, ಆತುರವಾಗಿದೆಯೊ ?"

"ಆತುರ ಎನು ಬಂತು ಮಣ್ಣು ! ಯಾತಕ್ಕಾಗಿ ಆತುರಪಡಬೇಕು ? ಹೇಳು."

"ಸಾಕುಮಾಡೆ ಈ ಸೋಗು ! ನನಗೇನು ತಿಳಿದಿಲ್ಲ ಅಂತ ಮಾಡಿ ದ್ದೀಯಾ ? ನೀನು ಹೇಳದಿದ್ದರೆ ನನಗೆ ಗೊತ್ತೇ ಆಗುವುದಿಲ್ಲವೆ ?"

ಕಾವೇರಿಗೆ ನಿಜವಾಗಿಯೂ ಆಶ್ಚರ್ಯವೆನಿಸಿತು. ತನ್ನ ಗೆಳತಿಯ ಕೆಲಿಗೆಯ ಮಾತಿನಿಂದ ತನ್ನ ಕುತೂಹಲವೆ ಬೆಳೆಯುವಂತಾಯಿತಲ್ಲದೆ ಆಕೆಗೆ ಸಮರ್ಪಕವಾದ ಉತ್ತರವನ್ನು ಹೇಳುವುದಂತೂ ದೂರವೆ ಉಳಿಯಿತು.

“ ಏನದು ನಿನಗೆ ಗೊತ್ತಾಗುವುದು ? ನನಗೇ ಗೊತ್ತಿಲ್ಲವಲ್ಲ ! ”

“ ನಿನಗೇ ಗೊತ್ತಿಲ್ಲ ? ”

“ ಇಲ್ಲ, ನಿಜವಾಗಿಯೂ ಗೊತ್ತಿಲ್ಲ. ನನ್ನಾಣೆ—”

“ ಬಹಳ ವಿಚಿತ್ರವಾಯಿತು ಬಿಡು ! ”

“ ಏನದು ಹೇಳಬಾರದೆ ? ”

“ ನೀನು ಇನ್ನು ಬೇಗನೆ ಬೆಳಗಾಂವಿಗೆ ಹೋಗುವಿಯಂತಲ್ಲ ? ”

“ ಬೆಳಗಾಂವಿಗೆ ? ”

“ಹುಂ.... ನಿನ್ನ ಯಜಮಾನರೇನೊ ಮನೆ ಬಂಡಿಗೆ ಹಿಡಿದು ಕಾಗದ ಕೂಡ ಬರೆದಿದ್ದಾರಂತೆ—”

“ ನಿನಗೆ ಯಾರು ಹೇಳಿದರು ? ”

“ ಅಂದರೆ, ಇದು ನಿನಗೆ ಗೊತ್ತಿದ್ದಿತು ಹಾಗಾದರೆ—”

“ ಇಲ್ಲ ತಾಯಿ. ಅದಕ್ಕೆಯೆ, ನನಗೆ ಗೊತ್ತಿಲ್ಲದ್ದು ನಿನಗೆ ಯಾರು ಹೇಳಿದರು ಅಂತ ಕೇಳುತ್ತಿದ್ದೇನೆ.”

“ ನನಗೆ ಯಾರು ಹೇಳುತ್ತಾರೆ ? ನಿಮ್ಮ ಅತ್ತೆ ಮತ್ತು ಆ ತಂಗೆಮ್ಮ ನಿನ್ನೆ ಸಾಯಂಕಾಲ ಏನೇನೊ ಮಾತಾಡುತ್ತಿದ್ದರು. ನನ್ನ ಕಿವಿಗೆ ಇಷ್ಟೇ ಬಿದ್ದಿತು. ನಾನು ಬಂದದ್ದನ್ನು ನೋಡಿ ಮಾತೇ ನಿಲ್ಲಿಸಿದರು. ಅವರೆಂಥವರು —ನಾನು ಕೇಳಿದರೆ ನಿನಗೆ ಹೇಳಿಯೇನು ಎಂದುಕೊಂಡರೊ ಏನೊ ? ”

ಕಾವೇರಿಗೆ ವಿಚಿತ್ರವೆನಿಸಿತು ! ದುಃಖವಾಯಿತು. ಸಿಟ್ಟೂ ಬಂದಿತು. ಈ ಭಾವನೆಗಳ ತುಮುಲದಲ್ಲಿ ಏನು ಹೇಳಬೇಕು ತಿಳಿಯದೆ ಸುಮ್ಮನಾದಳು. ಕೊನೆಗೆ, ಏನೆಂಬುದನ್ನು ಒಮ್ಮೆಯಾದರೂ ತಿಳಿಯಲೇಬೇಕೆಂಬ ಹಟದಿಂದ ಕೇಳಿದಳು :

“ ಪತ್ರ ಯಾರಿಗೆ ಬಂದಿತ್ತು ಗೊತ್ತಾಯಿತೆ ನಿನಗೆ ? ”

“ ನಿಮ್ಮ ಮನೆಗೆ ಬಂದಿರಬೇಕು ; ಇನ್ನಾರಿಗೆ ಬರಬೇಕು ? ”

“ ಅಂಗರೆ, ಪತ್ರ ನನಗೆಯೆ ಬರೆದಿರಬೇಕಾಯಿತು ? ”

ಕಾವೇರಿ ತೀವ್ರವಾದ ಒಂದು ಯೋಚನೆಯಲ್ಲಿ ಸಿಲುಕಿದ್ದ ಹಾಗಿತ್ತು. ಆ ಯೋಚನೆಯು ಪಡಿನೆಳಲೆಂಬಂತೆ ಮಾತು ಕ್ಷೀಣವಾಗಿ ಹೊರಬಿದ್ದಿತು :

"ಪತ್ರ ನನ್ನದೆ ಆಗಿದ್ದರೆ ಅದು ಇದುವರೆಗೆ ನನಗೆ ಸಿಕ್ಕಲಿಲ್ಲವಲ್ಲ!"

"ನಿನ್ನ ಪತ್ರ ಅವರು ತೆರೆದು ನೋಡಿರಬೇಕು. ನೋಡಿದ ಮೇಲೆ ಅದನ್ನು ತಿರುಗಿ ನಿನಗೆ ಹೇಗೆ ಕೊಡುತ್ತಾರೆ?"

ಅದು ನಡೆದದ್ದು ಹೀಗೆಯೆ ಇರಬೇಕೆಂಬ ಮನವರಿಕೆ ಕಾವೇರಿಗೆ ಆದ ಕ್ಷಣ ತನ್ನ ಅತ್ತೆಯ, ತಂಗೆಮ್ಮನ ವಿಷಯಕ್ಕೆ ತೀರ ಜಿಗುಪ್ಸೆ ಎನಿಸಿತು. 'ಕಾಗದ ಏನೆಂದು ಬಂದಿದೆ? ಎಂದು ಕೇಳಿದ್ದರೆ ನಾನು ಹೇಳುತ್ತಿರಲಿಲ್ಲವೆ? ಯಾಕೆ ಈ ಸಂಶಯದ ಮನೋವೃತ್ತಿ, ದೇವರೆ ಬಲ್ಲ' ಎಂದುಕೊಂಡಳು. ಆದರೆ ಮರುಕ್ಷಣವೆ, ಆ ಪತ್ರ ತನ್ನದೆ ಆಗಿದ್ದರೆ ಅದನ್ನು ಪಡೆಯಲೇಬೇಕೆಂಬ ನಿರ್ಧಾರ ಮನಸ್ಸಿನಲ್ಲಿ ಮೂಡಿತು. 'ಹೌದು. ಅತ್ತೆ ಎಷ್ಟು ಸಿಟ್ಟುಮಾಡಿದರೂ ಸರಿ, ಅದನ್ನು ಪಡೆಯಲೇಬೇಕು' ಎಂದುಕೊಳ್ಳುತ್ತಿರುವಾಗ ಚಂಪಕ್ಕ ಕೇಳಿದಳು:

"ಏನು ಮಾಡುತ್ತೀ ಹಾಗಾದರೆ?"

"ಮಾಡುವುದೇನು? ನನ್ನ ಕಾಗದ ಕೊಡಿರಿ ಎಂದು ಹೋಗಿ ಕೇಳಿಬಿಡುತ್ತೇನೆ."

"ಬೇಡ, ಕಾವೇರಿ. ಸುಮ್ಮನೆ ಅದೊಂದು ಮತ್ತೆ ಮನಸ್ತಾಪಕ್ಕೆ ಕಾರಣ."

"ಈಗೇನು ಕಡಿಮೆಯಾಗಿದೆ? ಅಲ್ಲದೆ, ನನ್ನ ಪತ್ರ ನನಗೆ ಸಿಗಬೇಡವೆ?"

ಚಂಪಕ್ಕ ಸುಮ್ಮನಾದಳು.

"ನೋಡುವಿಯಂತೆ, ಏನೆಂಬುದನ್ನು ನಾಳೆ ಹೇಳುವೆ"

"ಕಾಗದ ಬಂದದ್ದು ನಿನಗೆ ಹೇಗೆ ಗೊತ್ತಾಯಿತು ಎಂದು ಕೇಳಿದರೆ?"

"ಅದನ್ನು ಯಾತಕ್ಕೆ ಕೇಳುತ್ತಾರೆ?"

"ಕೇಳದೆಯೆ ಇರುತ್ತಾರೆಯೆ? ಕೇಳಿದರೆ—"

"ನಾನು ಏನನ್ನೂ ಹೇಳುವುದಿಲ್ಲ—"

"ನನ್ನ ಹೆಸರು ಮಾತ್ರ ಹೇಳಬೇಡ, ಕಾವೇರಿ. ದಯಮಾಡಿ—"

ಅಷ್ಟರಲ್ಲಿ ಕಾವೇರಿ ಎಲ್ಲವನ್ನೂ ನಿರ್ಣಯ ಮಾಡಿಕೊಂಡಂತಿತ್ತು. ಆ ಸಮಾಚಾರವನ್ನು ಕೇಳಿದಾಗಿನಕಿಂತ ಮನಸ್ಸು ಒಂದು ಸ್ತಿಮಿತಕ್ಕೆ

ಬಂದಿತ್ತಾದ್ದರಿಂದಲೆ ಆ ವಿಷಯುವನ್ನು ಬಿಟ್ಟು ಬೇರೆಯಾಗಿ ಮಾತನಾಡು ವಂತಾಗಿದ್ದಳು.

"ಅದು ಹೋಗಲಿ, ಚಂಪಾ, ನಿನ್ನೆಯಿಂದ ಕಿಟ್ಟೊ ನಮ್ಮಲ್ಲಿಗೆ ಬಂದೇ ಇಲ್ಲವಲ್ಲ ?"

"ಹೇಗೆ ಬರಬೇಕು ? ಕರೆದುಕೊಂಡು ಹೋದರೆ ಶಾಂತಾನೆ ಕರೆ ದೊಯ್ಯಬೇಕು. ಆದರೆ--ನಮ್ಮಲ್ಲಿಯು ಎಲ್ಲಾ ಹೇಗೆ ಅನ್ನುವುದು—ನಿನಗೆ ಗೊತ್ತೇ ಇದೆಯಲ್ಲ. ಮಗುವನ್ನು ಮುಟ್ಟುವ ಹಾಗಿಲ್ಲ ಅನ್ನುವ ಹಾಗೆ ಹಟ ಮಾಡುತ್ತಾರೆ."

"ಹಾಗಾದರೆ ಕಿಟ್ಟು ನಿನ್ನೆಯಿಂದ ಅತ್ತಿರಬೇಕು—"

"ಏನು ಮಾಡುವುದು ? ಹಗಲು ಹನ್ನೆರಡು ಗಂಟೆ ಸೊಂಟಕ್ಕೆ ಕಟ್ಟಿ ಕೊಂಡು ಕೆಲಸ ಮಾಡುವುದಂತೂ ಸಾಧ್ಯವಿಲ್ಲ...."

"ಮತ್ತೆ ಯಾರ ಜತೆಯಲ್ಲಾದರೂ ಕಳಿಸಿಕೊಡಬಾರದೆ ?"

"ಯಾರು ಕರೆದೊಯ್ಯುತ್ತಾರೆ, ಸುಮ್ಮನೆ ? ಹತ್ತು ಬಾರಿ ಹೇಳಿ ಕೊಂಡೆ ಶಾಂತಾಳಿಗೆ— ಆದರೇನು ?"

"ಪಾಪ ! —"

ಕಾವೇರಿಯುನ್ನು ನದಿಯು ಘಟ್ಟದ ಮೇಲೆ ಕಂಡ ಕ್ಷಣದಿಂದಲೂ ಒಂದು ವಿಷಯ ಕೇಳಬೇಕೆಂಬ ಕುತೂಹಲ ಚಂಪಕ್ಕನಿಗಾಗಿತ್ತು. ಆದರೆ ಅದು ಹೇಗೋ ಕಾಗದದ ಮಾತು ಮೊದಲು ಹೊರಬಿದ್ದಿತು. ಈಗ ಕೇಳ ಬೇಕಾದುದನ್ನು ತಡೆಯುದಾಗಿ ಕೇಳಿದಳು :

"ಸಂಕಪ್ಪ ಬಳೆ ತಂದುಕೊಟ್ಟನೆ ?"

"ಇಲ್ಲವಲ್ಲ !"

"ಸಾಕು ನಿನ್ನ ಚೇಷ್ಟೆ—"

"ಚೇಷ್ಟೆ ಏನು ಇದರಲ್ಲಿ ? ತಂದುಕೊಡಲಿಲ್ಲ ಅಂದರೆ—"

"ನಿನ್ನೆ ಸಾಯಂಕಾಲ ನಾನು ಆತನ ಮನೆಗೆ ಹೋಗಿದ್ದೆ...."

"ಏನು ಹೇಳಿದ ಸಂಕಪ್ಪ—"

"ನಿನ್ನೆಯೆ ತಯಾರು ಮಾಡಿ ಕೊಟ್ಟಿದ್ದೇನೆ ಎಂದ !"

ಕಾವೇರಿಗೆ ಮಾತಿಲ್ಲದಾಯಿತು. ಮುಖವೂ ಗಂಭೀರವಾಯಿತು. ಕಿಟ್ಟುವಿನ ಕೈಗಳಲ್ಲಿ ಆ ಬಳೆಗಳನ್ನು ಹಾಕಿ ನೋಡುವ ಸುಖವೂ ತನಗಿಲ್ಲವೆಂಬುದು ಮತ್ತೆ ಆ ಕ್ಷಣ ಕಾವೇರಿಯನ್ನು ಬಾಧಿಸಿತು ನಿರ್ವಾಹವಿಲ್ಲದೆ ಹೇಳಿದಳು:

"ಹೌದು. ನಿನ್ನೆ ಬೆಳಗ್ಗೆ ತಂದುಕೊಟ್ಟಿದ್ದಾನೆ. ಆದರೆ—"

"ಆದರೆ ಏನು?"

"ಆದರೆ ಈಗಲೆ ಅವನ್ನು ನಿನಗೆ ಕೊಡುವಂತಿಲ್ಲ!...."

"ಈಗಲೆ ಅಲ್ಲದಿದ್ದರೆ ಯಾವಾಗ, ಹಾಗಾದರೆ?"

"ನೋಡುವಾ—"

"ಇದೇನೆ, ಕಾವೇರಿ—ಎಂದಿನಿಂದ ಕಾಯುತ್ತಿದ್ದೇನೆ. ಮಗುವಿಗಾಗಿ—"

"ಹೌದು ಚಂಪಾ, ಕೊಡುವುದಿಲ್ಲ ಅಂದೆನೆ?"

"ಯಾಕೆ? ಈಗೇನಾಯಿತು?"

"ಅತ್ತೆ ನಿನ್ನೆ ತುಂಬಾ ಕೋಪಿಸಿಕೊಂಡಳು."

"ಅವರಿಗೆ ಯಾಕೆ ಹೇಳಿದಿ?"

"ನಾನು ಯಾತಕ್ಕೆ ಹೇಳಬೇಕು? ಸಂಕಪ್ಪನೆ ಸಿಕ್ಕುಬಿದ್ದ—"

"ಹಾಗಾದರೆ ಇನ್ನು ಕೊಡುವುದು ಸಾಧ್ಯವಿಲ್ಲ ಎಂದಾಯಿತು"

"ಹಾಗಲ್ಲ. ಕೆಲವು ದಿವಸ ಹೋಗಲಿ—"

"ಅಷ್ಟರಲ್ಲಿ ನೀನು ಬೆಳಗಾಂವಿಗೆ ಹೋಗಿಬಿಡುತ್ತೀಯಲ್ಲ"

ಚಂಪಕ್ಕನ ದನಿಯಲ್ಲಿ ನಿರಾಶೆ ಸ್ಪಷ್ಟವಾಗಿದ್ದಿತು.

"ಹೋದರೇನಾಯಿತು? ಹೋಗುವಾಗ ಕೊಟ್ಟುಹೋಗುತ್ತೇನೆ."

"ಆಗ ನಿಮ್ಮ ಅತ್ತೆಗೆ ಗೊತ್ತಾಗುವುದಿಲ್ಲವೆ?"

"ಗೊತ್ತಾದರೂ, ಇನ್ನೊಬ್ಬರಿಗೂ ಗೊತ್ತಾಗಿರುತ್ತದೆ...."

"ಇನ್ನೊಬ್ಬರಿಗೆ?—"

"ಹುಂ...."

ಎಂದು ಕಾವೇರಿ ನಕ್ಕಳು ಆ ನಗೆಯಲ್ಲಿ ಶ್ರೀನಿವಾಸ ಬಂದು ತನ್ನನ್ನು ಕರೆದೊಯ್ಯುವಾಗಿನ ಸುಖದ ಎಣಿಕೆ ಸ್ಪಷ್ಟವಾಗಿತ್ತು. ನಿಧಾನವಾಗಿ ಬಿಸಿಲು

ಕಾಯತೊಡಗಿತ್ತು. ತಾನು ಹೊಳೆಗೆ ಬಂದು ಬಹಳ ಹೊತ್ತಾಯಿತೆಂಬುದರ ಅರಿವು ಆ ಕ್ಷಣಕ್ಕೆ ಕಾವೇರಿಗೆ ಬಂದಿರಬೇಕು. ತುಂಬಿದ ಕೊಡವನ್ನು ಎತ್ತಿಕೊಳ್ಳುತ್ತ ಅಂದಳು:

"ಹೊರಡುವಾ ಚಂಪಾ. ಬಂದೂ ಬಹಳ ಹೊತ್ತಾಯಿತು...."

"ಆಗಲಿ ಬಿಡು. ಹೋಗಿ ಮಾಡುವುದಾದರೂ ಏನು? ಮನೆಗೆ ಹೋದಮೇಲೆ ಮತ್ತೆ ಇದ್ದೇ ಇದೆಯಲ್ಲ."

ಗೆಳತಿಯ ಮಾತು ನಿಜ ಎನಿಸಿತು ಕಾವೇರಿಗೆ. ಅವರಿಬ್ಬರಿಗೂ ಅಷ್ಟೇ. ಬೆಳಗಿನಲ್ಲಾಗಲಿ, ಸಾಯಂಕಾಲದಲ್ಲಾಗಲಿ ಹೊಳೆಯ ದಡದಲ್ಲಿ ಒಬ್ಬರೊಬ್ಬರಿಗೆ ಭೆಟ್ಟಿಯಾಗಿ ಮುಕ್ತಕಂಠರಾಗಿ ಮಾತನಾಡುತ್ತಿರುವಾಗಲೆ ಏನೋ ಒಂದು ರೀತಿಯ ಸಮಾಧಾನವೆನಿಸುತ್ತಿತ್ತು. ಬದುಕಿದ್ದೇವೆ ಎಂಬ ಭಾವನೆಯೂ ಆಗ ಮಾತ್ರ ಅವರಲ್ಲಿ ಮೂಡುತ್ತಿತ್ತೆಂದು ಹೇಳಬಹುದು.

"ಮನೆ ಎಲ್ಲಿ ತಪ್ಪೀತು? ಆದರೂ ತಡ ಮಾಡಿ ಹೋಗಿ ಯಾಕೆ ಸುಮ್ಮನೆ ಅವರಿಂದ ಮಾತನಾಡಿಸಿಕೊಳ್ಳಬೇಕು?"

"ಆಡಿಸಿಕೊಳ್ಳುವುದು ಹಣೆಯಬರಹ. ತಡ ಮಾಡದಿದ್ದರೂ ಅವರು ಅನ್ನುವವರೆ. ಬೇಗನೆ ಹೋದರೆ ಬೇಗ ಬಂದೆ ಎಂದು ಒಂದು ಒಳ್ಳೆಯ ಮಾತನ್ನು ಅವರು ಆಡುವುದಂತೂ ಅಸ್ವಪ್ನದಲ್ಲಿಯೆ ಇದೆ."

"ಒಳ್ಳೆಯ ಮಾತು ಯಾರಿಗೆ ಬೇಕಾಗಿದೆ? ಕೆಟ್ಟ ಮಾತು ತಪ್ಪಿದರೆ ಸಾಕಾಗಿದೆ ನನಗಂತೂ...."

"ಇನ್ನೆಷ್ಟು ದಿನ? ನೀನಂತೂ ಹೊರಟು ನಿಂತೆ ...."

ಚಂಪಾಳ ದನಿಯಲ್ಲಿ ಕಾವೇರಿಯು ಹುಂಬರುವ ಸುಖದ ದಿನಗಳ ಬಗ್ಗೆ ಒಂದು ಬಗೆಯ ಅಸೂಯೆ, ಯಾವ ಸ್ಥಿತ್ಯಂತರವನ್ನೂ ಅಪೇಕ್ಷಿಸಲಾಗದಂಥ ತನ್ನ ಬದುಕಿನ ಬಗೆಯಲ್ಲಿಯ ಅಸಹಾಯತೆ ವ್ಯಕ್ತವಾಗುತ್ತಿದ್ದವು. ಅಲ್ಲದೆ ಆ ಕ್ಷಣಕ್ಕೆ ಕಾವೇರಿ ಹೊರಟುಹೋದನಂತರ ತನಗೆ ಇದ್ದ ಒಬ್ಬ ಗೆಳತಿಯೂ ಇಲ್ಲವಾಗುವಳಲ್ಲ ಎಂಬ ಕೊರತೆಯೂ ಕಾಡುತ್ತಿತ್ತು. ಅಂತೆಯೆ ಆಕೆ ಹೇಳಿದಳು:

"ನೀನಂತೂ ಇನ್ನು ಮೇಲೆ ಹೊರಟುಹೋಗುವಿ. ನನಗಂತೂ ನಿನ್ನೆಯಿಂದ ಅದೇ ಒಂದು ಚಿಂತೆಯಾಗಿದೆ...."

ತಾನು ಹೊರಟುಹೋಗುವ ವಿಚಾರದ ಸೊಗಸಿನಲ್ಲಿ ತೊಡಗಿದ ಕಾವೇರಿಗೆ ಚಂಪಕ್ಕನ ಮನಃಸ್ಥಿತಿ ಅರ್ಥವಾಗಲಿಲ್ಲವೆಂದು ಕಾಣುತ್ತದೆ.

"ಚಿಂತೆ ಯಾಕೆ, ಚಂಪಾ?" ಎಂದಳು ಕಾವೇರಿ.

"ಚಿಂತೆ ನಿನಗಾಗಿ ಅಲ್ಲ, ನನಗಾಗಿ! ಏನೊ ಮುಂಜಾನೆ ಸಂಜೆ ಆಗೀಗ ಭೆಟ್ಟಿಯಾದಾಗ ಮಾತಾಡಿ ಮನಸ್ಸು ಹಗುರಮಾಡಿಕೊಳ್ಳುತ್ತಿದ್ದೆ. ಇನ್ನುಮೇಲೆ ಅದೂ ಇಲ್ಲ...."

ಚಂಪಕ್ಕನಿಗೆ ಮುಂದೆ ಮಾತನಾಡಲಾಗಲಿಲ್ಲ. ಕಾವೇರಿಗೂ ಕಸಿಕರ ವೆನಿಸಿತು. ಏನಾದರೊಂದು ಸಮಾಧಾನವನ್ನು ಹೇಳಬೇಕೆಂದಳು.

"ನನಗೂ ಅಷ್ಟೆ, ಚಂಪಾ ಇಲ್ಲಿಂದ ಹೊರಟುಹೋಗಬೇಕು ಎಂಬ ಆಸೆ ಏನೊ ಇದೆ. ಆದರೆ—" ಎಂದು ಮಾತು ನಿಲ್ಲಿಸಿದಳು.

"ಆದರೆ ಏನು?"

"ಅಲ್ಲಿ ಏನೋ ಹೇಗೋ ಎಂದು ದಿಗಿಲೆನಿಸುತ್ತದೆ.... ಹೋದಮೇಲೆ ಅಲ್ಲಿ ಏನೇನಾಗುವುದಿದೆಯೊ ಯಾರು ಬಲ್ಲರು?"

"ಅವೆಲ್ಲ ಹೋಗುವ ತನಕ.... ಹೋದಮೇಲೆ ಎಲ್ಲ ತಾನಾಗಿಯೆ ಸರಿಯಾಗುತ್ತೆ. ಅಲ್ಲೇ, ಕೇಳಬೇಕೆಂದವಳು ಮರೆತೇ ಇದ್ದೆ. ನಿಮ್ಮ ಅತ್ತೆಯೂ ಬರುವವಳೇನು ನಿನ್ನ ಕೂಡ ಬೆಳಗಾಂವಿಗೆ?"

"ನನಗೇನು ಗೊತ್ತೆ? ನಾನು ಹೋಗುವುದನ್ನು ಹೇಳಿದವಳು ನೀನೇ. ಕೇಳಿದ ಕ್ಷಣ ನಾನೂ ಹುಚ್ಚಳ ಹಾಗೆ ಇಂದೇ ಹೊರಟುನಿಂತವರ ಹಾಗೆ ಮಾತನಾಡುತ್ತಿದ್ದೇನೆ...."

ಎಂದು ನಕ್ಕುನಕ್ಕಳು. ಆ ಒಂದು ನಗುವಿನಲ್ಲಿ ಮುಂದಿನದರ ವಿಷಯ ದಲ್ಲಿ ಆಕೆಯ ಹೃದಯದಲ್ಲಿದ್ದ ಅರೆಭರವಸೆಯೆಲ್ಲವೂ ಹುದುಗಿಕೊಂಡಂತಿತ್ತು. ಕರೆದುಕೊಂಡು ಹೋಗುತ್ತೇನೆ ಎಂದು ಶ್ರೀನಿವಾಸ ಎಷ್ಟು ಸಾರೆ ಕಾಗದ ಬರೆದಿರಲಿಲ್ಲ? ಆದರೂ ಆಸೆಯನ್ನು ಹಿಂಬಾಲಿಸಲು ಹಾತೊರೆಯುವ ಹೃದಯ ಆ ವಿಚಾರಕ್ಕೆ ಆಸ್ಪದ ಕೊಡಲು ಸಿದ್ಧವಿರಲಿಲ್ಲ. ಹಿಂದೆ ಹಾಗೆ ಬರೆದುದಕ್ಕೂ ಈ ಸಲ ಬರೆದುದಕ್ಕೂ ಅಂತರವಿಲ್ಲವೆ? ಈಗ ಕೆಲಸ ಕಾಯಂ ಆಗಿದೆ; ಒಂದೇ ಕಡೆಗೆ ಇರುವ ಅನುಕೂಲವಾಗಿದೆ. ಅಲ್ಲದೆ, ಮನೆಯನ್ನು ಬಾಡಿಗೆಗೆ ತೆಗೆದುಗೊಂಡಾಗಿದೆ—ಎಂದು ಹೇಳಲಿಲ್ಲವೆ ಚಂಪಕ್ಕ? ತನಗೆ

ಖಚಿತವಾಗಿ ಗೊತ್ತಾಗದ ಹೊರತು ಚಂಪಕ್ಕ ಮಾತನಾಡುವವಳಲ್ಲ. ಚಂಪಕ್ಕನ ಮಾತು ಕಾವೇರಿಯನ್ನು ಯೋಚನೆಯಿಂದ ಎಚ್ಚರಿಸಿತು.

"ಹೊರಟು ನಿಲ್ಲುವುದೆಂದರೇನು? ನಾನು ಕೇಳಿದ ಮಟ್ಟಿಗಂತೂ ಬೇಗನೆ ಬಂದು ಕರೆದುಕೊಂಡು ಹೋಗುತ್ತಾರಂತೆ. ಅವರಂತೂ ಹಾಗೆಯೆ ಮಾತನಾಡುತ್ತಿದ್ದರು."

"ನೋಡುವಾ. ಈಗ ಮನೆಗೆ ಹೋಗಿ ಮೊದಲು ಆ ಕಾಗದವನ್ನು ಬೇಡುತ್ತೇನೆ. ಆಮೇಲೆ ಮುಂದಿನ ವಿಚಾರ—"

ಅದೇ ಆತುರದಿಂದೆಂಬಂತೆ ಕಾವೇರಿ ಸರಸರನೆ ಹೆಜ್ಜೆ ಹಾಕಲಾರಂಭಿಸಿದಳು. ಹೆಜ್ಜೆಗೆ ಸರಿಯಾಗಿ ಟೊಂಕದ ಮೇಲಿನ ಕೊಡದಲ್ಲಿಯ ನೀರು ತುಳುಕುತ್ತಿತ್ತು; ಶಬ್ದ ಮಾಡುತ್ತಿತ್ತು. ಚಂಪಕ್ಕನ ಮನೆಯ ಸಮೀಪದಾರಿ ಕವಲೊಡೆಯುವಲ್ಲಿ ಆಕೆ ಕೇಳಿದಳು:

"ನಾಳೆ ಹೊಳೆಗೆ ಬರುತ್ತೀಯಲ್ಲವೆ ಮುಂಜಾನೆ?"

"ಬಂದೇ ಬರುತ್ತೇನಲ್ಲಾ. ಬಾರದೆ ಏನು?"

"ಯಾರಿಗೆ ಗೊತ್ತು? ಅಷ್ಟರಲ್ಲೆ ನೀನು ಹೊರಟುಬಿಟ್ಟರೆ!" ಎಂದು ನಕ್ಕಳು

"ನಾನೇನೂ ಹಕ್ಕಿಯಲ್ಲವಷ್ಟೆ! ಹಕ್ಕಿಯಾಗಿದ್ದರೆ ಎಂದಿಗೊ ಹಾರಿ ಹೋಗಿಬಿಡುತ್ತಿದ್ದೆ!" ಎಂದು ಪ್ರತಿಯಾಗಿ ನಗೆಯನ್ನು ಸೂಸಿದಳು ಕಾವೇರಿ.

ಬೀದಿಯ ಬದಿಯಲ್ಲಿ ಚಂಪಕ್ಕ ಕಣ್ಮರೆಯಾದಂತೆ ಕಾವೇರಿಯ ಹೃದಯದಲ್ಲಿಯ ನಗೆ ಉಲ್ಲಾಸಗಳು ಮಾಯವಾದವು ಆಕೆಯ ಎದುರು ಮನೆಗೆ ಹೋದನಂತರ ಎದುರಿಸಬೇಕಾದ ಸನ್ನಿವೇಶವೆ ಕುಣಿಯತೊಡಗಿತು. ಪತ್ರಕ್ಕಾಗಿ ಹಟ ಹಿಡಿಯುವುದಂತೂ ಸರಿ. ಆದರೆ ಹೇಗೆ? ಏನೆಂದು ಕೇಳುವುದು? ಹೇಗೆ ಮೊದಲುಮಾಡುವುದು? ಅತ್ತೆ ಸುಮ್ಮನೆ ಒದರಾಡಿಬಿಟ್ಟರೆ ಹೇಗೆ? ಈ ಎಲ್ಲ ಹೆದರಿಕೆಗಳೂ ಕಾಗದವನ್ನು ತನ್ನಿಂದ ಬಚ್ಚಿಟ್ಟ ಅನ್ಯಾಯದ ನೆನಹಿನಿಂದ ಹುಟ್ಟಿದ ರೊಚ್ಚಿನಲ್ಲಿ ಮಾಯವಾದವು. ಆದ್ದರಿಂದ ಕಾವೇರಿ ಮನೆಯನ್ನು ಪ್ರವೇಶಿಸಿದಾಗ ಸಿಟ್ಟಿನಿಂದ ಹೆಚ್ಚಾಗಿ ಉರಿಯುತ್ತಿದ್ದಳೆ ಹೊರತು ನಿತ್ಯದಂತೆ ಹೆದರಿಕೆಯಿಂದ ಹುದುಗಿಕೊಂಡು

ಬಂದುದನ್ನು ಸಹಿಸುವ ಮನಃಸ್ಥಿತಿಯಲ್ಲಿರಲಿಲ್ಲ. ಆ ಸಿಟ್ಟಿನ ಮೂಲಕ ಆಕೆಯ ಹಜ್ಜೆ ಕೇಳಬರುವಷ್ಟರ ಮಟ್ಟಿಗೂ ಸಪ್ಪಳಮಾಡಿರಬೇಕು. ಆ ಸದ್ದು ಭಾಗಮ್ಮನಿಗೆ ಕೇಳಿಸದಿರಲಿಲ್ಲ. ಅಡಿಗೆಮನೆಯಲ್ಲಿ ಕೊಡವನ್ನು ಕಾವೇರಿ ಇಳಿಸುತ್ತಿರುವಾಗಲೆ ಆಕೆಯ ದನಿ ಸಿಡಿಯಿತು.

"ಎಷ್ಟು ಹೊತ್ತು ಹೊಳೆಗೆ ಹೋಗುವುದು? ಯಾವಾಗ ಬೆಳಗಿನಲ್ಲಿ ಹೋದಾಕೆ ಮೂರು ಗಂಟೆ ಹೊತ್ತೇರಿಹೋಯಿತು. ಈಗ ಬಂದೆ! ಏನು ಮಾಡುತ್ತಿದ್ದೆ ಇಷ್ಟು ಹೊತ್ತು?.... ಆ ನಿನ್ನ ಚಂಪಿ ಬಂದಿದ್ದಳು ಅಲ್ಲವೆ?...."

ಕಾವೇರಿ ಯಾವುದಕ್ಕೂ ಉತ್ತರ ಕೊಡುವಂತಿರಲಿಲ್ಲ. ಆಕೆಯನ್ನು ಕಾಡುತ್ತಿದ್ದ ವಿಚಾರವೆಂದರೆ ಅತ್ತೆಯನ್ನು ಕಾಗದಕ್ಕಾಗಿ ಕೇಳುವುದು ಹೇಗೆ? ಎಂಬುದು.

"ಏನಾದರೂ ಮಾತನಾಡುತೀರೊ ಇಷ್ಟು ಹೊತ್ತು, ದೇವರೆ ಬಲ್ಲ"

ಭಾಗಮ್ಮ ನಡುಮನೆಯಲ್ಲಿ ಏನೊ ಕೆಲಸದಲ್ಲಿ ತೊಡಗಿದ್ದರಿಂದ ಕಾವೇರಿ ಬಾಗಿಲಲ್ಲಿ ಗಟ್ಟಿಯಾಗಿ ಮನಸ್ಸುಮಾಡಿ ಉಸಿರಿದಳು.

"ನನ್ನ ಪತ್ರ ಎಲ್ಲಿದೆ? ಕೊಡಿರಿ...."

ಭಾಗಮ್ಮ ಕೆಲಸದಲ್ಲಿ ತೊಡಗಿದವಳು ಕಾವೇರಿಯ ಮಾತನ್ನು ಕೇಳಿಯೂ ಕೇಳದವಳ ಹಾಗೆ ಸುಮ್ಮನಾಗಿಯೆ ಇದ್ದಳು.

"ಅಲ್ಲ, ನನ್ನ ಪತ್ರ ಬಂದಿದೆ. ಎಲ್ಲಿದೆ ಅದು? ಅಂದೆ."

"ಪತ್ರ? ಎಲ್ಲಿಯ ಪತ್ರ? ಯಾರದು? ಏನು....?"

ಕಾವೇರಿಗೆ ತಡೆಯದಾಯಿತು. 'ಈ ಸೋಗು ಸಾಕುಮಾಡಿರಿ, ನನ್ನ ಪತ್ರವನ್ನು ನನಗೆ ಕೊಟ್ಟುಬಿಡಿರಿ' ಎನ್ನಬೇಕೆಂದು ಮಾತು ಬಾಯಿಗೆ ಬಂದಿತ್ತು. ಆದರೂ ಸಿಟ್ಟನ್ನು ತಡೆಹಿಡಿದು,

"ನನಗೆ ಗೊತ್ತಿದೆ. ನನ್ನ ಪತ್ರ ನನಗೆ ಕೊಟ್ಟುಬಿಡಿರಿ...." ಅಂದಳು.

"ನಿನಗೇನು ಹುಚ್ಚು ಹಿಡಿದಿದೆ ಏನೆ? ಎಲ್ಲಿಯ ಪತ್ರ? ಏನು ಸಮಾಚಾರ?"

"ಎಲ್ಲಿಯದು, ಏನು, ಎಲ್ಲವೂ ನಿಮಗೆ ಗೊತ್ತಿದೆ. ನನಗೆ ಬಂದ ಪತ್ರ ನಿಮ್ಮ ಕಡೆಗೆ ಇದೆ. ಕೊಟ್ಟುಬಿಡಿರಿ."

ಭಾಗಮ್ಮ ಸಿಡುಕಿನಲ್ಲಿಯೆ ಹೇಳಿದಳು:

“ ನಿನ್ನ ಪತ್ರಕ್ಕೆ ನಾನು ಯಾತಕ್ಕೆ ಕೈಹಚ್ಚಲಿ ಮಹಾರಾಯಿತಿ ? ನೀನೇನೊ ನಿನ್ನ ಪತ್ರವೇನೊ, ನನಗೆ ಯಾವುದೂ ಗೊತ್ತಿಲ್ಲ....”

“ ನನ್ನ ಪತ್ರ, ನನಗೆ ಬಂದದ್ದು, ನೀವು ತೆಗೆದುಕೊಂಡಿದ್ದೀರಿ, ತೆರೆದು ಓದಿದ್ದೀರಿ....ಸುಮ್ಮನೆ ಕೊಟ್ಟುಬಿಡಿರಿ....”

ಅಷ್ಟು ಮಾತನ್ನು ತಾನು ಹೇಗೆ ಆಡಿದೆನೆಂಬುದು ಕಾವೇರಿಗೆ ಆಶ್ಚರ್ಯವೆನಿಸಿರಬೇಕು. ಆ ಮಾತಿನ ನಿಷ್ಠುರವಾದ ಬಗೆಯು ಭಾಗಮ್ಮನನ್ನು ಕೂಡ ಬೆದರಿಸಿತು. ಕೈಯಲ್ಲಿಯ ಮರವನ್ನು ಅಲ್ಲಿಯೆ ನೆಲಕ್ಕೆ ಅಪ್ಪಳಿಸಿ ಸಿಡಿದೆದ್ದು “ ನನ್ನ ಹಣೆಬರಹ, ನನ್ನ ಹಣೆಬರಹ, ನೀನೇನು ಮಾಡೀಯ ” ಎನ್ನುತ್ತಲೆ ನೆಲಕ್ಕೆ ಕುಕ್ಕರಿಸಿ ಹಣೆ ಹಣೆ ಬಡಿದುಕೊಂಡಳು. ಕಾವೇರಿಯ ಸಿಟ್ಟು ಇನ್ನೂ ಇಳಿದಿರಲಿಲ್ಲವಾದ್ದರಿಂದ ಈ ಅರ್ಭಟಿ ಆಕೆಯ ಮನಸ್ಸಿನ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ.

ಭಾಗಮ್ಮ ಮತ್ತೆ ದನಿಯನ್ನೆಳೆದಳು :

“ ನನ್ನ ಹಣೆಬರಹ. ಇದೂ ಇತ್ತೆ ನನ್ನ ಹಣೆಬರಹದಲ್ಲಿ ? ಇನ್ನೂ ಅನ್ನಿಸಿಕೊಳ್ಳಬೇಕಾಗಿತ್ತೆ ? ಸಾಕು ಮಹಾರಾಯಿತಿ, ಈಗ ಅದಷ್ಟೆ ಸಾಕಾಯಿತು. ನೀನೇನೊ ನಿನ್ನ ಗಂಡನೇನೊ, ಹೋಗಿಬಿಡು. ಇಂದು ನನ್ನ ಪತ್ರ ತೆಗೆದೆ ಅನ್ನುತ್ತಿ, ನಾಳೆ ವಸ್ತ್ರ ಒಡವೆ ಹೋಯಿತು ಅನ್ನುವಿ. ಅದು ಬೇಡವೆ ಬೇಡ....” ಎಂದು ಮತ್ತೆ ಎದ್ದು ಪಡಸಾಲೆಯ ಕಡೆಗೆ ನಡೆದಳು. ಭಾಗಮ್ಮನ ಒದರಾಟ ನಡೆದೇ ಇತ್ತು.

“ ಇದು ಬೇಡ, ತಾಯಿ. ಇಂದೇ ಕಾಗದ ಬರೆಯಿಸುತ್ತೇನೆ. ನಿನ್ನ ಬಾಯಿಂದ ಯಾರು ಅನ್ನಿಸಿಕೊಂಡಾರು ? ಇಂದು ಇಷ್ಟು ಮಾತನಾಡಿದಿ; ನಾಳೆ ನನ್ನ ಸೀರೆ ಹಿಡಿದು ಎಳೆದು ಹೊಡೆದರೆ ಏನು ? ನಿನ್ನ ಗಂಡ ಬಂದು ಕರೆದುಕೊಂಡೇ ಹೋಗಲಿ. ಬೇಕಾದ ಹಾಗೆ ಸುಖವಾಗಿಯೆ ಇರಿ.... ನೀನು ಇಲ್ಲಿ ಇರುವುದೆ ಬೇಡ.”

ಕಾವೇರಿ ಸುಮ್ಮನಾಗಿಯೆ ಇದ್ದಳು. ಭಾಗಮ್ಮನ ಆಕ್ರೋಶವನ್ನು ನೋಡಿ ಒಂದು ಕ್ಷಣ ಹಿಂತೆಗೆದಳು. ಸುಮ್ಮನೆ ಇದ್ದಿದ್ದರೆ ಆಗಿಹೋಗುತ್ತಿಲ್ಲ ಎಂದೂ ಅಂದುಕೊಂಡಳು. ಆದರೆ ಮಾತು ಮಿಂಚಿಹೋಗಿತ್ತು !

"ನೀನು ತಡೆ, ಈಗಿಂದೀಗಲೇ ಲಕ್ಷ್ಮಿಯನ್ನೂ ತಂಗಮ್ಮನನ್ನೂ ಕರೆದು ತರುತ್ತೇನೆ. ಏನೆಂಬುದು ನಿಷ್ಕರ್ಷೆ ಆಗಿಯೇ ಹೋಗಲಿ...." ಎಂದು ಧಡಾರನೆ ಹೊರಬಾಗಿಲನ್ನು ತೆರೆದು ಹೋಗಿಯೇಬಿಟ್ಟಳು.

ಸುಮಾರು ಐದು ನಿಮಿಷವಾದರೂ ಕಾವೇರಿ ನಿಂತಲ್ಲಿಯೇ ನಿಂತಿರಬೇಕು. ಇದುವರೆಗೆ ನಡೆದುದೇನು, ಇನ್ನು ಮುಂದೇನಾಗಬಹುದು ಎಂಬ ಎಣಿಕೆಯೂ ಅಲ್ಲಿಯೇ ನಿಂತಿತು. ಒಂದು ಬಗೆಯ ಅಸ್ಪಷ್ಟವಾದ ಹೆದರಿಕೆ, ಅದಕ್ಕೆ ಪ್ರತಿಯಾಗಿ ಸರಿಸಮವಾದ ಒಂದು ವಿಲಕ್ಷಣವಾದ ಧೈರ್ಯ ಆಕೆಯ ಹೃದಯದಲ್ಲಿ ಮೂಡಿ, ಮಿಂಚಿ ಮಾಯವಾಗುತ್ತಿದ್ದವು.

ಹತ್ತು ನಿಮಿಷಗಳಾದರೂ ಭಾಗಮ್ಮ ಬರಲಿಲ್ಲ. ಬರುವ ಲಕ್ಷಣವೂ ಕಾಣಲಿಲ್ಲ. 'ಇದೇನು ಹೀಗೆ ನಿಂತುಬಿಟ್ಟೆನಲ್ಲ ? ನಿಂತಾದರೂ ಮಾಡುವುದೇನು ?' ಎಂದುಕೊಂಡು ಕಾವೇರಿ ಅಡಿಗೆಮನೆಯ ಕಡೆಗೆ ಸಾಗಿದಳು. ಆದರೆ ಅಲ್ಲಿ ಅಡಿಗೆಯ ಯಾವ ಪೂರ್ವ ಸಿದ್ಧತೆಯ ಚಿಹ್ನವೂ ಕಾಣಲಿಲ್ಲ. ತಟ್ಟನೆ ಕಾವೇರಿಗೆ ಹೊಳೆಯಿತು, ಅಂದು ಏಕಾದಶಿ ಎಂದು. ನಿಂತ ವಿಚಾರಕ್ಕೆ ಚಾಲನೆ ಸಿಕ್ಕಿತು. ಭಾಗಮ್ಮ ಇನ್ನು ಮೇಲೆ ಒಂದೆರಡು ಗಂಟೆಯಾದರೂ ಬರುವುದಿಲ್ಲ. ಅಡಿಗೆ ಮಾಡಿದರೆ ತಾನೇ ಮಾಡಬೇಕು. ಅದೂ ತನಗೊಬ್ಬಳಿಗಾಗಿ. ಆದರೆ ಆಗಿನ ಮನಃಸ್ಥಿತಿಯಲ್ಲಿ ಯಾವುದಕ್ಕೂ ಕೈ ಮುಂದರಿಯಲಿಲ್ಲ. ತನಗೊಬ್ಬಳಿಗಾಗಿ ಅನ್ನ ಕುದಿಸಿಕೊಂಡು ತಿನ್ನುವುದಾದರೂ ಯಾತಕ್ಕೆ ? ಮನಸ್ಸು ತೀರ ಬೇಸರಗೊಂಡಿತ್ತು. ಯಾವುದೂ ಬೇಡ—ಬೇಡ ಎನ್ನುವ ಯೋಚನೆ ಕೂಡ ಬೇಡ—ಎನ್ನುವಂತಾಗಿತ್ತು. ಅಂತೆಯೇ, ಕಾವೇರಿ ತಾನು ಮಲಗಿಕೊಳ್ಳುವ ನಡುಮನೆಯಲ್ಲಿಯ ಕೋಣೆಯ ಕಡೆಗೆ ತಿರುಗಿದಳು. ಮನೆಯ ಮುಂದಿನ ಬಾಗಿಲು ತೆರೆದೇ ಇತ್ತು. ಅದನ್ನು ಇಕ್ಕಲೆಂದು ಆ ಕಡೆಗೆ ತಿರುಗಿದಳು. ಆದರೆ ಅಷ್ಟರಲ್ಲಿ ಬಾಗಿಲ ಹೊರಗಿನಿಂದ ಕರೆ ಕೇಳಬಂದಿತು :

"ಕಾವೇರಕ್ಕಾ, ಕಾವೇರಕ್ಕಾ...."

ಆಚೆಯ ಮನೆಯ ವಾಸುದೇವನ ದನಿ ಅದು. ಆರೇಳು ವರುಷದ ಆ ಮಗು ಧಾವಿಸುತ್ತ ಬಂದಿತು. ಬಾಗಿಲಲ್ಲಿಂದಲೇ ಕಾವೇರಿ ಕೇಳಿದಳು :

" ಏನು ವಾಸು ? ಇಷ್ಟೊಂದು ಓಡಿ ಬರುತ್ತಿದ್ದೀಯಲ್ಲ ? "

" ನಿನಗೊಂದು ಕಾಗದ ಬಂದಿದೆ ! "

" ಏನು ?...."

" ನಿನಗೊಂದು ಕಾಗದ ತಂದಿದ್ದೇನೆ...."

" ನೋಡುವ...."

ಚಣ್ಣದ ಜೇಬಿನೊಳಗಿನಿಂದ ಲಕೋಟೆಯೊಂದನ್ನು ವಾಸು ತೆಗೆದು ಕೊಟ್ಟ. ಮೊದಲು ಕಾವೇರಿಗೆ ಇದಾವುದರ ಅರ್ಥವೆ ಆಗಲಿಲ್ಲ. ಆದರೆ ಕಾಗದದ ಮೇಲಿನ ವಿಳಾಸವನ್ನು ನೋಡಿ, ಅದು ತನಗಾಗಿಯೆ ಇದೆ ಎಂಬುದನ್ನು ತಿಳಿದನಂತರ ಕೇಳಿದಳು :

" ಇದನ್ನು ಯಾರು ಕೊಟ್ಟರು ನಿನಗೆ ? "

ವಾಸುದೇವನಿಗೆ ಈ ಪ್ರಶ್ನೆ ಅನಿರೀಕ್ಷಿತವಾಗಿತ್ತೆಂಬುದು ಆತನ ಉತ್ತರದ ಮೇಲಿಂದ ಸ್ಪಷ್ಟವಾಗಿತ್ತು. ಆತ ತಡವರಿಸತೊಡಗಿದ:

" ಇದನ್ನು—ನನಗೆ—ಅಂ—ಹುಂ...."

" ಹೇಳು, ವಾಸು. ನಿಜವಾಗಿಯೂ ಇದನ್ನು ಯಾರು ಕೊಟ್ಟರು ? "

" ಪೋಸ್ಟಿನವ ಕೊಟ್ಟ...."

" ಇದು ನೋಡು, ವಾಸು, ಸುಳ್ಳು ಮಾತಾಡಬಾರದು...."

ಎಂದವಳೆ ಆ ಎಳೆಯ ಮಗುವನ್ನು ತನ್ನ ಹತ್ತಿರ ಸೆಳೆದುಕೊಂಡು ನಯವಾಗಿ ಬೆನ್ನ ಮೇಲೆ ಕೈಯಾಡಿಸುತ್ತ ಹೇಳಿದಳು :

" ಸುಳ್ಳು ಮಾತಾಡಬಾರದು, ಮಗು. ಹೇಳು ನೋಡುವ, ಯಾರು ಕೊಟ್ಟರು ? "

" ನೀನು ಯಾರ ಮುಂದೆಯೂ ಹೇಳಬಾರದು, ಹಾಗಾದರೆ...."

" ಇಲ್ಲ, ಹೇಳುವುದಿಲ್ಲ. ಆಯಿತೆ ? "

" ಎಲ್ಲಿ ? ನನ್ನ ಕೈಯ ಮೇಲೆ ಕೈಹಾಕು, ಯಾರ ಮುಂದೆಯೂ ಹೇಳುವುದಿಲ್ಲ ಎಂದು...."

" ಇಷ್ಟೂ ವಿಶ್ವಾಸವಿಲ್ಲವೆ, ವಾಸು ? ನಾನು ಹೇಳುವುದಿಲ್ಲ ಎಂದರೆ ಹೇಳುವುದಿಲ್ಲ."

"ಆದರೂ ನನ್ನ ಕೈ ಮುಟ್ಟಿ ಹೇಳು."

ಕಾವೇರಿಗೆ ನಗು ತಡೆಯದಾಗಿ ಹೇಳಿದಳು.

"ಆಗಲಿ ಇಲ್ಲಿ ತಾ ನಿನ್ನ ಕೈ ಮುಟ್ಟಿದೆ. ಆಯಿತೆ? ಇನ್ನು ಹೇಳು."

"ಇದನ್ನು ನಿನ್ನ ಅತ್ತೆ ಮತ್ತು ತಂಗೆಮ್ಮ ಸೇರಿ ಕೊಟ್ಟರು...."

"ಏನೆಂದು ಹೇಳಿದರು?"

"ಪೋಸ್ಟಿನವ ಕೊಟ್ಟ ಎಂದು ಹೇಳಬೇಕೆಂದರು!"

ಕಾವೇರಿ ಒಂದೆರಡು ನಿಮಿಷ ಮತ್ತೆ ಸ್ತಬ್ಧಳಾದಳು. ವಾಸುವಿಗೆ ಆಕೆಯ ಯೋಚನೆ ವಿಚಿತ್ರವೆನಿಸಿರಬೇಕು. ಕೊನೆಗೆ ತಾನಾಗಿಯೆ ಸಂತೋಷದ ಉತ್ಸಾಹದಲ್ಲಿ ಹೇಳಿದ:

"ಇದು ನೋಡಿದೆಯಾ ಕಾವೇರಕ್ಕ? ನನಗೆ ಒಂದಾಣೆ ಕೊಟ್ಟಿದ್ದಾರೆ!"

"ಯಾರು?"

"ಅವರೇ!"

"ನಿನಗೆ ಇನ್ನೊಂದಾಣೆ ಬೇಕೆ?"

"ಬೇಡ. ಈ ಆಣೆ ಇದೆಯಲ್ಲ!"

ಮಗುವಿನ ಆ ಸಂತೋಷ, ಸಂತುಷ್ಟ ವೃತ್ತಿಯನ್ನು ನೋಡಿ ಮೈಮರೆತು ನಿಂತ ಕಾವೇರಿ ಪತ್ರವನ್ನು ಕೂಡ ತೆರೆದಿರಲಿಲ್ಲ. ಆಕೆ ಪತ್ರವನ್ನು ಆಚೀಚೆ ನೋಡುತ್ತಿರುವುದನ್ನು ತುಸು ನೋಡಿ ವಾಸು ಕೇಳಿದ:

"ನಾನು ಹೋಗಲಾ?"

"ಹೋಗುತ್ತೀಯಾ? ಯಾಕೆ? ಇಲ್ಲಿಯೆ ಆಡು...."

"ಇಲ್ಲಿ ಯಾರೂ ಇಲ್ಲವಲ್ಲ ಆಡಲಿಕ್ಕೆ?"

ಮಗುವಿನ ಪ್ರಶ್ನೆ ಸಹಜವಾಗಿದ್ದರೂ ಕಾವೇರಿಗೆ ಆ ಮಾತು ಬಲವಾಗಿ ತಾಕಿತು. ಆದರೂ ಸಾವರಿಸಿಕೊಂಡು ಹೇಳಿದಳು:

"ಯಾರೂ ಇಲ್ಲವೇಕೆ? ನಾನಿದ್ದೇನೆ...."

ಆದರೆ ಕಾವೇರಿಯ ಲಕ್ಷ್ಯ ಅದೇ ಅಂಟಿಸಿದ ಹಾಗಿದ್ದ ಲಕೋಟೆಯ ಮೇಲಿತ್ತು. ಒಂದು ಕ್ಷಣ ತನ್ನ ಅತ್ತೆ ತಂಗೆಮ್ಮರ ವಿಷಯದಲ್ಲಿ ವಿಪರೀತ ಸಿಟ್ಟು ಬಂದರೂ, ಕೊನೆಗೆ ತನ್ನ ಕಾಗದ ತನಗೆ ದೊರಕಿತು ಎಂಬ ಸಮಾಧಾನದಿಂದ ಅದನ್ನು ತೊರೆದಳು ವಾಸು ಹೇಳುತ್ತಲೆ ಇದ್ದ.

"ನಾನು ಅಲ್ಲಿಯೆ ಹೋಗುತ್ತೇನೆ. ಹೋಗಲಾ?"

"ಅಲ್ಲಿ ಮತ್ತೆ ಯಾರು ಯಾರು ಇದ್ದಾರೆ, ನಿನ್ನ ಜತೆಯಲ್ಲಿ ಆಡಲಿಕ್ಕೆ?"

"ಹಣಮ್ಯ, ಭೀಮ, ರಾಮ...."

ವಾಸುವಿನ ಹೆಸರಿನ ಪಟ್ಟಿ ಬೆಳೆಯುತ್ತಲೆ ಇತ್ತು. ಕಾವೇರಿ ತನ್ನ ಕಾಗದವನ್ನು ಓದುವುದರಲ್ಲಿ ತೊಡಗಿದ್ದಳು. ಕಾವೇರಿ ತನ್ನನ್ನು ಗಮನಿಸು ತ್ತಿಲ್ಲವೆಂಬುದು ವಾಸುವಿಗೆ ತಿಳಿದಿರಬೇಕು.

"ನೋಡು, ನೀನು ಕಾಗದ ಓದುತ್ತ ಕುಳಿತಿ. ನನ್ನ ಜತೆಯಲ್ಲಿ ಆಡುತ್ತೇನೆ ಎಂದು ಹೇಳಿ—"

"ಮತ್ತೆ ನೀನು ಹೋಗಿಯೆ ಬಿಡುತ್ತೇನೆ ಎಂದು ಹೆದರಿಸಿದರೆ ನಾನೇನು ಮಾಡಲಿ?" ಎಂದು ನಸುನಕ್ಕು ಅವನೆಡೆಗೆ ತಿರುಗಿದಳು.

"ನಿನ್ನ ಜತೆಯಲ್ಲಿ ಈಗ ಬೇಡ. ಮತ್ತೊಮ್ಮೆ ಬರುತ್ತೇನೆ."

"ಖಂಡಿತವಾಗಿಯೂ ಬರುತ್ತೀಯಾ?"

"ಹುಂ...."

"ಯಾವಾಗ?"

"ನಾಳೆ."

"ಬರುತ್ತೀಯಾ? ನಾಳೆ ಬಂದರೆ ನಿನಗೆ ಒಂದಾಣೆ ಕೊಡು ತ್ತೇನೆ. ಆಂ?"

"ಹುಂ...." ಎಂದು ವಾಸು ಹೊರಟೇಬಿಟ್ಟ.

"ಓಡುತ್ತ ಹೋಗಬೇಡ, ವಾಸು. ಬಿದ್ದುಗಿದ್ದೀಯಾ....

ಆದರೆ ನಿಮಿಷಾರ್ಧದಲ್ಲಿ ವಾಸು ಓಡುತ್ತ ಕಣ್ಮರೆಯಾಗಿದ್ದ.

ಪತ್ರವನ್ನೋದುತ್ತಿದ್ದ ಹಾಗೆ ಕಾವೇರಿಯ ಮುಖ ನಸುಗೆಂಪಾಯಿತು, ನಾಚಿಕೆಯೂ ಎನಿಸಿತು. ಹೆಂಡತಿಯನ್ನುಳಿದು ಬೇರೆಯವರು ಓದಲೆ ಬಾರದ ಕೆಲವೊಂದು ವಿಷಯಗಳನ್ನು ಶ್ರೀನಿವಾಸ ಕಾಗದದಲ್ಲಿ ಬರೆದಿದ್ದ. ಅದನ್ನೆಲ್ಲ ಈ ಇಬ್ಬರು ಓದಿದರಲ್ಲ!—ಅವರು ಓದಿದನಂತರ ಇನ್ನೆಷ್ಟು ಜನರ ಕಿವಿಗೆ ಅದು ನಿಲುಕಬಹುದೆಂಬುದನ್ನು ಯೋಚಿಸಬೇಕಾಗಿಯೆ ಇರಲಿಲ್ಲ— ಎಂದು ಖೇದವೆನಿಸಿತು. ಅವರ ಬಗೆಯಲ್ಲಿ ಜಿಗುಪ್ಸೆಯೂ ಹುಟ್ಟಿಕೊಂಡಿತು. ಕೊನೆಯಾಗಿ ಶ್ರೀನಿವಾಸ ಬರೆದಿದ್ದ:

'ಎಷ್ಟೋ ಸಲ ಬರುತ್ತೇನೆಂದು ಮಾತು ಕೊಟ್ಟು ಬರಲಾಗಿಲ್ಲ ನನಗೆ.

ಇಲ್ಲಿಯ ಕೆಲಸವೆ ಅಂಥದು. ಅಲ್ಲಿಗೆ ಬಂದು ನಿನ್ನ ಕಾಣಲು ನನಗೆ ಆತುರವಿಲ್ಲ ಎಂದು ತಿಳಿದಿದ್ದೀಯಾ? ಆದರೆ ಈ ಸಲ ನನ್ನ ಕಾರ್ಯಕ್ರಮವನ್ನು ಮೊದಲೇ ಗೊತ್ತುಪಡಿಸಿ ರಜೆಯನ್ನು ಪಡೆದಿರುವೆನಾದ್ದರಿಂದ ನಾನು ಬರುವುದರಲ್ಲಿ ಸಂದೇಹವೆ ಇಲ್ಲ. ಇಲ್ಲಿಂದ ಶನಿವಾರ ಮಧ್ಯಾಹ್ನದ ಬಸ್ಸಿಗೆ ಹೊರಟು ಅಂದೇ ಸಾಯಂಕಾಲ ನಿನ್ನ ಜೊತೆಯಲ್ಲಿ ಇರುತ್ತೇನೆ. ಆದರೆ ಎಲ್ಲಕ್ಕೂ ಮಹತ್ವದ ಮಾತೆಂದರೆ ಮೊನ್ನೆಯ ಒಂದನೆಯ ತಾರೀಖಿನಿಂದ ಮನೆಯೊಂದನ್ನು ಬಾಡಿಗೆಗೆ ಗೊತ್ತುಮಾಡಿದ್ದೇನೆ. ಆ ಮನೆಯಲ್ಲಿ ನಾವಿಬ್ಬರೂ ಹೇಗೆ ಇರುವೆವೆಂಬ ಯೋಚನೆ ಬಂದಾಗ ನನ್ನ ಮನಸ್ಸು ಕಲ್ಪನೆಯ ಕುದುರೆಯನ್ನೇ ಏರುತ್ತದೆ. ಅದನ್ನೆಲ್ಲ ಇಲ್ಲಿ ಬರೆದು ಹೇಳುವುದಿಲ್ಲ. ಬಂದಾಗಲೆ ವಿವರಿಸುತ್ತೇನೆ ನೀನಾದರೂ ಹಗಲೆ ಕನಸು ಕಟ್ಟಿರಬೇಕಾದ್ದರಿಂದಲೂ ನಾನು ಬರೆಯಬೇಕಿಲ್ಲ ನನಗೆ ಮೂರೇ ದಿನದ ರಜೆಯಿದೆಯಾದ್ದರಿಂದ ಏನಿದ್ದರೂ ನಾವು ಅಲ್ಲಿಂದ ಸೋಮವಾರ ಹೊರಡಲೆ ಬೇಕು. ನೀನು ಹೊರಡುವ ಸಿದ್ಧತೆಯಲ್ಲಿರಬೇಕು....' ಇತ್ಯಾದಿ.

ಪತ್ರವನ್ನೋದಿ ಕಾವೇರಿ ಪ್ರಪಂಚವನ್ನೆ ಮರೆತಳು. ಹತ್ತು ನಿಮಿಷ ಮೊದಲು ಆಕೆಯ ಹೃದಯದಲ್ಲಿ ತಾಂಡವವಾಡುತ್ತಿದ್ದ ಬೇಸರ, ಜಿಗುಪ್ಸೆ, ರೋಷಗಳೆಲ್ಲವೂ ಮಾಯವಾದವು. ಆಕೆಯ ಕಣ್ಣುಗಳೆದುರು ಕುಣಿಯುತ್ತಿದ್ದುದು ಒಂದೇ ಒಂದು ಚಿತ್ರ. ಅದೆಂದರೆ ಶನಿವಾರ ಸಾಯಂಕಾಲ ಶ್ರೀನಿವಾಸ ಬಂದಾಗಿನ ಚಿತ್ರ. ಕಾವೇರಿ ಎಣಿಕೆ ಹಾಕಿದಳು. ಇಂದು ಗುರುವಾರ. ನಾಳೆಯೊಂದು ದಿನ ಕಳೆದರಾಯಿತು. ನಾಡಿದ್ದು ಸಾಯಂಕಾಲದ ವರೆಗಿನ ವೇಳೆ ಹೇಗೂ ಸಾಗುತ್ತದೆ. ಆಮೇಲೆ ಶ್ರೀನಿವಾಸ ಬರುತ್ತಾನೆ. ಆಮೇಲೆ ಇನ್ನೊಂದು ದಿನ. ಆಮೇಲೆ ಬಿಡುಗಡೆ! ಬೆಳಗಾವಿ ಊರು ಹೇಗಿದೆಯೊ! ಮನೆ ಎಂಥದಿರಬೇಕು? ಈಗ ಸಿಕ್ಕದ್ದು ಎಂಥದಿರಬಹುದು? ಅಲ್ಲಿ ಹೋದ ಮೇಲೆ? ಆದರೆ ತಟ್ಟನೆ ಮನಸ್ಸು ಭೂಮಿಗಿಳಿಯಿತು. ಬಾಗಿಲ ಸದ್ದಾಯಿತು ಭಾಗಮ್ಮ ಬಂದಳೆಂದುಕೊಂಡು ಪತ್ರವನ್ನು ಮಡಿಸಿದಳು. ಬಾಗಿಲವರೆಗೆ ಹೋಗಿ ನೋಡಿದರೆ ಯಾರೂ ಇರಲಿಲ್ಲ. ಬಿಸಿಲು ತಾನೆ ತಾನಾಗಿ ಉರಿಯುತ್ತಿತ್ತು. ಮತ್ತೆ ಮಧ್ಯಾಹ್ನಕ್ಕೆ ಮಳೆ ಬೀಳಬಹುದೆಂದು ಕೊಂಡಳು. ಒಳಗಡೆ ಬರುವಾಗ ಮತ್ತೆ ಪತ್ರವನ್ನು ಬಿಡಿಸಿ ಹತ್ತ

ನೆಯ ಬಾರಿ ಓದಿದಳು. ಆದರೆ ಅದೇಕೊ ಮನಸ್ಸು ಕನಸು ಕಾಣಲಿಲ್ಲ. ಭಾಗಮ್ಮ ಬಂದಿರದಿದ್ದರೂ ಆಕೆಯೆ ಕಣ್ಣ ಮುಂದೆ ನಿಂತಳು. ಸೋಮವಾರ ಹೊರಡುವದೆಂದು ಬರೆದಿದ್ದ. ಆದರೆ ಭಾಗಮ್ಮ ಏನೆನ್ನುವಳೊ, ಯಾರು ಹೇಳಬೇಕು? ತಾನೂ ಹೊರಡುವೆನೆಂದರೆ? ಹೊರಟೇ ಬಿಟ್ಟರೆ? ಆಮೇಲೆ, ತಾನು ಹೋದರೂ ಸರಿ, ಹೋಗದಿದ್ದರೂ ಸರಿ ಆದರೂ ಏನಾಯಿತು? ಅಲ್ಲಿ ಶ್ರೀನಿವಾಸನಿರುವುದಿಲ್ಲವೆ? ಅಲ್ಲಿದ್ದಾಗ ಭಾಗಮ್ಮ ಹೇಗಿದ್ದರೂ ಸರಿ ಶ್ರೀನಿವಾಸನ ಹತ್ತಿರದಲ್ಲಿದ್ದಾಗ ಎಂಥ ಸಮಾಧಾನ?....ಆದರೆ ಭಾಗಮ್ಮ ಬರುವುದೆ ಇಲ್ಲ! ಏನಾದರೂ ತಾನು ಇಲ್ಲಿಯ ಮನೆಯನ್ನು ಬಿಡುವಂತಿಲ್ಲವೆಂದು ಖಡಾಖಂಡಿತವಾಗಿ ಹೇಳಿರಲಿಲ್ಲವೆ? ಈ ಮನೆ, ಈ ಸುತ್ತಲಿನ ಆವರಣ, ಈ ಆಕೆಯ ಗೆಳತಿಯರು—ಈ ಎಲ್ಲವನ್ನು ಆಕೆ ಬಿಟ್ಟು ಬರುವುದು ಸಾಧ್ಯವೆ ಕಾಣಲಿಲ್ಲ. ಕಾವೇರಿಗೆ ಬೇಕಾದ ಸಮಾಧಾನ ದೊರಕಿತು

ಆದರೂ ಎಷ್ಟು ಕಾಯ್ದರೂ ಭಾಗಮ್ಮ ಬರಲಿಲ್ಲ. ಅದೂ ಒಂದು ಕಾವೇರಿಗೆ ಚಿಂತೆಯೆ ಆಯಿತು. ಅಲ್ಲಿ ಇಲ್ಲಿ ಕುಳಿತಿರಬಹುದು ಎಂದುಕೊಂಡಳು. ಬಂದಾದರೂ ಮಾಡಬೇಕಾದದ್ದೇನು? ಎಂದು ಸಮಾಧಾನ ತಂದುಕೊಂಡಳು. ಆಕೆ ಬಂದದ್ದೇ ಆದರೆ ಆಗಿನ ಸನ್ನಿವೇಶ ಇಬ್ಬರಿಗೂ ಹಿತವಾದದ್ದಾಗಿರಲಾರದು ಎಂಬ ಮನವರಿಕೆ ಇದ್ದರೂ ಭಾಗಮ್ಮ ಬಂದಿದ್ದರೆ ಒಳ್ಳೆಯದು ಎಂದೇ ಎನಿಸಿತು ಕಾವೇರಿಗೆ. ಬಂದಮೇಲೆ ಸಿಡಿಸಿಡಿ ಮಾಡಬಹುದು ಒಂದೆರಡು ಗಂಟೆ ಎನಿಸಿತು ಕಾವೇರಿಗೆ. ಸಿಡಿಸಿಡಿ ಮಾಡಿದರೂ ಒಂದೆರಡು ಮಾತುಗಳನ್ನು ಹೆಚ್ಚಾಗಿಯೂ ಆಡಬಹುದು. ಆದರೇನು? ಅದೇಕೊ ಭಾಗಮ್ಮ ನಿತ್ಯ ಮನೆಯಿಂದ ಹೊರಗೆ ಹೋಗಿ ಹಲವು ಗಂಟೆ ಹೊರಗೆ ಇರುತ್ತಿದ್ದರೂ ಇಂದಿನ ದಿನ ಆಕೆ ಹೊರಗೆ ಹೋದುದರ ಹೊಣೆ ತನ್ನ ಮೇಲಿದ್ದಂತೆನಿಸಿತು ಕಾವೇರಿಗೆ ಚಿಂತೆಯೆ, ಆಕೆ ಮರಳಿ ಬೇಗನೆ ಬಂದರೆ ಒಳ್ಳೆಯದು ಎನಿಸಿರಬೇಕು ಏನೊ ಒಂದು ತರಹದ ಸಿಟ್ಟಿನ ಸ್ವಭಾವ. ಆಗೀಗ ಒದರಾಡುತ್ತಿರಬಹುದು. ಆದರೆ ಆಕೆಯನ್ನುಳಿದು ಮನೆಗೆ ಹಿರಿಯರಾರು ಇದ್ದರು? ಅಷ್ಟು ನಿಷ್ಠುರವಾಗಿದ್ದರೂ ಎಷ್ಟೊ ಸಾರೆ ಎಷ್ಟು ಪರಿಯಿಂದ ತನಗೆ ಪ್ರೀತಿಯನ್ನು ತೋರಿರಲಿಲ್ಲ? ಮದುವೆಯಾದ ಹೊಸದರಲ್ಲಿಯಂತೂ ತನಗೆ ಯಾವ ಕೆಲಸವನ್ನೂ ಮಾಡಗೊಡುತ್ತಿರ

ಲಿಲ್ಲ. 'ಮುಂದೆ ಮಾಡುವುದು ಇದ್ದೇ ಇದೆ, ನೀನು ಸುಮ್ಮನಿರು' ಎಂದು ಎಷ್ಟೋ ಬಾರಿ ಹೇಳಿದ ನೆನಹು ಕಾವೇರಿಗೆ ಬಂದಿತು. ಆದರೆ ಇತ್ತೀಚೆಗೆ ಅಂಥ ಯಾವ ಮಾತು ಹಾಗಿರಲಿ, ಒಂದು ಸಹಾನುಭೂತಿಯ ನೋಟವನ್ನು ಕೂಡ ತನ್ನೆಡೆಗೆ ಬೀರುತ್ತಿರಲಿಲ್ಲ ಒಂದೊಂದು ಸಲವಂತೂ ಊಟ ಮಾಡಿದೆಯೊ ಇಲ್ಲವೊ ಎಂದು ಕೂಡ ವಿಚಾರಿಸುತ್ತಿರಲಿಲ್ಲ ಅದೇಕೊ, ಹೀಗಿದ್ದರೂ ಕಾವೇರಿಯ ಮನಸ್ಸು ಭಾಗಮ್ಮನೆಡೆ ಒಲಿಯಿತು. ಆಕೆಯ ಹೊರತು ತನಗೆ ಬೇರೆ ಹಿರಿಯರು ಯಾರಿದ್ದಾರೆ? ತಾಯಿಯ ಮುಖವನ್ನು ಕೂಡ ನೋಡಿರದ ತನಗೆ ಆಕೆಯೆ ತಾಯಿ ಯಾಕಾಗಬಾರದು? ತಾನು ಮಗಳ ಹಾಗೆ ನಡೆದುಕೊಂಡರೆ ಆಕೆ ತಾಯಿಯ ಹಾಗೆಯೂ ನಡೆದುಕೊಳ್ಳ ಬಹುದಲ್ಲ! ಹಾಗಾದರೆ ತನ್ನ ನಡೆಯಲ್ಲಿ ಯಾವ ದೋಷವಿರಬಹುದು? ಯಾವ ವಿಷಯದಲ್ಲಿಯೂ ಅತ್ತೆಯ ವಿರುದ್ಧವಾಗಿ ನಡೆದುಕೊಂಡಂತೆ ಕಾವೇರಿಗೆ ಹೊಳೆಯಲಿಲ್ಲ ತಟ್ಟನೆ ಶ್ರೀನಿವಾಸನ ಕಾಗದದ ಸಮಾಚಾರ ವೆಲ್ಲವೂ ಕಣ್ಣೆದುರು ನಿಂತಿತು ಆ ಮನಃಸ್ಥಿತಿಯಲ್ಲಿ ತಾನು ಹಿಡಿದ ಹಟ, ಆಡಿದ ಮಾತು ಎಲ್ಲವೂ ತಪ್ಪು ಎಂದೆ ತೋರಿತು. ಆದರೆ ಹೆಂಡತಿಗೆ ಬಂದ ಗಂಡನ ಕಾಗದವನ್ನು ಮನೆಗೆ ಹಿರಿಯರಾದವರು ತೆರೆಯಬಹುದೆ? ಆದ್ದ ರಿಂದ ತಾನು ಮಾಡಿದ್ದರಲ್ಲಿ ಯಾವುದೂ ತಪ್ಪಿಲ್ಲ, ಎಂದುಕೊಂಡಳು. ಆದರೆ ಇನ್ನುಮೇಲೆ ಮಾತ್ರ ಭಾಗಮ್ಮನಿಗೆ ಇದಿರಾಗಿ ಯಾವ ವಿಷಯವನ್ನು ಮಾಡತಕ್ಕದ್ದಲ್ಲ, ಪ್ರತಿ ವಿಷಯದಲ್ಲಿಯೂ ಆಕೆಗೆ ಸರಿಹೋಗುವಂತೆ, ಆಕೆಯ ಪ್ರೀತಿಯನ್ನು ಗಳಿಸಲು ಸಾಧ್ಯವಾಗುವಂತೆ ನಡೆಯಸತಕ್ಕದ್ದೆಂದು ನಿರ್ಧಾರ ಮಾಡಿಕೊಂಡಳು ಆ ಪರಿಯಾಗಿ ಪ್ರೀತಿಗಾಗಿ, ಸಹಾನುಭೂತಿ ಗಾಗಿ, ಒಂದು ಒಳ್ಳೆಯ ಮಾತಿಗಾಗಿ ಹಂಬಲಿಸುತ್ತಿದ್ದಿತು ಕಾವೇರಿಯ ಹೃದಯ!

ಭಾಗಮ್ಮ ಮನೆಗೆ ತಿರುಗಿ ಬಂದಾಗ ಮಧ್ಯಾಹ್ನದ ನಾಲ್ಕು ಗಂಟೆ ಯಾಗಿಹೋಗಿರಬಹುದು. ಆಕೆಯ ಸಿಟ್ಟು ಆಗಲೆ ಇಳಿದುಹೋಗಿತ್ತು. ಮನೆ ಯಿಂದ ಹೊರಡುವಾಗ ಅಷ್ಟು ಅಬ್ಬರದಿಂದ ಹೋದವಳು ತಂಗೆಮ್ಮನೆದುರು ಹೊಟ್ಟೆಯಲ್ಲಿಯ ಕಿಚ್ಚನ್ನೆಲ್ಲ ತೋಡಿಕೊಂಡಳು. ಆದರೆ ಕಾಗದವನ್ನು ತಿರುಗಿ ಕೊಡದೆ ಬೇರೆ ದಾರಿ ಕಾಣದೆ ಅದನ್ನು ಕಳಿಸಿಯೂ ಆಗಿತ್ತು. ಕಳಿಸಿದ

ನಂತರ ಅವರಿಬ್ಬರೂ ಅದೇ ವಿಷಯವನ್ನು ಚರ್ಚಿಸಿದ್ದರು. ಯಾವ ಬಗೆಯಲ್ಲಿ ಚರ್ಚಿಸಿದರೂ ಬೇಕಾದ ಸಮರ್ಥನೆ ಸಿಕ್ಕಲಿಲ್ಲವೆಂದು ಕಾಣುತ್ತದೆ. ಕೊನೆಗೆ ತಂಗೆಮ್ಮ ಹೇಳಿದ್ದಳು :

"ನೀವಾದರೂ ಇಷ್ಟರವರೆಗೆ ಹೋಗಬಾರದಾಗಿತ್ತು, ಭಾಗಮ್ಮ. ಏನಾದರೂ ಅವಕ್ಕೆ ಇನ್ನೂ ಎಳೆಯ ವಯಸ್ಸು; ಏನೊ, ಗಂಡನ ಕಾಗದ ಅಂದರೆ ಅಷ್ಟರ ಮಟ್ಟಿಗೆ ಅವಕ್ಕೆ ಆ ರೀತಿ ಅನ್ನಿಸುವುದು ಸಹಜವೆ...."

"ಹೌದು, ಅದೆಲ್ಲಾ ಸರಿ. ಆದರೆ, ನಾವೇನು ಈಕೆಯ ಪತ್ರವನ್ನು ತಿಂದುಹಾಕಿಬಿಡುತ್ತಿದ್ದೆವೆ? ಕೊಟ್ಟೇ ಕೊಡುತ್ತಿದ್ದೆವಲ್ಲ........" ಎಂದು ಭಾಗಮ್ಮ.

"ಹಾಗೆ ಹೇಗಾದೀತು, ಭಾಗಮ್ಮ? ಈಗ ನೀವೇ ನೋಡಿದಿರಲ್ಲ. ಅವನು ಏನೇನೊ ಬರೆದಿದ್ದಾನೆ, ನಿಮ್ಮ ಮಗ. ಅದನ್ನೆಲ್ಲ ನಾವು ಓದಬೇಕೆ?"

"ಹಾಗೆಲ್ಲ ಅವರು ಬರೆಯಬೇಕೆ?"

"ಅದನ್ನೆಲ್ಲ ಕಟ್ಟಿಕೊಂಡು ನಾವೇನು ಮಾಡುವುದು? ಅವರು ತಮ್ಮಷ್ಟಕ್ಕೆ ಇದ್ದಾಗ ಏನೇನು ಮಾತಾಡುತ್ತಾರೆ ಎಂಬುದೆಲ್ಲವನ್ನು ಹೇಳಲಿಕ್ಕಾಗುತ್ತದೆಯೆ? ಕೇಳಲಿಕ್ಕಾಗುತ್ತದೆಯೆ? ಆ ಕಡೆಗೆ ನಾವು ಲಕ್ಷ್ಯ ಹಾಕದೆ ಇರುವುದೆ ಒಳ್ಳೆಯದು."

ಒಂದು ಕ್ಷಣ ಭಾಗಮ್ಮನಿಗೆ ವಿಚಿತ್ರವೆನಿಸಿತು. ತಂಗೆಮ್ಮನ ವಾದ ತೀರ ಸರಿಯಾದ್ದೆಂಬುದರಲ್ಲಿ ಆಕೆಗೆ ಸಂದೇಹವೆ ಇರಲಿಲ್ಲ ಅಂತೆಯೆ ಆಕೆಯ ಮನಃಸ್ಥಿತಿ ವಿಚಿತ್ರವಾಗಿತ್ತು. ಯಾವ ಒಂದು ವಿಷಯದಲ್ಲಿ ತನಗೆ ಪ್ರತಿಯಾಗಿ ತಂಗೆಮ್ಮ ಹೇಳುತ್ತಿರಲಿಲ್ಲ ಮಾತ್ರವಲ್ಲದೆ ತನಗೆ ಪ್ರತಿಯೊಂದು ವಿಷಯದಲ್ಲಿಯೂ ಬೆಂಬಲವಾಗಿ ನಿಲ್ಲುತ್ತಿದ್ದವಳು ಈಗ ಕಾವೇರಿಯನ್ನು ಸಮರ್ಥಿಸುತ್ತಿದ್ದಾಳಲ್ಲ ಎಂದು ಒಂದು ಕ್ಷಣ ಸಿಟ್ಟೂ ಬಂದಿತ್ತು. ಆದರೂ ಆ ಕ್ಷಣಕ್ಕೆ—ಅದೇಕೆ ಯಾರು ಬಲ್ಲರು—ತಾನು ಕಾಗದದ ಪ್ರಕರಣವನ್ನು ಇಷ್ಟರ ಮಟ್ಟಿಗೆ ಬೆಳೆಯಗೊಡಬಾರದಾಗಿತ್ತು ಎನಿಸಿತು. ಅಲ್ಲದೆ, ತಂಗೆಮ್ಮನ ಕೊನೆಯ ಮಾತು ಆಕೆಗೆ ಸಂಪೂರ್ಣವಾಗಿ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ನಿಂತಿತ್ತು. ತಂಗೆಮ್ಮ ಹೇಳಿದ್ದಳು:

“ ಇದು ನೋಡಿರಿ, ಭಾಗಮ್ಮಾ. ನಾನು ಹೀಗೆ ಹೇಳುತ್ತೇನೆ ಎಂದು ಕೋಪಿಸಿಕೊಳ್ಳಬೇಡಿರಿ. ನಿಮ್ಮ ಕಾವೇರಿಯನ್ನು ನೋಡಿದಾಗಲೆಲ್ಲ ನನಗೆ ಬಹಳ ಕೆಡಕೆನಿಸುತ್ತದೆ. ನಿಮ್ಮ ಒಬ್ಬ ಮಗಳನ್ನೇ ಇನ್ನೊಬ್ಬರು ಈ ರೀತಿ ನಡಸಿಕೊಂಡರೆ ನಿಮಗೆ ದುಃಖ ಆಗುವುದಿಲ್ಲವೆ? ”

ಈಗ ಮಾತ್ರ ಭಾಗಮ್ಮನಿಗೆ ತಡೆಯಲಾಗಲಿಲ್ಲ.

“ ಅದೇನು ಹೀಗೆ ಹೇಳುತ್ತೀರಿ, ತಂಗೆಮ್ಮಾ? ಅಂಥಾದ್ದೇನು ನಾನು ಮಾಡಿದ್ದು ಆಕೆಗೆ? ತಿನ್ನಲಿಕ್ಕೆ ಬೇಡ ಅನ್ನುತ್ತೇನೆಯೆ? ಉಣ್ಣಲಿಕ್ಕೆ ಬೇಡ ಅನ್ನುತ್ತೇನೆಯೆ? ಎಲ್ಲವೂ ಆಕೆಯದೆ ಇದೆ. ನನ್ನದೇನಿದೆ! ಹೇಳಿರಿ....”

“ ಹೌದು, ಅದೇ ನಾನು ಹೇಳುವುದೂ. ನೀವು ಆಕೆಯನ್ನು ಉಪವಾಸ ಕೊಡೆಯುತ್ತೀರಿ ಅಂದೆನೆ? ಅಲ್ಲದೆ, ಎಂಥ ಊಟ ಹಾಕಿದರೂ ಒಂದು ಒಳ್ಳೆಯ ಮಾತಿನ ನುಡಿ ಇದ್ದರೆ, ಏನು ಮಾಡಿದರೂ ಅಷ್ಟೆ ಸಾಕು! ಎಲ್ಲಿಂದಲೋ ಬಂದವರು, ಅವರು ಸುಖವಾಗಿ ಇರಬೇಕು. ಅಂದರೇನೆ ಮನೆಗೆ ಶಾಂತಿ. ಅದರಲ್ಲಿ ನಿಮ್ಮ ಕಾವೇರಿಗಂತೂ ತಾಯಿ ಇಲ್ಲ, ತಂದೆ ಇಲ್ಲ. ನೀವೇ ಎಲ್ಲಾ ಆಕೆಗೆ. ನೀವೇ ಆಕೆಗೆ ಒಂದು ಒಳ್ಳೆಯ ಮಾತನಾಡದಿದ್ದರೆ ಆ ಬಡ ಹುಡುಗಿ ಏನು ಮಾಡಬೇಕು? ಹೇಳಿ....”

ಹತ್ತು ವರುಷಗಳ ಹಿಂದೆ ಅತ್ತೆಮನೆಯವರ ಪೀಡೆಗೆ ಗುರಿಯಾಗಿ ಸವೆದುಹೋದ ತನ್ನ ಮಗಳ ನೆನಹು ತಂಗೆಮ್ಮನನ್ನು ಆ ಕ್ಷಣಕ್ಕೆ ಕಾಡುತ್ತಿತ್ತು. ಆ ನೆನಪೆ ಕೊನೆಯ ಮಾತನ್ನು ಹೇಳುತ್ತಿರುವಾಗ ಆಕೆಯ ಕೊರಳ ಸೆರೆ ಬಿಗಿಯುವಂತೆ ಮಾಡಿತ್ತು. ಭಾಗಮ್ಮನಿಗೆ ಪ್ರತಿಯಾಗಿ ಯಾವ ಮಾತನ್ನೂ ಹೇಳಲಾಗಲಿಲ್ಲ. ಆ ಮನಃಸ್ಥಿತಿಯಲ್ಲಿ ಮನೆಗೆ ಹಿಂತಿರುಗಿ ಬಂದಿದ್ದಳು

ತನ್ನ ಯೋಚನೆಗಳಲ್ಲಿ ಮೈಮರೆತು ಸುಮ್ಮನೆ ಕುಳಿತಾದರೂ ಮಾಡುವುದೇನೆಂದು ಪಡಸಾಲೆಯಲ್ಲಿ ಮೈಚೆಲ್ಲಿದ ಕಾವೇರಿಗೆ ಅಲ್ಲಿಯೆ ನಿದ್ರೆಹತ್ತಿತು. ಭಾಗಮ್ಮ ಮನೆಯಲ್ಲಿ ಬಂದದ್ದೂ ಎಚ್ಚರವಿರಲಿಲ್ಲ. ಭಾಗಮ್ಮ ಪಡಸಾಲೆಯಲ್ಲಿ ಮಲಗಿದ ಸೊಸೆಯನ್ನು ನೋಡಿ ಏನೆಂದುಕೊಂಡಳೊ! ಆದರೂ ತಂಗೆಮ್ಮನ ಮಾತುಗಳು ಇನ್ನೂ ಮನಸ್ಸನ್ನು ಸೂರೆಗೊಂಡಿದ್ದವು. ಉದ್ದವಾಗಿ ಬಿದ್ದುಕೊಂಡ ಆ ಬಡಕಲಾದ ದೇಹವನ್ನು ನೋಡಿ ‘ ಪಾಪ ’

ಎನಿಸಿರಬೇಕು. ಅಂತೆಯೆ, ಕಾಲುಸದ್ದನ್ನು ಕೂಡ ಮಾಡದೆ, ಬಾಗಿಲನ್ನು ನಿಧಾನವಾಗಿ ಮುಂದೂಡಿ ಅಡಿಗೆಯ ಮನೆಯ ಕಡೆಗೆ ಹೋಗಿದ್ದಳು. ಆಮೇಲೆ ಬಚ್ಚಲುಮನೆ. ಎಲ್ಲಿ ನೋಡಿದರೂ ಕಾವೇರಿ ತನಗಾಗಿ ಅಡಿಗೆ ಮಾಡಿಕೊಂಡಂತಾಗಲಿ, ಏನಾದರನ್ನು ತಿಂದುದಾಗಲಿ ಕಾಣಲಿಲ್ಲ ಆಗ ಮಾತ್ರ ಆಕೆಗೆ ನಿಜವಾಗಿಯೂ ಕೆಡಕೆನಿಸಿತು. 'ಉಪವಾಸ ಮಲಗಿಬಿಟ್ಟಿದ್ದಾಳೆ. ಅಂತೆಯೆ ಹಾಗೆ ನಿದ್ರೆ ಹತ್ತಿಬಿಟ್ಟದೆ!' ಎಂದುಕೊಂಡಳು....ಬೀದಿಯಲ್ಲಿಯ ಯಾವುದೊ ಒಂದು ಕೂಗಾಟಕ್ಕೆ ಕಾವೇರಿಗೆ ಎಚ್ಚರವಾಯಿತು. ಮುಂದೂಡಿದ ಬಾಗಿಲು ನೋಡಿದಾಗಲೆ ಭಾಗಮ್ಮ ಬಂದಿರಬೇಕೆಂದು ಅವಸರವಸರವಾಗಿ ಎದ್ದು ಒಳಗಡೆ ಹೋದರೆ ಭಾಗಮ್ಮ ಅಡಿಗೆಮನೆಯ ಬಾಗಿಲ ಹತ್ತಿರ ಅಡ್ಡವಾಗಿ ಮಲಗಿದ್ದಳು. ಕಾವೇರಿಗೆ ಆಕೆಯ ಎದುರು ಹೋಗುವ ಧೈರ್ಯ ಒರಲಿಲ್ಲ ಮುಂಜಾವಿನಿಂದ ನಡೆದುದೆಲ್ಲವೂ ಕಣ್ಣೆದುರು ನಿಂತಿತು. ಮೋರೆ ತೊಳೆಯುವ ನೆಪದಿಂದ ಬಚ್ಚಲುಮನೆಯ ಕಡೆಗೆ ಸಾಗುತ್ತಿರುವಾಗ ಭಾಗಮ್ಮನ ದನಿ ಕೇಳಬಂದಿತು:

"ನೀನು ಊಟ ಮಾಡಲಿಲ್ಲವೇನೆ?...."

ಪ್ರಶ್ನೆ ಅನಿರೀಕ್ಷಿತವಾಗಿದ್ದಂತೆ ಅದನ್ನು ಕೇಳಿದ ದನಿ, ರೀತಿ ಎರಡೂ ಅನಿರೀಕ್ಷಿತವಾಗಿದ್ದವು ಕಾವೇರಿಗೆ ವಿಚಿತ್ರವೆನಿಸಿತು. ಇನ್ನೇನು ಮಾತು ಬೆಳೆಯಲಿದೆಯೊ ಎಂದು ಹೆದರಿಕೊಂಡಿದ್ದ ಆಕೆಗೆ ಕರುಣೆಯಿಂದಲ್ಲದಿದ್ದರೂ ಸಹಾನುಭೂತಿಯಿಂದ ತುಂಬಿದ ಆ ಒಂದು ಪ್ರಶ್ನೆ ಕಾವೇರಿಯ ಕಣ್ಣುಗಳಲ್ಲಿ ನೀರನ್ನೆ ತುಂಬಿಸಿತು.

"ಇಲ್ಲ...." ಎಂದಳು. ಆದರೆ ಮುಂದೇನು ಹೇಳಬೇಕೆಂಬುದು ತಿಳಿಯದೆ ಹೋಯಿತು. ಕಂಠವೂ ತುಂಬಿಬಂದಂತಿತ್ತು. ನಿದ್ರೆಹೋಗುವ ಮೊದಲಿನ ಮನಃಸ್ಥಿತಿಯೆಲ್ಲವೂ ಆ ಒಂದು ಸಹಾನುಭೂತಿಯ ಮಾತಿನಿಂದ ಮರುಕಳಿಸಿ ಬಂದಿತು.

"ನನ್ನದು ತಪ್ಪಾಯಿತು. ಏನೇನೊ ಆಡಿದೆ. ನಿಮಗೆ ಸುಮ್ಮನೆ ಮನಸ್ತಾಪ ಮಾಡಿದೆ...." ಎಂದು ಕಾವೇರಿ ಕಣ್ಣಿಗೆ ಸೆರಗನ್ನಿಟ್ಟಳು.

ಭಾಗಮ್ಮನಿಗೂ ಆಕೆಯನ್ನು ನೋಡಿ ಕೆಡಕೆನಿಸಿತು.

"ಸಾಕು ಬಿಡು. ಹಾಗೆಲ್ಲ ಅಳಬಾರದು. ಆಗಿಹೋಯಿತಲ್ಲ....ಏಳು,

ಸುಮ್ಮನೆ ಯಾಕೆ ಉಪವಾಸ ಕುಳಿತಿದ್ದೀಯಾ ಏನಾದರೂ ತೆಗೆದುಕೊಂಡು ತಿನ್ನುಹೋಗು....” ಎಂದು ಸಮಾಧಾನದ ಮಾತು ಹೇಳಿದಳು. ಕಾವೇರಿಗೆ ಊಟ ಮಾಡಿದಕಿಂತಲೂ ಹೆಚ್ಚಿನ ಸಮಾಧಾನವಾಯಿತು. ಆ ದಿನ ರಾತ್ರಿ ಕಾವೇರಿ ಎಷ್ಟು ಬೇಡವೆಂದರೂ ಅಡಿಗೆ ಮಾಡಿಸಿ ಆಕೆ ಊಟ ಮಾಡುವಂತೆ ಭಾಗಮ್ಮ ಒತ್ತಾಯಪಡಿಸಿದಳು.

೬

ಆದರೆ ಈ ಎಲ್ಲ ಬದಲಾವಣೆ ಕ್ಷಣಿಕವಾದುದಾಗಿತ್ತು. ಮರುದಿನ ಬೆಳಗ್ಗೆ ದ್ವಾದಶಿಯ ಅಡಿಗೆಯ ಗಡಿಬಿಡಿಯಲ್ಲಿ ಕಾವೇರಿಗೆ ಎಷ್ಟೋ ಮಾತುಗಳನ್ನು ಕೇಳಬೇಕಾಗಿ ಬಂದಿದ್ದಿತು. ಆದರೂ 'ಏನೊ ಉಪವಾಸದ ಪರಿಣಾಮ. ಎಂಥವರೂ ಸಿಡಿಮಿಡಿಮಾಡುತ್ತಾರೆ' ಎಂದು ಸಮಾಧಾನ ತಂದುಕೊಂಡಿದ್ದಳು. ಒಂಬತ್ತು ಗಂಟೆಯ ಸುಮಾರಿಗೆ ಊಟ, ಅದರ ನಂತರದ ಮನೆಯಲ್ಲಿಯ ಕೆಲಸಗಳೆಲ್ಲವನ್ನು ಮುಗಿಸಿಕೊಂಡು ಬಟ್ಟೆಗಳೊಡನೆ ಹೊಳೆಗೆ ಹೋದಳು. ಮಾತು ಕೊಟ್ಟಂತೆ ಚಂಪಕ್ಕ ಇನ್ನೂ ಬಂದಿರಲಿಲ್ಲ. ಬಟ್ಟೆಗಳನ್ನು ಒಗೆಯುತ್ತಿರುವಾಗಲೆಲ್ಲ ಕಾವೇರಿಗೆ ಮರುದಿನ ಬರಲಿದ್ದ ಶ್ರೀನಿವಾಸನದೆ ಯೋಚನೆ. ಇನ್ನು ಎಷ್ಟು ದಿವಸ ಎನ್ನುವಹಾಗಿರಲಿಲ್ಲ. ಎಷ್ಟು ಗಂಟೆ ಎಂದು ಲೆಕ್ಕ ಮಾಡಿ ತನ್ನ ಲೆಕ್ಕಕ್ಕೆ ತಾನೆ ನಕ್ಕಳು. ನಾಳೆ ಸಾಯಂಕಾಲವಲ್ಲವೆ? ಸಾಯಂಕಾಲ ಎಷ್ಟು ಗಂಟೆಗೆ ಬರಬಹುದು? ಹಿಂದಿನ ಸಲ ಬಂದಾಗ ರಾತ್ರಿ ಎಂಟು ಗಂಟೆಯಾಗಿ ಹೋಗಿತ್ತು. ಆದರೆ ದಾರಿಯಲ್ಲಿ ಬಸ್ಸು ಕೆಟ್ಟುಹೋಗಿ ಒಂದು–ಒಂದೂವರೆ ಗಂಟೆ ಕಾಯಬೇಕಾಗಿತ್ತೆಂದು ಹೇಳಿರಲಿಲ್ಲವೆ? ಮನಸ್ಸು ಇನ್ನೆಲ್ಲಿಯೊ ಓಡಿತು. ಆದರೆ ಹಿಂದಿನಿಂದ ಚಂಪಕ್ಕನ ದನಿ ಕೇಳಬಂದಿತು:

"ಏನೆ, ಎಷ್ಟು ಬೇಗ ಬಂದುಬಿಟ್ಟಿದ್ದೀಯಾ?"

"ಬೇಗ ಏನು? ಒಂಬತ್ತು ಎಂದು ನಿನ್ನೆ ಹೇಳಿರಲಿಲ್ಲವೆ?"

"ನೀನು ಹೊರಡುವಾಗ ಕರೆದರೂ ಸರಿಯಬಹುದು ಎಂದು ಅಂದುಕೊಂಡಿದ್ದೆ—"

"ಆಯಿತು. ಏನಿಲ್ಲದೆಯೆ ಒಂದು ಹತ್ತು ನಿಮಿಷ ತಡವಾದರೆ 'ಏನಾವುದು ಅಂಥಾದ್ದು ಅಲ್ಲಿ ಮಾತಾಡುತ್ತೀರೊ' ಎಂದು ಇಬ್ಬರ ಹೆಸರಿಗೂ ಕಲ್ಲು ಒಡೆಯುತ್ತಾರೆ. ಇನ್ನು ನಿನ್ನನ್ನು ಕರೆಯಲಿಕ್ಕೆ ಬಂದರಂತೂ—"

"ಅದು ಹೋಗಲಿ, ನಿನ್ನೆ ಏನಾಯಿತು, ಕಾಗದದ ಸಮಾಚಾರ?"

"ಆಗುವುದೇನು? ಸಿಕ್ಕಿತು ಕಾಗದ—"

"ಅಂತೂ ಹಾಗಾದರೆ ನೀನು ಹೆದರಿಕೊಂಡಷ್ಟೇನೂ ತೊಂದರೆಯಾಗ ಲಿಲ್ಲ—"

"ಆಯಿತು. ಸಂಜೆಯವರೆಗೆ ಏಕಾದಶಿ, ಅದಕ್ಕೇ—"

ನಡೆದುದೆಲ್ಲವನ್ನೂ ಕಾವೇರಿ ವಿವರವಾಗಿ ವಿವರಿಸಿ, ಕೊನೆಯಲ್ಲಿ ಅಂದಳು:

"ನಾನು ಹೇಳಿಲ್ಲವೆ ಎಷ್ಟೋ ಬಾರಿ? ಏನೊ ಸಿಟ್ಟಿನ ಸ್ವಭಾವ. ಆಗೀಗ ಏನಾದರೂ ತಪ್ಪಿದರೆ ಒಂದು ರಾಡಿ ಬಿಡುತ್ತಾರೆ. ಆದರೆ ನಿನ್ನೆ ನನಗೆ ಕೆಡಕೆನಿಸಿತು. ಅಷ್ಟು ಹಟ ಹಿಡಿಯಬಾರದಿತ್ತು."

"ಹಟ ಹಿಡಿಯದಿದ್ದರೆ ನಿನಗೆ ಕಾಗದ ಸಿಕ್ಕುತ್ತಿತ್ತೆ?"

"ಹುಂ....ಅದೂ ನಿಜ ಅನ್ನು...." ಎಂದು ಕಾವೇರಿ ಅನುಮಾನ ಸೂಚಿಸಿದಳು.

"ನಿನ್ನ ಯಜಮಾನರು ಬರುವುದು ನಿಜವೆ?"

"ಹುಂ...."

"ಯಾವಾಗ?"

"ನಾಳೆ ಸಾಯಂಕಾಲ ಎಂದು ಬರೆದಿದ್ದಾರೆ."

"ಮತ್ತೆ ಮನೆ ಹಿಡಿದದ್ದು ನಿಜವೆ?"

"ಹುಂ...."

"ಅಂತೂ ಹೊರಟ ಹಾಗೆಯೆ ಆಯಿತಲ್ಲ—"

"ಸೋಮವಾರ ಹೊರಡುವುದು ಎಂದಿದ್ದಾರೆ...."

"ನಾಳಿನ ಸೋಮವಾರವೆ?"

ಚಂಪಕ್ಕನ ದನಿಯಲ್ಲಿ ಆಶ್ಚರ್ಯ ನಿರಾಶೆ ಎರಡೂ ಬೆರೆತಿರುವಂತೆ ತೋರಿತು. ಆದರೆ ಆ ಸಂತೋಷದ ಸಮಾಚಾರವನ್ನು ಗೆಳತಿಗೆ ಹೇಳುವುದ ರಲ್ಲಿ ಕಾವೇರಿಗೆ ಅದರ ಪರಿವೆ ಇದ್ದಂತಿರಲಿಲ್ಲ. 'ನಾಳಿನ ಸೋಮವಾರವೆ?' ಎಂದು ಕೇಳುತ್ತಿರುವಾಗ ಚಂಪಕ್ಕನ ಮನಸ್ಸಿನಲ್ಲಿ ಕಾವೇರಿ ಹೊರಡ ಹಳೆ ನ್ನುವುದಕ್ಕಿಂತ ಹೊರಡುವುದು ಸೋಮವಾರವಾದರೆ ತನಗೆ ಬಳೆಗಳನ್ನು ಕೊಡುವುದು ಯಾವಾಗ? ಎಂಬ ಯೋಚನೆಯೂ ಪ್ರಬಲವಾಗಿದ್ದಿತು. ಅದನ್ನು ನೇರವಾಗಿ ಕೇಳುವುದು ಹೇಗೆ ಎಂದುಕೊಳ್ಳುತ್ತಿದ್ದಳು. ಮಾತನ್ನು ಅಲ್ಲಿಗೆ ಎಳೆಯಬೇಕೆಂದು ಚಂಪಕ್ಕ ಹೇಳಿದಳು:

“ ನಿನ್ನೆ ಶಾಂತಾ ಬರಲಿಲ್ಲವೇನು ? ”

“ ಶಾಂತಾ ಇಲ್ಲ, ಯಾರೂ ಇಲ್ಲ. ಅತ್ತೆಯವರು ಮನೆಗೆ ಬರುವತನಕ ತೀರ ಬೇಜಾರಾಗಿ ಹೋಗಿತ್ತು ನನಗಂತೂ....”

“ ನಿನ್ನೆ ನೀನು ಹೋದ ಮೇಲೆ ಹೇಳಿದ್ದೆ ಶಾಂತಾಗೆ, ಕಿಟ್ಟೂನ ಕರೆದುಕೊಂಡು ನಿಮ್ಮ ಮನೆಗೆ ಹೋಗು ಅಂದಿದ್ದೆ....”

“ ಇವತ್ತಾದರೂ ಕಳಿಸುತ್ತೀಯಾ ? ”

ಆ ಒಂದು ಮಾತಿನಲ್ಲಿ ಆ ಚಿಕ್ಕ ಮಗುವಿನ ಬಗ್ಗೆ ಕಾವೇರಿಯ ಹೃದಯದಲ್ಲಿದ್ದ ಅಕ್ಕರೆ ವ್ಯಕ್ತವಾಗುವಂತಿತ್ತು. ಆದರೆ ಚಂಪಕ್ಕನ ಲಕ್ಷ್ಯ ಬೇರೆಡೆ ಇತ್ತು. ಅಂತೆಯೆ ಕೇಳಿದಳು :

“ ಹಾಗಾದರೆ ಇವತ್ತು ಬಂದಾಗ ಕೈಯಲ್ಲಿ ಬಳೆ ಹಾಕಿ ಕಳಿಸುತ್ತೀಯಾ ? ”

“ ಹಾಗೇನು ಕೇಳುತ್ತೀ, ಚಂಪಾ ? ನಿನ್ನೆ ನಾನು ಹೇಳಲಿಲ್ಲವೆ ಆ ಬಳೆಗಳ ಕಥೆಯನ್ನೆಲ್ಲಾ ? ಒಂದು ಸ್ವಲ್ಪ ನಿಧಾನ ಮಾಡಿದರೆ ಎಲ್ಲವೂ ಸರಿಯಾಗಿ ಆಗುತ್ತದೆ.”

“ ಏನೊ, ತಾಯಿ. ನೀನು ಕೊಡುತ್ತೇನೆ ಅಂದಿದ್ದೆ—”

ತಾನು ಕೊಡುತ್ತೇನೆಂದ ಬಳೆಗಳ ಜೊತೆಯ ಬಗ್ಗೆ ಚಂಪಕ್ಕ ಎಷ್ಟು ಆಸೆ ಪಡುತ್ತಿದ್ದಾಳೆಂಬುದನ್ನು ನೆನೆದಾಗ ಕಾವೇರಿಗೆ ಆಶ್ಚರ್ಯವೆನಿಸಿತು. ಆದರೆ ಅದು ಒಂದು ಕ್ಷಣ ಮಾತ್ರ. ಮರುಕ್ಷಣದಲ್ಲಿ, ತಾನು ಆಕೆಗೆ ಮಾತು ಕೊಟ್ಟು ಅಂಥ ಆಸೆಯನ್ನು ಹುಟ್ಟಿಸಿದ್ದು ತನ್ನದೆ ತಪ್ಪು ಎಂದುಕೊಂಡಳು. ತಾನಾದರೂ ಅಂಥ ಯಾವ ದೊಡ್ಡ ಸಿರಿವಂತೆಯಲ್ಲದಿದ್ದರೂ ಚಂಪಕ್ಕನ ಬಡತನದ ಬಗೆಯಲ್ಲಿ ಕನಿಕರ ಹುಟ್ಟಿಕೊಂಡಿತು. ಆಕೆಯಂಥ ಬಡತನದಲ್ಲಿ ಆಕೆಯ ಆಸೆ ಸರಿ ಎನಿಸಿತು. ‘ ಏನಾದರೂ ಆಗಲಿ, ಕೊಟ್ಟು ಬಿಡುವ ’ ಎಂದುಕೊಂಡಳು. ಆದರೆ ‘ಯಾಕೆ ಮತ್ತೆ ಸುಮ್ಮನೆ ಪ್ರಸ್ತಾಪ ? ಹೇಗಾದರೂ ನಾಳೆ ಶ್ರೀನಿವಾಸ ಬರುತ್ತಾನೆ. ಆತನನ್ನು ಕೇಳಿಯೆ ಕೊಟ್ಟರಾಯಿತು ’ ಎಂದು ಸಮಾಧಾನ ತಂದುಕೊಂಡು ಹೇಳಿದಳು :

“ ಕೊಡುವೆ, ಚಂಪಾ. ಕಿಟ್ಟೂನಿಗೆ ನಾನು ಕೊಡಬೇಕಾದ್ದನ್ನು ನೀನು ಕೊಡು ಎಂದು ಹೇಳಬೇಕಾಗುತ್ತದೆಯೆ ? ಮೊದಲಿಗೆ ಕೊಡುತ್ತೇನೆ ಎಂದವಳು ನಾನೆ ಅಲ್ಲವೆ ? ”

"ಆಯಿತು ನಿನ್ನ ಇಷ್ಟ ಬಂದ ಹಾಗೆ ಮಾಡು" ಎಂದಳು ಚಂಪಕ್ಕ ಕೊನೆಗೆ. ಆದರೆ ಆ ದನಿಯಲ್ಲಿ ನಿರುತ್ಸಾಹಕ್ಕಿಂತ ಹೆಚ್ಚಾಗಿ ನಿರಾಶೆ ವ್ಯಕ್ತವಾಗುತ್ತಿತ್ತು. ಮುಂದೆ ಹತ್ತು ನಿಮಿಷ ಇಬ್ಬರೂ ಮೌನವಾಗಿಯೆ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದರು ಆದರೆ ಚಂಪಕ್ಕನ ಮನಃಸ್ಥಿತಿಯನ್ನು ಬಲ್ಲ ಕಾವೇರಿಗೆ ನೀರವತೆ ತಡೆಯದಾಗಿ ಕೇಳಿದಳು:

"ಯಾಕೆ ಚಂಪಾ? ನಾನು ಹಾಗೆ ಹೇಳಿದೆ ಎಂದು ಸಿಟ್ಟು ಬಂದಿತೆ ನಿನಗೆ?"

"ಬಂದಾದರೂ ಏನಂತೆ?"

"ಹಾಗೆನ್ನಬೇಡ, ಚಂಪಾ. ಇಷ್ಟು ದಿವಸ ಇಬ್ಬರೂ ಜತೆಯಾಗಿ ಇದ್ದು ಈಗ ನಾನು ಹೊರಡುವಾಗ ಜಗಳ ಮಾಡುತ್ತೀದೆ?"

"ಜಗಳ ಏನಾಯಿತು ಈಗ?"

"ಮತ್ತಿನ್ನೇನು? ನಿನ್ನ ಇಷ್ಟ ಬಂದ ಹಾಗೆ ಮಾಡು ಅಂದರೆ?"

"ಕೊಡುವವಳು ನೀನು. ಅದಕ್ಕೆಂದೆ...."

"ಸಾಕು ಬಿಡು. ಆ ಮಾತೇ ಬೇಡ...."

ಕಾವೇರಿ ನಿಜವಾಗಿ ತನಗೆ ಅನಿಸಿದ್ದನ್ನು ಹೇಳುತ್ತಿದ್ದಳು. ತಮ್ಮಿಬ್ಬರ ಹಳೆಯ ಗೆಳೆತನದಲ್ಲಿ ಆ ಬಳೆಗಳ ಮಾತು ನಡುವೆ ಬಂದು ಉಪ್ಪು ಬೆರಸುವುದು ಆಕೆಗೆ ಬೇಡವಾಗಿತ್ತು. ಆದರಲ್ಲಿಯೂ ತಾನು ಅಲ್ಲಿಂದ ಒಂದೆರಡು ದಿನಗಳಲ್ಲಿ ಹೊರಡುವವಳಾಗಿದ್ದರಿಂದ ವಿರಸವನ್ನುಂಟುಮಾಡುವ ಯಾವ ವಿಷಯವೂ ಆಕೆಗೆ ಬೇಕಾಗಿರಲಿಲ್ಲವೆಂದು ಹಾಗೆ ಹೇಳಿದಳು. ಕೊನೆಗೆ,

"ನಾನು ಹೊರಟುಹೋದರೆ ನೀನು ಕಾಗದ ಬರೆಯುವಿಯಲ್ಲವೆ?"

"ನೀನು ಬರೆದರೆ ಬರೆಯುವೆ."

"ನಾನು ಬರೆಯದಿದ್ದರೆ?"

"ನಿನ್ನ ಹೊಸ ಸಂಸಾರದಲ್ಲಿ ನನ್ನನ್ನು ಮರೆತುಬಿಟ್ಟೆ ಅಂದುಕೊಳ್ಳುತ್ತೇನೆ."

"ಅಷ್ಟು ಮರೆತುಬಿಡಬಹುದು ಎಂದು ಅನ್ನಿಸುತ್ತದೆಯೆ ನಿನಗೆ?"

"ಯಾರು ಹೇಳಬೇಕು? ಇಲ್ಲಿ, ನಿನ್ನ ಮನಸ್ಸಿನಲ್ಲಿಯದನ್ನು ತೋಡಿ

ಕೊಳ್ಳಲಿಕ್ಕಾದರೂ ನಾನು ಬೇಕಿತ್ತು. ಅಲ್ಲಿ ಇನ್ನೊಬ್ಬರು ಇರುತ್ತಾರೆ."

"ನಿನ್ನ ಕೂಡ ನಾನು ಮಾತಾಡುವುದು ಅಷ್ಟಕ್ಕಾಗಿಯೆ ಅನ್ನು, ಹಾಗಾದರೆ—"

"ಹಾಗಲ್ಲ. ಆ ಒಂದು ಪ್ರಯೋಜನವಾದರೂ ಇದ್ದಿತಲ್ಲ...."

"ಹಾಗೆನ್ನಬೇಡ ಚಂಪಾ. ನೀನು ಇಲ್ಲಿ ಇರದಿದ್ದರೆ ಇಷ್ಟು ದಿವಸಕ್ಕೆ ನಾನು ಏನಾಗುತ್ತಿದ್ದೆನೊ...."

ಕಳೆದ ನಾಲ್ಕಾರು ವರ್ಷಗಳಲ್ಲಿ ಅವರಿಬ್ಬರಲ್ಲಿ ಬೆಳೆದ ಸೌಹಾರ್ದ ವೆಲ್ಲವೂ ಒಂದೆ ಮೊತ್ತವಾಗಿ ಕಾವೇರಿಯ ಹೃದಯವನ್ನು ಹಿಡಿಯಿತು. ಮನೆಯಲ್ಲಿಯ ಬಿರುನುಡಿಗಳನ್ನು, ತಾನು ಅನುಭವಿಸಿದ ಕಷ್ಟಗಳನ್ನು, ಚಂಪಕ್ಕನ ಸಹಾನುಭೂತಿಯಿಲ್ಲದೆ ಎದುರಿಸಲಾಗುತ್ತಿತ್ತೆ? ಎಂದು ಕೊಂಡಳು. ಕೊನೆಗೆ ಹೇಳಿದಳು:

"ನಾನು ಬರೆಯಲಿ, ಬರೆಯದಿರಲಿ, ನೀನು ಮಾತ್ರ ಕಾಗದ ಬರೆ ಯಲೆ ಬೇಕು."

"ಬರೆಯಬಾರದೆಂದು ನಿನ್ನದೇನೂ ಹಟವಿಲ್ಲವಷ್ಟೆ!" ಎಂದು ಚಂಪಕ್ಕ ನಸುನಕ್ಕಳು

"ಹಟ ಎಂಥದು? ಬರೆಯುವಂಥದು ಏನಾದರೂ ಇದ್ದರೆ ಬರೆದೇ ಬರೆಯುತ್ತೇನೆ, ಆಯಿತೆ?" ಎಂದು ಕಾವೇರಿಯೂ ಪ್ರತಿಯಾಗಿ ನಕ್ಕಳು.

"ಹಾಗಾದರೆ ನಾನೂ ಬರೆಯುತ್ತೇನೆ. ಆದರೆ ಮೊದಲು ಬರೆಯ ಬೇಕಾದದ್ದು ನೀನೇಯೆ?"

"ಯಾಕೆ?"

"ಯಾಕೆಂದರೆ, ನಿಮ್ಮ ಹೊಸ ಸಂಸಾರದ ವರ್ಣನೆ ನನಗೆ ಬೇಕು. ಅಲ್ಲದೆ ನಾನು ಬರೆಯಬೇಕಾದರೆ, ನಿನ್ನ ಹೊಸ ಮನೆಯ ವಿಳಾಸವಾದರೂ ನನಗೆ ತಿಳಿಯಬೇಕಲ್ಲ?"

"ಅಂತೂ ನೀನೇ ಗೆದ್ದ ಹಾಗಾಯಿತಲ್ಲ?"

"ಗೆಲ್ಲುವುದೇನು ಅದರಲ್ಲಿ? ವಿಳಾಸ ಕೂಡಲೆ ತಿಳಿಸುವಿಯಾ?"

"ಹುಂ...."

"ನಾಳೆ ಬೆಳಗ್ಗೆ ಈ ಕಡೆ ಬರುತ್ತೀಯಲ್ಲವೇನು?"

"ನಾಳೆ—" ಎಂದು ಕಾವೇರಿ ಯೋಚನೆಗೀಡಾದಳು.

"ನಾಳೆ ಬರದಿದ್ದರೆ ನಾಳಿದ್ದು ನೀನು ಬರುವುದಿಲ್ಲ—"

"ಅದೇನು?"

"ನಾಡಿದ್ದೇನು ನೀನು ಬರುತ್ತೀ? ನಿನ್ನ ಯಜಮಾನರು—"

ಕಾವೇರಿಗೆ ಕಚಕುಳಿ ಮಾಡಿದಂತಾಯಿತು. ಆಕೆ ಎಂದಳು:

"ಹೌದು. ಬಂದರೆ ನಾಳೆಯೆ ಬರಬೇಕು. ನಾಡಿದ್ದು ಆಗಲಿಕ್ಕಿಲ್ಲ"

"ಅಷ್ಟು ಗೊತ್ತಾಗುವದಿಲ್ಲವೆ ನನಗೆ? ಹಾಗಾದರೆ ಹೋಗುವ ಮೊದಲು ಭೆಟ್ಟಿಯಾಗುವುದಿಲ್ಲವೆ?"

"ಆಗದೇನು? ಇಲ್ಲಿಯಾಗದಿದ್ದರೂ ಹೋಗುವಾಗ ನಿನ್ನ ಮನೆಗೆ ಬಂದು ಹೋಗುತ್ತೇನೆ."

"ಆಗ ಹೆದರಿಕೆಯಾಗುವುದಿಲ್ಲ. ಅಲ್ಲವೆ?" ಎಂದು ಚಂಪಕ್ಕ ನಗು ಸೂಸಿದಳು.

"ಅಲ್ಲಿಗೆ ಹೆದರಿಕೆ ಮುಗಿಯಿತು."

"ಏನಾದರೂ ನಿನ್ನ ಧೈರ್ಯ ಒಳ್ಳೆಯದು ಬಿಡು."

ಆ ಮಾತಿನಲ್ಲಿ ಆತ್ಮಾನುಕಂಪವಿದ್ದಿತು, ಅಸೂಯೆ ಇರಲಿಲ್ಲ.

ಕಾವೇರಿ ಹೊಳೆಯಿಂದ ಮರಳಿ ಬಂದಾಗ ಮನೆಯಲ್ಲಿ ಒಂದು ಸಮ್ಮೇಳನವೆ ಜರುಗಿತ್ತು. ಭಾಗಮ್ಮ ತಂಗೆಮ್ಮನಂತೂ ಸರಿಯೆ, ಹಿಂದಿನ ಮನೆಯ ಲಕ್ಷ್ಮೀಬಾಯಿಯೂ ಬಂದಿದ್ದಳು. ತಾನಲ್ಲದೆ ತನ್ನ ಮದುವೆಯಾಗಲಿದ್ದ ಮಗಳನ್ನೂ ಕರೆತಂದಿದ್ದಳು. ಲಕ್ಷ್ಮೀಬಾಯಿ ಬರುವುದು ಅಪರೂಪ. ಅದಕ್ಕೆ ಕಾರಣವಿಷ್ಟೆ. ಆಕೆಗೆ ಪ್ರತಿಯಾಗಿ ಯಾರೂ ಮಾತನಾಡುವಂತಿಲ್ಲ. ತನ್ನ ಮಾತೇ ಯಾವಾಗಲೂ ಕೊನೆಯದಾಗಿರಬೇಕೆಂಬುದು ಆಕೆಯ ಜೀವನದ ಮೂಲಸೂತ್ರವಾದಂತಿತ್ತು. ಒಂದು ದೃಷ್ಟಿಯಿಂದ ಸುತ್ತಮುತ್ತಲಿನವರೆಲ್ಲರೂ ಆಕೆಗೆ ಹೆದರಿಕೊಳ್ಳುತ್ತಿದ್ದರೆಂದರೂ ಸರಿಯೆ. ಹಾಗೆ ನೋಡಿದರೆ, ಬದುಕಿದ್ದಾಗ, ಆಕೆಯ ಗಂಡನೆ ಆಕೆಗೆ ಹೆದರಿಕೊಳ್ಳುತ್ತಿದ್ದನೆಂಬುದು ಸರ್ವಶ್ರುತ ವಿಷಯವಾಗಿತ್ತು. ಯಾವುದೊ ಒಂದು ಮನೆತನದ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ಒಪ್ಪದೆ, ಜಗಳಾಡಿ, ಗಂಡನನ್ನು ಬಚ್ಚಲಲ್ಲಿ ನೂಕಿ ಹೊಡೆದಿದ್ದಳೆಂದೂ, ಆ ಹೊಡೆತಕ್ಕಿಂತಲೂ ಅದರಿಂದಾದ

ಮಾನಸಿಕ ವ್ಯಥೆಯಿಂದಲೆ ಆ ಬಡಪಾಯಿ—ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕ—ಸವೆದು ಸವೆದು ಸತ್ತುಹೋದನೆಂದೂ ಜನರು ಮಾತನಾಡುತ್ತಿದ್ದರು. ಆದರೆ ಎಲ್ಲರಿಗೂ ಆಕೆಯ ವಿಷಯವಾಗಿ ಹೆಚ್ಚಾಗಿ ಗೊತ್ತಿದ್ದ ಮಾತೆಂದರೆ ಸುಮಾರು ಇಪ್ಪತ್ತು ವರ್ಷಗಳ ಹಿಂದೆ—ತನ್ನ ಹರೆಯದ ಹುಮ್ಮಸ್ಸಿನಲ್ಲಿ—ಊರಲ್ಲಿ ಬಂದ ಒಂದು ನಾಟಕ ಕಂಪನಿಯ ಒಡೆಯನಿಗೆ ಮನಸೋತು ಆರೆಂಟು ತಿಂಗಳು ಆತನ ಬೆನ್ನ ಹಿಂದೆಯೆ ಇದ್ದಳೆಂಬುದು. ಆದರೆ ಇದಾವುದನ್ನೂ ಆಕೆಯ ಎದುರಿಗೆ ಹೇಳುವುದು ಹಾಗಿರಲಿ—ಅಪರೋಕ್ಷವಾಗಿಯಾದರೂ ಮಾತನಾಡಿದ್ದು ಆಕೆಗೆ ಗೊತ್ತಾದರೆ ಮಾತನಾಡಿದವರನ್ನು ಮಾತಿನಿಂದಲೆ ಜೀವ ಹೊಡೆಯುವ ಹಾಗಿದ್ದಳು. ಆಕೆಯ ಮಗಳೂ ಅಷ್ಟೆ. ವಯಸ್ಸು ಹದಿನಾರು ಹದಿನೇಳು ಇರಬೇಕು; ಆದರೂ ಮಾತಿನಲ್ಲಿ ಮುದುಕಿಯನ್ನು ಮೀರಿಸುವ ಅಕಾಲ ಒರಟತನ. ಮುಖದ ಬಣ್ಣ ಬೆಳ್ಳಗಾಗಿದ್ದುದೊಂದು ಆಕೆಗೆ ದೊಡ್ಡ ವೈಭವವೆ ಆಗಿದ್ದರಿಂದ—ಯಾರಾದರೂ ಬಂದು ಬೇಡಿ ಕೈಹಿಡಿಯುವರೆಂಬ—ಹೆಡ್ಡ ದುರಭಿಮಾನ ಬೇರೆ. ಇಂದು ದ್ವಾದಶಿಯಾದ್ದರಿಂದ ಬೆಳಗಿನಲ್ಲಿಯೆ ಊಟ ಮುಗಿಸಿಕೊಂಡು, ಊರ ಕಾರುಭಾರಕ್ಕೆಂದು ಭಾಗಮ್ಮನ ಪಡಸಾಲೆಯಲ್ಲಿ ಕಲೆತಿದ್ದರು. ಇಂಥ ಸಂದರ್ಭಗಳೇನೂ ಭಾಗಮ್ಮನಂತೆ ಅಲ್ಲಿಯ ಉಳಿದವರಾರಿಗೂ ಹೊಸತರದ್ದೆನಿಸಬೇಕಿರಲಿಲ್ಲ.

ಲಕ್ಷ್ಮೀಬಾಯಿ ಒಳ್ಳೆ ಜೋರಾಗಿ ವಾಗ್ಬಾಣಗಳನ್ನೆಸೆಯುತ್ತಿದ್ದಳು.

"ಆ ಕುಲಕರ್ಣಿ ಮಾಸ್ತರ ಹೆಂಡತಿ ಮತ್ತೂ ಗಂಡು ಹಡೆದಳಂತಲ್ಲ—ಕೇಳಿದಿರೇನು?"

"ಕುಲಕರ್ಣಿ ಮಾಸ್ತರ ಯಾರು?" ತಂಗೆಮ್ಮ ಸುಮ್ಮನೆ ಕೇಳಿದಳು.

"ಅದೇ, ಆ ಚಾವಡಿ ಹತ್ತಿರದ ಮನೆಯೊಳಗೆ ಹೊಸದಾಗಿ ಬಂದಿದ್ದಾರಲ್ಲ—"

"ಆ ಇಂದಿರಾಬಾಯಿ ಏನು?"

"ಅದೇ ಇಂದಿರಾಯಿ, ಗೊತ್ತಿಲ್ಲವೆ? ಗಂಡನ ಎರಡರಷ್ಟು—" ಎಂದು ಲಕ್ಷ್ಮಿಯ ಮಗಳ ವರ್ಣನೆ ಮುಂದುವರಿಯಿತು.

"ಸಾಕು ಮಾಡೆ, ನಿನ್ನದಂತೂ ಯಾವಾಗಲೂ ಇಂಥ ಮಾತೇ—"

“ಗಂಡು ಹಡೆದದ್ದೇನು ಅಷ್ಟು ಮಹತ್ವದ್ದಲ್ಲ, ನನ್ನನ್ನು ಕೇಳಿದರೆ. ಆದರೆ ಆತ ಹೋದವರ ಬಂದವರ ಎದುರಿಗೆ ಹೇಳಿಕೊಳ್ಳುವುದನ್ನು ನೋಡಿದರೆ ಮಾತ್ರ—”

“ಏನೊ ಪಾಪ, ಅಪರೂಪಕ್ಕೆ ಗಂಡು ಹುಟ್ಟಿರಬೇಕು” ಎಂದು ಭಾಗಮ್ಮ.

“ಅಪರೂಪ ಏನು ಬಂತು? ಐದನೆಯದೊ, ಆರನೆಯದೊ ಅಂತೆ.”

“ಆದರೂ ಹೇಳುತ್ತಾನೆಯೆ?”

“ಹೇಳುವುದಷ್ಟೆ ಯಾಕೆ? ಮಿಠಾಯಿ ಹಂಚಿದನಂತೆ!”

“ಆಯಿತು ನೀವು ಹೇಳಬೇಕು, ನಾವು ಕೇಳಬೇಕು, ಅಷ್ಟೆ!”

“ನಾನು ಸುಳ್ಳು ಹೇಳಿದೆ ಅಂತೀರಾ? ಆ ಮಾತು ಹೇಳಬೇಡಿರಿ. ಈಗಿಂದೀಗ ನೀವು ಯಾರು ಬೇಕಾದವರು ಹೋಗಿರಿ ಬೇಕಾದರೆ. ಮಿಠಾಯಿ ಸಿಕ್ಕೇ ಸಿಕ್ಕುತ್ತದೆ.”

“ನಿಮಗೆ ಸಿಕ್ಕೇ ಇರಬೇಕು, ಹಾಗಾದರೆ” ಎಂದು ತಂಗೆಮ್ಮ ಚುಚ್ಚಿದಳು.

“ಕೊಡದೆ ಇದ್ದರೆ ನಾನು ಹೇಳುತ್ತೇನೆಯೆ?”

“ಹಾಂ! ಕಾಡಿ, ಕಾಡಿ, ಬೇಡಿ ಅವರಿಂದ ಮಿಠಾಯಿ ತಿಂದು, ಆರನೆಯದಕ್ಕೆ ಮಿಠಾಯಿ ಹಂಚಿದರು ಅಂತ ಹಾಡಿಕೊಳ್ಳುತ್ತೀರಿ” ಎಂದು ಭಾಗಮ್ಮ.

“ನಮಗಿನ್ನೇನು ಬೇರೆ ಕೆಲಸ? ಎಲ್ಲಿ ಏನಾದರೂ ಇದ್ದರೆ ಅಲ್ಲಿ ನಾವು ಇದ್ದವರೆ. ನಾಳೆ ನಿಮ್ಮ ಸೊಸೆಗೂ ಆಗಲಿ, ಮನೆಗೆ ಮುತ್ತಿಗೆ ಹಾಕಿ ಬಿಡುತ್ತೇವೆ”

“ಆಯಿತು! ನನ್ನ ಸೊಸೆ ಹಡೆದಳು, ನೀವು ಮಿಠಾಯಿ ತಿಂದಿರಿ.”

“ಹಾಗೇಕೆನ್ನುತ್ತೀರಿ ಭಾಗಮ್ಮ?” ಎಂದು ತಂಗೆಮ್ಮ ನಡುವೆಯೆ ಬಾಯಿ ಹಾಕಿದಳು. “ಈಗೇನು ಆಗಬಾರದ ದಿವಸ ಆಗಿಹೋಗಿದೆ?”

ಆದರೆ ಭಾಗಮ್ಮ ನಿರಾಶೆಯ ದನಿಯಲ್ಲಿಯೆ ಹೇಳಿದಳು:

“ಏನಾಗಬೇಕು ಇನ್ನು? ವ್ರತ ಆಯಿತು, ನಿಯಮ ಆಯಿತು, ದೇವರು ದಿಂಡರ ಸೇವೆ ಎಲ್ಲಾ ಆಯಿತು—”

“ಆದರೆ ಒಂದೇ ಆಗಲಿಲ್ಲ—” ಎಂದು ಲಕ್ಷ್ಮೀಬಾಯಿ ಎಲ್ಲರ

ಮೇಲೆಯೂ ದೃಷ್ಟಿಯನ್ನು ತಿರುಗಿಸಿ ಗಟ್ಟಿಯಾಗಿ ನಕ್ಕಳು. ಆದರೆ ಮಾತು ಯಾರಿಗೂ ಸರಿಹೋಗಲಿಲ್ಲ. ಮಾತು ಎಲ್ಲೆಲ್ಲಿಯೊ ಸಾಗಿತು, ಗೊತ್ತು ಗುರಿ ಇಲ್ಲದೆ. ಕಾವೇರಿ ಮನೆಯಲ್ಲಿ ಕಾಲಿಟ್ಟಾಗ ತನಗೆ ಮಕ್ಕಳಿಲ್ಲ, ಆಗುವಂತಿಲ್ಲ ಎಂಬ ಮಾತು ನಡೆದದ್ದನ್ನು ಕೇಳಿ ಆ ಇಡಿ ಸಮ್ಮೇಳನವನ್ನು ಒಂದು ಸಲ ಸಿಟ್ಟಿನಿಂದ ನೋಡಿಯೂ ನೋಡದ ಹಾಗೆ ಒಳಗಡೆ ಹೋಗಿಬಿಟ್ಟಿದ್ದಳು. ಅಲ್ಲಿ ಇಲ್ಲಿ ಸುತ್ತಾಡಿಕೊಂಡು ಹರಟೆ ಕಾವೇರಿ ಚಂಪಕ್ಕನ ಮಗುವಿಗೆ ಕೊಡ ಮಾಡಿದ ಚಿನ್ನದ ಬಳೆಗಳ ವರೆಗೆ ಬಂದಿತ್ತು.

"ಏನು? ಏನಂತೀರಿ? ಚಿನ್ನದ ಬಳೆಗಳೆ? ಇಂಥ ವಿಷಯ ನನ್ನ ಬೆನ್ನ ಹಿಂದೆ ನನ್ನ ಸೊಸೆ ನಡೆಸಿದ್ದರೆ ಬೆನ್ನು ಮುರಿಯುತ್ತಿದ್ದೆ" ಎಂದು ಲಕ್ಷ್ಮೀಬಾಯಿಯ ವೀರವಾಣಿ ಸಿಡಿಯಿತು.

"ಆಯಿತು, ಎಲ್ಲಾ ಹೀಗೆಯೇ ಮಾತನಾಡುವವರೆ, ಪ್ರಸಂಗ ಬರುವತನಕ—" ಎಂದು ಭಾಗಮ್ಮನ ನಿರುತ್ಸಾಹದ ದನಿ.

"ನೀವು, ಭಾಗಮ್ಮ, ನೀವು ಹೀಗೆ ಮಾತನಾಡಬಹುದು ಅನ್ನಿಸಿರಲಿಲ್ಲ. ಬಿಡಿರಿ. ಇಷ್ಟು ಸಣ್ಣಾಗಿಬಿಟ್ಟಿರಾ ಇಷ್ಟರಲ್ಲಿ?"

ಭಾಗಮ್ಮನ ಆತ್ಮಾಭಿಮಾನಕ್ಕೆ ಏಟು ಬಿದ್ದಂತಾಯಿತು. ಆವಳೆಂದಳು:

"ಅದೇನು ಹಾಗೆನ್ನುತ್ತೀರಿ? ನನ್ನೆದುರಿಗೆ ಇಂಥದು ನಡೆಯುವುದು ಸಾಧ್ಯವಿಲ್ಲ ಎಂದೇ ಹೇಳಿದೆ. ಕೊಡಲು ಬಿಟ್ಟೆ, ಎನ್ನುತ್ತೀರಾ?"

ಕಾವೇರಿ ಕೇಳುತ್ತಲೆ ಇದ್ದಳು. ಇದೆಲ್ಲವನ್ನು ಇವರೆಲ್ಲರೂ ಸೇರಿ ಯಾಕೆ ಚರ್ಚೆ ಮಾಡುತ್ತಿರಬೇಕು? ಇವರಿಗೆ ಯಾವ ಸಂಬಂಧ? ತಾನು ಕೊಟ್ಟರೇನು, ಕೊಡದಿದ್ದರೇನು? ಎಂದು ಕಿಡಿಕಿಡಿಯಾದಳು. ಸರ್ರನೆ ಹೊರಗೆ ಬಂದು ಎಲ್ಲರಿಗೂ ತನ್ನ ವಿಷಯವಾಗಿ ಮಾತನಾಡಬೇಡಿರಿ, ಎಂದು ಎಚ್ಚರ ಹೇಳಬೇಕು ಎಂದೆನಿಸಿತು. ಆದರೆ ಇವರು ಏನು ಆಡಿದರೇನು, ಏನು ಮಾಡಿದರೇನು? ಇನ್ನೊಂದು ದಿನ ಅಷ್ಟೆ ಅಲ್ಲವೆ? ತಾನು ಹೊರಟು ಹೋಗುವಾಗ—ಚಂಪಕ್ಕನ ಮನೆಗೆ ಹೇಳಲೆಂದು ಹೋದಾಗ—ಕೊಟ್ಟು ಬಂದರೆ ಇವರೇನು ಮಾಡುವ ಹಾಗಿದ್ದಾರೆ? ಎಂದುಕೊಂಡು ಸುಮ್ಮನಾದಳು. ಹೀಗೆನ್ನುತ್ತಿರುವಾಗಲೆ ಶಾಂತಾ ಕಿಟ್ಟುವನ್ನು ಕರೆದುಕೊಂಡು ಬಂದಳು. ಆ ಮಗು ಬಾಗಿಲಲ್ಲಿರುವಾಗಲೆ 'ಮಾಮಾ, ಮಾಮಾ' ಎಂದು

ಕರೆಯುತ್ತಿರುವುದರ ಮೇಲಿಂದಲೆ ಕಾವೇರಿ ತಿಳಿದುಕೊಂಡಳು, ಚಂಪಕ್ಕ ಹೇಳಿದಂತೆ ಶಾಂತಾನ ಜತೆಯಲ್ಲಿ ಮಗುವನ್ನು ಕಳಿಸಿರಬೇಕು ಎಂದು. ಆದರೆ ಇದುವರೆಗೆ ನಡೆದ ಮಾತಿನ ಹಿನ್ನೆಲೆಯಲ್ಲಿ ಆ ಮಗು ಆಗ ಅಲ್ಲಿ ಬಂದಿರದಿದ್ದರೆ ಒಳ್ಳೆಯದಾಗಿತ್ತು ಎನಿಸಿತು ಮಗುವನ್ನು ಕರೆದುಕೊಂಡು ಶಾಂತಾ ನೇರವಾಗಿ ನಡುಮನೆಯ ಕಡೆಗೆ ನಡೆದುದನ್ನು ನೋಡಿ ಲಕ್ಷ್ಮೀ ಬಾಯಿ ಭಾಗವ್ವನಿಗೆ ಏನೋ ಕಿವಿಮಾತು ಹೇಳಿದ್ದು ಅರೆವರ್ಧ ಕಾವೇರಿಗೆ ಕೇಳಿಸಿತು. 'ಈಗ ನೋಡಿರಿ, ಬೇಕಾದರೆ, ಆ ಬಳೆಗಳನ್ನು ತೆಗೆದು ಕೊಂಡು ಹೋಗಲಿಕ್ಕೆಂದೆ ಬಂದಿದ್ದಾಳೆ ಆಕೆ' ಎಂಬರ್ಥದ ಮಾತಾಗಿತ್ತು. ಇದನ್ನು ಕೇಳಿದನಂತರವಂತೂ ಕಾವೇರಿಗೆ ವಿಪರೀತ ಸಿಟ್ಟು ಬಂದಿತು. ಆದರೆ ಹೊಣೆಗೆಟ್ಟು ಕಂಟುತ್ತಿದ್ದ ಆ ಓರಗಿತ್ತಿಯರೆದುರು ಆಕೆ ಏನನ್ನೂ ಮಾಡು ವಂತಿರಲಿಲ್ಲ. ಮಾತಾಡುವಂತೆಯೂ ಇರಲಿಲ್ಲ!

ನಡುಮನೆಯಲ್ಲಿ ಏನೋ ಕಾಳು ಆರಿಸುತ್ತ ಕುಳಿತಿದ್ದ ಕಾವೇರಿ ಯನ್ನು ನೋಡಿದೊಡನೆಯೆ ಕಿಟ್ಟೂ ಶಾಂತಾನ ಕಡೆಯಿಂದ ಇಳಿದು ಆಕೆಯ ಕಡೆಗೆ ಧಾವಿಸಿ ಒಂದೇಟಿಗೆ ಬೆನ್ನ ಮೇಲೆ ಬಿದ್ದು ಆಟವಾಡತೊಡ ಗಿದ. ಎರಡು ಮೂರು ದಿನಗಳಿಂದಲೂ ಕಿಟ್ಟುವನ್ನು ಕಾಣದೆ ಕಾತರಳಾಗಿದ್ದ ಕಾವೇರಿಗೆ ಆ ಮೃದುವಾದ ಕೈಗಳ ಹೂಮಾಲೆಯಿಂದಾದ ಸುಖ ಅಷ್ಟಿ ಷ್ಟಲ್ಲ. ಕಿಟ್ಟೂ ಪಾ, ಮಾ, ಎಂದು ಹಿಗ್ಗಿನಿಂದ ಆಕೆಯ ಮೈಮೇಲೆಲ್ಲವೂ ಕುಣಿ ಯುತ್ತಲೆ ಇದ್ದ. ಹೊರಗಡೆ ಹರಟೆ ನಡೆದೆ ಇತ್ತು. ಎಲ್ಲರ ಲಕ್ಷ್ಯವೂ ಆಕೆಯ ಕಡೆಗೆ ಇದ್ದಂತಿತ್ತು. ಅಂತೆಯೆ ಕಿಟ್ಟೂನ ಕೂಡ ಆಡಬೇಕೆಂದು ಎಷ್ಟು ಮನಸ್ಸಿದ್ದರೂ ಆ ಕ್ಷಣಕ್ಕೆ ಕಾವೇರಿಗೆ ಬೇಸರವೆನಿಸಿತು. ಅಷ್ಟರಲ್ಲಿ ಕಿಟ್ಟೂ ಎದುರಿಗಿನ ಧಾನ್ಯವನ್ನು ಚೆಲ್ಲಾಪಿಲ್ಲಿಯಾಗಿಸತ್ತಿದ್ದ. ಎಷ್ಟು ದೂರ ಸರಿಸಿದರೂ ನಾಲ್ಕಾರು ನೆಗೆತಗಳಲ್ಲಿ ಮತ್ತೆ ಸರಿದು ಬರುತ್ತಿದ್ದ ಮಗುವನ್ನು ನೋಡಿ ಕಾವೇರಿ ಮೈಮರೆಯುತ್ತಿದ್ದಳು. ಆದರೂ ಕಣ್ಣು ತಪ್ಪಿಸಿ ತಪ್ಪಿಸಿ ತನ್ನನ್ನೆ ನೋಡುತ್ತಿದ್ದ ತನ್ನ ಅತ್ತೆ, ಲಕ್ಷ್ಮೀಬಾಯಿ, ಮತ್ತು ಆಕೆಯ ಮಗಳನ್ನು ನೆನೆದಾಗ ಮಗು ಈಗ ಯಾತಕ್ಕೆ ಬರಬೇಕಾಗಿತ್ತು, ಇವರಾರೂ ಇಲ್ಲದಾಗ ಬರಬಾರದಾಗಿತ್ತೆ ಎನಿಸಿತು. ಈ ಯೋಚನೆಯಿಂದ ಬೇಸರ ಉಂಟಾಗಿ ಶಾಂತಾನಿಗೆ ಹೇಳಿದಳು:

"ಇದು ನೋಡು ಶಾಂತಾ, ಮಗುವನ್ನು ಈಗ ಕರೆದುಕೊಂಡು ಹೋಗು. ನೋಡಿದೆಯಾ, ಹೇಗೆ ಅರಿಸಿಟ್ಟ ಧಾನ್ಯವನ್ನೆಲ್ಲ ಚೆಲ್ಲಾಪಿಲ್ಲಿ ಮಾಡುತ್ತಿದ್ದಾನೆ ? "

ಶಾಂತಾ ಮುಂದಾಗಿ ಬಂದು ಕಿಟ್ಟುವನ್ನು ಎಳೆದುಕೊಂಡಳು. ಆದರೆ ಆತ ಕೇಳುವ ಹಾಗಿರಲಿಲ್ಲ. ಮಾ, ಮಾ, ಎಂದು ಕಾವೇರಿಯ ಹತ್ತಿರವೆ ಸಾಗರ ಬಿದ್ದುಹೋಗುತ್ತಿದ್ದ. ಕಾವೇರಿಗೆ ತೀರ ಬೇಸರವೆನಿಸಿತು.

"ಕರೆದುಕೊಂಡು ಹೋಗೆ. ನೋಡುವುದಿಲ್ಲವೆ, ಹೇಗೆ ಮಾಡಿದ್ದನ್ನೆಲ್ಲ ಕೆಡಿಸುತ್ತಿದ್ದಾನೆ? ಹೋಗಾಚೆ, ಮಗುವನ್ನು ಕರೆದುಕೊಂಡು—"

"ಆತ ಬರುವುದಿಲ್ಲ, ನಾನೇನು ಮಾಡಲಿ—"

"ಎತ್ತಿಕೊಂಡು ಹೋಗು ನೋಡೋಣ. ಹೋಗು ಮೊದಲು—"

ಕಾವೇರಿ ನಿಜವಾಗಿಯೂ ರೇಗಿದ್ದಳು—ಮಗುವಿನ ಮೇಲೆ ಅಲ್ಲ, ತನ್ನನ್ನೆ ನೋಡುತ್ತಿದ್ದ ಸಮ್ಮೇಳನದ ಸದಸ್ಯರ ಮೇಲೆ.

"ಆತನಿಗಾಗಿ ಬಳೆ ಮಾಡಿಸಿದ್ದೀರಂತಲ್ಲಾ, ಕಾವೇರಕ್ಕ. ಅವನ್ನು ಕೈಗೆ ತೊಡಿಸಿಬಿಡಿರಿ, ಸುಮ್ಮನಾಗುತ್ತಾನೆ. ಆಮೇಲೆ ಕರೆದುಕೊಂಡು ಹೋಗುವೆ—"

"ಹೋಗೆ ಸುಮ್ಮನೆ—ನಿನಗೆ ಯಾಕೆ, ಅದೆಲ್ಲಾ ಕಾರುಭಾರ ? "

ಲಕ್ಷ್ಮೀಬಾಯಿಯ ದನಿ ಸ್ಪಷ್ಟವಾಗಿ ಕೇಳಿಸಿತು ಕಾವೇರಿಗೆ.

"ಕೇಳಿದಿರಾ ಭಾಗಮ್ಮ? ಶಾಂತಾ ಯಾತಕ್ಕೆ ಬಂದಿದ್ದಾಳೆ ಅನ್ನೋದು ? ಬಳೆ ಹಾಕಿದರೆ ಕರೆದುಕೊಂಡು ಹೋಗುತ್ತಾಳಂತೆ—"

ಕಾವೇರಿಗೆ ತಡೆಯಲಾಗಲಿಲ್ಲ. ಆ ಮಗುವನ್ನು ನೇರವಾಗಿ ಎತ್ತಿ ತಂದು ಶಾಂತಾ ನಿಂತ ಬಾಗಿಲ ಹತ್ತಿರದಲ್ಲಿ ಬಂದು ಬಲವಾಗಿಯೆ ನೆಲಕ್ಕಿಳಿಸಿದಳು, "ಹೋಗು ಸುಮ್ಮನೆ ಇಲ್ಲಿಂದ" ಎಂದು. ಕಾವೇರಿಯ ಅನಿರೀಕ್ಷಿತವಾದ ವರ್ತನೆ ಮಗುವಿಗೆ ಅರ್ಥವಾಗದೆ ಪಿಳಿಪಿಳಿ ಕಣ್ಣುಬಿಟ್ಟು ಆಕೆಯ ಮುಖವನ್ನೆ ಅರೆನಿಮಿಷ ನೋಡಿ 'ಮಾ' ಎಂದು ಅಳಲಾರಂಭಿಸಿತು. ಅಳುವ ಮಗುವನ್ನು ಶಾಂತಾನ ಸೊಂಟದಲ್ಲಿರಿಸಿ "ಹೋಗು ಈಗ" ಎಂದು ಹೆಚ್ಚು ಕಡಿಮೆ ಆಕೆಯನ್ನು ಪಡಸಾಲೆಯ ನಡುವಿನ ಬಾಗಿಲವರೆಗೆ ಸಾಗಿಸಿಯೆಬಿಟ್ಟಳು. ಮಗು ಮುಖ ಹಿಂದಿರುವಿ ಅಳುತ್ತಲೆ ಇತ್ತು.

ಮಗುವನ್ನೆತ್ತಿಕೊಂಡು ಶಾಂತಾ ಹೋದಳೇನೊ ಸರಿ. ಆದರೆ ಕಾವೇರಿಗೆ ಮಗುವನ್ನು ಆ ಪರಿಯಾಗಿ ಅಳುವಂತೆ ಮಾಡಿದ್ದಕ್ಕಾಗಿ ಸಂಕಟ ವಾಯಿತು ಬೀದಿಯಿಂದ ಕಿಟ್ಟೂನ ಅಳು ಕೇಳಬರುತ್ತಲೆ ಇತ್ತು. ಮಗು ವನ್ನು ಕಳುಹಿಸಿಕೊಡು ಎಂದು ಚಂಪಕ್ಕನಿಗೆ ಹೇಳಿ, ಅದು ಮನೆಗೆ ಬಂದಾಗ ಅದನ್ನು ಅಳಿಸಿ ಸಾಗಿಸಿಬಿಟ್ಟೆನಲ್ಲಾ ಎಂದು ತನ್ನನ್ನು ತಾನೆ ಹಳಿದುಕೊಂಡಳು. ಶಾಂತಾ ಹೋಗುತ್ತಿದ್ದ ದಾರಿ ನಡುಮನೆಯ ಕಿಟಕಿ ಯೊಳಗಿಂದ ಕಾಣುತ್ತಿತ್ತಾದ್ದರಿಂದ ಅಲ್ಲಿಂದಾದರೂ ಮಗುವನ್ನು ಒಂದು ಮಾತು ಕರೆದು ಸಮಾಧಾನಪಡಿಸೋಣವೆಂದುಕೊಂಡು ಆ ಕಡೆ ಹೋದಳು. ಲಕ್ಷ್ಮೀಬಾಯಿ, ಸುಮಿತ್ರಾ ಅವರ ಕಣ್ಣುಗಳಂತೂ ಕಾವೇರಿಯ ಮೇಲೆಯೆ ಇದ್ದವು. ಕಾವೇರಿ ಕಿಟಕಿಯೊಳಗಿಂದ ಶಾಂತಾನನ್ನು ಕೂಗಿ ದಳು, ಕಿಟ್ಟುವನ್ನು ಮಾತನಾಡಿಸಿದಳು. ಅಷ್ಟಕ್ಕೆಯೆ ಕಾವೇರಿಯ ಮಾತಿ ನಿಂದಲೊ, ಅಥವಾ ಬೀದಿಯೊಳಗಿನ ಬೇರೆ ಇನ್ನಾವುದರಿಂದಲೊ ಮಗು ಮತ್ತೆ ಸುಮ್ಮನಾಗಿತ್ತು. ಕಾವೇರಿ ಹಿಂದಿರುಗಿದಳು. ಕಾಳುಕಡ್ಡಿಗಳನ್ನು ಎತ್ತಿಕೊಂಡು ಒಳಗೆ ಇಡುವುದಕ್ಕೆಂದು ಹೋದಳು.

ನಡುಮನೆಯಲ್ಲಿ ಕಾವೇರಿ ಇಲ್ಲದ್ದನ್ನು ನೋಡಿಕೊಂಡು ಲಕ್ಷ್ಮೀಬಾಯಿ ಭಾಗಮ್ಮನ ಕಿವಿಯಲ್ಲಿ ಉಸಿರಿದಳು :

" ನೋಡಿದಿರಾ, ಭಾಗಮ್ಮ? ನಿಮ್ಮ ಲಕ್ಷ್ಯವಾದರೂ ಯಾವ ಕಡೆಗೆ ಇರುತ್ತದೆಯೊ ? "

" ಯಾಕೆ, ಏನಾಯಿತು ? "

" ಆಗುವುದೇನ.? ನಮ್ಮೆಲ್ಲರ ಎದುರಿಗೆ ಶಾಂತಾನನ್ನು ಬೆದರಿಸಿದ ಸೋಗುಮಾಡಿ ಆಚೆಯ ಕಿಟಕಿಯೊಳಗಿಂದ ಬಳೆ ಎಸೆದುಕೊಟ್ಟಳು ನಿಮ್ಮ ಸೊಸೆ ! "

" ನೋಡಿದಿರಾ ನೀವು ಆಕೆ ಕೊಟ್ಟದ್ದು ? "

" ನಾನು ಯಾತಕ್ಕೆ ನೋಡಬೇಕು? ಶಾಂತಾ ಇಲ್ಲಿಗೆ ಬಂದಾಗಿ ನಿಂದಲೆ ನನಗೇನೊ ಹಾಗೆ ಸಂಶಯ ಇದ್ದಿತು. ಅಂತೆಯೆ ಸುಮಿತ್ರೆಗೆ ಹೇಳಿದೆ, ಹೊರಗೆ ಹೋಗಿ ನೋಡಿಕೊಂಡು ಬಾ ಎಂದು."

"ನಾನು ನೋಡಿದೆ, ಅದೇ ಕಿಟಕಿಯೊಳಗಿಂದ ಎಸೆದದ್ದನ್ನು. ನೆಲಕ್ಕೆ ಬಿದ್ದುದನ್ನು ಎತ್ತಿಕೊಂಡದ್ದನ್ನೂ ನೋಡಿದೆ!"

ತಂಗೆಮ್ಮನಿಗೆ ತಡೆಯದಾಯಿತು.

"ಯಾಕಮ್ಮ ಸುಳ್ಳುಸುಳ್ಳಾಗಿ ಹಾಗೆ ಮಾತನಾಡುತ್ತಿ? ಅಳುವ ಮಗುವನ್ನು ಕಿಟಕಿಯೊಳಗಿಂದ ಮಾತನಾಡಿಸಿದ್ದು ಇಲ್ಲಿ ಎಲ್ಲರಿಗೂ ಕೇಳಿಸಿತು ಅದನ್ನು ಬಿಟ್ಟು ಏನದು ನೀನು ಹೇಳುವುದು?"

ಲಕ್ಷ್ಮೀಬಾಯಿಗೆ ಮಾತು ಹಿಡಿಸಲಿಲ್ಲ.

"ಏನು ಹೇಳುತ್ತೀರಿ, ನೀವು? ನನ್ನ ಮಗಳು ಸುಳ್ಳು ಹೇಳುತ್ತಾಳೆ ಅನ್ನುತ್ತೀರಾ? ಆಕೆ ಸುಳ್ಳು ಹೇಳಲು, ಆತ್ತಿಗೆ ಹಿಸುಕಿಬಿಟ್ಟೇನು. ಸುಳ್ಳು ಎಂದರೆ ನನಗೆ ಎಷ್ಟೂ ಆಗುವುದಿಲ್ಲ. ಅದಕ್ಕೆಯೆ ಕೇಳಿದೆ. ಇಲ್ಲದಿದ್ದರೆ ನನಗೇನ ನಾಂದುವುದು?"

ಭಾಗಮ್ಮನಿಗೆ ನಿಜವಾಗಿಯೂ ಸಿಟ್ಟು ಬಂದಿತ್ತು. ತನ್ನ ಸೊಸೆ ಆ ಬಳೆಗಳನ್ನು ಕೊಟ್ಟುದು ಎನ್ನುವುದಕ್ಕಿಂತ ಕಾಳಿತ ಜನರೆದುರು ತನಗೆ ಅವಮಾನವಾಯಿತು ಎಂಬ ಭಾವನೆಯೆ ಆ ಸಿಟ್ಟಿಗೆ ಮೂಲ ವ್ಯಕ್ತಿ ಯಾರೂ ಇಲ್ಲದಾಗ ಆಕೆ ನಿಜವಾಗಿ ಕೊಟ್ಟಿದ್ದರೂ ಅಷ್ಟು ಸಿಟ್ಟು ಬರುತ್ತಿರಲಿಲ್ಲ ವೇನೊ. ಆ ಸಿಟ್ಟಿನಲ್ಲಿಯೆ ಸೊಸೆಯನ್ನು ಕರೆದಳು.

"ಕಾವೇರಿ—" ದನಿಯಲ್ಲಿಯೆ ಸಿಡುಕು ಸ್ಪಷ್ಟವಾಗಿದ್ದಿತು.

ಆದರೆ ಕಾವೇರಿ ಬರಲಿಲ್ಲ ಅದಕ್ಕೆ ಕಾರಣವಿಷ್ಟೆ. ಬಿಸಿಲು ಒಳ್ಳೆ ಪ್ರಖರವಾಗಿ ಉರಿಯುತ್ತಿದ್ದುದರಿಂದ ಹಿತ್ತಲಲ್ಲಿ ಕಡಲೆಯನ್ನು ಹರವುತ್ತಿದ್ದಳು. ಆಕೆಗೆ ಅತ್ತೆಯ ಕರೆ ಕೇಳಿಸಲೆ ಇಲ್ಲ. ಆದರೆ ಭಾಗಮ್ಮನಿಗೆ ಸಹನೆ ಉಳಿದಿರಲಿಲ್ಲ

"ಕಾವೇರಿ—" ಎಂದು ಮತ್ತೆ ಕರೆ ಹೋಯಿತು.

ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದೆಂದು ತಂಗೆಮ್ಮನಿಗೆ ಹೆದರಿಕೆ ಯಾಗಿರಬೇಕು ಹೇಗಾದರೆ ಇಲ್ಲ ಹೊರಬೀಳಬಹುದೆಂದು ಲಕ್ಷ್ಮೀಬಾಯಿಗೂ ಅನಿಸಿರಬೇಕು. ಅಂತೆಯೆ ಅವರಿಬ್ಬರೂ ಹೊರಟು ನಿಂತರು. ಏಕಕಾಲಕ್ಕೆ ಭಾಗಮ್ಮನಿಗೆಂದರು—ಆದರೆ ಇಬ್ಬರ ಉದ್ದಿಶ್ಯಗಳೂ ಬೇರೆಬೇರೆಯಾಗಿಯೆ ಇದ್ದವು.

"ಅಲ್ಲ, ಯಾತಕ್ಕೆ ಆಕೆಯನ್ನು ಕರೆದು ನಾಲ್ಕು ಜನರಲ್ಲಿ—ಆಮೇಲೆ ಕೇಳಿಕೊಳ್ಳಲಿಕ್ಕೆ ಬರುವುದಿಲ್ಲವೆ?"

"ಅದೇಕೆ? ತಿಳಿದೇಹೋಗಲಿ. ನಾನೇನೂ ಕೊಡಬೇಡ ಅಂದಿರಲಿಲ್ಲ ಈಕೆಗೆ. ಆದರೂ ಈ ಕಳ್ಳತನ ಯಾಕೆ? ಅದೇ ನನಗೆ ಹಿಡಿಸುವುದಿಲ್ಲ" ಎಂದು ಭಾಗವ್ವ.

"ಯಾಕೆ ಸುಮ್ಮನೆ ಹಾಗೆ ಅನ್ನುತ್ತೀರಿ ಭಾಗವ್ವ? ನೀವು ನೋಡಿದ್ದರೆ ಮಾತ್ರ ಹಾಗೆ ಹೇಳಬಹುದು...." ಎಂದು ತಂಗೆವ್ವನ ಕರ್ಕಶದ ದನಿ.

"ಅದಕ್ಕೇ ನಾನು ಆಕೆಯನ್ನು ಕರೆದದ್ದು. ಏನು ಎನ್ನುವುದು ತಿಳಿದೇ ಹೋಗುತ್ತದಲ್ಲ—ಕಾವೇರಿ...."

ಕಾವೇರಿಗೆ ಕರೆ ಮುಟ್ಟಿತು. ಕೈಯಲ್ಲಿಯ ಕೆಲಸವನ್ನು ಅಲ್ಲಿಯೆ ಬಿಟ್ಟು ನ್ಯಾಯಸ್ಥಾನದೆದುರು ಅಪರಾಧಿಯಂತೆ ಬಂದು ಬಾಗಿಲ ಬಳಿ ನಿಂತಳು. ಅತ್ತೆ ತನ್ನನ್ನು ಯಾತಕ್ಕಾಗಿ ಕರೆದಿರಬಹುದೆಂಬುದರ ಕಲ್ಪನೆ ಇರಲಿಲ್ಲವಾದ್ದರಿಂದ ಆಕೆಯ ಮುಖದಲ್ಲಿ ಹೆದರಿಕೆಯೂ ಇರಲಿಲ್ಲ ಯಾವ ಬಗೆಯ ಉತ್ಸಾಹವೂ ಇರಲಿಲ್ಲ. ಆಪಾದನೆಯನ್ನು ಸಿದ್ಧಪಡಿಸುವ ಹೊಣೆ ಲಕ್ಷ್ಮೀಬಾಯಿಗೆ ಕ್ರಮಪ್ರಾಪ್ತವೆ ಆಗಿತ್ತು. ಸಿದ್ಧಪಡಿಸಲಾಗದಿದ್ದರೂ ಎಲ್ಲರ ಬಾಯನ್ನು ಬಡಿದು ಸುಮ್ಮನಾಗಿಸಬೇಕಾಗಿತ್ತು. ಅಂತೆಯೆ ಕಾವೇರಿ ಬಂದುದನ್ನು ನೋಡಿ ಒಳ್ಳೆ ಆಪ್ತತೆಯಿಂದ ಕೇಳಿದಳು—ಸಹಾನುಭೂತಿಯ ನೋಟದಿಂದ, ಒಳ್ಳೆಯ ಉಪದೇಶವನ್ನು ಮಾಡುವ ಧಾಟಿಯಿಂದ:

"ಇದು ನೋಡು ಕಾವೇರಿ, ಹಿರಿಯರಿಗೆ ಅವಮಾನವಾಗುವಂತೆ ನಡೆದುಕೊಳ್ಳಬಾರದು...."

ಅನಿರೀಕ್ಷಿತವಾದ ಈ ಉಪದೇಶಾಮೃತದ ಸಂದರ್ಭವಾಗಲಿ ಔಚಿತ್ಯವಾಗಲಿ ಕಾವೇರಿಗೆ ತಿಳಿಯದೆ ಸುಮ್ಮನೆ ನಿಂತುಬಿಟ್ಟಳು. ಲಕ್ಷ್ಮೀಬಾಯಿ ಮುಂದುವರಿದಳು:

"ತಮಗೆ ಮಕ್ಕಳಿಲ್ಲದಿದ್ದಾಗ ಹಾಗೆಲ್ಲ ಅನ್ನಿಸುವುದು ಸಹಜವೇನೊ ಸರಿ. ಆದರೂ—"

ಸಂದರ್ಭ ತಿಳಿಯದಿದ್ದರೂ ಈ ಮಾತನ್ನು ಈ 'ಸುಗುಣಿ' ಹೇಳ

ಬೇಕಾಗಿರಲಿಲ್ಲವೆಂದು ಕಾವೇರಿಗೆ ಕೊಂಚ ಸಿಟ್ಟು ಬಂದಿತು ಆದರೆ ಅದನ್ನು ತಡೆಹಿಡಿದು ಕೇಳಿದಳು—ಅತ್ತೆಯ ಕಡೆ ತಿರುಗಿ,

"ನೀವು ನನ್ನನ್ನು ಕರೆದಿರಲ್ಲವೆ?"

"ಅವರೇನು ಹೇಳಿದರು ಗೊತ್ತಾಗಲಿಲ್ಲವೆ?"

"ಇಲ್ಲ...."

"ಅದು ಯಾಕೆ ಗೊತ್ತಾದೀತು?"

ಈಗ ತಡೆಹಿಡಿದ ಸಿಡುಕು ನಿಧಾನವಾಗಿ ಸಿಡಿಯಲಾರಂಭಿಸಿತು.

"ಏನು ಗೊತ್ತಾಗುವುದು?"

"ತಿರುಗಿ ನನ್ನನ್ನೆ ಕೇಳುತ್ತೀಯಾ? ಇದು ನೋಡು, ನಿನಗೆ ಆ ಬಳೆ ಕೊಡುವುದೆ ಆಗಿದ್ದರೆ ನಮ್ಮೆದುರಿಗೆ ಕೊಟ್ಟುಬಿಡಬಹುದಾಗಿತ್ತಲ್ಲ? ಈ ಕಳ್ಳತನ ಯಾಕೆ?"

"ಕಳ್ಳತನ ಏನಾಯಿತು ಈಗ?"

"ಆ ಶಾಂತಾನಿಗೆ—ಮಗುವಿಗೆ ಸಿಟ್ಟುಮಾಡಿ ಕಳಿಸುವ ಸೋಗು ಮಾಡಿ ಕಿಟಕಿಯೊಳಗಿಂದ ಬಳೆ ಕೊಟ್ಟೆಯಲ್ಲ? ನೀನು ಏನೊ ತಿಳಿದು ಕೊಂಡಹಾಗಿದೆ....ಇದು ನೋಡು, ಇದು ಒಳ್ಳೆಯದಲ್ಲ. ಇಷ್ಟೇ ಹೇಳುತ್ತೇನೆ."

ಒಂದು ಕ್ಷಣ ಕಾವೇರಿಗೆ ದಿಗ್ಭ್ರಮೆಯಾಯಿತು. ಆದರೆ ಮರುಕ್ಷಣದಲ್ಲಿ ಈ ಸುಳ್ಳಿನ ಕಂತೆಯನ್ನು ಬಿಚ್ಚುವುದು ದೊಡ್ಡ ಕೆಲಸವಲ್ಲ ಎಂಬ ಧೈರ್ಯ ಬಂದ ಕ್ಷಣ ಸಿಟ್ಟು ಮತ್ತೆ ತಲೆಯೆತ್ತಿತು.

"ಈಗ ನಾನು ಕಿಟಕಿಯೊಳಗಿಂದ ಬಳೆ ಕೊಟ್ಟೆನೆ?"

ಕಾವೇರಿಯ ದನಿಯಲ್ಲಿ ಅಣಕು ಸ್ಪಷ್ಟವಾಗಿತ್ತು.

"ನೋಡಿದಿರಾ, ಹೇಗೆ ತಿರುಗಿ ನಮ್ಮನ್ನೆ ಕೇಳುತ್ತಾಳೆ?" ಎಂದಳು ಲಕ್ಷ್ಮೀಬಾಯಿ.

"ಯಾಕೆ ಮಾತು ಸುಮ್ಮನೆ, ಮಗು. ನೀನು ಕೊಟ್ಟಿದ್ದರೆ ಕೊಟ್ಟೆ ಎಂದು ಹೇಳಿಬಿಡು—" ಎಂದು ತಂಗೆಮ್ಮ ಬೇಕೆಂದು ಹೇಳಿದಳು.

"ಯಾರಾದರೂ ನೋಡಿದ್ದಾರೆಯೆ ನಾನು ಕೊಟ್ಟಿದ್ದು?"

"ಸುಮಿತ್ರ ನೋಡಿದ್ದಾಳೆ. ಯಾಕೆ, ಸುಮಿತ್ರ ನೀನು—"

ಸುಮಿತ್ರಾ ಮಾತ್ರ ಈಗ ಪೇಚಿನಲ್ಲಿ ಸಿಕ್ಕಂತೆ ಮುಖ ಪೆಚ್ಚು ಮಾಡಿದಳು. ಆದರೆ ತಂಗೆಮ್ಮನ ಹೊರತು ಅದನ್ನು ಯಾರೂ ನೋಡಲಿಲ್ಲ.

"ಹಾಗಾದರೆ ಒಂದು ನಿಮಿಷ ತಡೆಯಿರಿ—"

ಎಂದವಳೆ ಕಾವೇರಿ ನಡುಮನೆಯಲ್ಲಿಯ ಕೋಣೆಗೆ ಹೋಗಿ ಅರೆ ನಿಮಿಷದಲ್ಲಿ ಆ ಚಿನ್ನದ ಬಳೆಗಳ ಜೊತೆಯನ್ನು ಭಾಗಮ್ಮನ ಎದುರು ತಂದಿಟ್ಟಳು. ತಂಗೆಮ್ಮನ ಹೊರತು ಯಾರ ಬಾಯಲ್ಲೂ ದನಿ ಉಳಿಯಲಿಲ್ಲ. ಆದರೆ ತಂಗೆಮ್ಮ ಕೂಡ ಮಾತನಾಡಲಿಲ್ಲ—ಆಡಿ ಏನು ಪ್ರಯೋಜನ ಎಂದು. ಅಂದಿನ ಸಮ್ಮೇಳನ ಆಕಸ್ಮಾತ್ತಾಗಿ ಮೌನದಲ್ಲಿ ಮುಕ್ತಾಯವಾಯಿತು. ಭಾಗಮ್ಮನಾದರೂ ಮರುದಿನ ಮುಂಜಾನೆಯ ವರೆಗೆ ಒಂದು ಮಾತನ್ನೂ ಆಡಲಿಲ್ಲ.

## ೭

ಶ್ರೀನಿವಾಸನ ಆತುರಕ್ಕೆ ಸರಿಯಾಗಿ ಬಸ್ಸು ದಾರಿಯಲ್ಲಿ ನಿಂತುಹೋಗಿ ಸಾಯಂಕಾಲ ಆತ ಮನೆ ತಲಪಬೇಕಾದರೆ ಎಂಟು ಗಂಟೆಯಾಯಿತು. ಐದು ಗಂಟೆಗೆ ಭಾಗಮ್ಮ ಪುರಾಣಕ್ಕೆಂದು ಹೋದವಳು ಏಳೂವರೆ ವರೆಗೆ ಬಂದಿರಲಿಲ್ಲವಾದ್ದರಿಂದ ಕಾವೇರಿಗೆ ಆ ಎರಡೂವರೆ ಗಂಟೆ ಕಾಲವನ್ನು ನೂಕುವುದು ಕಷ್ಟವಾಗಿ ಹೋಗಿತ್ತು. ಶಾಂತಾ ಚಿಟ್ಟುವನ್ನು ಕರೆದು ಅವಳ ಹತ್ತಿರ ಬಿಟ್ಟುಹೋಗಿದ್ದಳು. ಆದರೆ ಚಿಟ್ಟುವಿನ ಕೂಡ ಆಡುವಾಗಲೂ ಮನಸ್ಸು ಹೊಯ್ದಾಡುತ್ತಿತ್ತು. ಇನ್ನೇನು, ಯಾವ ಕ್ಷಣಕ್ಕೂ ಬರಬಹುದು, ಎಂಗು ಬೀದಿಯಲ್ಲಿ ಪ್ರತಿಯೊಂದು ಹೆಜ್ಜೆಯ ಸದ್ದಿಗೂ ಕಿವಿಗೊಟ್ಟು, ಕಾತರಳಾಗಿ, ಕಣ್ಣು ಕೊರಳಿಸಿ ನಿರಾಶಳಾಗುತ್ತಿದ್ದಳು. ಬಾರದೆ ಇದ್ದರೆ? ಎಂದುಕೊಳ್ಳುವಳು. ಬಾರದೆ ಏನು? ಖಂಡಿತವಾಗಿ ಬರುತ್ತೇನೆ ಎಂದು ಬರೆದಿರಲಿಲ್ಲವೆ? ಆದರೂ ಅನುಮಾನ. ಆ ಅನುಮಾನವನ್ನು ಹೋಗಲಾಡಿಸಲೆಂದು ಒಂದೆರಡು ಸಲ ತನ್ನ ಎರಡು ಬೆರಳುಗಳನ್ನೂ ಚಿಟ್ಟುವಿನ ಕಣ್ಣೆದುರು ಹಿಡಿದು ಒಂದನ್ನು ಮುಟ್ಟು ಎನ್ನುವಳು. ಒಂದು ಸಲ ಬರುವನೆಂದಾಯಿತು, ಇನ್ನೊಂದು ಸಲ ಇಲ್ಲ ಎಂದಾಯಿತು. ಇಲ್ಲ ಎಂದರೆ ಸಮಾಧಾನವೆ? ಆದ್ದರಿಂದ ಬರುವನು ಎಂದು ಇನ್ನೊಂದು ಸಲವಾಗುವ ತನಕವೂ ಈ 'ಶಕುನ'ವಾಯಿತು. ಕೊನೆಗೆ ಮುಚ್ಚಂಜೆಯಾದಾಗ ಚಿಟ್ಟುವನ್ನು ಮನೆಗೆ ಕರೆದೊಯ್ಯಬೇಕೆಂದು ಭಾಗಮ್ಮನಿಗಾಗಿ ಕಾದಳು. ಕಾಲ ನಿಧಾನವಾಗಿ—ಬಹು ನಿಧಾನವಾಗಿ ಸರಿಯುತ್ತಿತ್ತು. ಕೊನೆಗೆ ಶ್ರೀನಿವಾಸನ ಹೆಜ್ಜೆ ಕೇಳಿಸಿತು. ಆ ಹೆಜ್ಜೆಯ ಸದ್ದು ಪರಿಚಿತವಾಗಿದ್ದಂತೆ ಕಾವೇರಿಗೆ ಭಾಸವಾಯಿತು. ಇಣಿಕಿ ನೋಡುತ್ತಾಳೆ—ಶ್ರೀನಿವಾಸ ನಿಜವಾಗಿಯೂ ಬಂದಿದ್ದ!

ಬರುವನೆಂದು ಕ್ಷಣಕ್ಷಣಕ್ಕೂ ಹಾತೊರೆಯುತ್ತಿದ್ದ ಕಾವೇರಿಗೆ ಶ್ರೀನಿವಾಸನನ್ನು ನೋಡಿದಾಕ್ಷಣ ಉಸಿರೆ ನಿಂತಂತಾಯಿತು. ಆದರೆ, ಅದೇನು ಶಾಲೀನತೆಯೊ, ಸ್ತ್ರೀಸಹಜವಾದ ನಾಚಿಕೆಯೊ—ಆಕೆಗೆ ಅಲ್ಲಿಯೆ ನಿಲ್ಲಲಾಗಲಿಲ್ಲ. ಗಂಡ ಹೆಂಡಿರಾದರೇನು? ಬಹುಕಾಲದನಂತರ ಭೆಟ್ಟಿಯಾದಾಗ

ಯಾವುದೋ ಒಂದು ಬಗೆಯ ಸಂಕೋಚ ಮನಸ್ಸನ್ನಾವರಿಸುತ್ತದೆ ಎಂದು ಕಾಣುತ್ತದೆ. ಇನ್ನೊಬ್ಬ ಹಿರಿಯರು ಮನೆಯಲ್ಲಿದ್ದರಂತೂ ಆ ಸಂಕೋಚ ಕಳಚಲಿಕ್ಕೆ ಒಂದೆರಡು ಗಂಟೆ ಕಾಲವಾದರೂ ಬೇಕಾದೀತು. ಶ್ರೀನಿವಾಸ ಕಾವೇರಿಯರಿಗೂ ಹಾಗೆಯೆ ಆಯಿತು. ಆತ ಒಂದು ಕೈಕಾಲು ಮೋರೆ ತೊಳೆದುಕೊಂಡು, ತಾಯಿಯೆದುರು ಕುಳಿತು ಬಿಟ್ಟ—ಇದು ಮಾತನಾಡುತ್ತಿರುವಾಗೆಲ್ಲ ಕಾವೇರಿ ಅಲ್ಲಿಯೆ ಬಾಗಿಲ ಹಿಂದೆ ಇರುತ್ತಿದ್ದಳೆ ಹೊರತು ಮುಂದೆ ಬರಲಿಲ್ಲ. ಶ್ರೀನಿವಾಸನಿಗಾದರೂ ಆಕೆ ಅಲ್ಲಿಯೆ ಸಮೀಪದಲ್ಲಿದ್ದುಕೊಂಡು ತಾವು ಆಡುತ್ತಿರುವುದೆಲ್ಲವನ್ನು ಕೇಳುತ್ತಿದ್ದಳೆಂಬುದು ತಿಳಿದಿತ್ತು ವಿನಹ ಆಕೆ ಮುಂದೆ ಬರುತ್ತಿಲ್ಲವೆಂಬ ಕೊರಗೂ ಆಗಾಗ ಮನಸ್ಸಿಗೆ ಗೋಚರವಾಗುತ್ತಿತ್ತು. ನಡ ನಡುವೆ ಭಾಗವ್ವ ಮಾತ್ರ ಎಲ್ಲಿಲ್ಲದ ಸೌಹಾರ್ದದಿಂದ ಕಾವೇರಿಯನ್ನು ಕಂಡು ಅಥವಾ ಅಡಿಗೆ ವಿಚಾರದಲ್ಲಿ ಸೂಚನೆ ಕೊಡುತ್ತಿದ್ದಳು. ಈ ಸೋಗಿನ ಸೌಹಾರ್ದವನ್ನು ನೆನೆದಾಗ ಕಾವೇರಿಯ ಮನಃಸ್ಥಿತಿ ವಿಚಿತ್ರವಾಗಿರುತ್ತಿತ್ತು. ಆದರೆ ಶ್ರೀನಿವಾಸನಿಂದ ಸೂರೆಗೊಂಡ ಮನಸ್ಸು ಬೇರೆ ಯಾವುದನ್ನೂ ಯೋಚಿಸುವ ಸ್ಥಿತಿಯಲ್ಲಿರಲಿಲ್ಲ.

ತಾನು ಹೊರಡುವುದು ಸೋಮವಾರ ಮಧ್ಯಾಹ್ನವೆಂದೂ, ಹೊರಡುವಾಗ ಕಾವೇರಿಯೂ ತನ್ನ ಜತೆಯಲ್ಲಿ ಹೊರಡುವುದೆಂದೂ ಶ್ರೀನಿವಾಸ ತನ್ನ ಮಟ್ಟಿಗೆ ನಿಶ್ಚಯಿಸಿದ್ದರೂ ಅದರ ಪ್ರಸ್ತಾವವನ್ನು ತಾಯಿಯೆದುರು ಎತ್ತುವುದು ಹೇಗೆ? ಆಕೆ ಏನೆನ್ನುವಳೊ, ಎಂದು ಶ್ರೀನಿವಾಸ ಯೋಚಿಸುತ್ತಲೆ ಇದ್ದ. ಊಟಕ್ಕೆ ಕುಳಿತಾಗ ಸುತ್ತುಸುತ್ತಾಗಿ ಮಾತನ್ನು ಅಲ್ಲಿಗೆ ಸಾಗಿಸುವುದೆಂದು ಅಂದುಕೊಂಡಿದ್ದ. ಬಿಸಿಬಿಸಿಯಾದ ರೊಟ್ಟಿ ಎಲೆಗೆ ಬಂದಾಗ ಬೇಕಾದ ಸಂದರ್ಭ ಸಿಕ್ಕಿತೆಂದು ಶ್ರೀನಿವಾಸ ಮೊದಲುಮಾಡಿದ:

"ಇಂಥ ಊಟವನ್ನು ಮನೆಯಲ್ಲಿಯೆ ಮಾಡಬೇಕು, ಅವ್ವ. ಆ ಹೋಟಲಿನವ ಹಾಕುವುದನ್ನು ನೆನೆದರೆ—"

"ಯಾಕೆ? ಸರಿಯಾಗಿ ಊಟ ಹಾಕುವುದಿಲ್ಲವೆ?"

"ಆಯಿತು. ಅವನಿಗೆ ಬರುವ ದುಡ್ಡು ಬಂದರೆ ಆಯಿತು. ನಮಗೆಲ್ಲ ಸರಿಯಾಗಿ ಊಟ ದೊರಕಲಿ ಅಂತ ಆತ ಹೋಟಲು ಇಟ್ಟಿದ್ದಾನೆಯೆ?"

"ಏನಾದರೂ ಊಟಕ್ಕೆ ಅನಾನುಕೂಲ ಮಾಡಿಕೊಳ್ಳಬೇಡಪ್ಪಾ...."

ಇಷ್ಟೆಲ್ಲಾ ಮಾಡುವುದು, ದುಡಿಯುವುದು ಯಾತಕ್ಕೆ, ಸರಿಯಾಗಿ ಊಟ ಸಿಕ್ಕದಿದ್ದರೆ?"

"ಅವನ ಹೊರತು ನಮಗೆ ಗತಿಯಿಲ್ಲ. ಅಂದಮೇಲೆ ಅವನು ಹಾಕಿದ್ದನ್ನೆ ತಿನ್ನಬೇಕು...."

ಒಂದು ನಿಮಿಷ ಯೋಚಿಸಿ ಭಾಗಮ್ಮ ಕೇಳಿದಳು:

"ನಿನಗೆ ಇಲ್ಲಿಯೆ ವರ್ಗವಾಗುವುದಿಲ್ಲವೆ?"

ಬಾಗಿಲ ಹಿಂದೆ ನಿಂತಿದ್ದ ಕಾವೇರಿಗೆ ತಿಳಿಯದೆಯೆ ಕೆಂಡವನ್ನು ಮೆಟ್ಟಿದಂತಾಯಿತು. ಶ್ರೀನಿವಾಸ ಏನೆನ್ನುವನೊ ಎಂದು ಕಾತರಳಾದಳು. ಆದರೆ ಇನ್ಸ್ಪೆಕ್ಟರ ಅಧಿಕಾರದ ಅಂಕಿತಕ್ಕೆ ಒಳಗಾಗಿ ಕೆಲಸ ಮಾಡುವವರಿಗೆ ತಮಗೆ ಇಷ್ಟ ಬಂದಾಗ, ಬೇಕಿದ ಊರಿಗೆ ವರ್ಗವಾಗುವುದು ಎಷ್ಟು ಕಷ್ಟದ ಮಾತು ಎಂಬುದು ಕಾವೇರಿಗೆ ತಿಳಿದಿದ್ದರೆ ಆಕೆ ಕಾತರಳಾಗಬೇಕಿರಲಿಲ್ಲ ಆದರೆ ಆಕೆಗೆ ಅದೆಲ್ಲ ತಿಳಿಯುವುದು ಹೇಗೆ? ಶ್ರೀನಿವಾಸನೆಂದ:

"ಆಯಿತು ಇಷ್ಟು ದಿವಸ ಊರೂರು ತಿರುಗುವುದು ತಪ್ಪಿ ಒಂದೇ ಕಡೆಗೆ ಇರಲಿಕ್ಕಾದರೂ ಈಗ ಅನುಕೂಲವಾಗಿದೆ. ಅಷ್ಟೇ ಹೆಚ್ಚು. ಕೂಡಲೆ ನಮಗೆ ಬೇಕಾದಲ್ಲಿಗೆ ಕಳಿಸಿರಿ ಎಂದು ಕೇಳಲಿಕ್ಕಾಗುತ್ತದೆಯೆ?"

ಕಾವೇರಿ ನಿಟ್ಟುಸಿರೆಳೆದಳು

"ಅಲ್ಲಿ ನೀನು ಮನೆಯನ್ನು ನೋಡಿದ್ದೇನೆ ಎಂದು ಬರೆದಿದ್ದೆ, ಅಲ್ಲವೆ?"

"ಹೌದು. ಆದರೆ—"

"ಆದರೆ ಏನು ಮತ್ತೆ? ಕಾವೇರಿಯನ್ನು ಕರೆದುಕೊಂಡು ಹೋಗಿ ಬಿಡು—"

ತಾನು ಹೇಳಬೇಕೆಂದದ್ದು ತಾಯಿಯ ಬಾಯಿಂದಲೆ ಬಂದುದಕ್ಕೆ ಒಂದೆಡೆ ಸಮಾಧಾನವಾದರೆ, ಹಾಗೆ ಮಾತು ಹೊರಬಿದ್ದುದು ಪೂರ್ತಿಯಾಗಿ ಸ್ವಸಂತೋಷದಿಂದಲ್ಲವೆಂಬ ಸೂಚನೆಯೂ ಆ ದನಿಯಲ್ಲಿ ಇದ್ದಿತೆಂದು ಶ್ರೀನಿವಾಸನಿಗೆ ಭಾಸವಾಯಿತು. ಅಲ್ಲದೆ, ತಾನು ನಿಶ್ಚಯಿಸಿದ ಕಾರ್ಯಕ್ರಮ ಅದೇ ಬಗೆಯದಾಗಿದ್ದರೂ ಕೂಡಲೆ ಒಪ್ಪಿದರೆ ಆಕೆ ಏನೆಂದುಕೊಂಡಾ

ಳೆಂದೋ, ತಾನು ಸುತ್ತುಸುತ್ತಾಗಿ ಮಾತನಾಡುತ್ತಿರುವುದು ಬಯಲಿಗೆ ಬಂದೀತೆಂದೋ ಶ್ರೀನಿವಾಸ ಬೇಕೆಂತಲೆ ಅನುಮಾನವನ್ನೆತ್ತಿದ:

"ಮನೆಯನ್ನೇನೊ ಬಾಡಿಗೆಗೆ ಹಿಡಿದಿದ್ದೇನೆ. ಅವರೆ ಈಚೆಗೆ ಅಲ್ಲಿ ಎಲ್ಲವನ್ನೂ ಸರಿಯಾಗಿ ನಡಸಿಕೊಂಡು ಹೋಗಲಿಕ್ಕಾಗುತ್ತದೆಯೆ?"

ಶ್ರೀನಿವಾಸ ಹೀಗೆ ಯಾಕೆ ಮಾತನಾಡುತ್ತಿರಬಹುದೆಂಬ ದು ಕಾವೇರಿಗೆ ತಿಳಿದಿದ್ದರೆ ಆಕೆಗೆ ಸಂಕಟವಾಗುತ್ತಿರಲಿಲ್ಲ. ಆದರೆ ಅದು ತಿಳಿಯದಿದ್ದುದರಿಂದಲೆ—'ಇವನು ಯಾವಾಗಲೂ ಹೀಗೆಯೆ. ಅಷ್ಟು ಅನುಮಾನವಿದ್ದರೆ, ಕಾಗದದ ಉದ್ದಕ್ಕೂ ಏನೇನನ್ನೊ ಬರೆಯಬೇಕಾದದ್ದಾದರೂ ಯಾಕೆ? ಹಾಗೆ ಬರೆದು ಆಸೆ ಉಕ್ಕಿಸಿ, ಇಲ್ಲಿ ಹೀಗೆ ಮಾತನಾಡುತ್ತಿದ್ದಾರಲ್ಲ? ಏನೊ! ಸುಖವಾಗಿರುವುದು ತನ್ನ ಹಣೆಬರಹದಲ್ಲಿ ಬರೆದಿಲ್ಲವೆಂದು ಕಾಣುತ್ತದೆ' ಎಂದೂ ಅಂದುಕೊಂಡಿರಬೇಕು. ಅಷ್ಟು ವ್ಯಗ್ರವಾಯಿತು ಕಾವೇರಿಯ ಮನಸ್ಸು. ಭಾಗಮ್ಮ ಹೇಳಿದಳು:

"ನಡಸಿಕೊಂಡು ಹೋಗುವುದೇನು? ನಿನಗೊಂದು ಹೊತ್ತಿಗೆ ಸರಿಯಾಗಿ ಅಡಿಗೆ ಮಾಡಿ ಊಟಕ್ಕೆ ಹಾಕುವುದಕಾಗುವುದಿಲ್ಲವೆ?"

"ಅಷ್ಟಾದೀತು ಅನ್ನು. ಆದರೆ ನೀನೂ ಬಂದರೆ—ಅಂದರೆ ನೀನೂ ಬರುವಿ ಎಂದೆ ಮನೆ ತೆಗೆದುಕೊಂಡೆ"

ಕಾವೇರಿ ತೀರ ನಿರಾಶಳಾದಳು.

"ಅದು ಸಾಧ್ಯವಿಲ್ಲವಪ್ಪಾ....ಎಲ್ಲಿಂದೆಲ್ಲಿಗೆ ಸುಮ್ಮಸುಮ್ಮನೆ? ಎಷ್ಟು ಸಾರೆ ಹೇಳಿದ್ದೇನೆ. ನೀವು ಎಲ್ಲಿಗೆ ಬೇಕಾದಲ್ಲಿಗೆ ಹೋಗಿರಿ. ನಾನು ಮಾತ್ರ ಇರುವುದು ಇಲ್ಲಿಯೆ."

"ಹಾಗೆಂದರೆ ಹೇಗವ್ವ? ಇಷ್ಟು ದಿನ ಇದ್ದಿರಿ, ಸರಿಯಾಯಿತು ಬರುಬರುತ್ತ ನಿನ್ನ ಕೈಲಾದರೂ ಕೆಲಸ ಆಗಬೇಡವೆ?"

ಶ್ರೀನಿವಾಸ ನಿಜವಾಗಿಯೂ ಕಳಕಳಿಯಿಂದ ಮಾತನಾಡುತ್ತಿದ್ದ. ಆದರೆ ಆ ಮಾತಿನಿಂದಲೆ ಭಾಗಮ್ಮನ ಸಿಡುಕು ಹೊರಬಂದಿತು. ಸ್ವಲ್ಪ ಬಿಸಿಯಾಗಿಯೆ ಹೇಳಿದಳು:

"ನನ್ನ ಕೈಲಾಗುತ್ತದೆ, ಇಲ್ಲ, ಅದೆಲ್ಲ ಯಾಕೆ? ಅದನ್ನೆಲ್ಲ ಕಟ್ಟಿಕೊಂಡು ನಿಮಗೇನು?—"

"ನೀನು ಸುಮ್ಮನೆ ಸಿಟ್ಟುಮಾಡಿಕೊಳ್ಳುತ್ತಿ?—" ಎಂದು ತಡೆದ ಶ್ರೀನಿವಾಸ.

"ಹೌದಪ್ಪಾ, ಅದಕ್ಕೆ ನಾನು ಹೇಳುವುದು. ನನ್ನಷ್ಟಕ್ಕೆ ನಾನಿರುತ್ತೇನೆ."

"ಅಲ್ಲ, ಅಂಥಾದ್ದು ಆದದ್ದಾದರೂ ಏನು, ಹೀಗೆ ಮಾತನಾಡಲಿಕ್ಕೆ?"

"ಏನೂ ಇಲ್ಲ..."

"ಏನೂ ಇಲ್ಲ ಅಂದರೆ ನನಗೆ ತಿಳಿಯುವುದಿಲ್ಲ, ಅನ್ನುತ್ತೀಯಾ?"

"ತಿಳಿಯಬೇಕಾದದ್ದು ಏನೂ ಇಲ್ಲ, ಶೀನೂ—"

ಶ್ರೀನಿವಾಸ ಒಂದು ನಿಮಿಷ ಸುಮ್ಮನಾದ. ಆ ನೀರವತೆ ಕಾವೇರಿಯ ಹೃದಯವನ್ನು ನಡುಗಿಸಿತು. ಶ್ರೀನಿವಾಸ ಬಂದಾಗಿನಿಂದ ಈ ವರೆಗಿನ ಸೌಹಾರ್ದದ ವಾತಾವರಣ ನಿಧಾನವಾಗಿ ಮಾಯವಾಗತೊಡಗಿತ್ತು. ಅತ್ತಿಗೆ ಇಷ್ಟೇನನ್ನಾದರೂ ಊಹಿಸುವಳೆಂದು ಆಕೆಗೆ ಮನದಟ್ಟಾಗತೊಡಗಿತು. ಇಲ್ಲಿಕಷ್ಟು ಶ್ರೀನಿವಾಸನ ಒಲವನ್ನು ಆಕೆ ತಿಳಿಯದವಳಾಗಿದ್ದಳು

"ಏನನ್ನೋ ನೀನು ಬಚ್ಚಿಡುತ್ತಿದ್ದೀ, ಅಣ್ಣ, ಹಾಗಿಲ್ಲದಿದ್ದರೆ ಮಾತು ಹೀಗೆ ಬರುತ್ತಿರಲೇ ಇಲ್ಲ...."

"ಇದು ನೋಡು, ಶೀನೂ ಆಕೆಗೆ ಇಲ್ಲಿ ಇರುವ ಮನಸ್ಸಿಲ್ಲ ಅವೂ ಸರಿಯೆ ಅನ್ನು. ಅದಕ್ಕೆ ಹೇಳಿದೆ, ಆಕೆಯನ್ನು ಕರೆದುಕೊಂಡು ಹೋಗು ಎಂದು."

"ಹೀಗೆ ಸಿಡುಕಿನಿಂದ ಹೇಳಿದರೆ ಹೋಗಲು ನನಗಾದರೂ ಹೇಗೆ ಮನಸ್ಸಾಗಬೇಕು?"

"ಸಿಡುಕಿಲ್ಲ, ಸಿಟ್ಟಿಲ್ಲ.... ಸಿಟ್ಟು ಯಾಕೆ ಮಾಡಬೇಕು ಹೇಳು? ಅಲ್ಲದೆ ನನ್ನ ಸಿಟ್ಟು ಕೇಳುವವರಾದರೂ ಯಾರು?"

"ಅದೆ, ಅದೆ ಮತ್ತೆ ಅದೇ ಮಾತು. ಈಗ ಆದದ್ದಾದರೂ ಏನು? ಅದನ್ನಾದರೂ ಹೇಳಿದರೆ—"

"ಏನಿಲ್ಲಪ್ಪಾ, ಸುಮ್ಮನೆ ಊಟ ಮಾಡು. ಸಿಟ್ಟು, ಅಂದೆ. ಅದಕ್ಕೆ ಹೇಳಿದೆ."

"ಹೌದು, ಸಿಟ್ಟು ಬರಲಿಕ್ಕೆ ಒಂದು ಕಾರಣವಂತೂ ಬೇಕಲ್ಲ?"

"ಸಿಟ್ಟಿಗೇನು, ಬೇಕಾದಾಗ ಸಿಟ್ಟು ಬಂದು ಬಿಡುತ್ತದೆ ಆಕೆಗಂತೂ. ಮೊನ್ನೆ ದಿನ ನಿನ್ನ ಕಾಗದದ ಸಲವಾಗಿ ನಾಲ್ಕು ಜನರೆದುರು ನನ್ನನ್ನು ಏನೂ ಉಳಿಸಲಿಲ್ಲ."

"ಯಾಕೆ, ಏನಾಯಿತು?"

"ಆಕೆಯನ್ನೆ ಕೇಳಿಕೊ. ಎಲ್ಲವನ್ನೂ ಹೇಳಬಹುದು."

"ಏನಾಯಿತು ಹೇಳಬಾರದೆ?"

ಶ್ರೀನಿವಾಸ ಊರಿನ ಮಾತುಕಥೆಯನ್ನು ನಿಲ್ಲಿಸಿದ. ಕಾವೇರಿಗೆ ಹೆದರಿಕೆಯಾಯಿತು; ದುಃಖವಾಯಿತು. ಇಷ್ಟು ದಿನಗಳನಂತರ ಬಂದ ತನ್ನ ಮಗನಿಗೆ ಮನಸ್ತಾಪವನ್ನು ಮಾಡುತ್ತಿದ್ದೇನೆ ಎಂಬ ಅರಿವಾದರೂ ತಾಯಿ ಎನಿಸಿಕೊಂಡ ಆಕೆಗೆ ಹೇಗೆ ಬರಲಿಲ್ಲ! ಎಂದು ವಿಚಿತ್ರವೆನಿಸಿತು.

"ನಿನ್ನ ಕಾಗದವನ್ನು ನಾನು ತೆರೆದು ಓದಿಸಿದೆನಪ್ಪ. ಮೇಲೆ ಅದು ಆಕೆಗೆ ಸಿಕ್ಕದ ಹಾಗೆ ಬಚ್ಚಿಟ್ಟೆ, ಅಂದೆ. ಅದ. ನಾನು ಮನೆಯಲ್ಲಿ ಒಬ್ಬಳೆ ಇದ್ದಾಗ ಕೇಳಿದ್ದರೆ ನನಗೇನೂ ಅನಿಸುತ್ತಿರಲಿಲ್ಲ. ತಂಗಮ್ಮನೆದುರು, ಲಕ್ಷ್ಮೀಬಾಯಿ ಎಲ್ಲರೂ ಇದ್ದಾಗ ಹಟ ಹಿಡಿದು ಅಂದಳು" ಎಂದು ಒಂದೆರಡು ಸುಳ್ಳು ಸೇರಿಸಿ ಕಥೆ ಬೆಳೆಯಿಸಿದಳು.

ಶ್ರೀನಿವಾಸ ಸುಮ್ಮನಾದ. ತಾನು ಹಾಕಿದ ಕಾಗದ ಸರಿಯಾದ ವೇಳೆಗೆ ತನಗೆ ತಲುಪುವುದಿಲ್ಲವೆಂದು ಕಾವೇರಿ ಹಲವಾರು ಬಾರಿ ಬರೆದಿದ್ದಳಾದ್ದರಿಂದ ತನ್ನ ಪತ್ರಗಳ ವಿಚಾರದಲ್ಲಿ ಏನಾದರೂ ಮೋಸ ನಡೆಯುತ್ತಿರಬಹುದೆಂದು ಭಾವಿಸಿ, ಆಮೇಲೆ ಕಾವೇರಿಯನ್ನೆ ಕೇಳಿದರಾಯಿತು ಎಂದುಕೊಂಡ ಶ್ರೀನಿವಾಸನ ನೀರವತೆಯನ್ನು ಭಾಗಮ್ಮನಿಗೂ ತಡೆಯಲಾಗಲಿಲ್ಲ. ಅಂತೆಯೆ ಹೇಳಿದಳು:

"ಆಕೆಯನ್ನೇನೂ ಕೇಳಬೇಡ, ಶೀನೂ. ಏನೊ, ಸಿಟ್ಟಿನಲ್ಲಿ ಅಂದಿರಬೇಕು. ಸಿಟ್ಟು ಅಂದೆ, ಅದಕ್ಕೆ ಹೇಳಿದೆ—" ಎಂದು ಮಾತು ಸಾವರಿಸಲೆಳಸಿದಳು.

"ಸುಮ್ಮಸುಮ್ಮನೆ ಸಿಟ್ಟು ಯಾಕೆ ಬರಬೇಕು? ಅಲ್ಲದೆ, ಹೀಗಾದರೆ ನಡೆಯುವುದಾದರೂ ಹೇಗೆ?"

" ನಡೆಯುವುದೇನು ಅದರಲ್ಲಿ? ಅದಕ್ಕೆಯೆ ಹೇಳಿದೆನಲ್ಲ. ಕರೆದು ಕೊಂಡುಹೋಗು ಎಂದು ನಿನಗೂ ಅನುಕೂಲ...."

" ಅನುಕೂಲವೇನೊ ಆಯಿತು. ಆದರೆ—" ಎಂದು ಅರ್ಧಕ್ಕೆ ಮಾತು ನಿಲ್ಲಿಸಿ ಊಟ ಮುಗಿಸಿದ. ಆ ಒಂದು ಅರ್ಧ ಮುಗಿಸಿದ ಮಾತಿನಿಂದ ಕಾವೇರಿಯ ಅನುಮಾನ ಮಾತ್ರ ಬೆಳೆಯಿತು. ಕಾಗದದ ವಿಚಾರವನ್ನು ಅಷ್ಟು ಹೇಳಿದ್ದರೂ ಶ್ರೀನಿವಾಸ ಅದನ್ನು ಮುಂದರಿಸದೆ ಸುಮ್ಮನಾಗಿದ್ದುದನ್ನು ನೆನೆದು ಸಮಾಧಾನವೇನೊ ಆಯಿತು. ಆ ವಿಷಯ ವನ್ನು ಮತ್ತೆ ಅತ ಎತ್ತುವನೆಂಬುದೂ ಖಂಡಿತವಾಗಿತ್ತು. ಹೀಗಾಗಿ ಒಟ್ಟಿನಲ್ಲಿ ಹೊರಡುವುದು ಏನಾಗುವುದೊ, ಎಂದು ಆಸೆ-ನಿರಾಶೆಗಳ ನಡುವೆ ತೂಗಾ ಡುವ ಮನಃಸ್ಥಿತಿಯಲ್ಲಿಯೆ ಇದ್ದಳು—ರಾತ್ರಿ ಶ್ರೀನಿವಾಸನ ಹತ್ತಿರ ಬರುವ ತನಕ.

ಶ್ರೀನಿವಾಸ ಮೊದಲುಮಾಡಿದ:

" ಏನು? ಹೇಗಿದೆ?"

" ಹೇಗೇನು?—" ಎಂದು ಕಾವೇರಿ ಅನುಮಾನಿಸುತ್ತಲೆ ಕೇಳಿ ದಳು. ಆದರೆ ತಾವಿಬ್ಬರೆ ಆತ್ಮೀಯವಾಗಿ ಮಾತನಾಡಬಹುದಾದ್ದರಿಂದ ಊಟದ ವೇಳೆಯಲ್ಲಿಯ ಹೆದರಿಕೆಯಾಗಲಿ, ಅದರನಂತರದಲ್ಲಿಯ ಅನು ಮಾನವಾಗಲಿ ಆಗ ಆಕೆಯ ಮನಸ್ಸಿನ ಮೇಲೊಂದು ಭಾರವಾಗಿ ನಿಂತಿರಲಿಲ್ಲ.

" ಹೇಗಿದೆ. ಅಂದರೆ, ಹೇಗಿದ್ದೀ ಅಂತ—"

ಕಾವೇರಿ ಸುಮ್ಮನಾಗಿಯೆ ಉಳಿದಳು.

" ಅದೇನು, ಈ ಸಲ ಇಷ್ಟು ಬಡವಾಗಿ ಹೋಗಿದ್ದೀಯೆ?"

" ಈ ಸಲವೇನು. ಯಾವಾಗಲೂ ಅಷ್ಟೆ."

" ಬಹಳ ತೊಂದರೆಯಾಯಿತೆ?"

" ಇಲ್ಲವಲ್ಲ!"

" ಒಟ್ಟಿನಲ್ಲಿ?"

" ಅದೇನು, ಇಷ್ಟು ನಡೆಯುತಕ್ಕದ್ದೆ! ಹೊಸದೇನು ಅದರಲ್ಲಿ?"

" ಎರಡು ತಿಂಗಳಾಯಿತು. ಏನು ಒದ್ದಾಡಿದೆ ಅಂತೀಯ, ನಾನು ಬರಬೇಕೆಂದು?"

"ಬರುತ್ತೇನೆ ಎಂದು ಬರೆದು ಬರಲಿಲ್ಲ"

"ಏನು ಮಾಡುವುದು? ಹೋದ ಸಲ ಕಾಗದ ಬರೆದಾಗಲಂತೂ ಇನ್ನೇನು, ಹೊರಟುಬಿಡುವವ. ಅಷ್ಟರಲ್ಲಿಯೆ ಏನೊ ಒಂದು ಕೆಲಸ ಬಂದು ಬಿಟ್ಟಿತು."

"ಈ ಸಲವಾದರೂ ಬರುತ್ತೀರೊ ಇಲ್ಲವೊ, ಅಂದುಕೊಂಡಿದ್ದೆ."

"ಯಾಕೆ? ಅಷ್ಟು ಅನುಮಾನವಾಗಿತ್ತೆ?"

"ಹುಂ. ಯಾರಿಗೆ ಗೊತ್ತು?"

"ಬರಸಿ ಏನು, ಕಾವಿ? ನನಗೇನೂ ಆತುರವಿಲ್ಲವೆ ನಿನ್ನನ್ನು ಕಾಣಲಿಕ್ಕೆ?" ಕಾವೇರಿ ಸುಮ್ಮನಾದಳು. ಶ್ರೀನಿವಾಸನೆಂದ:

"ನಾಳಿದ್ದು ಹೊರಡುವುದು, ನಿನ್ನ ಸಾಮಾನು ಎಲ್ಲಾ—"

"ಹೊರಡುವುದೆ?"

"ಯಾಕೆ? ಇಲ್ಲ ಎಂದುಕೊಂಡಿದ್ದೀಯಾ?"

"ಅಲ್ಲ. ನೀವೇ ಹೇಳಿದಿರಲ್ಲ—"

"ಹೊರಡುವಹಾಗಿಲ್ಲ ಎಂದು ಹೇಳಿದೆನೆ?"

"ಹಾಗಿಲ್ಲದಿದ್ದರೂ ಹೊರಡುವುದು ಖಂಡಿತ ಹೇಳಲಿಲ್ಲ!"

"ಕಾಗದದಲ್ಲಿ ಬರೆದಿಲ್ಲವೆ?"

"ಕಾಗದ ಆಯಿತು. ಆದರೆ ಊಟಕ್ಕೆ ಕುಳಿತಾಗ?

"ಊಟಕ್ಕೆ ಕುಳಿತಾಗ ಏನಾಯಿತು?"

"ಅನುಮಾನ ಮಾಡಿದಿರಲ್ಲ ಮತ್ತೆ?"

"ಏನೆಂದು?"

"ನನ್ನಿಂದ ನಡಸಿಕೊಂಡು ಹೋಗುವುದು ಆದೀತೆ ಎಂದು!"

"ಓ! ಅದೆ? ಅದು ಹಾಗೆಯೆ...."

"ಅಂದರೆ?"

"ಅಂದರೆ, ಅದು ಹಾಗೆ ಹೇಳತಕ್ಕದ್ದೆ!"

"ಸುಮ್ಮನೆ ಹೇಳಿದಿರಾ?"

"ಅಲ್ಲದೆ ಏನು?...."

ಕಾವೇರಿಯ ಸಂಶಯ ದೂರಾಯಿತು. ನಗುನಗುತ್ತ ಹೇಳಿದಳು:

"ಇದನ್ನು ಕೇಳಿ ನಾನು ಹೆದರಿಕೊಂಡೆ ಇದ್ದೆ...."

"ಹೆದರಿಕೆ ಯಾಕೆ?"

"ಈ ಸಲವೂ ಬಿಟ್ಟುಹೋದರೆ ಹೇಗೆ ಎಂದು."

"ಉಂಟೆ ಎಲ್ಲಾದರೂ?"

"ಅವರು ಬರುವುದು ಏನಾಯಿತು ಮತ್ತೆ?"

"ಕೇಳಲಿಲ್ಲವೆ ನೀನು?"

"ನಾನು ಯಾತಕ್ಕೆ ಕೇಳಲಿ ನಿಮ್ಮ ಮಾತು? ತಾಯಿ ಮಕ್ಕಳು ಮಾತನಾಡುತ್ತಿರುವಾಗ—" ಎಂದು ನಗು ಸೂಸಿದಳು.

"ಅಲ್ಲಿಯೆ ಇದ್ದೆಯಲ್ಲ ಮತ್ತೆ...."

"ಅಲ್ಲಿಯೆ ಇದ್ದರೂ ಮನಸ್ಸು ಇನ್ನೆಲ್ಲಿಯೊ ಇತ್ತು."

"ಎಲ್ಲಿ?"

"ಬೆಳಗಾಂವಿಯ ಮನೆಯಲ್ಲಿ!"

ಶ್ರೀನಿವಾಸನಿಗೂ ನಗು ತಡೆಯದಾಯಿತು. ಅವನಂದ:

"ಅಂತೂ ಬಹಳ ಜಾಣೆಯಾಗಿದ್ದೀಯ ಇತ್ತೀಚೆ—"

"ಏನಾಗಿದ್ದೇನೊ, ನಿಮಗೇ ಗೊತ್ತು...."

"ಆಕೆಯೇನೂ ಬರುವ ಹಾಗೆ ಕಾಣುವುದಿಲ್ಲ."

"ಈ ಮನೆ, ಈ ಜನ, ಇವರೆಲ್ಲರನ್ನು ಬಿಟ್ಟು ಅವರು ಬರುವುದು ಸಾಧ್ಯವೆ ಇಲ್ಲ."

"ಆಕೆಯನ್ನು ಒಬ್ಬಳನ್ನೆ ಬಿಟ್ಟು ಹೋಗುವುದಕ್ಕೂ ನನಗೆ ಹೇಗೊ ಅನಿಸುತ್ತದೆ."

"ಬರುವುದಿಲ್ಲ ಎಂದರೆ ಏನು ಮಾಡುವುದು ಮತ್ತೆ?"

"ಅದಂತೂ ಆಯಿತಲ್ಲ ಆದರೂ—"

"ಅಲ್ಲದೆ, ಅಲ್ಲಿ ಬಂದರೂ ಮಾಡಿ-ನ್ಯೈಲಿಗೆ ಹೇಗೊ—"

ಶ್ರೀನಿವಾಸನ ವಿಚಾರ ಕಳೆದ ಒಂದೆರಡು ನಿಮಿಷಗಳಲ್ಲಿ ಇನ್ನೆಲ್ಲಿಯೊ ಸುಳಿದಾಡುತ್ತಿತ್ತು. ತಾಯಿಯ ಸಿಟ್ಟು ಜ್ಞಾಪಕಕ್ಕೆ ಬಂದಿತ್ತು.

"ಅಲ್ಲಾ, ಕಾಗದದ ಕತೆ ಏನೇನೊ ಹೇಳಿದಳಲ್ಲ? ಏನದು ಆ ಸಮಾಚಾರ?"

“ಹೇಳಿದರಲ್ಲ ಮತ್ತೆ—”

ನಿಜವಾದುದನ್ನು ಹೇಳಬಹುದು ಎಂಬ ಧೈರ್ಯ ಕಾವೇರಿಗೆ ಆಗಲೆ ಬಂದುಬಿಟ್ಟಿತ್ತು. ಈವರೆಗೆ ಆಡಿದ ಮಾತು, ಸರಸ-ಸಾನ್ನಿಧ್ಯ ಒಂದು ಬಗೆಯ ವಿಶ್ವಾಸವನ್ನು ಆಕೆಯ ಮನಸ್ಸಿನಲ್ಲಿ ಬೀರಿದ್ದುವು. ಅಂತೆಯೆ ಹಾಗೆ ಉತ್ತರ ಹೇಳಿದಳು.

“ಆಕೆ ಹೇಳಿದಳು, ಸರಿ. ಆದರೆ ಅದೆಲ್ಲ ನಿಜವೆ, ಅಂತ?”

“ನಾನು ಕಾಗದ ಬೇಡಿದ್ದು ನಿಜ. ಆದರೆ ಹತ್ತು ಜನರೆದುರು ಅವಮಾನ ಮಾಡಿದೆ ಎಂದು ಹೇಳಿದ್ದು ಸುಳ್ಳು....”

“ನಡೆದದ್ದಾದರೂ ಏನು?”

“ಕಾಗದ ಬಂದು ಆಗಲೆ ನಾಲ್ಕಾರು ದಿನವಾದರೂ ಆಗಿರಬೇಕು.”

“ಯಾವ ಕಾಗದ....?”

“ಕಳೆದ ವಾರ ನೀವು ಬರುತ್ತೇನೆ ಎಂದು ಬರೆದದ್ದು. ನನಗೆ ಅದು ಸಿಕ್ಕಿದ್ದು ಮೊನ್ನೆ ಮಾತ್ರ....”

“ಆಕೆಯ ಕಡೆಗೆ ಇತ್ತೆ ಕಾಗದ?”

“ಹೌದು. ಅದಕ್ಕೆಂದೆ ಬೇಡಿದೆ.”

“ನಿನಗೆ ಹೇಗೆ ಗೊತ್ತಾಯಿತು?”

ಕಾವೇರಿ ಸಾದ್ಯಂತವಾಗಿ ವಿವರಿಸಿದಳು. ಕೊನೆಗೆ ಶ್ರೀನಿವಾಸನೆಂದ:

“ಯಾಕೆ ಹೀಗೆ ನಡೆಯುತ್ತಿದ್ದಾಳೆಯೆ? ಗೊತ್ತಾಗಲಿಲ್ಲ.”

“ನೀವು ಬರೆದ ಎಲ್ಲ ಕಾಗದಗಳು ಹೀಗೆಯೆ ಆಗಿರಬೇಕು. ನೀವು ಬರೆದ ಕಾಗದ ಎಂದಿಗೂ ನನ್ನ ಕೈಗೆ ಸಿಕ್ಕಿರಲಿಲ್ಲವು....”

“ಅಂದರೆ? ಎಲ್ಲ ಕಾಗದ ಓದಿದ್ದಾರೆಯೆ?”

“ನಾನು ಅದಕ್ಕೆಯೆ ಎಷ್ಟೊ ಸಲ ಬರೆದೆ. ಏನಾದರೂ ಕಾಗದಗಳ ತುಂಬ ಹುಚ್ಚುಚ್ಚಾಗಿ ಬರೆಯ ಬೇಡಿರಿ, ಎಂದು. ಆದರೆ ನೀವೆಲ್ಲಿ ಕೇಳುತ್ತೀರಿ?”

“ಈಗೇನಾಯಿತು?” ಎಂದು ನಗು ಸೂಸಿದ ಶ್ರೀನಿವಾಸ.

“ಆಗುವುದೇನು? ಅದನ್ನೆಲ್ಲ ಇನ್ನೊಬ್ಬರೂ ಓದಬಹುದೆ?”

“ಅದು, ಓದುವವರಿಗೆ ತಿಳಿಯಬೇಕಾದ ವಿಷಯ!”

"ಅವರಿಗೆ ತಿಳಿಯದಿದ್ದರೆ ?"

"ಇನ್ನೊಬ್ಬರು ಹೀಗೆ ಎಂದುಕೊಂಡು, ನಾನು ನನಗೆ ಅನಿಸಿದ್ದನ್ನು ಬರೆಯುವುದು ನಿಲ್ಲಿಸಬೇಕಾಗಿತ್ತೆ ?"

"ಯಾಕೆ, ಹಾಗೆಲ್ಲ ಬರೆದರೆ ಮನಸ್ಸಿಗೆ ಸಮಾಧಾನವೆ ?"

"ನಿನಗಿಲ್ಲವೇನೊ !"

"ಅಂತೆಯೆ ಸುಮ್ಮನಿರುತ್ತಿದ್ದೆ. ಆದರೆ ಇನ್ನೊಬ್ಬರು ಓದಿರಬಹುದು ಎಂದಾಗ ಮಾತ್ರ ಶೀರಾ ನಾಚಿಕೆಯಾಗುತ್ತಿತ್ತು."

"ಯಾರು ಓದುತ್ತಿದ್ದರು ?"

"ಇವರಿಗಾಗಿ ಓದುತ್ತಿದ್ದವಳು, ಆ ಲಕ್ಷ್ಮೀಬಾಯಿ, ಆಕೆಯ ಮಗಳು."

"ಸರಿಯಾಯಿತಲ್ಲ ಮತ್ತೆ !"

ಎಂದು ಶ್ರೀನಿವಾಸ ನಕ್ಕ. ಅರೆನಿಮಿಷ ತಡೆದು ಕೇಳಿದ:

"ಮತ್ತೆ ಏನೇನು ನಡೆಯಿತು ?"

"ಏನು ನಡೆಯುವುದು ? ಹೀಗೆಯೆ. ನಿತ್ಯ ಏನಾದರೊಂದು ಇದ್ದದ್ದೆ"

ಎಂದು ಮುನ್ನಾದಿನ ಮಧ್ಯಾಹ್ನ ನಡೆದ ಬಳೆಗಳ ಪ್ರಕರಣವನ್ನು ವಿವರಿಸಿದಳು.

"ಅಂತೂ ನೀನೂ ಗಟ್ಟಿಯಾಗಿದ್ದೀಯಾ. ಅಲ್ಲಿಂದಲ್ಲಿಯೆ ಬಳೆ ತಂದು, ಅವರೆದುರು ಇಟ್ಟುಬಿಟ್ಟು, ಅವರೆಲ್ಲರ ಬಾಯಿಯನ್ನೆ ಮುಚ್ಚಿಸಿ ಬಿಟ್ಟೆಯಲ್ಲ !"

"ಹುಂ.... ಮತ್ತಿನ್ನೇನು ಮಾಡುವುದು ?"

"ನೀನು ಮಾಡಿದ್ದು ಒಳ್ಳೆಯದೆ ಆಯಿತು...."

"ನಾನು ಕಿಟ್ಟೂಗೆ ಆ ಬಳೆ ಕೊಡಬಾರದೆಂದೆ ನಿಮ್ಮ ತಾಯಿಯ ಹಟ."

"ಅಲ್ಲ, ನೀನಾದರೂ ಯಾಕೆ ಇಷ್ಟು ಹಟ ಹಿಡಿಯಬೇಕು ?"

"ಹಾಗಾದರೆ ಕೊಡಬೇಡ ಅನ್ನುತ್ತೀರಾ, ನೀವೂ ?"

"ಬೇಡ ಅನ್ನುವುದಿಲ್ಲ ಆದರೆ ಇದು ನೋಡು, ಕಾವೀ—"

ಆಕೆಯನ್ನು ಅಸಂತೋಷಪಡಿಸುವ ಮನಃಸ್ಥಿತಿಯಲ್ಲಿ ಶ್ರೀನಿವಾಸ

ನಿರಲಿಲ್ಲ. ಆದರೂ ಚಿನ್ನದ ಬಳೆಗಳ ಜೊತೆಯೊಂದನ್ನು ಕೊಡಬೇಕಾಗು ತ್ತದಲ್ಲ ಎಂದು ಯೋಚಿಸಿ ಹೇಳಿದ:

"ಸುಮ್ಮಸುಮ್ಮನೆ ಅಷ್ಟು ಚಿನ್ನ ಯಾರಿಗೊ ಕೊಟ್ಟುಬಿಡುವುದೆಂದರೆ, ನಿನಗೆ ಸರಿಯಾಗಿ ಕಾಣುತ್ತದೆಯೆ? ದಿನಮಾನ ಎಂಥದು? ಏನು ಕತೆ?"

"ಹಾಗೆನ್ನಲಿಕ್ಕೆ ಎಷ್ಟಾದೀತು....?"

"ಎಷ್ಟಿದೆ, ನೀನು ಮಾಡಿಸಿದ್ದು?"

"ಹೆಚ್ಚಾದರೆ ಅರ್ಧ ತೊಲೆ ಆದೀತು—ಅಷ್ಟೆ."

"ಅಂದರೇನು ಕಡಿಮೆಯಾಯಿತೆ! ಏನಿಲ್ಲವೆಂದರೂ ಐವತ್ತು ರೂಪಾಯಿ."

"ಆದರೆ ಎಂದಿನಿಂದ ಆಕೆಗೆ ಮಾತು ಕೊಟ್ಟಿದ್ದೇನೆ ಮಾಡಿಸಿಯೂ ಆಗಿದೆ. ನಿಮ್ಮನ್ನು ಕೇಳಿ ಕೊಡುತ್ತೇನೆ ಎಂದೂ ಹೇಳಿದೆ. ಇನ್ನು ಮೇಲೆ ಇಲ್ಲ ಅಂದರೆ ಸರಿಯಾಗುತ್ತದೆಯೆ?"

"ಇದರ ಬದಲು ಬೆಳ್ಳಿಯ ಕಾಲುಕಡಗ ಮಾಡಿಸಿಕೊಟ್ಟರೆ ಹೇಗೆ? ಸ್ವಲ್ಪದರಲ್ಲಿ ಆದೀತು?"

ಕಾವೇರಿಗೆ ನಿರಾಶೆಯಾಯಿತು ಆದರೂ ಶ್ರೀನಿವಾಸ ಹೇಳುವುದೂ ಸರಿಯೆನಿಸಿತು. ಆದರೆ ತಾವು ಹೊರಡುವ ಮೊದಲೆ ಕೊಡಬೇಕು! ಅದು ಹೇಗೆ ಸಾಧ್ಯ?

"ಆದರೆ ನಾವು ನಾಡಿದ್ದು ಹೊರಡುವುದಲ್ಲವೆ? ಅಷ್ಟರಲ್ಲಿ ಬೆಳ್ಳಿಯ ದನ್ನು ಮಾಡಿಸಿ ತರಲಿಕ್ಕಾಗುತ್ತದೆಯೆ?"

"ಆಗದೇನು? ನಾಳೆ ಬೆಳಗ್ಗೆ ನೋಡಿಕೊಂಡು ಬರುತ್ತೇನೆ. ಒಂದು ವೇಳೆ ಅಂಗಡಿಯಲ್ಲಿ ಮಾಡಿಟ್ಟವು ಸಿಕ್ಕಬಹುದು."

"ಹಾಗಾದರೆ ನಾಳೆ ಬೆಳಗ್ಗೆ ತೆಗೆದುಕೊಂಡು ಬಂದುಬಿಡಿರಿ. ತರುವಿರಾ?"

"ಹುಂ...."

"ಆಮೇಲೆ ಈ ಜೊತೆಯನ್ನೇನು ಮಾಡುವುದು?"

"ಈ ಜೊತೆಯನ್ನೆ?" ಎಂದು ಶ್ರೀನಿವಾಸ ನಕ್ಕು ಕೇಳಿದ. "ಈ ಜೊತೆ ಹಾಗೆಯೆ ಇರಲಿ, ನಿನ್ನ ಹತ್ತಿರ. ಇಂದಿಲ್ಲ ನಾಳೆ ಉಪಯೋಗ ವಾದೀತು. ಆಗುವುದಿಲ್ಲ ಎನ್ನುತ್ತೀಯಾ?"

ಕಾವೇರಿಗೆ ನಾಚಿಕೆಯೆನಿಸಿ ಸುಮ್ಮನಾದಳು. ಶ್ರೀನಿವಾಸನೆ ಈ ರೀತಿಯಾಗಿ ಕೇಳುತ್ತಿದ್ದಾನೆಂದಮೇಲೆ ಅವನ ಮಾತೇ ಸರಿ ಎಂಬ ವಿಶ್ವಾಸವೂ ಬಂದಿತು. ಆದ್ದರಿಂದ ಸಿದ್ಧವಾಗಿದ್ದ ಚಿನ್ನದ ಬಳೆಗಳು ತನ್ನ ಹತ್ತಿರವೆ ಉಳಿಯಲಿ ಎಂಬ ನಿರ್ಣಯವೂ ಆಯಿತು. ಮಾತು ಎಲ್ಲೆಲ್ಲಿಯೊ ಹರಿಯಿತು. ಶ್ರೀನಿವಾಸನ ಉತ್ಸಾಹ ಮಾತಿನಲ್ಲಿ ಕಡಿಮೆಯಾಗತೊಡಗಿದುದನ್ನು ನೆನೆದಾಗ ಕಾವೇರಿ ಅಂದುಕೊಂಡಳು. 'ಇಡಿಯ ಮಧ್ಯಾಹ್ನ ಬಸ್ಸಿನಲ್ಲಿ, ಬಿಸಿಲಲ್ಲಿ ಎಷ್ಟು ದಣಿವಾಗಿದೆಯೊ?' ಮತ್ತೆ ನಾಳೆ, ನಾಡಿದು, ನಿತ್ಯ ಇದ್ದೆ ಇದೆಯಲ್ಲ. ಕಾವೇರಿಯ ಹೃದಯ ಸಂತುಷ್ಟಿಯಿಂದ ಸೂಸಿತು. ಶ್ರೀನಿವಾಸ ಆಕೆಯ ಆ ಸಂತುಷ್ಟಿಗೊಂದು ಸಂಕೇತದಂತಿದ್ದ. ಅವನ ತೆಕ್ಕೆಯಲ್ಲಿಯೆ ಮಲಗಿ ಮೈಮರೆತು ಕಣ್ಣು ಮುಚ್ಚಿದಳು. ನಿದ್ರೆ ಯಾವಾಗ ಬಂದಿತೊ!

ಬೆಳಗಾಗಿ ಹೋಗಿದ್ದಾಗಲೂ ಶ್ರೀನಿವಾಸ ಮಲಗಿಯೆ ಇದ್ದ. ಅರ್ಧ ಎಚ್ಚರ ಅರ್ಧ ನಿದ್ರೆಯ ಸರಳ ಸಮಾಧಿಯ ಸ್ಥಿತಿಯಲ್ಲಿದ್ದ. ಯಾವಾಗಲೊ ಎದ್ದು ಹೋಗಿದ್ದ ಕಾವೇರಿಯ ದನಿ ಹೊರಗಿನಿಂದ ತೇಲಿಬರುತ್ತಿದ್ದಿತು. ಭಾಗಮ್ಮ ಹೇಳುತ್ತಿದ್ದಳು:

"ನೀನು ಬೇಡ. ನಾನೇ ಈಗ ಹೋಗಿಬರುತ್ತೇನೆ. ಶ್ರೀನಿವಾಸ ಎದ್ದ ಕೂಡಲೆ ಆತನಿಗೆ ಚಹ ಮಾಡಿಕೊಡುವಿಯಂತೆ" ಎಂದು ಹೊಳೆಗೆ ಹೊರಟಂತಿತ್ತು.

ಭಾಗಮ್ಮ ಬಾಗಿಲನ್ನು ದಾಟಿ ಹೋದ ಕೂಡಲೆ ಕಾವೇರಿ ಶ್ರೀನಿವಾಸ ಮಲಗಿದ ಕೋಣೆಗೆ ಬಂದಿದ್ದಳು. ರಾತ್ರಿ ಅಷ್ಟು ಹೊತ್ತು ಮಾತನಾಡಿ ಆಡಿ ನಿದ್ದೆಗೇಡಾಗಿದ್ದರೂ ಮುಂಜಾವಿನಲ್ಲಿ ಹಕ್ಕಿಗಿಂತಲೂ ಸಕ್ರಿಯವಾಗಿ ಉಲ್ಲಾಸದಿಂದ ಸಾಗಿದಾಗುತ್ತಿದ್ದವಂತಿತ್ತು. ಬೆಳಗಾಗ, ಹೊಳೆಗೆ ಹೋಗ ಬೇಡ, ತಾನೇ ಹೋಗುವೆನೆಂಬ ಅತ್ತೆಯ ಇಷ್ಟ ಕೆ ಬೇರೆ.... ಶ್ರೀನಿವಾಸ ಮಲಗಿಯೆ ಇದ್ದ. ಆದರೆ ಆಗಲೇ ಕಾಲು ಅಲುಗಾಡುತ್ತಿತ್ತು. ಎಚ್ಚರವಾಗಿರಬೇಕೆಂದುಕೊಂಡು ಕಾವೇರಿ ಕೇಳಿದಳು:

"ಚಹ ಮಾಡಲಿ?"

"ಅಂದರೆ? ಇನ್ನು ಮೇಲೆ ಮಾಡುವುದೆ?"

"ನೀವಿನ್ನೂ ಏಳಲೆ ಇಲ್ಲ. ಏಳುವ ಮೊದಲೆ ಮಾಡಿಡುವುದೆ?"

“ ಎದ್ದಮೇಲೆ ಚಹ ಕುಡಿಯುವುದೆ ? ”

“ ಹಾಗಾದರೆ, ನಿದ್ರೆಯಲ್ಲಿಯೆ ಕುಡಿಯುತ್ತೀರಾ ? ” ಎಂದು ತನ್ನ ಮಾತಿಗಾಗಿ ನಕ್ಕಳು.

“ ನಿದ್ರೆಯಲ್ಲಿ ಅಲ್ಲದಿದ್ದರೂ, ಕುಡಿದೇ ಏಳುವುದು ! ”

“ ಅಲ್ಲಿಯೂ ಹಾಗೆಯೆ ಮಾಡುತ್ತೀರಾ ? “

“ ಹೌದು !....” ಎಂದು ಶ್ರೀನಿವಾಸ ಸುಳ್ಳು ಹೇಳಿದ.

“ ಹೌದೆ ? ಯಾರವರು ನಿಮಗೆ ಅಲ್ಲಿ ಚಹ ಮಾಡಿ ತಂದು ಎಚ್ಚರ ಮಾಡುವವರು ? ”

“ ನೀನು ! ”

“ ಈಗಲಾದರೂ ಎಚ್ಚರಾಗಿದ್ದೀರಾ ? ಅಥವಾ ಕನಸು ಕಾಣುತ್ತಿದ್ದೀರಾ ? ”

“ ಕನಸು ಅಲ್ಲಿದ್ದಾಗ ! ಇಲ್ಲಿ ಬಂದಮೇಲೂ ಕನಸು ಯಾಕೆ ಕಾಣಬೇಕು ? ”

“ ಆಯಿತು. ನಿಮ್ಮ ಮಾತಂತೂ—”

“ ನನಗೆ ಮಾತು ಎಂದು ಹೇಳಿ ನೀನೆ ಮಾತನಾಡುತ್ತ ನಿಂತಿದ್ದೀಯಲ್ಲೆ ? ಚಹದಕಿಂತ ಚಹದ ಮಾತೆ ಜೋರಾಗಿದೆಯಲ್ಲ ? ”

“ ಈ ಮಾತೆ ? ಇಗೊ, ತಂದೇಬಿಟ್ಟೆ ! ”

ಎಂದವಳೆ ಕಾವೇರಿ ಅಡಿಗೆಮನೆಯ ಕಡೆ ಓಡಿದಳು.

ಒಂಬತ್ತೂವರೆಯ ಸುಮಾರಿಗೆ ಶ್ರೀನಿವಾಸ ಸ್ನಾನ ಉಪಹಾರಾದಿಗಳನ್ನು ಮುಗಿಸಿಕೊಂಡು ಊರಲ್ಲಿ ಅತ್ತಿತ್ತ ಸುತ್ತಾಡಿಕೊಂಡು ಬರೋಣವೆಂದು ಹೊರಟ. ಬರುವಾಗ ಪೇಟೆಯಲ್ಲಿ ಹೋಗಿಬರುವ ವಿಚಾರವೂ ಇದ್ದಿತಾದ್ದರಿಂದ ತಾಯಿಯನ್ನು ಕೇಳಿದ :

“ ಪೇಟೆಯಿಂದ ಏನಾದರೂ ಸಾಮಾನು ತರುವುದಿದೆಯೆ ? ”

“ ಏನೂ ತರಬೇಕಿಲ್ಲ ” ಎಂದು ಹೇಳಿ, ಭಾಗಮ್ಮ ಕೇಳಿದಳು :

“ ನಾಳೆ ನೀನು ಹೊರಡಲೇಬೇಕೆ ? ”

“ ಹೌದು, ರಜೆಯಿಲ್ಲ. ನಿನ್ನದೇನಾಯಿತು ? ”

“ ನನ್ನದೇನು, ಹೇಳಿದೆನಲ್ಲ—”

"ಹೇಳಿದ್ದಾಯಿತು. ಆದರೆ ನೀನೂ ಬಂದುಬಿಟ್ಟರೆ ಎಲ್ಲವೂ ಒಂದು ನಿಟ್ಟಾಗಿ ನಿಶ್ಚಿಂತೆಯಿಂದ ಇರಬಹುದು."

"ನಿಶ್ಚಿಂತೆಯೆನ್ನಲಿಕ್ಕೆ ನಾನಿಲ್ಲಿದ್ದರೂ ಏನಾಗಬೇಕಾಗಿದೆ? ಇದ್ದ ಮನೆ, ಗೊತ್ತಿನ ಜನ. ಇಲ್ಲಿಯೆ ಜನ್ಮ ಕಳೆದ ನನಗೆ ಯಾವ ತೊಂದರೆಯೂ ಆಗುವುದಿಲ್ಲ...."

"ಆದರೂ ಅದೇಕೊ ನನಗೆ ಮನಸ್ಸು ಒಪ್ಪುವುದಿಲ್ಲ."

ಶ್ರೀನಿವಾಸ ನಿಜವಾಗಿಯೂ ತನಗೆನಿಸಿದ್ದನ್ನು ಹೇಳುತ್ತಿದ್ದ. ತಾಯಿಯೊಬ್ಬಳನ್ನೆ ಆ ಮನೆಯಲ್ಲಿ ಇರಬಿಟ್ಟು ತಾವಿಬ್ಬರೂ ಹೊರಡುವುದರಲ್ಲಿ ಏನೊ ಒಂದು ಸಂಕೋಚವೆನಿಸುತ್ತಿತ್ತು.

"ಅದರಲ್ಲೇನು ಶ್ರೀನಿವಾಸಾ ಈಗಲಂತೂ ನೀವು ಹೊರಡಿರಿ. ನಾಲ್ಕಾರು ತಿಂಗಳು ನೋಡುವ. ಹಾಗೆ ನನಗೆ ಬಹಳ ತೊಂದರೆಯಾದರೆ ಕಾಗದ ಬರೆಯಿಸುತ್ತೇನೆ...."

"ಕಾಗದ ಏನು ಬಿಡು. ನಾನೀಗ ಹೋದರೆ ನಡುವೆ ಬಾರದೆ ಇರುತ್ತೇನೆಯೆ?"

"ಅದಕ್ಕೆ ನಾನು ಹೇಳುವುದು. ಈಗ ನೀವಷ್ಟೆ ಹೋಗಿರಿ. ಆಮೇಲೆ ನೋಡುವಾ...."

"ಹಾಗಾದರೆ ಪಾತ್ರೆಪರಡಿ ಎಲ್ಲ ನೋಡಿಕೊಳ್ಳಬೇಕಾಯಿತಲ್ಲ?"

"ನಾಳೆಯವರೆಗೆ ಇನ್ನೂ ಬೇಕಾದಷ್ಟಾದೀತು. ಮಧ್ಯಾಹ್ನ ಅಟ್ಟದ ಮೇಲಿನ ಪೆಟ್ಟಿಗೆಯಿಂದ ನಾನೆಲ್ಲ ಕಾವೇರಿಯ ಕಡೆಯಿಂದ ತೆಗೆಯಿಸುತ್ತೇನೆ...."

ಶ್ರೀನಿವಾಸ ಹೊರಡುವುದರಲ್ಲಿದ್ದ. ಭಾಗಮ್ಮ ಹೇಳಿದಳು: "ಪೇಟೆಯಲ್ಲಿ ಹೋದರೆ ಒಂದು ತೆಂಗು, ಒಂದಿಷ್ಟು ಸಕ್ಕರೆ ತೆಗೆದುಕೊಂಡು ಬಾ. ಜತೆಯಲ್ಲಿ ಒಯ್ಯಲಿಕ್ಕೆ ಏನಾದರೂ ಸಿಹಿ ಆದೀತು" ಎಂದು. ನಡುವಿನ ಬಾಗಿಲ ದಾಟುತ್ತಿರುವಾಗ ಕಾವೇರಿ ಬಂದು "ನಿನ್ನೆ ರಾತ್ರಿ ಹೇಳಿದ್ದು ನೆನಪಿದೆಯಲ್ಲವೆ" ಎಂದು, ಬೆಳ್ಳಿಯ ಕಡಗ ತರಬೇಕಾದುದನ್ನು ಮೌನ ಮಾತಿನಲ್ಲಿ ಜ್ಞಾಪಿಸಿದಳು.

೮

ಕಾವೇರಿ ಶ್ರೀನಿವಾಸರು ಬೆಳಗಾಂವಿಗೆ ತಲಪಿದಾಗ ಸೋಮವಾರ ಸಂಜೆಯಾಗಿತ್ತು. ಆದೆ ಕತ್ತಲಾಗಿ ದೀಪಗಳು ಮಿನುಗುತ್ತಿದ್ದವು. ಅನಿರೀಕ್ಷಿತವಾಗಿ ಬಸ್ ನಿಲ್ದಾಣಕ್ಕೆ ಗಂಗಾಧರ, ಕಾಮೇಶರಾಯ ಬಂದಿದ್ದರು.

"ಆದೇನು ? ಈ ಕಡೆ ಬಂದಿದ್ದಿರಿ ವಾಕಿಂಗಿಗೆ?" ಎಂದ ಶ್ರೀನಿವಾಸ.

"ವಾಕಿಂಗಾದರೆ ಈ ಕಡೆ ಯಾತಕ್ಕೆ ಬರೋಣ ? ಇಂದು ತಮ್ಮನ್ನು ಸ್ವಾಗತಿಸಲಿಕ್ಕೆಂದೆ ಬಂದಿದ್ದೇವೆ" ಎಂದ ಗಂಗಾಧರ.

"ಸ್ವಾಗತಿಸಲಿಕ್ಕೊ ಸಾಮಾನು ಹೊರಲಿಕ್ಕೊ ?" ಎಂದು ಶ್ರೀನಿವಾಸ ನಕ್ಕ.

"ಆಯಿತಪ್ಪಾ, ಬಂದದ್ದಕ್ಕೆ ಬೆನ್ನುಮೂಳೇನೆ ಮುರಿಯುವ ಹಾಗೆ ಕಾಣುತ್ತಾನೆ, ಮಹಾರಾಯ !" ಎಂದು ಕಾಮೇಶ ನಗೆಯಾಡಿದ.

ಮೇಲ್ಗಡೆಯಿಂದ ಸಾಮಾನುಗಳನ್ನು ಇಳಿಸಿಯಾದ ಮೇಲೆ ಒಂದು ಬದಿಯಲ್ಲಿ ಸುಮ್ಮನೆ ನಿಂತುಕೊಂಡಿದ್ದ ಕಾವೇರಿಗೆ ಶ್ರೀನಿವಾಸ ತಿಳಿಸಿ ಕೊಟ್ಟ.

"ಇದು ನೋಡಿದೆಯಾ ? ನಿನ್ನೆ ಹೇಳಿದ್ದೆನಲ್ಲ. ಆ ಮಹಾನುಭಾವರು ಇವರು."

"ಅಂತೂ ಏನೇನು ಹೇಳಿದ್ದೀಯಪ್ಪಾ ? ಇದೊಳ್ಳೆ ಚೆನ್ನಾಗಿದೆ, ನಮನ್ನು ಇಂಟ್ರೊಡ್ಯೂಸ ಮಾಡುವ ರೀತಿ !" ಎಂದ ಗಂಗಾಧರ.

"ಏನೊ ಬಸ್ಸಿನಲ್ಲಿ ಒದ್ದಾಡಿ ಹಣ್ಣಾಗಿ ಬರುತ್ತದೆ ಪ್ರಾಣಿ, ಏನಾದರೂ ಉಪಯೋಗ ಆಗೋಣ ಅಂತ ಬಂದರೆ ಮಹಾನುಭಾವರು ಅನ್ನುತ್ತಾನೆ. ಆಗಲಿ, ಆಗಲಿ—"

"ಸಾಕುಮಾಡಿರೊ. ಈಗೇನು ಮಾಡುವುದು ? ಈ ಸಾಮಾನು ಸಾಗಿಸಲಿಕ್ಕೆ ಗಾಡಿಯಂತೂ ಒಂದು ಬೇಕು. ಮುಂದಿನ ವಿಚಾರ ಆಮೇಲೆ—"

"ಮುಂದಿನ ವಿಚಾರವನ್ನೆ ಮೊದಲು ಮಾಡಿದರೆ ಅನುಕೂಲ. ಯಾಕಂದರೆ ಗಂಗಾಧರನ ಮನೆಯಲ್ಲಿ ಅಡಿಗೆ ಮಾಡಿಕೊಂಡು ದಾರಿ ಕಾಯುತ್ತಿರಬೇಕು."

"ಹೌದೆ!" ಶ್ರೀನಿವಾಸನಿಗೆ ಆಶ್ಚರ್ಯವೆನಿಸಿತು. ತಾನು ಹೊರಡುವಾಗ ಇಂಥ ಯಾವುದನ್ನೂ ಗಂಗಾಧರ ಹೇಳಿದ್ದಿಲ್ಲ. ಅದು ಯಾಕೊ ಇಂದು ಇಬ್ಬರೂ ಒಳ್ಳೆ ನಗೆಯಾಟದಲ್ಲಿದ್ದರು. ರಾಮೇಶನೆಂದ:

"ಆತ ಊಟಕ್ಕೆ ಕರೆಯುತ್ತಾನೆ, ಊಟಕ್ಕೆ. ತಿಳಿಯಿತೆ? ಇಷ್ಟು ಯಾತಕ್ಕೆ ಬೆಚ್ಚಿಬಿದ್ದ ಹಾಗೆ ಬಾಯಿ ತೆಗೆದಿದ್ದೀಯೊ?"

"ಹೌದಪ್ಪಾ, ಅದೆಲ್ಲಾ ಸರಿ ಆಯ್ತು. ತುತ್ತು ಹಾಕಿಯೆ ತೆರೆದ ಬಾಯಿ ಮುಚ್ಚುವೆ. ಆದರೆ ಗಂಗಾಧರನಲ್ಲಿಗೆ ಈ ಸಾಮಾನು ಕಟ್ಟಿಕೊಂಡು ಹೋಗುವುದೆ? ಅದಕ್ಕಿಂತ—"

ಶ್ರೀನಿವಾಸ ಮಾತು ಮುಗಿಸುವಷ್ಟರಲ್ಲಿ ಗಂಗಾಧರ ಇಬ್ಬರು ಗಾಡಿಯವರನ್ನು ಗೊತ್ತುಮಾಡಿಕೊಂಡು ಬಂದ ರಾಮೇಶನೆಂದ:

"ಒಂದರಲ್ಲಿ ನೀವು ಸವಾರಿ ಮಾಡಬೇಕು—"

"ಇನ್ನೊಂದರಲ್ಲಿ ರಾಮೇಶನೊಂದಿಗೆ ಮನೆಗೆ ನೇರವಾಗಿ ಸಾಮಾನು ಸವಾರಿ ಮಾಡುತ್ತದೆ. ಆಯಿತೆ?"

"ಅದೇನು, ನಾನು ಬರುವ ಮುಂಚೆಯೆ ಎಲ್ಲವನ್ನೂ ಗೊತ್ತುಮಾಡಿಕೊಂಡು ನಾಟಕ ಮಾಡಿದ ಹಾಗೆ ನಡಸಿದ್ದೀರಲ್ಲ?" ಎಂದ ಶ್ರೀನಿವಾಸ.

"ಅಂದರೇನು, ಕಸ ಕೂಡ ಗುಡಿಸದೆ ಇದ್ದ ಮನೆಗೆ ಹೋಗಿ ಇನ್ನು ಮೇಲೆ, ಪಾಪ, ಅವರಿಗೆ ಅಡಿಗೆ ಮಾಡು ಅನ್ನುತ್ತೀಯಾ?"

ಕಾವೇರಿ ಶ್ರೀನಿವಾಸನ ಗೆಳೆಯರ ಸರಸವನ್ನು ಸಂತೋಷದಿಂದ ಕೇಳುತ್ತಿದ್ದಳು. ಇದೇನು? ಊರು ಬೇರೆಯಾದಂತೆ ಈ ಜನಗಳೂ ಬೇರೆಯಾಗಿಯೆ ಇದ್ದಾರಲ್ಲ? ಇಂಥ ಸೌಹಾರ್ದದ ವಾತಾವರಣವನ್ನು ಕಾವೇರಿ ಎಂದೂ ಕಂಡಿರಲೆ ಇಲ್ಲವೆಂದೆ ಆಕೆಗೆ ಹಾಗೆ ತೋರಿರಬೇಕು.

"ಆಗಲಿ, ಮಹಾರಾಯಾ! ಈಗ ನನಗೆ ಏನು ಮಾಡು ಅನ್ನುತ್ತಿ ಹಾಗಾದರೆ"

"ಏನೂ ಇಲ್ಲ ಆ ಗಾಡಿಯಲ್ಲಿ ನೀವಿಬ್ಬರೂ ಕುಳಿತುಕೊಳ್ಳಿ, ಮನೆಯ ಬೀಗದ ಕೈ ನನ್ನ ಕಡೆಗೆ ಕೊಟ್ಟುಬಿಡಿ. ಗಂಗಾಧರ ನಿಮ್ಮ ಜತೆಗೆ ಬರುತ್ತಾನೆ. ಸಾಮಾನು ಇಳಿಸಿದವನೆ ನಾನೂ ಈಗ ಬಂದುಬಿಟ್ಟೆ."

"ಅಂತೂ ನೀನೂ ಅಲ್ಲಿಗೆ ಅನ್ನು ಇವತ್ತು?" ಎಂದು ಶ್ರೀನಿವಾಸ ನಕ್ಕ.

" ನಿನಗೇಕೊ ಅಷ್ಟು ಗಾಬರಿ ? ನಿನ್ನ ಸಾಮಾನು ಸಾಗಿಸಿದ್ದಕ್ಕೆ ಆತ ಕೂಲಿ ಕೊಡುತ್ತಾನೆ ! "

" ಆಯಿತು ಬಿಡು, ಯಾರು ಕೊಟ್ಟರೂ ಅಷ್ಟೆ ! "

" ಓಹೊ ! ಇಷ್ಟು ಸುಲಭವಾಗಿ ಪಾರಾಗಬೇಕೆನ್ನುತ್ತೀಯಾ ? ಆಗದು, ಆಗದು ಅಂದೆ ನಿಮ್ಮ ಸ್ವಂತದ ಒಳೆ ಆದರೂ ಹೊತ್ತಿಕೊಳ್ಳಲಿ ; ಆಮೇಲೆ ನೋಡೋಣ, ಕೂಲಿ ಯಾರು ಕೊಡ ತ್ತಾರೆ...."

ಗಂಗಾಧರನ ಮನೆಯಲ್ಲಿ ಊಟ ಮುಗಿಸಿಕೊಂಡು, ಆತ ಎಷ್ಟು ಒತ್ತಾಯಪಡಿಸಿದರೂ ಒಪ್ಪದೆ, ರಾತ್ರಿಯೆ ಕಾವೇರಿ ಶ್ರೀನಿವಾಸರು ತಮ್ಮ ಮನೆ ಸೇರಿದರು ಕ್ಯಾಂಟೋನ್‌ಮೆಂಟ್ ಕಡೆಯಲ್ಲಿ ಒಂದು ದೊಡ್ಡದಾದ ಕಂಪೌಂಡಿನಲ್ಲಿಯ ಒಂದು ಔಟ್‌ಹೌಸ್ ಶ್ರೀನಿವಾಸ ಬಾಡಿಗೆಗೆ ತೆಗೆದುಕೊಂಡ ಮನೆ. ರಾತ್ರಿಯಾಗಿದ್ದರಿಂದ ಕಾವೇರಿಗೆ ಮೊದಲೆ ಹೊಸದಾಗಿದ್ದ ಊರು ಇನ್ನೂ ಹೊಸತಾಗಿ, ವಿಚಿತ್ರವಾಗಿ ತೋರಿತು. ಕ್ಯಾಂಟೋನ್‌ಮೆಂಟ್ ಕಡೆಯ ದೊಡ್ಡದಾದ ಬೀದಿಗಳು, ಬೀದಿಯ ಎರಡೂ ಕಡೆಗಳಲ್ಲಿ ಎತ್ತರವಾಗಿ ಬೆಳೆದುನಿಂತ ದೊಡ್ಡ ಗಿಡಗಳು, ದೊಡ್ಡ ದೊಡ್ಡ ಗಿಡಗಳ ಮಧ್ಯದಲ್ಲಿಯೆ ಎಲ್ಲಿಯೊ ಎಂಬಂತಿದ್ದ ಮನೆಗಳು, ವಿಸ್ತಾರವಾದ ಕಂಪೌಂಡುಗಳನ್ನು ನೋಡಿ, ಬಯಲು ಸೀಮೆಯಲ್ಲಿ ಬೆಳೆದ ಕಾವೇರಿಗೆ ತಾವೆಲ್ಲಿಯೊ ಕಾಡಿನಲ್ಲಿ ಹೊರಟಂತೆ ಭಾಸವಾಯಿತು. ಅವರ ಮನೆ ಇದ್ದ ಆವಾರವೂ ಅಷ್ಟೆ. ಕಾಡಿನಲ್ಲಿಯಂತೆ ಜೀಂ....ಎಂಬ ಶಬ್ದ ಸಂತತವಾಗಿ ನಡೆದಿತ್ತು. ಒಂದು ಕ್ಷಣ ಕಾವೇರಿಗೆ ಹೆದರಿಕೆಯೂ ಅನಿಸಿತು, ಇಂಥ ಅಡವಿಯಲ್ಲಿ ಇರುವುದು ಹೇಗೆ ಎಂದು. ಅಂತೆಯೆ ಕೇಳಿದಳು ;

" ಇಲ್ಲಿ ಸುತ್ತಮುತ್ತ ಯಾರೂ ಇರುವುದಿಲ್ಲವೆ ? "

" ಆದೇನು ಹೀಗೆ ಕೇಳುತ್ತಿ ? ಇಲ್ಲಿಯೆ ಮನೆಗಳಿವೆಯಲ್ಲ "

" ಎಲ್ಲಿ ? ನನಗಂತೂ ಒಂದೂ ಕಾಣುವುದಿಲ್ಲ ! "

" ಈಗ ರಾತ್ರಿ ಎಷ್ಟಾಗಿದೆ ಗೊತ್ತೆ ? ನಾವು ಬರುವವರೆಂದು ಬೀದಿಯಲ್ಲಿಯ ಮನೆಯವರೆಲ್ಲರೂ ಎಚ್ಚರಾಗಿರಬೇಕಾಗಿತ್ತೆ ? "

" ಏನಾದರೂ, ಮನೆ ಒಂದರಿಂದೊಂದು ಬಹಳ ದೂರ ಎಂದು ಕಾಣುತ್ತದೆ."

"ಬಾಗಿಲುಕೋಟೆಯ 'ಕಿಲ್ಲೆ'ಯ ಹಾಗೆ ಮನೆ ಇಲ್ಲಿಯೂ ಯಾಕೆ ಇಲ್ಲ ಅನ್ನುತ್ತೀಯಾ ?"

"ನಿಮ್ಮ ಊರು ಅದು. ನನ್ನನ್ನೇನು ಕೇಳುತ್ತೀರಿ ?"

"ನನ್ನದಾಗಲಿ, ನಿನ್ನದಾಗಲಿ. ಇಲ್ಲಿ ಬಯಲಾಗಿದೆ; ಪ್ರಶಸ್ತವಾಗಿ ಗಾಳಿಯಾದರೂ ಬರುತ್ತದೆ. ಅಲ್ಲಿ, ಮನೆ ಕಟ್ಟಿಸಿದಾಗ ಒಳಗಿದ್ದ ಹವೆಯೆ ಇನ್ನೂವರೆಗೆ ಅಲ್ಲಿಯೆ ಇದೆ!"

"ಇಲ್ಲಿ ಏನಿದೆ ? ಒಟ್ಟಿನಲ್ಲಿ ಮೂರು ಕೋಣೆ!" ಎಂದು ಕಾವೇರಿ ಚುಚ್ಚಿದಳು.

"ಸಾಕಲ್ಲವೆ ಇಬ್ಬರಿಗೆ ?"

"ಮೂರನೆಯವರು ಯಾರಾದರೂ ಬಂದರೆ ?"

"ಇಲ್ಲಿ ಯಾರೂ ಬರುವುದಿಲ್ಲ! ನಾವಿಬ್ಬರೆ ಎಂದೆ ಇಲ್ಲಿ ಈ ಮನೆ ಹಿಡಿದಿದ್ದೇನೆ."

"ಏನು ಮನೆಯೊ...." ಎಂದು ಕಾವೇರಿ ಮೂಗು ಮುರಿದಿದ್ದಳು.

ಆದರೆ ಅದು ಬಂದ ರಾತ್ರಿ ಮಾತ್ರ. ಮರುದಿನ ಮುಂಜಾನೆ ಸುತ್ತಲಿನ ನಿಸರ್ಗ ಸಿರಿಯನ್ನು ನೋಡಿದಾಗ ಕಾವೇರಿ ಬೆರಗಾಗಿದ್ದಳು. ಅಂಥ ದೃಶ್ಯವನ್ನೆ ಆಕೆ ನೋಡಿರಲಿಲ್ಲ. ಬಾಗಿಲ ಹತ್ತಿರದಲ್ಲಿಯೆ ಉದ್ದನಾದ ಹೂಗಳ ರಾಶಿಯನ್ನೆ ನೆಲದ ಮೇಲೆ ಹರಡಿರುವ ಎತ್ತರವಾದ ಯಾವುದೊ ಗಿಡವೊಂದಿತ್ತು. ಅದರಾಚೆ, ಕೈದೋಟ ಬೀದಿಯ ವರೆಗೂ ಹಬ್ಬಿತ್ತು.

ತಂದ ಎಲ್ಲ ಸಾಮಾನುಗಳನ್ನು ಬೆಳಗಿನ ವೇಳೆ ಬಿಚ್ಚಿ 'ಮಧ್ಯಾಹ್ನ'ಕ್ಕೊಂದು ವ್ಯವಸ್ಥೆಯನ್ನು ಮಾಡುವುದರಲ್ಲಿಯೆ ವೇಳೆಯೆಲ್ಲ ಕಳೆಯಿತು. ಒಂಬತ್ತೂವರೆಯಾಗಿ ಹೋದಾಗ ಕಾವೇರಿ ಕೇಳಿದಳು :

"ನೀವಿನ್ನು ಹೊರಡುವವರೆ ?"

"ಎಲ್ಲಿಗೆ ?"

"ಆಫೀಸಿಗೆ ?"

"ಇಂದು ಆಫೀಸ್ ಇಲ್ಲ!"

"ಇಂದೂ ರಜೆ ತೆಗೆದುಕೊಂಡಿದ್ದೀರಾ ?"

"ಹೌದು. ನಿನ್ನನ್ನು ಇಲ್ಲಿಗೆ ಕರೆತಂದುದರ ಪ್ರೀತ್ಯರ್ಥವಾಗಿ ಇಂದು ರಜೆ!"

" ಆದಿರಲಿ, ಆದರೆ ಇಂದಿಗೆ ರಜೆ ಇಲ್ಲ. ನಿನ್ನೆಯೆ ಹೊರಡಬೇಕು ಎಂದು ಹೇಳಿದಿರಲ್ಲ ? "

" ಇಲ್ಲಿ ಬಂದಮೇಲೆ ಮನೆಯ ವ್ಯವಸ್ಥೆ ಬೇಡವೆ ? ಈಗ ನಾನು ಹೊರಟುಹೋಗಬೇಕಿದ್ದರೆ ನೀನೊಬ್ಬಳೆ ಏನು ಮಾಡುವ ಹಾಗಿದ್ದಿ ? "

ಶ್ರೀನಿವಾಸನ ಪೂರ್ವಾಲೋಚನೆಯನ್ನು ನೆನೆದು ಕಾವೇರಿಗೆ ಉತ್ಸಾಹ ವೆನಿಸಿತು. ಆದರೆ ಎಷ್ಟು ಪೂರ್ವಾಲೋಚನೆಯನ್ನು ಮಾಡಿ ಸಾಮಾನು ಗಳನ್ನು ಆತ ತಂದಿದ್ದರೂ ಮೂರು ನಾಲ್ಕು ಬಾರಿಯಾದರೂ ಶ್ರೀನಿವಾಸನಿಗೆ ಪೇಟೆಯ ವರೆಗೆ ಹೋಗಬೇಕಾಯಿತು. ಅಷ್ಟಾದರೂ ಮಧ್ಯಾಹ್ನಕ್ಕೆ ' ಊಟ ಆಯಿತು ' ಎನ್ನುವಷ್ಟರ ಮಟ್ಟಿಗಾಯಿತು. ಅತ್ತಿತ್ತ ಅಡ್ಡಾಡಿ, ಗಂಗಾಧರ ಕಾವೇರಿಯರನ್ನು ಆಡ್ಡಾಡಿಸಿ, ಸಂಜೆಯ ಹೊತ್ತಿಗೆ ಕಾವೇರಿಯ ' ಮನೆ ' ಪ್ರಾರಂಭವಾಯಿತು.

ಹೊಸ ಮನೆಗೆ ಬಂದ ಹದಿನೈದು ದಿನಗಳಲ್ಲಿಯೆ ಕಾವೇರಿ ತನ್ನ ಸುತ್ತಲಿನ ಹೊಸ ವಾತಾವರಣಕ್ಕೆ ಹೊಂದಿಕೊಂಡಿದ್ದಳು ಮೊದಮೊದಲು ಮನೆ ಚಿಕ್ಕದೆನಿಸಿದ್ದರೂ ಒಂದು ಕೋಣೆಯಲ್ಲಿ ಅಡಿಗೆ, ಇನ್ನೊಂದರಲ್ಲಿ ' ಇರುವುದು '. ಇದಕ್ಕೂ ಹೆಚ್ಚಿಗೆ ನಡುವಿನ ಕೋಣೆಯನ್ನು ಏನು ಮಾಡು ವುದು ಎನಿಸಿತ್ತು. ಅಡಿಗೆಮನೆಗಿಂತ ಹೊರಗಿನ ಕೋಣೆ ದೊಡ್ಡದಾಗಿತ್ತು. ಒಂದು ಬದಿಯಲ್ಲಿ ದೊಡ್ಡದಾದ ಕಿಟಕಿ. ಆ ಕಿಟಕಿಯ ಹತ್ತಿರವೆ ಶ್ರೀನಿ ವಾಸ ತನ್ನ ಕಾಟನ್ನು ಹಾಕಿದ್ದರಿಂದ ಅದರ ಮೇಲಿನ ಹಾಸಿಗೆಗೆ ಆತು ಕೊಂಡು ಕುಳಿತರೂ ಎದುರಿನ ತೋಟ, ಬೀದಿಯಲ್ಲಿ ಹೋಗುವ ಜನ, ಗಾಡಿಗಳ ಓಡಾಟ, ಎಲ್ಲವೂ ಕಾಣುತ್ತಿದ್ದವು.

ಇಷ್ಟರಲ್ಲಿಯೆ ಕಾವೇರಿಯ ನಿತ್ಯದ ಕಾರ್ಯಕ್ರಮವೂ ನಿಯತ ಗೊಂಡಿತ್ತು. ಬೆಳಗಿನ ಹತ್ತು ಗಂಟೆಯ ವರೆಗೆ ಅಡಿಗೆಯ ಅವಸರದಲ್ಲಿ ಕಳೆಯುತ್ತಿತ್ತು. ಹತ್ತು ಗಂಟೆಗೆ ಶ್ರೀನಿವಾಸ ಹೊರಟುಹೋದನೆಂದರೆ ಸಿಧಾನವಾಗಿ ಎಲ್ಲ ಕೆಲಸಗಳನ್ನು ಪೂರೈಸಿಕೊಂಡು, ಊಟ ಮಾಡಿ ಕಾವೇರಿ ಕಾಟಿನ ಮೇಲೆ ಕುಳಿತು ಬೀದಿಯಲ್ಲಿಯ ದೃಶ್ಯವನ್ನು ನೋಡುವುದರಲ್ಲಿ ತೊಡಗುತ್ತಿದ್ದಳು. ಬೇಸರ ಕಳೆಯಲೆಂದು ಶ್ರೀನಿವಾಸ ನಾಲ್ಕಾರು ಕನ್ನಡ ಕಾದಂಬರಿಗಳನ್ನು ಕಾವೇರಿಗೆ ತಂದುಕೊಟ್ಟಿದ್ದ. ಆದರೆ ಓದುವ ಅಭ್ಯಾಸ

ವಿಲ್ಲದ ಆಕೆ ಒಂದೊಂದು ಸಲ ಓದುತ್ತಿರುವಾಗಲೆ ನಿದ್ರೆಹೋಗಿರುತ್ತಿದ್ದಳು. ಒಂದೊಂದು ಸಲ, ಮಧ್ಯಾಹ್ನ ತೀರ ಬೇಸರವೆನಿಸುತ್ತಿತ್ತು. ಮುಂಜಾನೆ ಹೋದ ಶ್ರೀನಿವಾಸ ಸಾಯಂಕಾಲ ಆರೂವರೆಗೆ ಬರುವವ. ಅದೊಂದೆ ಕೊರತೆ ಎನಿಸುತ್ತಿತ್ತು ಕಾವೇರಿಗೆ. ಆದರೆ ಅದಕ್ಕೆ ಬೇರೆ ಉಪಾಯವಿರಲಿಲ್ಲ. ಹಾಗೂ ಹೀಗೂ ಹೊತ್ತು ಸರಿಯುತ್ತಿತ್ತು. ಏನಿದ್ದರೂ ಇಲ್ಲಿ ತನ್ನನ್ನು ಕೇಳುವವರು ಇನ್ನೊಬ್ಬರಿಲ್ಲ ಎನ್ನುವುದು ಕಾವೇರಿಗೆ ಎಲ್ಲಿಲ್ಲದ ಸಂತೋಷವನ್ನುಂಟುಮಾಡಿತ್ತು. ಈ ಹೊಸ ಬಾಳಿನ ಹೊಸ ಸ್ವಾತಂತ್ರ್ಯದಲ್ಲಿ ಬದುಕೆ ಬೇರೆಯಾದ ಬಣ್ಣವನ್ನು ತೊಟ್ಟಂತಿತ್ತು. ಆಗೀಗ ತನ್ನ ಹಿಂದಿನ ದಿನಗಳು ಕಣ್ಣೆದುರು ನಿಲ್ಲುತ್ತಿದ್ದವು. ತಾನು ಇಷ್ಟು ಸುಖಿಯಾಗಿರಬಹುದೆಂಬ ಕಲ್ಪನೆಯೂ ಆಕೆಗಿರಲಿಲ್ಲ. ಬಾಗಿಲುಕೋಟೆಯಲ್ಲಿಯ ಎಂಟು ವರುಷಗಳ ಅನುಭವ ಎಲ್ಲಿಯದೊ ದೂರದ ಅನುಭವವಾಗಿ ಕಾಣತೊಡಗಿತ್ತು. ಅತ್ತೆ ಬಂದುಬಿಟ್ಟರೆ? ಎಂದು ಒಮ್ಮೊಮ್ಮೆ ಹೆದರಿಕೆಯಾಗುತ್ತಿತ್ತು. ಆದರೆ ಆಕೆ ಯಾತಕ್ಕೆ ಬಂದಾಳು? ಬಾರದಿದ್ದರೆಯೆ ಒಳಿತು, ಎಂದೂ ಅಂದುಕೊಳ್ಳುತ್ತಿದ್ದಳು. ಆದರೆ ಮರುಕ್ಷಣದಲ್ಲಿ ಎಂಥ ಸ್ವಾರ್ಥ ಇದು, ಎಂದೂ ಅಂದುಕೊಳ್ಳುತ್ತಿದ್ದಳು.

ಸಾಯಂಕಾಲ ಸಮೀಪಿಸಿದ ಹಾಗೆ ಎದುರಿನ ಕೈದೋಟದಲ್ಲಿ ಸುತ್ತಮುತ್ತಲಿನ ಚಿಕ್ಕ ಪುಟ್ಟ ಮಕ್ಕಳು ಆಡಲಿಕ್ಕೆಂದು ಬಂದು ಚೆಲ್ಲಾಟವಾಡುತ್ತಿದ್ದವು. ತಾವಾಗಿಯೆ ಬರಲಾರದ ಚಿಕ್ಕ ಮಕ್ಕಳನ್ನು ಸೇವಕಿಯರು ಕರೆದುಕೊಂಡು ಬಂದು ಹಸಿರು ಹಾಸಿಗೆಯ ಮೇಲೆ ಆಡಬಿಟ್ಟು ತಾವು ತಮ್ಮ ಹರಟೆಗೆ ತೊಡಗುತ್ತಿದ್ದರು. ಆ ಮಕ್ಕಳೆಲ್ಲ ಸಿರಿವಂತರವೇನೊ! ಮಕ್ಕಳು ಬಂದು ಆಡತೊಡಗಿದನಂತರವಂತೂ ಕಾವೇರಿಯ ಕಣ್ಣು ಅಲ್ಲಿಂದ ಕೀಳುತ್ತಲೆ ಇರಲಿಲ್ಲ. ವೇಳೆಯ ಪರಿವೆಯೂ ಉಳಿಯುತ್ತಿರಲಿಲ್ಲ. ದೂರದಲ್ಲಿಯ ಎತ್ತರವಾದ ಗಿಡಗಳೊಳಗಿಂದ ಸೂಸಿಬರುವ ಹೊನ್ನಬಣ್ಣ ಆ ಮುದ್ದುಮಕ್ಕಳ ಮುಖಗಳ ಮೇಲೆ ಬೆಳಗಿದಾಗ ಕಾವೇರಿ ನೈಮರೆಯುತ್ತಿದ್ದಳು. 'ಆ ಮಗು ಕಿಟ್ಟುವಿನಂತಿಲ್ಲವೆ?' ಅಂದುಕೊಳ್ಳುತ್ತಿದ್ದಳು. ದೇಹ ಕಾಟಿನ ಮೇಲೆ ಇರುತ್ತಿತ್ತು. ಮನಸ್ಸೆಲ್ಲವೂ ಆ ಮಕ್ಕಳೊಡನೆ ಕುಣಿದಾಡುತಿತ್ತು.

ನಿಧಾನವಾಗಿ ಮಬ್ಬುಗತ್ತಲು ಅವೇ ಗಿಡಗಳೊಳಗಿಂದ ಇಳಿದು ಬರುತ್ತಿತ್ತು. ಒಂದೊಂದಾಗಿ ಮಕ್ಕಳೂ ಹೊರಟುಹೋಗುತ್ತಿದ್ದವು. ಸುತ್ತ ಲಿನ ದೃಶ್ಯ ಮಸಕುಮಸಕಾಗಿ ಕೊನೆಯಲ್ಲಿ ಕತ್ತಲಲ್ಲಿ ಕರಗಿಹೋಗುತ್ತಿತ್ತು. ಒಂದೊಂದು ಸಲ ಅಷ್ಟರಲ್ಲಿಯೆ ಶ್ರೀನಿವಾಸ ಬಂದುಬಿಡುತ್ತಿದ್ದ 'ಇದೇನು ಹೀಗೆ ಸುಮ್ಮನೆ ಕುಳಿತುಬಿಟ್ಟಿದ್ದೀಯ?' ಎಂದು ಕೇಳುತ್ತಲೂ ಇದ್ದ. ಆದರೆ ಆತನಿಗೆ ಹೇಳುವುದೇನು? 'ನೀವು ಬರುವ ತನಕ ಏನು ಮಾಡು ವುದು ಮತ್ತೆ? ಸುಮ್ಮನೆ ಕುಳಿತಿದ್ದೆ, ಅಯಿತು' ಎಂದು ಮಾತು ಮುಗಿ ಸುವಳು. ಆದರೆ ಹೆಚ್ಚು ಕಡಿಮೆ ದಿನಾಲು ಶ್ರೀನಿವಾಸ ಬರುವ ಹೊತ್ತಿಗೆ ಕಾವೇರಿ ಸಾಯಂಕಾಲದ ಅಡಿಗೆಗೆ ತೊಡಗಿರುತ್ತಿದ್ದಳು. ಒಲೆಯ ಮುಂದೆ ಕುಳಿತು ಏನೇನೊ ಕೈಯಿಂದ ಮಾಡುತ್ತಿದ್ದಳಷ್ಟೆ. ಆದರೆ ಮನಸ್ಸೆಲ್ಲವೂ ಸಾಯಂಕಾಲ ಅದುವರೆಗೆ ನೋಡಿದ ಮಕ್ಕಳಾಟದಲ್ಲಿಯೆ ಇರುತ್ತಿತ್ತು. ಯಾವ ಚಿಂತೆಯೂ ಇಲ್ಲದೆ, ಎಷ್ಟು ಸುಖವಾಗಿ ಆಡುತ್ತವೆ? ಏನು ಚೆಲುವು, ಎಂಥ ಮುಗ್ಧತೆ! ತನಗೂ ಒಂದು ಮಗುವಿದ್ದಿದ್ದರೆ ಅದೂ ಆ ತೋಟದಲ್ಲಿ ಉಳಿದ ಮಕ್ಕಳ ಜತೆಯಲ್ಲಿ ಮನದಣಿಯ ಆಡಿ ಇಷ್ಟು ಹೊತ್ತಿಗೆ ಮನೆಗೆ ಬರುತ್ತಿತ್ತಲ್ಲವೆ? ಮನೆಗೆ ಬರುತ್ತಲೆ 'ಅಮ್ಮ' ಎಂದು ಕೂಗಿ ಕರೆದು, ಓಡಿ ಬಂದು, ಕೊರಳಿಗೆ ಬಿದ್ದು 'ನನಗೆ ಹಸಿವಾಗಿದೆ, ಅಮ್ಮ' ಅನ್ನುತ್ತಿತ್ತಲ್ಲವೆ? ಆಗ ತಾನು ಅದನ್ನು ಎತ್ತಿಕೊಂಡು, ಅಪ್ಪಿಕೊಂಡು, ಮುದ್ದಿಸಿ, ಆಡಿಸಿ, ನಗಿಸಿ, ಏನಾದರೂ ತಿಂಡಿಯನ್ನು ಕೊಟ್ಟು ಸಮಾಧಾನಪಡಿಸುತ್ತಿರಲಿಲ್ಲವೆ? ಆ ಚಿತ್ರ ಕಣ್ಣಮುಂದೆ ಕಟ್ಟಿತು. ಮಕ್ಕಳನ್ನು ನೋಡಿದಾಗಲೆಲ್ಲವೂ ಅದೇ ಚಿತ್ರ! ಅದೇ ಚಿತ್ರದ ನೂರಾರು ವಿನ್ಯಾಸಗಳು, ವಿಲಾಸಗಳು! ಈ ಚಿತ್ರ ಗಳು ಕಣ್ಣೆದುರು ಕುಣಿಯುತ್ತಿದ್ದಾಗ್ಗೆ ಕೆಲಸ ಮಾಡುವ ಕೈ ತಡೆಯುತ್ತಿತ್ತು. ಕಣ್ಣುಗಳು ಶೂನ್ಯವಾಗಿ ಎದುರಿನ ಒಲೆಯಲ್ಲಿಯ ಬೆಂಕಿಯನ್ನು ನೋಡು ತ್ತಿದ್ದವು. ಹೊರಬಾಗಿಲನ್ನು ಶ್ರೀನಿವಾಸ ತಟ್ಟಿದಾಗಲೆ ಎಚ್ಚರ! ದಿನದಿನಕ್ಕೂ ಈ ಹಂಬಲ ಬಲಿಯುತ್ತಿತ್ತು ಆ ಏಕಾಂತ ಜೀವನದ ಸುಖದ ಮಡುವಿನ ಮಧ್ಯದಲ್ಲಿ ಈ ಕೊರೆತದ ಸುಳಿಯೊಂದು ಗಿರಗಿರನೆ ತಿರುಗಿ ಒಮ್ಮೊಮ್ಮೆ ಎಲ್ಲವನ್ನೂ ವಿರಸಗೊಳಿಸುತ್ತಿತ್ತು. ಶ್ರೀನಿವಾಸ ಮನೆಯಲ್ಲಿದ್ದಾಗ ಮಾತ್ರ ಇದೆಲ್ಲವನ್ನು ಮರೆಯುವುದು ಸಾಧ್ಯವಾಗಿ ಕಾಣುತ್ತಿತ್ತು.

ಪ್ರತಿನಿತ್ಯವೂ ಸುಮಾರು ಮಧ್ಯಾಹ್ನದ ಮೂರರವರೆಯ ಸುಮಾರಿಗೆ ಮಕ್ಕಳ ಆಟಿಗೆ ಸಾಮಾನುಗಳನ್ನು ಕೈಯಿಂದ ನೂಕುವ ಬಂಡಿಯೊಂದರಲ್ಲಿ ಸಾಗಿಸಿಕೊಂಡು, ಕೂಗುತ್ತ, ಗಂಟೆ ಬಾರಿಸುತ್ತ ಒಬ್ಬ ಮಾರಾಟಗಾರ ಹೋಗುತ್ತಿದ್ದ. ನಾಲ್ಕಾರು ಚಿಕ್ಕ ಮಕ್ಕಳು ಆತನ ಬಂಡಿಯ ಹಿಂದೆ ಯಾವಾಗಲೂ ಇದ್ದವರೆ. ವಾಡಿಕೆಯಂತೆ ಕಿಟಕಿಯ ಹತ್ತಿರ ಕುಳಿತ ಕಾವೇರಿಗೆ ಒಂದು ದಿನ ಅದೇಕೋ ಆತನನ್ನು ಕರೆದು ಆತನ ಹತ್ತಿರವಿದ್ದ ಸಾಮಾನುಗಳನ್ನು ನೋಡೋಣವೆಂದೆನಿಸಿತು. ಆದರೆ ಕರೆದ ತಪ್ಪಿಗೆ ಏನಾದರೂ ಕೊಳ್ಳಬೇಡವೆ? ಬಂಡಿಯಲ್ಲಿಯ ಎಲ್ಲ ಸಾಮಾನುಗಳ ಮೇಲೆ ಕಣ್ಣು ಹಾಯಿಸಿದಳು. ಅಲ್ಲಿ ರಬ್ಬರಿನ ಚೆಂಡುಗಳು, ಆಡುವ ಗುಂಡುಗಳು, ತಗಡಿನ ಚಿಕ್ಕ ದೊಡ್ಡ ತುತ್ತೂರಿಗಳು, ತರತರದ ಬಣ್ಣದ ಕಾಗದಗಳ ಹೂವುಗಳು, ತಿರುಗಣಿಗಳು, ಇನ್ನೂ ಏನೇನೊ ಸಾಮಾನುಗಳಿದ್ದವು. ಗಾಡಿಯವ ಕಿಟಕಿಯ ಹತ್ತಿರ ಬಂದು "ಏನು ಕೊಡಲಮ್ಮ!" ಎಂದ. ಕಾವೇರಿಗೆ ದಿಗಿಲಾಯಿತು. ಆದರೆ ಆಕೆಯ ಕಣ್ಣುಗಳು ಆ ಗಾಡಿಯ ಒಂದು ಮೂಲೆಯಲ್ಲಿದ್ದ ದೊಡ್ಡ ಸೆಲ್ಯುಲಾಯ್ಡ ಗೊಂಬೆಯ ಮೇಲಿದ್ದುದನ್ನು ಆತ ತಿಳಿದು ಕೇಳಿದ:

"ಈ ಬೊಂಬೆ ಕೊಡಲಾ? ಬಹಳ ಚೆನ್ನಾಗಿದೆ, ನೋಡಿ" ಎಂದು ಎತ್ತಿಹಿಡಿದ. ಕಾವೇರಿಗೆ ಏನು ಹೇಳಬೇಕು ತಿಳಿಯದಾಯಿತು.

"ಎಷ್ಟು ಬೆಲೆ ಅದಕ್ಕೆ?" ಎಂದಳು.

"ಎರಡು ರೂಪಾಯಿ...." ಆತ ತಡವರಿಸಿದ

ಆದರೆ ಕಾವೇರಿಗೆ ಅದರ ಬೆಲೆಯ ಯೋಚನೆಯೆ ಇರಲಿಲ್ಲ ತಾನು ಅದನ್ನು ಕೇಳಿದ್ದಾದರೂ ಯಾಕೆ ಎಂಬುದೆ ತಿಳಿಯದೆ ಮುಂದೇನು ಎಂಬ ಯೋಚನೆಯಲ್ಲಿ ಸುಮ್ಮನೆ ಬೆಲೆ ಕೇಳಿದ್ದಳು.

"ಈ ಕಡೆ ಕೊಡು, ನೋಡುವಾ...."

ಆದರೆ ಕಿಟಕಿಯೊಳಗಿಂದ ಬೊಂಬೆಯನ್ನು ಒಳಗೆ ತೆಗೆದುಕೊಳ್ಳುವುದು ಸಾಧ್ಯವಿರಲಿಲ್ಲ. ಆತ ಹೇಳಿದ:

"ಬೊಂಬೆ ದೊಡ್ಡದಾಗಿ ಚೆನ್ನಾಗಿದೆ. ನಿಮ್ಮ ಮಾಣಿಯನ್ನೆ ಹೊರಗೆ ಕಳಿಸಿ" ಎಂದ.

ಆತನ ಮಾತು ಸಹಜವೆ ಆಗಿದ್ದರೂ ಕಾವೇರಿಗೆ ನೋವಾಯಿತು. ಆದರೆ ಯಾವುದನ್ನೂ ತೋರಗೊಡದೆ ಹೇಳಿದಳು:

"ಅದು ಬಹಳ ದೊಡ್ಡದಾಯಿತು. ಆ ಇನ್ನೊಂದಿದೆಯಲ್ಲ, ಚಿಕ್ಕದು. ಅದನ್ನೆ ಕೊಟ್ಟುಬಿಡು...." ಎಂದಳು.

"ಇದೆ?" ಎಂದು ಇನ್ನೊಂದು ಚಿಕ್ಕ ಬೊಂಬೆಯನ್ನು ಎತ್ತಿ ಕಿಟಕಿಯೊಳಗಿಂದ ಕಾವೇರಿಯ ಕೈಗೆ ಇತ್ತ.

"ಇದಕ್ಕೆಷ್ಟು?"

"ಇದಕ್ಕೆ?—ಇದಕ್ಕೆ ಎಂಟಾಣೆ...."

ಚಿಕ್ಕ ಬೊಂಬೆಗೆ ಎಂಟಾಣೆ ಹೆಚ್ಚೇ ಬೆಲೆ ಹೇಳಿದ್ದ—ಸಿಕ್ಕರೆ ಸಿಕ್ಕಲಿ ಎಂದು. ಕಾವೇರಿ ಯಾವ ಯೋಚನೆಯೂ ಇಲ್ಲದೆ ಎಂಟಾಣೆ ಕೊಟ್ಟುಬಿಟ್ಟಳು. ಸಂತೋಷವಾಗಿ ಆತ ಗಂಟೆ ಬಾರಿಸುತ್ತ ಮುಂದೆ ಸಾಗಿದ.

ಒಂದೆರಡು ನಿಮಿಷ—ಇದನ್ನು ಯಾತಕ್ಕೆ ಕೊಂಡೆ? ಎಂದು ಯೋಚಿಸಿದಳು. ಆದರೆ ಮರುಕ್ಷಣದಲ್ಲಿಯೆ ಆ ಯೋಚನೆ ಮಾಯವಾಗಿ ಮನಸ್ಸು ಇನ್ನೆಲ್ಲಿಯೊ ಓಡಿತ್ತು. ಬೊಂಬೆ ಮಗುವಾಗಿತ್ತು. ಹತ್ತಾರು ಬಾರಿ ಅದನ್ನು ಎತ್ತಿ ಹಿಡಿದಳು, ಆಡಿಸಿದಳು, ಆಡಿದಳು. ಆ ಆಟದ ಭರದಲ್ಲಿ ಆಕೆಗೆ ಯಾವಾಗಲೊ ನಿದ್ರೆಹತ್ತಿಹೋಗಿತ್ತು.

ಸಾಯಂಕಾಲ ಶ್ರೀನಿವಾಸ ಮನೆಗೆ ಬಂದಾಗ ಬೊಂಬೆ ಇನ್ನೂ ಹಾಗೆಯೆ ಹಾಸಿಗೆಯ ಬದಿಯಲ್ಲಿಯೆ ಇತ್ತು. ಅದನ್ನು ನೋಡಿದಾಕ್ಷಣ ಅದು ಅಲ್ಲಿ ಹೇಗೆ ಬಂದಿರಬಹುದೆಂಬ ಯೋಚನೆಯೆ ಹೊಳೆಯಲಿಲ್ಲ. ತೀರ ಹೊಸದಾದ ಬೊಂಬೆಯಾದ್ದರಿಂದ ಕಾವೇರಿಯೆ ಅದನ್ನು ಸುಮ್ಮನೆ ಮೋಜಿಗಾಗಿ ತೆಗೆದುಕೊಂಡಿರಬೇಕೆಂದುಕೊಂಡ. ಚೇಷ್ಟೆಗೊಂದು ವಿಷಯವಾಯಿತೆಂದು, ಒಳಗೆ ಬಂದು ಕೇಳಿದ:

"ನಿನಗೀಗ ವಯಸ್ಸೆಷ್ಟು, ಕಾವಿ?"

ಕಾವೇರಿಗೆ ಪ್ರಶ್ನೆಯ ಹೊಳವು ತಿಳಿಯಲೆ ಇಲ್ಲ

"ಅದೇನು, ಹೀಗೆ ಒಮ್ಮೆಲೆ ವಯಸ್ಸು ಕೇಳುತ್ತಿದ್ದೀರಿ?"

"ಎಷ್ಟು ವರ್ಷ ಹೇಳು, ಆಮೇಲೆ ಹೇಳುತ್ತೇನೆ."

"ಇಪ್ಪತ್ತನಾಲ್ಕು ಇರಬಹುದು."

"ತಪ್ಪು! ನೋಡಿ ಹೇಳು. ಇನ್ನೊಮ್ಮೆ ಲೆಕ್ಕಮಾಡು."

"ಇಪ್ಪತ್ತುನಾಲ್ಕು ಅಲ್ಲದಿದ್ದರೆ ಒಂದು ಹೆಚ್ಚಿರಬಹುದು, ಅಷ್ಟೆ!"

"ಒಂದು ಹೆಚ್ಚೆ?"

"ಹಾಗಾದರೇನು? ನನಗೆ ನಲವತ್ತು ಅಂತೀರಾ?"

"ಹದಿನಾರು ಹೆಚ್ಚು ಅಲ್ಲ. ಹದಿನಾರಕ್ಕಿಂತ ಕಡಮೆ ಹೇಳು!"

"ಅಂದರೆ? ನನಗೆ ಎಂಟು ವರುಷ ಅನ್ನುತ್ತೀರಾ?"

"ಎಂಟಲ್ಲ, ಇನ್ನೂ ಒಂದೆರಡು ಕಡಮೆ ಇರಬೇಕು!"

"ಸಾಕಾಯಿತು, ನಿಮ್ಮ ಚೇಷ್ಟೆ!"

"ಅಲ್ಲವೆ ಮತ್ತೆ? ಇದರ ಜತೆಯಲ್ಲಿ ಆಡತಾ ಇರುತ್ತೀ ಅಂದ ಮೇಲೆ!" ಎಂದು ಹಿಂಬದಿಯಲ್ಲಿ ಮುಚ್ಚಿ ಹಿಡಿದುಕೊಂಡಿದ್ದ ಬೊಂಬೆಯನ್ನು ಆಕೆಯ ಎದುರು ಹಿಡಿದು ಗಟ್ಟಿಯಾಗಿ ನಕ್ಕ. ಕಾವೇರಿಗೆ ನಾಚಿಕೆಯಾದರೂ ನಗು ತಡೆಯಲಾಗಲಿಲ್ಲ.

"ಅಷ್ಟಕ್ಕೆ ಕೇಳಿದಿರಾ, ಇದನ್ನೆಲ್ಲ?"

"ಅಲ್ಲೇ, ಇದನ್ನು ಯಾತಕ್ಕೆ ಕೊಂಡೆ?" ಶ್ರೀನಿವಾಸನಿಗೆ ನಗು ಇನ್ನೂ ಉಕ್ಕಿ ಬರುತ್ತಲೇ ಇತ್ತು. "ಇದನ್ನು ಯಾತಕ್ಕೆ ಕೊಂಡೆ?"

"ನೀವೇ ಹೇಳಿದಿರಲ್ಲ, ಆಡಲಿಕ್ಕೆ ಎಂದು."

"ಹೌದೆ?"

"ಮತ್ತಿನ್ನೇನು ಮಾಡುವುದು? ನೀವಂತೂ ಬೆಳಗ್ಗೆ ಹೋದವರು—"

"ನಾನು ಮನೆಯಲ್ಲಿದ್ದರೆ ನನ್ನ ಕೂಡ ಆಟವಾಡಬೇಕೆನ್ನುತ್ತೀಯಾ?"

"ಮನೆಯಲ್ಲಿ ಇದ್ದರಲ್ಲವೆ ಆ ಮಾತು?"

"ಅಂತೂ ನಾನು ಈ ಗೊಂಬೆ ಎರಡೂ ಅಷ್ಟೆ ಅನ್ನು, ಹಾಗಾದರೆ!"

"ಸಾಕು, ಹೋಗಿರಿ...."

ರಾತ್ರಿ ಊಟವಾದನಂತರ ಕಾವೇರಿ ಹಾಸಿಗೆ ಹಾಸುತ್ತಿದ್ದಳು. ಶ್ರೀನಿವಾಸನೆಂದ:

"ಅಂತೂ ನಿನಗೊಂದು ಮಗು ಬಹಳ ಅರ್ಜೆಂಟಾಗಿ ಬೇಕಾಗಿದೆ ಎಂದ ಹಾಗಾಯಿತು!"

"ಅದನ್ನು ಯಾರು ಹೇಳಿದರು ನಿಮಗೆ?"

"ಯಾರೇಕೆ ? ಆ ಗೊಂಬೆ ಹೇಳುತ್ತಾ ಇತ್ತು!"

"ಬೊಂಬೆ ನಿಮ್ಮ ಕೂಡ ಮಾತಾಡಿತೆ ?"

"ಇಡಿ ಮಧ್ಯಾಹ್ನ ನಿನ್ನ ಕೂಡ ಮಾತಾಡಿದ್ದು ನನಗೆ ಒಂದು ಮಾತನ್ನೂ ಹೇಳಿರಬಾರದೆ ಅದು ?"

"ಅದು ಬೇಕಾದ್ದನ್ನು ಹೇಳೀತು. ಆದರೆ ನೀವು ಮಾತ್ರ ನನ್ನನ್ನು ಒಬ್ಬ ಡಾಕ್ಟರರ ಕಡೆಗೆ ಕೂಡ ಕರೆದೊಯ್ಯಲಿಲ್ಲ."

"ನೀನು ನನಗೆ ಹಾಗೆ ಹೇಳಿದ್ದೀಯಾ ?"

"ಇದನ್ನೆಲ್ಲಾ ಹೇಳಬೇಕೆ ?"

"ಹೇಳದೆ ಇದ್ದರೆ ತಿಳಿಯೋದು ಹೇಗೆ ?" ಎಂದು ಶ್ರೀನಿವಾಸ ನಗು ಸೂಸಿದ.

"ಅಯ್ಯೊ, ಎಂಥೆಂಥಾದ್ದೆಲ್ಲಾ ತಿಳಿಯುತ್ತದೆ, ಇದು ಮಾತ್ರ ತಿಳಿಯುವುದಿಲ್ಲ. ಅಲ್ಲವೆ ?" ಎಂದು ಕಾವೇರಿ ಪ್ರತಿಯಾಗಿ ಅದೇ ನಗೆಯನ್ನು ಬೀರಿದಳು.

"ಆಯಿತು, ಈಗಲಂತೂ ಮಲಗಿಕೊಳ್ಳಿ...."

"ಇಷ್ಟು ಬೇಗನೆ ?"

"ಮತ್ತಿನ್ನೇನು ಮಾಡುವುದು ?"

"ನಾಡಿದ್ದು ಭಾನುವಾರ. ಅದರ ಕಾರ್ಯಕ್ರಮ ಗೊತ್ತುಮಾಡಬೇಕು!"

"ಆದೀತು. ನಾಳೆ ಇಡೀ ಶನಿವಾರ ಇದೆ ಅದಕ್ಕೆ"

"ಅದಕ್ಕಲ್ಲ ನಾಳೆ ಗಂಗಾಧರನನ್ನು ಕೇಳಿ, ಲೇಡಿ ಡಾಕ್ಟರನ್ನು ಕೇಳಿ ಬರುತ್ತೇನೆ."

ಕಾವೇರಿಗೆ ಮನಸ್ಸಿನಲ್ಲಿಯೆ ಸಂತೋಷ. ಹಿಂದೆ ಒಮ್ಮೆ ಚಂಪಕ್ಕ ಹೇಳಿರಲಿಲ್ಲವೆ ? ಯಾರಿಗೊ ಡಾಕ್ಟರರಿಂದ ಔಷಧ ಕೊಡಿಸಿದಾಗ ಮೂವತ್ತು ವರ್ಷ ಮಿಕ್ಕಿದವಳಿಗೂ ಮಕ್ಕಳಾದುದನ್ನು ? ಅರೆನಿಮಿಷದಲ್ಲಿ ಕಾವೇರಿಯ ಯೋಚನೆ ಬಲುದೂರ ಓಡಿತು. ಆ ಕಲ್ಪನೆಯ ರಾಜ್ಯದಿಂದ ಕಾವೇರಿಯನ್ನು ಎಚ್ಚರಿಸಬೇಕಾದರೆ ಶ್ರೀನಿವಾಸನಿಗೆ ಆಕೆಯನ್ನು ಕೈಮುಟ್ಟಿ ಕರೆಯಬೇಕಾಯಿತು.

ಗೊತ್ತುಮಾಡಿದಂತೆ ಭಾನುವಾರ ಬೆಳಗ್ಗೆ ಕಾವೇರಿಯ ವೈದ್ಯಕೀಯ ಪರೀಕ್ಷೆಯೂ ಆಯಿತು. ಮರುದಿನ ಔಷಧವೂ ಬಂದಿತು. ಮನೆಗೆ ಬಂದಾಗ ಶ್ರೀನಿವಾಸ ನಕ್ಕು ಹೇಳಿದ:

"ಹುಂ....ಪ್ರಾರಂಭವಾಗಲಿ ಇನ್ನು ತಪಸ್ಸು!"

"ತಪಸ್ಸು?"

"ಹುಂ....ಮಕ್ಕಳಿಗಾಗಿ ತಪಸ್ಸು?"

"ತಪಸ್ಸು, ತೀರ್ಥ ಎಲ್ಲ ಆಗಿದೆ."

"ಆ ತಪಸ್ಸು ತೀರ್ಥ ಎಲ್ಲ ಆಯಿತಲ್ಲ! ಇನ್ನುಮೇಲೆ ಡಾಕ್ಟರೆ ದೇವರು, ಔಷಧವೆ ತೀರ್ಥ ಎಂದು ಪ್ರಾರಂಭ!" ಎಂದು ನಕ್ಕ.

"ಆಯಿತು, ನಿಮಗಂತೂ ಎಲ್ಲವೂ ಚೇಷ್ಟೆ!"

"ಹಾಗಾದರೆ, ಔಷಧ ತೆಗೆದುಕೊಳ್ಳುವುದಿಲ್ಲವೆ?"

"ತೆಗೆದುಕೊಳ್ಳುವೆ. ಆದರೆ ಇಂದು ಬೇಡ."

"ಅದೇನು? ಮುಹೂರ್ತ ನೋಡಿದ್ದೀಯಾ?"

"ಮುಹೂರ್ತ ಯಾತಕ್ಕೆ ನೋಡೋದು? ಇಂದು ಏಕಾದಶಿ!"

"ಅಯ್ಯೊ! ರಾಮಚಂದ್ರಾ...." ಎಂದು ಶ್ರೀನಿವಾಸ ಬಿದ್ದುಬಿದ್ದು ನಕ್ಕ.

ಮರುದಿನ ಔಷಧಕ್ಕೆ ಪ್ರಾರಂಭವಾಯಿತು. ಅದನ್ನು ಕುಡಿಯುವುದೇನೂ ಸುಖವಾಗಿರಲಿಲ್ಲ. ವಿಪರೀತ ಕಹಿ ಆದರೂ ಕಾವೇರಿ ಸಹಿಸಿದಳು. ಔಷಧವನ್ನು ಕುಡಿಯುತ್ತಿರುವಾಗ ಎದುರು ಇರಬೇಡಿ ಎಂದು ಎಷ್ಟು ಕೇಳಿಕೊಂಡರೂ ಶ್ರೀನಿವಾಸ ಕೇಳಲಿಲ್ಲ. ಅವಳ ಮುಖಲಕ್ಷಣದ ಮೇಲಿಂದ ಅದು ಕಹಿಯಾಗಿರಲಿಕ್ಕೆಬೇಕೆಂದುಕೊಂಡು ಕೇಳಿದ:

"ಬಹಳ ಕಹಿಯಾಗಿದೆಯೆ?"

ಒಂದರೆನಿಮಿಷ ತಡೆದು "ಇಲ್ಲವಲ್ಲ!" ಎಂದು ಹೇಳಿದಳು.

"ಬಾಯಿಂದ ಹಾಗೆ ಹೇಳಿದರೂ ಮುಖ—" ಎಂದು ಶ್ರೀನಿವಾಸ ತಡೆದ.

"ಏನಿದ್ದರೇನು? ತೆಗೆದುಕೊಳ್ಳುವದಂತೂ, ಸರಿಯೆ...."

"ತೆಗೆದುಕೊಳ್ಳಲೇಬೇಕೆ?"

"ಹಾಗಾದರೆ ತಂದದ್ದನ್ನು ಎಸೆದುಬಿಡುವುದೆ?"

"ಅಷ್ಟಕ್ಕಾಗಿಯೆ ಏನು ನೀನು ಅದನ್ನು ಕುಡಿಯುವುದು?"

"ಅದನ್ನೆಲ್ಲ ತೆಗೆದು ನಿಮಗೇನು? ಸುಮ್ಮನೆ ಹೋಗಬಾರದೆ?"

"ಹೋಗುತ್ತೇನೆ, ಮಹಾರಾಯಿತಿ. ಇನ್ನೊಬ್ಬ ಬರುವ ಮುಂಚೆ ನನ್ನನ್ನು ತಳ್ಳಿಬಿಡಬೇಕು ಅನ್ನುತ್ತಿದ್ದೀಯಾ!"

ಎಂದು ನಕ್ಕು ಮುಂದಿನ ಕೋಣೆಗೆ ಹೋದ. ಶ್ರೀನಿವಾಸನ ಮಾತು ಸಿಹಿಯಾಗಿದ್ದರೂ ಔಷಧ ಕಹಿಯಾಗಿಯೇ ಇತ್ತು. ಆದರೆ ಕಾವೇರಿಗೆ ಅದರ ಪರಿವೆಯಿರಲಿಲ್ಲ. ಎಂಥ ಔಷಧವಾದರೂ ಆಗಲಿ, ಬೇಕಾದಷ್ಟು ಕಹಿ ಇರಲಿ, ಅದರ ಪರಿಣಾಮವಾಗಿ ಮಕ್ಕಳಾದರೆ ಆಯಿತು. ಮತ್ತೆ ಕಾವೇರಿಯ ಕಲ್ಪನೆ ದೂರ ದೂರ ಓಡಿತು. ಮಗುವಾಗಲಿ; ಗಂಡುಮಗುವಾದರೆ ಒಳ್ಳೆಯದಲ್ಲವೆ? ಯಾವುದಾದರೇನು? ಹೆಣ್ಣಾದರೆ ತನ್ನ ಅತ್ತೆ ಏನಾದರೂ ಅನ್ನುವಳು. ಕೇಳಿದವರಿಗೂ ಉತ್ಸಾಹವೆನಿಸುವುದಿಲ್ಲ. ಅದು ಹಾಗೇಕೆ ಇರಬೇಕು. ಹೆಣ್ಣು ಮಗುವಾದರೆ ಮಗುವಲ್ಲವೆ? ಆದರೂ ಗಂಡಾದರೆ—? ಛೆ! ಇದೆಂಥ ಹುಚ್ಚು! ಏನಾದರೂ ಅಷ್ಟೆ. ಗಂಡಾಗಲಿ, ಹೆಣ್ಣಾಗಲಿ, ಒಂದು ಮಗುವಾಗಲಿ, ದೇವರೆ, ಈ ಜನ ನನ್ನನ್ನು ಬಂಜೆ ಎನ್ನುವುದು ಬೇಡ! ಎಂದು ಕಾವೇರಿಯ ಹೃದಯ ಒಮ್ಮೊನೆಯಾಗಿ ಬಯಸಿತು. ಆ ಬಯಕೆಗೆ ಆದಲ್ಲಿ ಪ್ರಾರ್ಥನೆಯ ಸ್ವರೂಪ ಒದಗಿತ್ತು.

# ೯

ಶ್ರೀನಿವಾಸ ತನ್ನಷ್ಟಕ್ಕೆ ಮನೆ ಮಾಡಿಕೊಂಡು ಇದ್ದುದು ಇದುವೆ ಮೊದಲ ಸಲವಾದ್ದರಿಂದ ಬಾಗಿಲುಕೋಟೆಯಿಂದ ಹೊರಡುವಾಗ ಎಷ್ಟೋ ಸಾಮಾನುಗಳನ್ನು ತಂದಿದ್ದ. ಆದರೆ ಎಷ್ಟು ಮುಂಜಾಗ್ರತೆಯಿಂದ ಎಣಿಕೆ ಹಾಕಿ ಸಾಮಾನುಗಳನ್ನು ಕಟ್ಟಿಕೊಂಡಿದ್ದರೂ ದಿನದ ಬಳಕೆಯಲ್ಲಿ ಇನ್ನೂ ಕೆಲವು ಸಾಮಾನುಗಳ ಕೊರತೆ ಕಂಡುಬಂದಿತ್ತು. ಒಂದೊಂದಾಗಿ ಪೇಟೆಯಿಂದಲೂ ತಂದಿದ್ದ. ಆದರೆ ಇನ್ನೂ ಬೇಕಾದ ಎಷ್ಟೋ ಸಾಮಾನುಗಳನ್ನು ಊರಿಂದಲೆ ತರಬಹುದಾಗಿತ್ತು. ಅಲ್ಲದೆ ಬಂದು ಸುಮಾರು ತಿಂಗಳಾಗುತ್ತ ಬಂದದ್ದರಿಂದ ಒಬ್ಬಳಾಗಿಯೆ ಇದ್ದ ತಾಯಿ ಹೇಗಿದ್ದಾಳೊ ನೋಡಿಕೊಂಡು ಬರೋಣವೆಂದೂ ಅನಿಸುತ್ತಿತ್ತು. ಬೇಕಾದ ಸಾಮಾನುಗಳನ್ನು ತಂದರಾಯಿತು; ತಾಯಿಯನ್ನು ನೋಡಿಕೊಂಡೂ ಬಂದ ಹಾಗಾಯಿತು, ಎಂದು ಬಾಗಿಲುಕೋಟೆಗೆ ಹೋಗಿದ್ದ ಶ್ರೀನಿವಾಸ ಭಾನುವಾರ ಸಾಯಂಕಾಲ ಅದೇ ಮರಳಿ ಬಂದಿದ್ದ. ತಂದಿದ್ದ ಸಾಮಾನುಗಳನ್ನೆಲ್ಲ ನೋಡಿಯಾದ ಮೇಲೆ ಕಾವೇರಿ ಕೇಳಿದಳು :

"ಕಿಟ್ಟೂನ ಮನೆಗೆ ಹೋಗಿದ್ದಿರಾ?"

"ಹೋಗಲಾಗಲಿಲ್ಲ."

ಕಾವೇರಿಗೆ ನಿರಾಶೆಯಾಯಿತು.

"ಹೋಗಲಾಗಲಿಲ್ಲವಂತೆ! ಅಂಥದೇನು ಕೆಲಸವಿತ್ತೊ?"

"ಕೆಲಸವಂತಲ್ಲ, ಕಾವಿ. ಕಿಟ್ಟೂನ ಮನೆಗೆ ನಾನು ಹೋಗಬೇಕಾದರೆ ನನಗೆ ಗೊತ್ತಿದ್ದವರು ಅಲ್ಲಿ ಮನೆಯಲ್ಲಿ ಯಾರಾದರೂ ಇರಬೇಡವೆ?"

"ಯಾಕೆ, ಕಿಟ್ಟೂನ ತಂದೆ ನಿಮಗೆ ಗೊತ್ತಿಲ್ಲವೆ?"

"ಆದರೆ ಆತ ಊರಲ್ಲಿರಲಿಲ್ಲ!"

"ಅದು ಹೇಗೆ ಗೊತ್ತಾಯಿತು, ನಿಮಗೆ?"

"ಅವ್ವನನ್ನು ಕೇಳಿದೆ...."

"ಆಯಿತು. ಸರಿಯಾಯಿತಲ್ಲ...."

"ಏನು, ಸರಿಯಾಯಿತು?...."

" ಏನಿಲ್ಲ ! "

ತನ್ನ ಮಾತು ಶ್ರೀನಿವಾಸನಿಗೆ ಅಷ್ಟೊಂದು ಒಪ್ಪಿಗೆಯಾಗಲಿಲ್ಲವೆಂಬ ಸಂಶಯ ಬಂದಿದ್ದರಿಂದಲೆ ಕಾವೇರಿ ಹಾಗೆ ಹೇಳಿದಳು. ಆದರೆ ಶ್ರೀನಿವಾಸನಿಗೆ ನಿಜವಾಗಿಯೂ ಕಾವೇರಿಯ ಮಾತಿನಲ್ಲಿಯ ಧ್ವನಿ ಅರ್ಥವಾಗಿರಲಿಲ್ಲ ಅಂತೆಯೆ ಆತ ಮತ್ತೆ ಕೇಳಿದ :

" ಸರಿಹೋಯಿತು, ಅಂದರೇನೆ ? "

" ನೀವು ಅಲ್ಲಿಗೆ ಹೋಗಬಾರದು ಎಂದು ಇರಬೇಕು ಅತ್ತೆಯವರ ಮನಸ್ಸಿನಲ್ಲಿ."

" ಅದಕ್ಕೆ ಹಾಗೆ ಹೇಳಿದಳು ಅನ್ನುತ್ತೀಯಾ ? "

" ಹೇಳಿರಬಹುದು ಅಂದೆ...."

" ಹೋಗಬಾರದೇಕಂತೆ ? "

" ಅದು ಯಾರಿಗೆ ಗೊತ್ತು? ಹೋದಾಗ ನೀವೇನಾದರೂ ಕೊಟ್ಟಿರಿ ! "

" ಹೋದ ಪ್ರತಿ ಸಲವೂ ಏನು ಕೊಡುತ್ತಾರೆ, ತಲೆ ! "

" ಹಾಗಾದರೆ ಆ ಬಳೆಗಳ ಜೊತೆ ನಿಮ್ಮ ಹತ್ತಿರವೆ ಉಳಿಯಿತೆ ? "

" ಇನ್ನೊಂದು ಸಲ ಹೋದಾಗ ಕೊಡುವೆ. ಅಂ ? "

" ನಾನು ಹೊರಡುವಾಗ ಎಲ್ಲಿದ್ದಳೊ ಮಹಾರಾಯಿತಿ. ಆಗಲೆ ಕೊಟ್ಟಾಗಿ ಹೋಗುತ್ತಿತ್ತು ! "

" ಅಂಥದೇನು ಅವಸರ ? ಈಗೇನು ಆ ಮಗು ಹಟ ಹಿಡಿದು ಕುಳಿತಿಲ್ಲವಷ್ಟೆ ? "

" ಸಾಕು ಬಿಡಿರಿ, ಯಾವಾಗಲೂ ನೀವು ಹೀಗೆಯೆ. ಆ ಮಗು ಕಂಡರೆ ನಿಮಗೇನೂ ಅನಿಸುವುದೆ ಇಲ್ಲವೆ ? "

" ಏನು ಅನಿಸಬೇಕು ? "

" ಅಕ್ಕರೆ ಅನಿಸುವುದಿಲ್ಲವೆ, ನಿಮಗೆ ? "

" ಅನಿಸಿದರೆ ಏನು, ಮುಂದೆ ? "

" ಸಾಕು. ನೀವು ಹೀಗೆಯೆ—ಗಂಡಸರು ! "

" ಇನ್ನೊಮ್ಮೆ ಹೋದಾಗ ಕೊಡುವೆ ಎಂದು ಹೇಳಲಿಲ್ಲವೆ ? "

" ಇನ್ನು ಹೋಗುವುದು ಎಂದೊ, ಯಾವಾಗೊ ! "

" ಎಂದು ಯಾಕೆ ? ಮುಂದಿನ ತಿಂಗಳು ಹೋಗುವೆ."

" ಮುಂದಿನ ತಿಂಗಳೆ ? ಯಾಕೆ ? ಏನಾದರೂ ಕೆಲಸವಿದೆಯೆ ? "

" ಅವ್ವ ಬಂದು ಹೋಗು ಎಂದು ಹೇಳಿದಳು...."

" ಯಾಕಂತೆ ? "

" ಯಾಕೇನು ? ಒಬ್ಬಳಿಗೇ ಬಹಳ ಬೇಸರವಾಗುತ್ತಿದೆಯಂತೆ ಅದಕ್ಕೆ ತಿಂಗಳಿಗೊಮ್ಮೆಯಾದರೂ ಬಂದು ಹೋಗಬೇಕಂತೆ."

" ಹೌದು, ಪಾಪ ! ನಿಜವಾಗಿಯೂ ಬೇಸರವಾಗುತ್ತಿರಬೇಕು. ಹೇಗಿದ್ದರೂ ಏನಿದ್ದರೂ, ಮನೆಯಲ್ಲಿ ನಾನಾದರೂ ಇರುತ್ತಿದ್ದೆ."

" ಹೌದು, ಆದರೇನು ಮಾಡುವುದು ? ಇಲ್ಲಿಗೆ ಬಂದುಬಿಡು ಎಂದರೆ ಕೇಳುವುದಿಲ್ಲ...."

" ಈ ಸಾರೆಯೂ ಕೇಳಿದಿರಾ ? "

" ಕೇಳಿದೆ. ಆದರೆ—"

" ಏನಿದ್ದರೂ ಕಿಟ್ಟೂನ ಮನೆಗೆ ನೀವು ಹೋಗಬೇಕಾಗಿತ್ತು."

" ಮುಂದಿನ ಸಲ ಖಂಡಿತವಾಗಿಯೂ ಹೋಗುವೆ."

" ಮುಂದಿನ ಸಲ ಹೋದರೆ ದಂಡ ಕೊಡಬೇಕಾಗುತ್ತದೆ ! "

" ದಂಡ ! ಯಾರಿಗೆ ? "

" ನನಗಲ್ಲ, ಕಿಟ್ಟೂಗೆ ? "

" ದಂಡ ಏನು ಕೊಡಬೇಕು, ಮತ್ತೆ ? "

" ಚಿತ್ರದ ತೊಟ್ಟಿಲು ಇಲ್ಲಿ ಬಹಳ ಒಳ್ಳೆಯವು ಸಿಗುತ್ತವೆ. ಒಂದು—"

" ನಿನಗೆ ಇದನ್ನು ಯಾರು ಹೇಳಿದರು ? "

" ಹೇಳುವುದು ಯಾತಕ್ಕೆ. ಮೊನ್ನೆ ಇಲ್ಲಿಯೆ ಬಾಗಿಲಿಗೆಯೆ ಬಂದಿದ್ದವು. ನಾನೇ ನೋಡಿದ್ದೇನೆ "

" ಅದೇನು, ಸುಮ್ಮನೆ ನೋಡಿ ಬಿಟ್ಟುಬಿಟ್ಟೆ ? "

" ಅಂದರೆ ? ಕೊಂಡೇ ಬಿಡಬೇಕಾಗಿತ್ತೆ ? "

" ಎಂದೂ ಏನನ್ನೂ ನನ್ನ ಕೇಳದೆಯೆ ಕೊಳ್ಳದವರ ಹಾಗೆ ಹೇಳುತ್ತಿದ್ದೀಯಲ್ಲ ? "

" ಏನದು, ನಾನು ಕೊಂಡದ್ದು, ಮಹಾ ? "

" ಏನು ಕೊಂಡದ್ದೆ? ಅಲ್ಲಿಯೆ ಇದೆ ನೋಡು ಒಳ್ಳೆ ಜೋಪಾನವಾಗಿ ಹಾಸಿಗೆಯ ಮೇಲೇಯೆ ಮಲಗಿಸಿದ್ದೀ!"

ಕಾವೇರಿ ಕಣ್ಣು ಹೊರಳಿಸಿದಳು. ದೊಡ್ಡದಾದ ಸೆಲ್ಯುಲಾಯ್ಡ್ ಬೊಂಬೆ ಕಣ್ಣರಳಿಸಿ ಆಕೆಯನ್ನೆ ನೋಡುತ್ತಿತ್ತು.

"ಓ! ಅದೆ...." ಎಂದು ಕಾವೇರಿ ನಕ್ಕಳು. "ಆದರೆ ನೀವೇನು ಬೇಕಾದ್ದು ಹೇಳಿ. ಇನ್ನೊಮ್ಮೆ ಆ ತೊಟ್ಟಿಲ ಮಾರುವವ ಬಂದರೆ ನಾನಂತೂ ತೆಗೆದುಕೊಳ್ಳುವವಳೆ...."

" ತೆಗೆದುಕೊಳ್ಳುವಿಯಂತೆ ಮಹಾರಾಯಿತಿ ಈಗಂತೂ ಒಂದು ಕಪ್ಪು ಚಹವನ್ನಾದರೂ ಕೊಡು. ನಾನೂ ಬಂದಾಗಿನಿಂದ ನೋಡುತ್ತಲೆ ಇದ್ದೇನೆ. ಬರಿ ಮಾತನಾಡುತ್ತಿದ್ದೀಯ."

" ಹೌದು ಮತ್ತಿನ್ನೇನು ಮಾಡುವುದು. ಎರಡು ದಿನ ಒಬ್ಬಳೆ ಇದ್ದು ಮೂಕಳ ಹಾಗಾಗಿದೆ...."

"ಆ ಮೂಕತನವನ್ನು ಆಮೇಲೆ ಕಳೆದುಕೊಳ್ಳುವಿಯಂತೆ! ಮೊದಲು ನಮ್ಮ ಹಸಿವನ್ನು ಕಳೆಯಲಿ!"

ಶ್ರೀನಿವಾಸನ ಮಾತು ನಿಜವೆಂದು ಕಾವೇರಿಗೆ ಕೊಂಚ ಪಶ್ಚಾತ್ತಾಪವೂ ಆಗಿಸಿರಬೇಕೆಂತಲೆ ಆಕೆ ಸರಕ್ಕನೆ ಒಳಗಡೆ ಓಡಿ ಚಹ ತಿಂಡಿಯನ್ನು ಒದವಿಸಿದಳು.

ಮುಂದೆ ನಾಲ್ಕಾರು ದಿನಗಳಲ್ಲಿಯೆ ಶ್ರೀನಿವಾಸ ಒಂದು ಸಂಜೆ ಮನೆಗೆ ಬರುವ ಹೊತ್ತಿಗೆ ಚಿತ್ತ್ರದ ತೊಟ್ಟಿಲೊಂದು ಮೂಲೆಯಲ್ಲಿ ನಿಂತಿತ್ತು. ಅದನ್ನು ನೋಡಿದಾಗ ಶ್ರೀನಿವಾಸನಿಗೆ ಒಂದು ಕ್ಷಣ ಮೋಜೆನಿಸಿತು ಕಿಟ್ಟೂನ ಸಲುವಾಗಿ ಕಾವೇರಿ ಬೆಳೆಯಿಸಿದ ಮೋಹವನ್ನು ನೆನೆದು ವಿಚಿತ್ರವೂ ಎನಿಸಿತು. ಇನ್ನೊಬ್ಬರ ಮಗುವಿಗಾಗಿ ಈ ಪರಿಯ ಅಕ್ಕರೆಯನ್ನು ತೋರುವ ಈಕೆಗೆ ಒಂದು ಮಗ ವಾದರೆ? ಎಂಬ ಯೋಚನೆಯೂ ಸುಳಿದುಹೋಯಿತು. ಆದರೆ ಅದರ ಜತೆಯಲ್ಲಿಯೆ, ಇದಕ್ಕೆ ಈಕೆ ಎಷ್ಟು ದುಡ್ಡು ಕೊಟ್ಟಳೊ. ಸುಮ್ಮನೆ ಯಾರಿಗಾಗಿಯೊ ದುಡ್ಡು ವೆಚ್ಚ ಮಾಡಿದರೆ ಏನಾಯಿತು? ಎಂಬ ವ್ಯಾವಹಾರಿಕ ವಿಚಾರವೂ ನುಸುಳಿತು....ಇದನ್ನು ಇನ್ನೊಮ್ಮೆ ತಾನು ಬಾಗಿಲುಕೋಟೆಗೆ ಹೋಗುವಾಗ ತೆಗೆದುಕೊಂಡು ಹೋಗಬೇಕೆ? ಛೆ!

ಯಾರ ಕೆಲಸ! ಯಾರು ಮಾಡಬೇಕು ?....ಅಲ್ಲದೆ ಇಂಥ ತೊಟ್ಟಿಲೊಂದನ್ನು ಇನ್ನೊಬ್ಬರಿಗಾಗಿ ತಾನು ಊರಿಂದ ಊರಿಗೆ ಹೊತ್ತುಕೊಂಡು ಹೋದರೆ ತಾಯಿ ಏನೆನ್ನುವಳೊ! ತನಗೆ ಮೊಮ್ಮಕ್ಕಳಿಲ್ಲವೆಂದು ಕೊರಗುತ್ತಿರುವ ಆಕೆಗೆ ಇದು ಸಂತೋಷಗುವುದು ಸಾಧ್ಯವೆ ಇರಲಿಲ್ಲ. ತೆಗೆದುಕೊಂಡು ಹೋಗುವು ದಿಲ್ಲ ಎಂದರೆ ಕಾವೇರಿಗೆ ಖಚಿತವಾಗಿ ಅಸಮಾಧಾನವಾಗುವುದು. ಪಾಪ! ಆಕೆಗೆ ಅಸಮಾಧಾನ ಮಾಡುವುದೆ! ಆಕೆಯ ಮುಖವನ್ನು ನೋಡಿದ ಯಾರೂ ಹಾಗೆ ಮಾಡಲಾರರು! ತಾನಂತೂ ಆಕೆಯನ್ನು ಸುಖವಾಗಿರ ಲೆಂದೆ ಇಲ್ಲಿಯ ವರೆಗೆ ಕರೆತಂದದ್ದು. ಆಗಲಿ, ನೋಡುವ. ಈಗೇಕೆ ಅದೆಲ್ಲ? ಊರಿಗೆ ಹೊರಡುವಾಗಿನದಲ್ಲವೆ ಅದೆಲ್ಲ ವಿಷಯ? ಎಂದು ಸಮಾಧಾನ ತಂದುಕೊಳ್ಳಲೆಳಸಿದ್ದ.

ಎರಡನೆಯ ಸಲ ಶ್ರೀನಿವಾಸ ಬಾಗಿಲುಕೋಟೆಗೆ ಹೊರಟಾಗ ಈ ಎಲ್ಲ ಯೋಚನೆಯೂ ಮತ್ತೆ ತಲೆದೋರಿತ್ತು. ಆದರೆ ಅನಿರೀಕ್ಷಿತವಾಗಿಯೆ ಆತನ ಸಮಸ್ಯೆಯೂ ಬಗೆಹರಿದಿತ್ತು. ಹೊರಡುವ ಮೊದಲಾಗಲಿ, ಹೊರಟು ನಿಂತಾಗ ಆಗಲಿ, ಕಾವೇರಿ ತೊಟ್ಟಿಲದ ಮಾತನ್ನೆ ಎತ್ತಿರಲಿಲ್ಲ, ಬಳೆಗಳ ವಿಷಯವನ್ನೂ ಪ್ರಸ್ತಾಪಿಸಿರಲಿಲ್ಲ. ಶ್ರೀವಾಸನಿಗೆ ಆಶ್ಚರ್ಯವೆನಿಸಿತು! ಆದರೆ ತಾನಾಗಿಯೆ ಆಕೆಯನ್ನು ಜ್ಞಾಪಿಸಿ ತೊಟ್ಟಿಲನ್ನು ಹೆಗಲ ಮೇಲೆ ಯಾತಕ್ಕೆ ತಂದುಕೊಳ್ಳಬೇಕೆಂದು ಸುಮ್ಮನಾಗಿಯೆ ಹೋಗಿಬಿಟ್ಟ—ತಿರುಗಿ ಬಂದಮೇಲೆ ಕಾವೇರಿ ಕೇಳಿದರೆ, ಆಕೆಯೆ ಜ್ಞಾಪಿಸಲಿಲ್ಲ ಎಂದು ಹೇಳಿದ ರಾಯಿತು, ಎಂದ.

ಶ್ರೀನಿವಾಸ ತಿರುಗಿ ಬಂದಾಗ ರಾತ್ರಿ ಹತ್ತು ಗಂಟೆ ಸಮೀಪಿಸಿತ್ತು. ಸುತ್ತಲಿನ ಮನೆಗಳೆಲ್ಲವೂ ಆಗಲೆ ಶಾಂತವಾಗಿದ್ದವು ಇಷ್ಟು ತಡವಾಯಿ ತೆಂದಮೇಲೆ ಶ್ರೀನಿವಾಸ ಬರವುದು ಮಾರನೆದಿನವೆಂದೆ ಭಾವಿಸಿ ಕಾವೇರಿ ಮಲಗುವುದರಲ್ಲಿದ್ದಳು ಶ್ರೀನಿವಾಸ ಬಾಗಿಲನ್ನು ತಟ್ಟುವುದರಲ್ಲಿದ್ದ. ಆದರೆ ಕಾವೇರಿ ಒಳಗಿನಿಂದ ಏನನ್ನೊ ಗುಣಿಗುಣಿಸುತ್ತಿದ್ದಳು. ಹಳ್ಳದನಿಯಲ್ಲಿ ಯಾವುದೊ ಒಂದು ಹಾಡನ್ನು ಹಾಡುತ್ತಿರುವಂತಿತ್ತು. ಬಾಗಿಲನ್ನು ತಟ್ಟುವುದರ ಬದಲು ಕಿವಿ ನೀಡಿ ಕೇಳಿದ ಆಕೆ ಹಾಡುತ್ತಿರುವುದು ಯಾವ ಹಾಡಾಗಿರದೆ, ತಾಯಂದಿರು ಚಿಕ್ಕ ಮಕ್ಕಳನ್ನು ಮಲಗಿಸುವಾಗ ಹಾಡುವ

ಜೋಗುಳದ ಹಾಡಾಗಿತ್ತು. ಶ್ರೀನಿವಾಸ ತನ್ನಷ್ಟಕ್ಕೆ ನಕ್ಕ. ಬಾಗಿಲನ್ನು ತಟ್ಟಿದ.

ಬಾಗಿಲು ತಟ್ಟಿದ ಸದ್ದು ಹಾಡನ್ನು ಓಡಿಸಿತು. ಕಾವೇರಿ ಕೂಡಲೆ ಸುಮ್ಮನಾಗಿ ಬಾಗಿಲೆಡೆಗೆ ಬಂದು ಕೇಳಿದಳು :

" ಯಾರವರು ? "

" ನಾನು...."

" ನಾನು ಅಂದರೆ, ಯಾರು ? "

ಅವಳು ಪ್ರಶ್ನೆಯನ್ನು ಕೇಳುವ ರೀತಿಯೆ ಪ್ರಶ್ನೆ ಅನವಶ್ಯಕವೆಂದು ಸಾರಿ ಹೇಳುತ್ತಲಿತ್ತು. ಕಾವೇರಿ ದನಿಯನ್ನು ಗುರುತಿಸಿದ್ದಳೆಂಬುದರಲ್ಲಿ ಸಂದೇಹವೆ ಇರಲಿಲ್ಲ. ಅಂತೆಯೆ ಶ್ರೀನಿವಾಸ 'ನಾನು ಎಂದರೆ ನಾನು' ಎಂದೇ ಹೇಳಿದ. ಬಾಗಿಲು ತೆರೆಯಿತು. ಬಾಗಿಲು ತೆರೆದೊಡನೆ 'ಏನು ಹಾಡುತ್ತಿದ್ದೆ? ಅವನ್ನೇತಕ್ಕೆ ನಿಲ್ಲಿಸಿದೆ?' ಎಂದು ಕೇಳಬೇಕೆಂದುಕೊಂಡಿದ್ದ, ಬಾಗಿಲನ್ನು ತಟ್ಟಿದಾಗ. ಆದರೆ ಎದುರಿಗೆ ತೂಗಾಡುತ್ತಿದ್ದ ತೊಟ್ಟಿಲು ಆ ಪ್ರಶ್ನೆಗೆ ಉತ್ತರವನ್ನು ತಂದಿತು. ಪ್ರಶ್ನೆಯನ್ನೆ ಮರೆಯಿಸಿತು. ತಾನು ಊರಿಗೆ ಹೋಗುವಾಗ ಮೂಲೆಯಲ್ಲಿದ್ದ ತೊಟ್ಟಿಲು ತಾನು ಬರುವಷ್ಟರಲ್ಲಿ ತೂಗಾಡುತ್ತಿತ್ತು. ಮನೆಯಲ್ಲಿಯೆ ಇದ್ದ ಹರುಕುಮುರುಕು ಸಣಬು, ದಾರ, ಏನೇನನ್ನೊ ಸೇರಿಸಿ ತೊಟ್ಟಿಲವನ್ನು ಕಟ್ಟಿದ್ದಳು. ಅದರ ಕಡೆಗೆ ಕಣ್ಣು ಹೊರಳಿಸುವಾಗಲೆ ಆ ದೊಡ್ಡದಾದ ಬೊಂಬೆ ಸುಖವಾಗಿ ಅದರಲ್ಲಿ ಮಲಗಿತ್ತು —ಮೈಯಲ್ಲಿ ಅಂಗಿ, ತಲೆಗೆ ಟೊಪ್ಪಿಗೆ, ಕಾಲಿಗೆ ಪಾಪೋಸುಗಳು! ತಲೆಯ ಕೆಳಗೆ ದಿಂಬಿತ್ತು, ಎಡಬಲದಲ್ಲಿ ಲೋಡುಗಳಿದ್ದವು, ಕಾಲುದೆಸೆಗೆ ಹೊದ್ದಿಕೆಯೂ ಇದ್ದಿತು. ಶ್ರೀನಿವಾಸನಿಗೆ ನಗು ತಡೆಯದಾಯಿತು.

" ಇದೇನೆ ಕಾವಿ ? " ಎಂದ

ಕಾವೇರಿಗೆ ಒಂದರೆಕ್ಷಣ ನಾಚಿಕೆ ಎನಿಸಿರಬೇಕು. ಅಂತೆಯೆ ಸುಮ್ಮನಾದಳು.

" ನಿನ್ನ ಮಗುವೇನೆ ಇದು ! " ಎಂದು ನಕ್ಕ ಶ್ರೀನಿವಾಸ.

ಕಾವೇರಿ ಉತ್ತರ ಕೊಡಲಿಲ್ಲ ಆದರೆ ಮುಖದಲ್ಲಿ ಉತ್ತರ ಸ್ಪಷ್ಟವಾಗಿತ್ತು.

"ಅಂತೂ ನಾನು ಬರುವಷ್ಟರಲ್ಲಿಯೆ ಮಗುವನ್ನು ತೊಟ್ಟಿಲಲ್ಲಿ ಹಾಕಿಬಿಟ್ಟಿದ್ದೀಯೆ! ಹೆಸರೇನು, ಮಗುವಿಗೆ?"

ಕಾವೇರಿಗೆ ಯೋಚನೆಯಾಯಿತು. ಆ ವಿಚಾರವೆ ಆಕೆಗೆ ಹೊಳೆದಿರಲಿಲ್ಲ. ಹಗಲೆಲ್ಲ ಮನಸ್ಸಿನಲ್ಲಿ, ರಾತ್ರಿಯೆಲ್ಲ ಕನಸಿನಲ್ಲಿ ಜತೆಯಾಗಿಯೆ ಇರುತ್ತಿದ್ದ ಆ 'ಮಗು'ವಿಗೆ ಹೆಸರೊಂದನ್ನು ಇಡುವ ಅಗತ್ಯವೆ ಕಾವೇರಿಗೆ ಭಾಸವಾಗಿರಲಿಲ್ಲ. ಶ್ರೀನಿವಾಸ ಕೇಳಿದಾಗಲೆ ಆಕೆ ಅಂದುಕೊಂಡಳು. 'ಹೌದು, ಎಂಥ ಹುಚ್ಚಿ ನಾನು? ಮಗುವಿಗೆ ಹೆಸರು ಕೂಡ ಯೋಚಿಸಲಿಲ್ಲ!' ಕಾವೇರಿ ಸುಮ್ಮನಾದದ್ದು ಈ ವಿಚಾರಕ್ಕಾಗಿ ಎಂಬುದು ಶ್ರೀನಿವಾಸನಿಗೆ ತಿಳಿಯಲಿಲ್ಲವೆಂದೆ ಕೇಳಿದ:

"ಏನು? ಮಗುವನ್ನು ತೊಟ್ಟಿಲಲ್ಲಿ ಹಾಕಿದರೂ ನಮಗೆ ಅದರ ಔತಣದ ಊಟ ಹೋಗಲಿ—ಹೆಸರನ್ನೂ ಹೇಳುವುದಿಲ್ಲವೆ?" ಎಂದು ನಗೆಯಾಡಿದ.

"ಅದು ಹೋಗಲಿ. ಈಗಂತೂ ಮೊದಲು ನಿಮ್ಮ ಊಟವಾಗಲಿ. ಆಮೇಲೆ—"

"ಆಮೇಲೆ ಹೇಳುವಿಯಾ?...."

"ಆಮೇಲೆ ನೋಡೋಣವಂತೆ!"

ಶ್ರೀನಿವಾಸ ಹೊರಗಡೆ ಹೋಗಿಬಂದು ಕೈಕಾಲು ಮೋರೆ ತೊಳೆದುಕೊಂಡು, ಎಲೆಯ ಎದುರು ಕುಳಿತು ಕೇಳಿದ:

"ನಿನ್ನ ಊಟವಾಯಿತೆ?"

"ಹುಂ...."

"ಎಲ್ಲಿ, ಆದ ಹಾಗೆ ಕಾಣುವುದಿಲ್ಲವಲ್ಲ?"

"ಏನದು ಕಾಣುವುದು?"

"ಊಟ ಮಾಡಿದ ಯಾವ ಗುರುತೂ ಕಾಣಲಿಲ್ಲ. ಅದಕ್ಕೆಂದೆ."

"ಹಾಗಿದ್ದರೆ ಊಟವಾಗಿಲ್ಲ, ಎನ್ನಬಹುದು."

"ಎರಡೂ ಅಷ್ಟೆ ಅನ್ನು ಹಾಗಾದರೆ...."

"ನೀವಿಲ್ಲದಾಗ ಎರಡೂ ಅಷ್ಟೆ....ಒಬ್ಬಳೆ ಏನದು ಕಿಟಕಿಟ ಕುಳಿತು ಊಟ ಮಾಡುವುದು. ನನಗಂತೂ ಒಂದು ತುತ್ತೂ ಗಂಟಲಿಗಿಳಿಯುವುದಿಲ್ಲ."

ಮಹಡಿಯ ಮೇಲೆ ಬಂದು ಕೂಡುವಾಗ ಶ್ರೀನಿವಾಸನಿಗೊಂದು ಯೋಚನೆ. ಕಿಟ್ಟೂನ ಸಮಾಚಾರವನ್ನು ಕೇಳಿದರೆ ಮತ್ತೆ ಏನು ಹೇಳುವುದು? ತಾನು ಅವರ ಮನೆಗೆ ಹೋಗಿರಲೆ ಇಲ್ಲ. ಏನೆಂದು ಹೋಗುವುದು? ಕಿಟ್ಟೂನ ತಂದೆಯೊಡನೆಯೂ ಸಾಮಾನ್ಯ ಪರಿಚಯ ಮಾತ್ರವಿದ್ದಿತು. ಯಾವ ವಿಶೇಷ ಸೌಹಾರ್ದವಿಲ್ಲದಿದ್ದಾಗ—ಹೆಂಡತಿ ಹೇಳಿದಳೆಂದೊ, ಮಗುವಿನ ನೆಪ ಹೂಡಿಕೊಂಡೊ—ಹೋಗುವುದಾದರೂ ಹೇಗೆ? ಅಲ್ಲದೆ, ಹೊರಡುವಾಗ ಕಾವೇರಿ ಬಳೆಗಳ ವಿಷಯವನ್ನಾಗಲಿ, ಕಿಟ್ಟೂನಿಗಾಗಿ ಕೊಂಡಿದ್ದ ತೊಟ್ಟಿಲದ ವಿಷಯವನ್ನಾಗಲಿ ಎತ್ತದೆ ಇದ್ದುದರಿಂದ ಹೋಗಲು ಯಾವ ಕಾರಣವೂ ಉಳಿದಿರಲಿಲ್ಲ. ಆದರೆ ಅವೆಲ್ಲ ಹೇಗಿದ್ದರೂ ಈಗ ಕಾವೇರಿ 'ಕಿಟ್ಟೂನ ಮನೆಗೆ ಹೋಗಿದ್ದಿರಾ?' ಎಂದು ಕೇಳಿದರೆ ಏನು ಹೇಳುವುದು?

ಒಂದು ಕಡೆ ಈ ಯೋಚನೆಯಾದರೆ ಒಂದು ಕಡೆ ಊಟದ ಮಾತು ನಡೆದಿತ್ತು.

"ಹುಂ....ಅಂತೂ ನಾನು ಊರಲ್ಲಿರದಿದ್ದರೆ ನಿನಗೆ ಊಟವೆ ಇಲ್ಲ ಅನ್ನು, ಹಾಗಾದರೆ—"

"ಮಧ್ಯಾಹ್ನ ಮಾಡುತ್ತೇನೆ. ಆದರೆ ಸಾಯಂಕಾಲ ತೀರಾ ಬೇಸರವಾಗುತ್ತದೆ"

ಅನಿರೀಕ್ಷಿತವಾಗಿ ಕಾವೇರಿ ಕೇಳಿದಳು:

"ಅತ್ತೆಯವರು ಹೇಗಿದ್ದಾರೆ?"

"ಏನು ವಿಶೇಷವೂ ಇಲ್ಲ. ಇರುವ ಹಾಗೆ ಇದ್ದಾಳೆ, ಆಯಿತು."

"ಮತ್ತೆ ಯಾರು ಸಿಕ್ಕಿದ್ದರು?"

"ಎಲ್ಲಿಯೂ ಹೋಗಲೆ ಇಲ್ಲ. ಒಂದು ದಿನ ರಜೆ ಇಟ್ಟುಕೊಂಡು ಹೋದರೆ ಯಾವಾಗಲೂ ಅಷ್ಟೆ. ಹೋಗಿಬರುವುದರಲ್ಲಿಯೆ ರಜೆ ಕಳೆಯುತ್ತದೆ. ವ್ಯರ್ಥ ಶ್ರಮ."

"ನಾನು ಹೇಳಲಿಲ್ಲವೆ ಹೋದ ಸಲ? ಹೋಗುವುದಾದರೆ ಒಂದು ದಿನ ಹೆಚ್ಚಿಗೆ ರಜೆ ಪಡೆದುಕೊಂಡು ಹೋಗಬೇಕೆಂದು?"

"ನೀನೇನೊ ಹೇಳಿದೆ. ರಜೆ ಒಂದು ಸಿಕ್ಕಬೇಕಲ್ಲ?"

"ಹಾಗಿದ್ದರೆ ಹೋಗಲೇಬಾರದು."

"ಅದು ಹೇಗಾದೀತು ಕಾವಿ? ಅಲ್ಲಿ ಆಕೆ ಒಬ್ಬಳೆ ಇರುವವಳು...."

ಕಾವೇರಿ ಸುಮ್ಮನಾದಳು. ಶ್ರೀನಿವಾಸ ಕೇಳಿದ:

"ನೀನು ಏನೇನು ಮಾಡಿದೆ, ಎರಡು ದಿನ?"

"ನಾನೇನು ಮಾಡುವುದು? ಗಂಟೆ ಎಣಿಸುತ್ತ ಕುಳಿತಿದ್ದೆ."

"ಅಷ್ಟೇನೆ?"

"ಹೌದು. ಮತ್ತೇನು?"

"ನನಗೆನಿಸುತ್ತದೆ, ನೀನು ಗಂಟೆಗಳನ್ನು ಎಣಿಸಿಯೇ ಇಲ್ಲ, ಎಂದು."

"ಅದೇನು ಹಾಗೆ ಹೇಳುತ್ತೀರಿ?"

"ಹಾಗಾದರೆ ತಟ್ಟನೆ ಹೇಳು ನೋಡುವ, ನಾನು ಹೊರಟುಹೋಗಿ ಎಷ್ಟು ಗಂಟೆಯಾಯಿತು?"

"ಛೀ ಗಂಟೆ ಎಣಿಸಿದೆ ಅಂದರೆ ನಾನೇನು ಲೆಕ್ಕ ಇಟ್ಟಿದ್ದೇನೆಯೆ? ನಿಮ್ಮ ದಾರಿ ನೋಡುತ್ತಿದ್ದೆ ಎಂದರ್ಥ!"

"ಅದೇ ನಾನು ಹೇಳುತ್ತಿದ್ದುದೂ" ಎಂದು ಶ್ರೀನಿವಾಸ ನಕ್ಕು ಮುಂದುವರಿದ. "ನೀನು ನನ್ನ ದಾರಿಯನ್ನು ನೋಡುತ್ತಿರಲಿಲ್ಲ ಎಂದೆ ನಾನು ಹೇಳುತ್ತಿರುವುದು!"

"ಹಾಗಾದರೆ, ಏನು ಮಾಡುತ್ತಿದ್ದೆ?"

"ನಾನು ಬಾಗಿಲು ತಟ್ಟಿದಾಗ ಏನು ಮಾಡುತ್ತಿದ್ದೆ?"

"ಏನೂ ಇಲ್ಲವಲ್ಲ!"

"ನೋಡು. ಚೆನ್ನಾಗಿ ಜ್ಞಾಪಿಸಿಕೊ. ಏನು ಮಾಡುತ್ತಿದ್ದೆ?"

ಕಾವೇರಿಗೆ ಜ್ಞಾಪಿಸಿಕೊಳ್ಳುವ ಅಗತ್ಯವೆ ಇರಲಿಲ್ಲ. ಶ್ರೀನಿವಾಸನ ಮಾತಿನ ಹೊಳವು ಆಕೆಗೆ ಆಗಲೆ ಅರ್ಥವಾಗಿದ್ದಿತು "ಅದೇ" ಎಂದು ನಕ್ಕು ಮಾತು ತೇಲಿಸಿದಳು. ಆದರೆ ಶ್ರೀನಿವಾಸನಿಗೆ ಕಾವೇರಿಗೆ ಚೇಷ್ಟೆ ಮಾಡುವ ಇಚ್ಛೆ ಅನಿವಾರ್ಯವಾಗಿ ಮತ್ತೆ ಕೆದಕಿ ಕೇಳಿದ:

"ಅದು ಹೋಗಲಿ. ಆಗಲೆ ಹೆಸರನ್ನು ಕೇಳಿದೆ, ಹೇಳಲೆ ಇಲ್ಲವಲ್ಲೆ?"

"ಹೆಸರೆ? ಹೆಸರೇ ಇಲ್ಲ!" ಎಂದು ಗಟ್ಟಿಯಾಗಿ ನಕ್ಕಳು.

"ಮತ್ತೆ, ತೊಟ್ಟಿಲಲ್ಲಿ ಹಾಕುವಾಗ ಹೆಸರಿಡುವುದಿಲ್ಲವೆ?"

"ಹೌದು. ಆದರೆ ನೀವಿರಲಿಲ್ಲವಲ್ಲ!"

“ನಾನು ಇದ್ದು ಏನು ಮಾಡಬೇಕಾಗಿತ್ತು ?”

“ನೀವಿದ್ದರೆ ನಿಮ್ಮನ್ನು ಕೇಳಿ ಹೆಸರಿಡುತ್ತಿದ್ದೆ. ಆದರೆ ಈಗೇನಾಯಿತು ? ನೀವು ಹೇಳಿಬಿಡಿರಿ !”

“ಇದೊಳ್ಳೆಯ ಕೆಲಸ ! ಇಷ್ಟೊಂದು ಮಾತುಕತೆ ಆಡಿ, ಅದರ ಕೂಡ ಆಟವಾಡುವವಳು ನೀನು. ಹೆಸರು ನಾನು ಹೇಳಬೇಕೆ ?”

“ಅಲ್ಲ. ಅಂದರೆ ನೀವು ಹೇಳಿದರೆ ಇಬ್ಬರಿಗೂ ಒಪ್ಪಿಗೆಯಾಗುತ್ತದೆ.”

“ನಾನು ಹೇಳಿದ ಹೆಸರು ನಿನಗೆ ಒಪ್ಪಿಗೆಯಾಗುತ್ತದೆಯೆ ?”

“ಆಗದೆ ಏನು ?”

“ಹಾಗಿದ್ದರೆ, ಯೋಚಿಸಿ ಹೇಳುತ್ತೇನೆ ! ತಡೆ. ಹೊ ! ಆದರೆ ನಿನ್ನ ಮಗು ಗಂಡೊ ಹೆಣ್ಣೊ ? ಅದು ಗೊತ್ತಾಗದೆ ಹೆಸರು ಹೇಗೆ ಹೇಳುವುದು ?”

ಕಾವೇರಿಗೆ ಮತ್ತೆ ದಿಗಿಲೆನಿಸಿರಬೇಕು. ಮಗುವೆ ಮುಖ್ಯವಾಗಿದ್ದ ಆಕೆಗೆ ಈ ಯೋಚನೆ ಹೊಳೆದಿರಲಿಲ್ಲವೇನೊ ! ಔಷಧಿ ಪ್ರಾರಂಭ ಮಾಡುವಾಗ ಯಾವುದಿದ್ದರೂ ಸರಿ ಅಂದುಕೊಂಡಿರಲಿಲ್ಲವೆ ಆಕೆ ? ಕೊನೆಗೆಂದಳು :

“ಅದೇನು ? ನಿಮಗೆ ಯಾವುದು ಬೇಕೂ ಅದು !”

“ಹಾಗಾದರೆ ಎರಡಕ್ಕೂ ಸರಿಹೋಗುವ ಹೆಸರಿಡಬೇಕಾಯಿತು !”

ಶ್ರೀನಿವಾಸ ಒಂದೆರಡು ನಿಮಿಷ ಯೋಚನೆಯಲ್ಲಿ ಮುಳುಗಿದ್ದ ಹಾಗಿತ್ತು. ಕಾವೇರಿಯ ಈ ಆಟ ಆತನ ಮನಸ್ಸನ್ನೂ ಹಿಡಿದಿತ್ತು. ಆದರೆ ಮುಖ್ಯವಾಗಿ ಇದರಿಂದ ಕಾವೇರಿಗೆ ಸಂತೋಷವೆಂದೆ ಈ ‘ಮಗು’ವಿನ ವಿಚಾರವನ್ನು ಇಷ್ಟರವರೆಗೆ ಬೆಳೆಸಿದ್ದ. ಆದರೆ ಹೆಸರೇನೂ ಹೊಳೆಯಲಿಲ್ಲ.

“ನನಗೇನೂ ಬಗೆಹರಿಯುವಷ್ಟಿಲ್ಲ ಬಿಡು, ಈ ಪ್ರಶ್ನೆ.”

“ಅಂಥದೇನು ಕಷ್ಟವೊ ಅದರಲ್ಲಿ ?” ಎಂದಳು ಕಾವೇರಿ.

“ಹಾಗಾದರೆ ನೀನು ಯಾವುದನ್ನೊ ಗಟ್ಟಿ ಮಾಡಿಕೊಂಡಹಾಗಿದೆ, ಅಲ್ಲವೆ ?”

“ಹಾಗೇನಿಲ್ಲ. ಆದರೂ ಈ ಪುಟ್ಟಾಣಿನ್ನ ನೋಡಿದರೆ....”

“ಆಯಿತಲ್ಲ ಪುಟ್ಟಾಣಿ ಎಂದೆ ಅಂದುಬಿಡಬಹುದು !”

“ಪುಟ್ಟು ಅಂದರೂ ಆದೀತು !”

“ಓಹೊ ! ಹೀಗೊ ? ಅಂತೂ ಮಗು ಗಂಡು ಅಂದಹಾಗಾಯಿತಲ್ಲ !”

ಕಾವೇರಿ ಮೌನದಿಂದಲೆ ಸಮ್ಮತಿಯನ್ನು ಸೂಚಿಸಿದಂತಿತ್ತು. ಈ ಎಲ್ಲ ಮಾತು ನಡೆದಾಗ ಶ್ರೀನಿವಾಸನಿಗೆ ಒಂದು ಮಾತು ವಿಚಿತ್ರವೆನಿಸಿತ್ತು. ಅದೆಂದರೆ ತಾನು ಬಂದಾಗಿನಿಂದ ಕಾವೇರಿ ಕಿಟ್ಟೂನ ವಿಚಾರವಾಗಿ ಏನನ್ನೂ ಕೇಳದಿದ್ದುದು. ಅದ ಕೇಳುವುದು ಇನ್ನು ಮೇಲೆ ಸಾಧ್ಯವಿಲ್ಲವೆಂದೆ ಅನಿಸ ತೊಡಗಿತು, ಶ್ರೀನಿವಾಸನಿಗೆ ತಾನು ಊರಿಗೆ ಹೋಗುವ ಮುಂದೆ ತೆಗೆದು ಕೊಂಡು ಹೋಗಬೇಕಾಗಿದ್ದ ಪೆಟ್ಟಿಯ ಕಾಲುಕಡಗ ತೊಟ್ಟಿಲಲ್ಲಿಯ ಈ 'ಮಗು'ವಿನ ಕಾಲಿಲ್ಲದ್ದವು. ಕೈಯಲ್ಲಿಯ ಚಿನ್ನದ ಬಳೆಗಳೂ ಅಷ್ಟೆ. ಕಿಟ್ಟುವಿಗಾಗಿ ಕೊಂಡ ತೊಟ್ಟಿಲು ಎಲ್ಲಿಯೋ ತೂಗಾಡುತ್ತಿತ್ತು. ಕಳೆದ ಹದಿನೈದು ದಿನಗಳನ್ನು ನೆನೆದಾಗ ಕಾವೇರಿ ದಿನದಿನಕ್ಕೆ ಹೆಚ್ಚಾಗಿ ಈ ತನ್ನ ಕನಸಿನ ಮಗುವಿನಲ್ಲಿಯೇ ಆಸಕ್ತಳಾಗುತ್ತಿದ್ದಂತಿತ್ತು. ಇದುವರೆಗೆ ಅದರ ವಿಷಯದಲ್ಲಿಯೇ ಇಷ್ಟೊಂದು ಮಾತನಾಡಿದವಳಿಗೆ ದೂರದ ಕಿಟ್ಟುವಿಗಿಂತ ಹತ್ತಿರದ ಪುಟ್ಟುವೆ ಹೆಚ್ಚು ನಿಜವಾಗಿ ತೋರುತ್ತಿರಬೇಕೆಂಬುದು ಆಗ ಶ್ರೀನಿವಾಸನಿಗೆ ಮನವರಿಕೆಯಾಯಿತು.

ಈ ಮನವರಿಕೆ ದಿನನಿತ್ಯವೂ ಶ್ರೀನಿವಾಸನಿಗೆ ಹೆಚ್ಚು ಹೆಚ್ಚಾಗಿ ನಿಚ್ಚಳವಾಗತೊಡಗಿತು. ಆ ಬೊಂಬೆ, ಕಾವೇರಿಯ ಪಾಲಿಗೆ ಬೊಂಬೆಯಾಗಿರದೆ ನಿಜವಾಗಿಯೂ ಪುಟ್ಟುವಾಗಿತ್ತು. ಶ್ರೀನಿವಾಸ ಕಾವೇರಿಯ ಸಮಾಧಾನಕ್ಕೆಂದೊ, ತನ್ನ ಮೋಜಿಗೆಂದೊ ಬೊಂಬೆಯನ್ನು ಮಗುವೆಂದು ಭಾವಿಸಿ ಆಗೀಗ ಮಾತನಾಡುತ್ತಿದ್ದರೂ ತಾನು ಮಾತನಾಡುತ್ತಿದ್ದುದು ಬೊಂಬೆಯ ವಿಷಯವಾಗಿ ಎಂಬುದನ್ನು ಎಂದಿಗೂ ಮರೆಯುತ್ತಿರಲಿಲ್ಲ. ಅದು ಸಾಧ್ಯವೂ ಇರಲಿಲ್ಲ. ಆದರೆ ಕಾವೇರಿಗೆ ಮಾತ್ರ ಕನಸು ನೆನಸುಗಳಲ್ಲಿ ಅಂತರವೆ ಇರಲಿಲ್ಲ. ಆಕೆಯ ಮಟ್ಟಿಗೆ ಅದು ಮಗುವಿನ ಮೂರ್ತ ಸ್ವರೂಪ ಮಾತ್ರವಾಗಿರದೆ ಮಗುವೇ ಆಗಿತ್ತು!

ಒಂದು ದಿನ ರಾತ್ರಿ ವಾಡಿಕೆಯಂತೆ ಮಲಗುವ ಮುಂದೆ ಕುಡಿಯಲು ಬೇಕಾದ ಹಾಲಿನ ಕಪ್ಪಿಗಾಗಿ ಶ್ರೀನಿವಾಸ ಕಾಯುತ್ತಿದ್ದ. ಕಾವೇರಿ ಎಲ್ಲ ಕೆಲಸಗಳನ್ನು ಮುಗಿಸಿ ಬಂದು ಮಲಗುವುದರಲ್ಲಿದ್ದಳು. ಹಾಲು ಬಾರದೆ ಇದ್ದುದನ್ನು ನೋಡಿ ಶ್ರೀನಿವಾಸ ಕೇಳಿದ:

"ಏನು ಕಾವಿ? ಹಾಲು ಕೊಡಲೆ ಇಲ್ಲವಲ್ಲ!"

"ಹಃ! ಹಾಲೆ? ಹಾಲು ಇವತ್ತು ಇಲ್ಲ!"

"ಅದೇನು? ಚೆಲ್ಲಿ ಹೋಯಿತೆ?"

"ಪುಟ್ಟುವನ್ನು ಕೇಳಿ!"

"ಅಂದರೆ?"

"ಅಂದರೆ, ಆತ ದಿನದಿನಕ್ಕೂ ತುಂಬ ಕಿಡಿಗೇಡಿಯಾಗುತ್ತಿದ್ದಾನೆ. ಮಧ್ಯಾಹ್ನವಂತೂ ಆತನನ್ನು ಎಷ್ಟು ಹಿಡಿದರೂ ತೀರದು. ಸಂಜೆ ಆಟ ಮುಗಿಸಿ ಓಡಿಬರುತ್ತಿದ್ದಾಗ ಎಡವಿಬಿಟ್ಟ—"

ಶ್ರೀನಿವಾಸ ನಿರೀಕ್ಷಿಸಿದಂತೆ ಕಾವೇರಿಯ ಮುಖದಲ್ಲಿ ನಗೆಯ ಸುಳಿ ವಿರಲಿಲ್ಲ. ಎಲ್ಲವೂ ನಿಜವಾಗಿ ನಡೆದಂತೆ ಗಂಭೀರವಾಗಿ ಹೇಳುತ್ತಿದ್ದಳು. ಆಕೆಯ ಮಟ್ಟಿಗೆ ಅದೆಲ್ಲ ನಿಜವಾಗಿಯೇ ಇತ್ತು. ಶ್ರೀನಿವಾಸನಿಗೆ ಮೋಜೆನಿಸಿತು. ಮರುಕ್ಷಣ ವಿಚಿತ್ರವೆನಿಸಿತು. ಅರೆಕ್ಷಣ ತಡೆದು, ನಸುನಕ್ಕು ಕೇಳಿದ:

"ಪುಟ್ಟು ಅಷ್ಟೊಂದು ಓಡಾಡುತ್ತಿದ್ದಾನೆಯೆ?"

"ಓ! ಹಾಗೆ ಕೇಳುತ್ತೀರಾ? ನೀವು ನೋಡಿದರೆ ಗೊತ್ತಾದೀತು! ಅವನ ಓಡಾಟಕ್ಕೆ ಈ ಮನೆಯೆ ಸಾಲದಾಗಿದೆ. ಸಾಯಂಕಾಲ ಆ ತೋಟದಲ್ಲಿ ಮಕ್ಕಳು ಬಂದಾಗ ಅಲ್ಲಿಯೂ ಹೋಗಿ ಓಡಾಡಿ, ಆಡಿ ಬರುತ್ತಾನೆ...."

"ಹೌದೆ?" ಎಂದ ಶ್ರೀನಿವಾಸ ವಿಮನಸ್ಕನಾಗಿ.

"ನೋಡಿದರೆ ನೀವು ಬೆರಗಾದೀರಿ! ಎಷ್ಟು ಮುದ್ದಾಗಿ ಪುಟುಪುಟು ನಡೆಯುತ್ತದೆ ಅನ್ನುತ್ತೀರಿ! ಆದರೆ ಒಮ್ಮೊಮ್ಮೆ ಓಡಾಡಿ ದಣಿದು ಕುಕ್ಕರಿಸುತ್ತದೆ. ಇನ್ನೂ ಒಮ್ಮೊಮ್ಮೆ ನೋಡಬೇಕು. ಹೇಗೆ ಹಿರಿಯರ ಹಾಗೆ ಅಟ್ಟಹಾಸದಿಂದ ನಡೆದಾಡುತ್ತಾನೆ...."

ಶ್ರೀನಿವಾಸ ಸುಮ್ಮನೆ ಹುಂ ಎನ್ನುತ್ತಿದ್ದ. ಕಾವೇರಿಗೆ ಅದರಿಂದ ಯಾವ ನಿರುತ್ಸಾಹವೂ ಅನಿಸುತ್ತಿರಲಿಲ್ಲ. ಆಕೆ ಈ ಪ್ರಪಂಚದಲ್ಲಿ ಇರಲಿಲ್ಲವೆಂಬುದೆ ನಿಜ. ಪುಟ್ಟುವಿನ ವಿಚಾರ ಎಷ್ಟು ಹೇಳಿದರೂ ಆಕೆಗೆ ಸಮಾಧಾನವಿದ್ದಂತೆ ಕಾಣಲಿಲ್ಲ. ಹೇಳಬೇಕಾದ ವಿಷಯಗಳಿಗೂ ಎಣಿಕೆ ಇರಲಿಲ್ಲ. ಮಧ್ಯಾಹ್ನ ಬಟ್ಟೆಬರೆ ಹಾಕುವಾಗ ಹೊಸ ಟೊಪ್ಪಿಗೆ ಬೇಕು ಎಂದು ಹಟ ಹಿಡಿದದ್ದು, ಆಮೇಲೆ ಬೇರೆಯಾದ ಬಣ್ಣದ ಬೂಟ್ಸು ಪಾಪೋಸು ಬೇಡಿದ್ದು, ಇದೆಲ್ಲ ಆದಮೇಲೆ ತಾನಾಗಿಯೆ ಕಾವೇರಿ ಎತ್ತಿಕೊಂಡು ಹೋಗಿ

ತೊಟ್ಟಿಲಿಗೆ ಕರೆದೊಯ್ಯಬೇಕೆಂದಷ್ಟು—ಹೀಗೆ ಏನೇನೊ ಹೇಳುತ್ತಲೆ ಇದ್ದಳು. ಶ್ರೀನಿವಾಸನಿಗೆ ನಿದ್ರೆ ಬರುತ್ತಿದ್ದರಲ್ಲಿತ್ತು. ಆದರೆ ತಾನು ಹೇಳುತ್ತಿದ್ದುದನ್ನು ಕೇಳುತ್ತಿಲ್ಲವೆನ್ನುವುದು ಕಾವೇರಿಗೆ ತಿಳಿಯಬಾರದೆಂದೆ ಕೇಳುವ ನಟನೆಯನ್ನು ಆಗೀಗ ಹುಂ....ಎಂದು ನಡೆಸಿದ್ದ. ಕೊನೆಗೆ, ಇದು ಕಾವೇರಿಯ ಗಮನಕ್ಕೆ ಬಂದಿರಬೇಕೆಂತಲೆ ಕೇಳಿದಳು :

"ನಿಮಗೆ ನಿದ್ರೆ ಬಂದಿತೆಂದು ಕಾಣುತ್ತದೆ...."

"ಇನ್ನೂ ಇಲ್ಲ."

"ಅದೇನು ಹಾಗಾದರೆ? ನಾನು ಎಷ್ಟು ಹೇಳಿದರೂ ನೀವು ಹಾಂ, ಹುಂ—ಅನ್ನುತ್ತಿದ್ದೀರಿ, ಅಷ್ಟೆ ?"

"ಮತ್ತಿನ್ನೇನು ಮಾಡಲಿ? ಹೇಳಿದ್ದನ್ನು ಕೇಳುತ್ತಿದ್ದೇನೆ."

"ಏನೇನು ಹೇಳಿದೆ ?"

"ಇವಳ ಶಾಲೆಯ ಕೆಲಸ. ಪಾಠ ಒಪ್ಪಿಸಬೇಕು? ಹಾಗಾದರೆ ನನಗೆ ನಿದ್ರೆ ಬಂದಿದೆ. ಬೇಕಾದರೆ ನಾಳೆಗೆ ಹೇಳಿಯೇನು"

"ಇಷ್ಟರಲ್ಲಿಯೆ ನಿದ್ರೆ ಬಂದುಬಿಟ್ಟಿತೆ ?"

"ಅಂದರೆ, ಮಲಗಿದರೆ ಬಂದುಬಿಡುತ್ತದೆ ಅಂತ ಅರ್ಥ."

"ಹಾಗಿದ್ದರೆ ಮಲಗಿಬಿಡಿ. ನನಗಿನ್ನೂ ಬಾರಲೆ ಇಲ್ಲ."

"ನೀನೇನು ಮಾಡುವಿ ಹಾಗಾದರೆ ?"

"ಏನು ಮಾಡುವುದು ? ಎಚ್ಚರವಾಗಿಯೆ ಇರುತ್ತೇನೆ. ಅಲ್ಲದೆ, ಮಗು ಎದ್ದುಬಿಟ್ಟರೆ ?

"ಅದೇನೂ ಏಳುವುದಿಲ್ಲ, ಮಲಗಿಕೊಳ್ಳಬಾರದೆ ಸುಮ್ಮನೆ ?" ಎಂದ ಶ್ರೀನಿವಾಸ. ಆತನ ದನಿಯಲ್ಲಿನ ಬೇಸರದ ಸುಳಿವು ಕಾವೇರಿಯ ಮನಸ್ಸನ್ನು ತಟ್ಟದಿರಲಿಲ್ಲ

"ಇಂದು ಸಂಜೆ ತೀರಾ ಹಟ ಮಾಡಿ ಮಲಗಿದ. ಹಾಲು ಎಡವಿದ್ದಕ್ಕೆ ನಾನೂ ತುಂಬಾ ಅಂದುಬಿಟ್ಟೆ. ಎಷ್ಟು ಸಣ್ಣ ಮೋರೆ ಮಾಡಿತ್ತು, ಅಂತೀರಿ!"

ಶ್ರೀನಿವಾಸನಿಗೆ ನಿದ್ರೆಯ ಆವೇಗವನ್ನು ತಡೆಯಲಾಗದೆ ಇನ್ನೊಂದೆಡೆ ಹೊರಳಿದ. ನಿವಿ ಷಾರ್ಥದಲ್ಲಿಯೆ ಅವನಿಗೆ ನಿದ್ರೆ ಹತ್ತಿರಬೇಕು. ಕಾವೇರಿ ಮಾತ್ರ ಕುಳಿತೆ ಇದ್ದಳು ಕಣ್ಣು ತೆರೆದು, ತೊಟ್ಟಿಲಲ್ಲಿ ಮಲಗಿದ ಮಗು

ವನ್ನೆ ದಿಟ್ಟಿಸುತ್ತಿದ್ದಳು. ಅದೇಕೋ, ಆಕೆಯ ಎದೆಯಲ್ಲಿ ಕನಿಕರ ತುಂಬಿ ಬಂದಿತು. ಮಗುವಿಗೆ ಬಿರುನುಡಿಗಳನ್ನು ಆಡಿದ್ದಳಲ್ಲವೆ? ಅಂಥ ಚಿಕ್ಕ ಮಗುವಿಗೆ ಹಾಗೆ ಆಡಬಹುದೆ? ಕುಳಿತಲ್ಲಿಂದ ಎದ್ದು ಬಂದು, ಹಾಯಾಗಿ ತೊಟ್ಟಿಲಲ್ಲಿ ಮಲಗಿದ ಮಗುವಿನ ಮುಖದ ಮೇಲೆ ಅಕ್ಕರೆಯಿಂದ ಕೈ ಆಡಿಸಿದಳು ಕಣ್ಣೊರಸಿದಳು. ಆಗ ಕಾವೇರಿಯ ಕಣ್ಣುಗಳಲ್ಲಿಯೂ ನೀರು ತುಂಬಿತ್ತು. ಅರೆನಿಮಿಷದಲ್ಲಿಯೆ ಕಣ್ಣೀರ ತೆರೆಯ ಮೂಲಕ ಮಗು ಕಾಣದಾಯಿತು. ತನಗೆ ತಿಳಿಯದಲೆ ಕಾವೇರಿ ಆಚೆಯ ಕಿಟಕಿಯ ಹತ್ತಿರ ಬಂದು ನಿಂತು ಹೊರಗೆ ಹಬ್ಬಿದ ರಾತ್ರಿಯನ್ನು ದಿಟ್ಟಿಸುತ್ತಿದ್ದಳು.

ಸುತ್ತಲೆಲ್ಲವೂ ಶಾಂತತೆ ತಾನೆ ತಾನಾಗಿ ಮರೆಯುತ್ತಿತ್ತು. ಎಡ ಬಲದ ಗಿಡಗಳೆಲ್ಲವೂ—ಎದುರಿನ ತೋಟದಲ್ಲಿಯ ಹೂವಿನ ಗಿಡಗಳೆಲ್ಲವೂ ಮಂದವಾದ ಬೆಳಗಿನ ವಿವರ್ಣ ಕಾಂತಿಯಲ್ಲಿ ಮೀಯುತ್ತಿದ್ದವು ಆಗೀಗ ಗಿಡಗಳೊಳಗಿಂದ ಹಾಯ್ದುಹೋಗುವ ಗಾಳಿಯ ಶಬ್ದದ ಹೊರತು ಇನ್ನಾವುದೂ ಕೇಳಬರುತ್ತಿರಲಿಲ್ಲ ಕಾವೇರಿ ನೋಡುತ್ತಲೆ ಇದ್ದಳು. ಇಡಿ ಪ್ರಪಂಚವೆ ನಿದ್ರೆಹೋಗಿ ಯಾವುದೊ ಒಂದು ಅಸ್ಪಷ್ಟವಾದ ಕನಸನ್ನು ಕಾಣುತ್ತಿರುವಂತಿತ್ತು. ಸುತ್ತಲಿನ ಆ ಶಾಂತತೆಯನ್ನು, ಎಲ್ಲವನ್ನೂ ಆವರಿಸಿ ತಾನೆ ತಾನಾಗಿ ನಿಂತ ಆ ನೀರವತೆಯನ್ನು ನೆನೆಯುತ್ತಿದ್ದ ಹಾಗೆ ಕಾವೇರಿಗೆ ಅದೇಕೊ ದುಃಖ ಉಕ್ಕಿ ಬಂದಿತು. ಆ ಶೂನ್ಯತೆ ತನ್ನ ಜೀವನದ ಶೂನ್ಯತೆಯಾಗಿ, ಮೂರ್ತಿಮತ್ತಾಗಿ ತನ್ನೆದುರಿಗೆ ನಿಂತಂತೆ ಭಾಸವಾಯಿತೇನೊ! ಇಂಥ ರಾತ್ರಿಯಲ್ಲಿ ಇನ್ನು ಯಾರು ಯಾತಕ್ಕೆ ಎಚ್ಚರವಾಗಿದ್ದುಕೊಂಡು ಹೀಗೆ ನಿಂತು ನಿಶ್ಯಬ್ದತೆಯನ್ನು ನೋಡುತ್ತಿರಬಹುದು? ಉಳಿದವರು ಯಾರು ಯಾತಕ್ಕೆ ಹಾಗಿರಬೇಕು? ತಮ್ಮ ಮುದ್ದು ಮಕ್ಕಳನ್ನು ಮಡಿಲಲ್ಲಿ ಮಲಗಿಸಿಕೊಂಡು ಸುಖವಾಗಿ ನಿದ್ರೆಹೋಗಿರಬಹುದಾದ ಸಾವಿರಾರು ತಾಯಂದಿರ ಚಿತ್ರಗಳು ಕಾವೇರಿಯ ಕಣ್ಣೆದುರು ಸುಳಿದವೊ ಏನೊ! ಕೊನೆಗೆ, ಕಣ್ಣೀರ ತೆರೆಯ ಹಿಂದೆ ಆ ಚಿತ್ರಗಳೂ ಮರೆಯಾದವು. ತನ್ನಂಥ ಹತಭಾಗ್ಯರಿಗೆ ಅಂಥ ಸುಖ ಎಲ್ಲಿಯದು? ಎಂದು ದುಃಖಿಸಿ ಹಿಂದಿರುಗಿದಳು. ಹಾಸಿಗೆಯ ಹತ್ತಿರ ಹೋಗುವಾಗ ತೊಟ್ಟಿಲದ ಕಡೆ ನೋಡುವ ಧೈರ್ಯವೆ ಆಗಲಿಲ್ಲ, ಕಾವೇರಿಗೆ!

## ೧೦

ಕೊನೆ ಇಲ್ಲದೆ ಕಾವೇರಿ ಹೇಳುತ್ತಿದ್ದ ಪುಟ್ಟುವಿನ ಪುರಾಣ ಆಗೀಗ ಶ್ರೀನಿವಾಸನಿಗೆ ಬೇಸರವನ್ನುಂಟುಮಾಡುತ್ತಿದ್ದರೂ ಇತ್ತೀಚೆ ಆತ ತಾನಾಗಿಯೆ ಅಂಥ ಮಾತನ್ನು ಮೊದಲುಮಾಡುತ್ತಿದ್ದ. ಅದರಿಂದ ಕಾವೇರಿಗೆ ಸಂತೋಷವೆಂದು ಬಲ್ಲವನಾದ್ದರಿಂದ ಹಾಗೆ ಹೇಳುತ್ತಿದ್ದನೊ ಏನೊ! ಅದು ಹೇಗಿದ್ದರೂ ಸಾಯಂಕಾಲ ಆಫೀಸಿನಿಂದ ಬಂದೊಡನೆಯೆ 'ಪುಟ್ಟು ಏನೆನ್ನುತ್ತಾನೆ?' ಎಂಬ ಪ್ರಶ್ನೆಯನ್ನು ಕೇಳುವುದು ಹೆಚ್ಚು ಕಡಿಮೆ ವಾಡಿಕೆಯೆ ಆಗಿಬಿಟ್ಟಿತ್ತು. ಇಂದು ಸಾಯಂಕಾಲ ನಡೆದದ್ದೂ ಅಷ್ಟೆ!

"ಪುಟ್ಟೂನ ತಾಯಿ ಏನೆನ್ನುತ್ತಿದ್ದಾಳೆ?"

"ಏನೂ ಇಲ್ಲ. ಅಳನ ತಂದೆಗಾಗಿ ಕಾಯುತ್ತಿದ್ದಾಳೆ" ಎಂದು ನಸುನಕ್ಕಳು.

"ಪುಟ್ಟು ಎಲ್ಲಿ?"

"ಎಲ್ಲಿ ಎಂದೇನು ಕೇಳುತ್ತೀರಿ? ಈ ವೇಳೆಗೆ ಆತ ಮನೆಯಲ್ಲಿರುವುದುಂಟೆ! ನಾಲ್ಕು ಗಂಟೆಯಾದ ಕೂಡಲೆ ಅವಸರ ಮಾಡುತ್ತಾನೆ—ಆಡುವ ತೋಟಕ್ಕೆ ಕರೆದುಕೊಂಡು ಹೋಗು, ಎಂದು!"

"ಕತ್ತಲಾಗುತ್ತ ಬಂದಿತಲ್ಲ, ಇನ್ನೂ ಬರಲಿಲ್ಲ!" ಶ್ರೀನಿವಾಸ ಮುಂದುವರಿದ.

"ಕತ್ತಲಾದರೇನಾಯಿತು? ಅವನೇನು ದಾರಿ ತಪ್ಪುತ್ತಾನೆಯೆ?"

"ಹಾಗಲ್ಲ, ಕಾವಿ. ನೀನು ತುಸು ಎಚ್ಚರವಾಗಿರಬೇಕು. ಇಷ್ಟು ಹೊತ್ತು ರಾತ್ರಿ ಮಗುವನ್ನು ಒಬ್ಬಂಟಿಗನಾಗಿ ಬಿಟ್ಟುಬಿಡುತ್ತಾರೆಯೆ ಯಾರಾದರೂ?"

"ಒಬ್ಬಂಟಿಗನಾಗಿ ಏಕೆ? ಬೇಕಾದಷ್ಟು ಮಕ್ಕಳು ಇದ್ದಾರೆ, ಜತೆಯಲ್ಲಿ ಆಡಲಿಕ್ಕೆ...."

"ಅದಕ್ಕಲ್ಲ, ನಾನು ಹೇಳಿದ್ದು. ಆಡುತ್ತ ಆಡುತ್ತ ಆಚೆ ಬೀದಿಗೆ ಹೋಗಿಬಿಟ್ಟರೆ? ನೋಡಿದೆಯೊ, ಎಷ್ಟು ಗಾಡಿ, ಎಷ್ಟು ಕಾರು ಓಡಾಡುತ್ತಿವೆ? ಎಲ್ಲಿಯಾದರೂ—"

ಶ್ರೀನಿವಾಸ ಮಾತನ್ನು ಮುಗಿಸಿರದಿದ್ದರೂ ಆತನ ಅರ್ಥ ಕಾವೇರಿಯನ್ನು ಗಾಸಿ ಮಾಡಿತು. ಆ ಯೋಚನೆ ಆಕೆಯನ್ನು ಅಲಗಿನಿಂದ ಇರಿದಂತೆ ಕಣ್ಣನ್ನು ಮುಚ್ಚಿದಳು. ಆ ಮುಚ್ಚಿದ ಕಣ್ಣುಗಳೆದುರು ಒಂದು ಚಿತ್ರ ತಟ್ಟನೆ ಕಾಣಿಸಿಕೊಂಡು ಮಾಯವಾಯಿತು—ಕಗ್ಗಿನ ಬೀದಿಯ ಮಧ್ಯದಲ್ಲಿ ಕೆಂಪಗಾದ ಬಿಸಿಯಾದ ರಕ್ತದ ಮಡುವು—ಅದರ ಮಧ್ಯದಲ್ಲಿ ಮುದ್ದೆಯಾಗಿ ಏನೊ ಬಿದ್ದುಕೊಂಡಂತೆ! ಕಾವೇರಿ ಗಟ್ಟಿಯಾಗಿ ತಲೆ ಹಿಡಿದುಕೊಂಡಳು. ಅರೆಕ್ಷಣದಲ್ಲಿ ಚಿತ್ರ ಮಾಯವಾಯಿತು. ಸುಧಾರಿಸಿಕೊಂಡು ಹೇಳಿದಳು :

"ಹೋಗಿ, ಏನಾದರೊಂದು ನೀವು ಹೇಳುವುದು. ನಮ್ಮ ಪುಟ್ಟು ಅಷ್ಟೊಂದು ಪೆದ್ದು ಅನ್ನುತ್ತೀರಾ?—ನಿಮ್ಮ ಹಾಗೆ ?"

"ಅಂದರೆ ? ನಾನು ಪೆದ್ದು ಅಂದಹಾಗಾಯಿತಲ್ಲ! ಏನು ತಯಾರಾಗಿದ್ದೀಯೆ ಇಲ್ಲಿಗೆ ಬಂದು ? ಬಾಗಿಲುಕೋಟೆಯಲ್ಲಿ ಇದ್ದಾಗ ಇಂಥ ಮಾತು ಹೇಳುತ್ತಿದ್ದೆಯಾ ?"

"ಬಾಗಿಲುಕೋಟೆಯಲ್ಲಿ ಪುಟ್ಟು ಇರಲಿಲ್ಲವಲ್ಲ."

"ಅಂತೂ ನೀನು ಆಡಿದ್ದನ್ನು ಅವನ ಮೇಲೆ ಹಾಕಿ ಪಾರಾಗಬೇಕು ಅನ್ನುತ್ತೀಯಾ ?"

"ಪಾರಾಗುವುದೇನು ? ಇದ್ದ ಮಾತು" ಎಂದು ಗಟ್ಟಿಯಾಗಿ ನಕ್ಕು, "ಅವನೇ ಹೇಳಿದ್ದಾನೆ, ನನಗೆಲ್ಲ...." ಎಂದಳು.

"ಏನೇನು ಹೇಳಿದ ?"

"ಮೊನ್ನೆ ನೀವು ಆಫೀಸಿನಲ್ಲಿ ಐದು ರೂಪಾಯಿ ಕಳೆದುಕೊಳ್ಳಲಿಲ್ಲವೆ ? ಅದಕ್ಕೆ ಆತ ಹಾಗೆ ಹೇಳಿದ್ದ ..."

"ಮತ್ತೇನು ಹೇಳಿದ ?...."

"ಅದಕ್ಕೆ, ಚೆನ್ನಾಗಿ ಕಿವಿ ಹಿಂಡಬೇಕು ಎಂದು ಹೇಳಿದ...." ಮತ್ತೆ ನಗು. ಆ ನಗ ವಿರದಿದ್ದರೆ ಶ್ರೀನಿವಾಸ ಏನೆಂದುಕೊಳ್ಳುತ್ತಿದ್ದನೋ. ಆ ನಗುವಿನ ಹಿಂದೆ ಸಂಸವಿದ್ದಿತು ಅದಕ್ಕಾಗಿಯೆ ಶ್ರೀನಿವಾಸ ಸುಮ್ಮನಾದ.

"ಊಂ. ಅಂತೂ ನಿನ್ನ ಮಗ ನನಗೂ ಬುದ್ಧಿ ಹೇಳಲಿಕ್ಕೆ ಬಂದಿದ್ದಾನೆ ಅಂದಹಾಗಾಯಿತು. ಇದೆಲ್ಲ ನಿನ್ನದೆ ಆಟ. ಎಲ್ಲ ಮಾತು ನೀನೆ ಹೇಳಿಕೊಡುತ್ತಿ ಆತನಿಗೆ...."

"ನಾನು ಹೇಳಿಕೊಡುತ್ತೇನೆಯೆ? ನಿಮಗೇನು ಹುಚ್ಚು? ಮಾತನಾಡಲಿಕ್ಕೆ ಪುಟ್ಟುವಿಗೆ ನಾವು ಹೇಳಿಕೊಡಬೇಕೆ? ಈ ಹೊತ್ತು ಮಧ್ಯಾಹ್ನ ಕೇಳಬೇಕಿತ್ತು ನೀವು...."

"ಏನದು?...."

"ಇಂದು ಮಧ್ಯಾಹ್ನ ಪುಟ್ಟು ಹೇಳಿದ—'ನಿನಗೆ ಕೆಲಸ ಮಾಡಿ ಮಾಡಿ ಬಹಳ ದಣಿವಾಗುತ್ತದೆ. ಅದಕ್ಕೆ ನನಗೆ ಬೇಗನೆ ಒಂದು ಮದುವೆ ಮಾಡಿಬಿಡು. ಸೊಸೆ ಬಂದರೆ ಎಲ್ಲ ಕೆಲಸ ಮಾಡಿಕೊಂಡಿರುತ್ತಾಳೆ. ಅಂದರೆ ನನ್ನ ಕೂಡ ಆಡಲಿಕ್ಕೆ ನಿನಗೆ ಅನುಕೂಲವಾಗುತ್ತದೆ' ಎಂದು"

"ಹುಂ....ಅಂತೂ ನಿನಗೂ ಸೊಸೆ ಬೇಕು ಅಂದಹಾಗಾಯಿತಲ್ಲ! ಸೊಸೆ ಬಂದರೆ ಸುಖವಿಲ್ಲ, ಕಾವಿ. ಅತ್ತೆ-ಸೊಸೆ ಜಗಳ ಪ್ರಾರಂಭವಾಗುತ್ತದೆ. ನಾನೆಲ್ಲಿ ಸುಮ್ಮನೆ ಮಧ್ಯಸ್ಥಿಕೆ ಮಾಡಲಿ? ಅದೇನೂ ಬೇಡ...."

"ಅಂದರೆ? ನಾನೂ ಸೊಸೆಯನ್ನು ಪೀಡಿಸುತ್ತೇನೆ ಅಂತೀರಾ?"

"ಯಾರಿಗೆ ಗೊತ್ತು? ಅತ್ತೆಯಾದವಳು ಮೊದಲು ಸೊಸೆಯೆ ಆಗಿರುತ್ತಾಳೆ. ಆದರೂ—"

"ಆದರೂ ಇಲ್ಲ, ಯಾವುದೂ ಇಲ್ಲ. ನನ್ನ ಸೊಸೆಗೆ ನಾನು ಏನೂ ಅನ್ನುವುದಿಲ್ಲ"

"ಹಾಗಾದರೆ ಪುಟ್ಟು ದೂರವಾಗಿ ಬೇರೆಯೆ ಇರಬೇಕಾಯಿತು!"

"ಅದೇಕೊ? ಒಂದೆ ಕಡೆ ಇದ್ದರೂ —"

"ಒಂದೆ ಕಡೆಗೆ ಇದ್ದರೆ ಬೆಂಕಿ-ಬೆಣ್ಣೆ ಸಖ್ಯ—ಅಷ್ಟೆ!"

ಶ್ರೀನಿವಾಸನ ಮಾತನ್ನು ಅಲ್ಲಗಳೆಯುವದು ಸಾಧ್ಯವಿಲ್ಲವೆಂಬುದನ್ನು ತನ್ನ ಅನುಭವನೆ ಸಾರಿ ಹೇಳುತ್ತಿತ್ತು. ತನ್ನ ಅನುಭವ ಸಾಲದಿದ್ದರೆ ಚಂಪಕ್ಕನ ಅನುಭವವಿತ್ತು. ಅದೆಲ್ಲದರ ನೆನಹು ಒಂದು ನಿಮಿಷ ಕಾವೇರಿಯನ್ನು ವಿಮನಸ್ಕಳನ್ನಾಗಿ ಮಾಡಿತು. ಯೋಚನೆಗೀಡುಮಾಡಿತು. ಆ ಯೋಚನೆಯಲ್ಲಿಯೆ ತನ್ನಷ್ಟಕ್ಕೆಯೆ ಎಂಬಂತೆ ಅಂದಳು:

"ಅದು ಯಾಕೆ ಹೀಗಾಗಬೇಕೊ, ಕಾಣೆ."

"ಯಾಕೇನು? ಈಗ ನೀನು ಏನೆಂದೆ? ಅದನ್ನೆ ಯೋಚಿಸಿದರೆ ತಾನಾಗಿಯೆ ಗೊತ್ತಾಗುತ್ತದೆ."

"ಏನೆಂದೆ?"

"ಸೊಸೆ ಯಾತಕ್ಕೆ ಬೇಕು ಅಂದೆ?"

"ಸುಮ್ಮನೆ—"

"ಅಲ್ಲವೇ ಅಲ್ಲ. ಎಲ್ಲ ಕೆಲಸ ಮಾಡಿಕೊಂಡಿರಲಿಕ್ಕೆ ಬೇಕು ಅನ್ನಲಿಲ್ಲವೆ?"

"ನಾನಲ್ಲ. ಅದನ್ನು ಅಂದದ್ದು—ಪುಟ್ಟು!"

"ಯಾರೆ ಇರಲಿ. ನೀನು ಒಪ್ಪಿದೆ."

"ಹಾಗಾದರೆ ಸೊಸೆಯಾದವಳು ಕೆಲಸವನ್ನೆ ಮಾಡಬಾರದು ಅನ್ನುತ್ತೀರಾ?"

ಶ್ರೀನಿವಾಸನಿಗೆ ನಗು ತಡೆಯದಾಗಿ ಹೇಳಿದ:

"ನೋಡಿದೆಯಾ, ಈಗಾಗಲೆ ಹೇಗೆ 'ಅತ್ತೆತನ' ನಿನಗೆ ಬಂದು ಬಿಟ್ಟಿದೆ. ಕೆಲಸ ಬೇಡ ಎಂದಲ್ಲ, ನಾನು ಹೇಳುತ್ತಿರುವುದು. ಆದರೆ ಕೆಲಸಕ್ಕಾಗಿಯೆ ಅವರು ಬಂದದ್ದು ಎಂದು ಹಿರಿಯರಲ್ಲಿ ಭಾವನೆ ಇದ್ದರೆ ಅದು ತಪ್ಪು ಎಂದೆ ಅದರಿಂದಲೆ ಎಲ್ಲ ಜಗಳ ಹುಟ್ಟುವುದು."

ಕಾವೇರಿಗೆ ಶ್ರೀನಿವಾಸನ ಮಾತು ನಿಜವೆನಿಸಿತು. ಕೆಲಸಕ್ಕೆ, ದುಡಿತಕ್ಕೆ ತಾನು ಎಂದಿಗೂ ಹಿಂಜರಿದವಳಲ್ಲ. ಆದರೂ ತನ್ನ ಅತ್ತೆ—? ಎಂದು ಮನಸ್ಸು ಎಲ್ಲೆಲ್ಲಿಯೊ ಓಡಿತು. ಶ್ರೀನಿವಾಸನಿಗೂ ವಿಚಿತ್ರವೆನಿಸಿತು—ತನ್ನ ಮಾತಿಗಾಗಿಯೆ. ಕಾವೇರಿಯ ಜತೆಯಲ್ಲಿ ನಿಕಟವಾಗಿ ತಾನು ಇತ್ತೀಚೆ ಇರತೊಡಗಿದ್ದರ ಪರಿಣಾಮವಾಗಿರಬಹುದೆ ತನ್ನಲ್ಲಿಯಾದ ಪರಿವರ್ತನೆ. ಅಥವಾ ಪರಿವರ್ತನೆ ಎಂಥದು? ಹಿಂದೊಮ್ಮೆ ಕಾಮೇಶ-ಗಂಗಾಧರರೊಡನೆ ನಡೆಸಿದ ಚರ್ಚೆ ನೆನಪಾಯಿತು. ಎಲ್ಲ ದೋಷವನ್ನು ಸೊಸೆಯ ಮೇಲೆ ಹೇರಲು ಆಗ ತಾನು ಯತ್ನಿಸುತ್ತಿದ್ದುದನ್ನು ನೆನೆದು ಸೋಜಿಗವೆನಿಸಿತು. ಆದರೂ ಶ್ರೀನಿವಾಸನೆಂದುಕೊಂಡ—ಹಿರಿಯರಾಗಿದ್ದವರು ಹೇಗಿದ್ದರೇನು? ಅವರು ಹಿರಿಯರಲ್ಲವೆ? ಅವರಲ್ಲಿ ಕೆಲವೊಂದು ಕುಂದುಕೊರತೆ ಇರಬಹುದು. ಅಷ್ಟಕ್ಕಾಗಿ ಕಿರಿಯರಾದವರು ಸಿಡಿದೆದ್ದು ಎದುರಾಗಿ ನಿಲ್ಲಬೇಕೆ? ಬಹುಶಃ? ಆದರೂ ಎದುರಿನಲ್ಲಿಯೆ ಇದ್ದ ಕಾವೇರಿಯ ಮುಖವನ್ನು ನೋಡಿ ಯೋಚನೆ ಬೇರೆಯಾಯಿತು. ಹೌದು, ಹಿರಿಯರಾದವರಿಗೂ ತಿಳಿಯ

ಬೇಡವೆ ? ಆಗೀಗ ಕಾವೇರಿ ತನ್ನ ವಿಷಯ—ಚಂಪಕ್ಕನ ವಿಷಯ—ವಿವರಿಸಿದ ಎಷ್ಟೊ ನಿಷ್ಠುರದ ಸನ್ನಿವೇಶಗಳು ಕಣ್ಣೆದುರು ನಿಂತವು. ಕಿರಿಯರು ಹಿರಿಯರ ವಿಷಯದಲ್ಲಿ ಆದರ ಸಹನೆಗಳನ್ನು ತೋರಿಸುವುದು ಅಗತ್ಯವಿದ್ದಂತೆ ಹಿರಿಯರಾದವರೂ ಕಿರಿಯರ ದೃಷ್ಟಿಯಿಂದ ನೋಡುವುದು ಕೆಲಮಟ್ಟಿಗಾದರೂ ಅಗತ್ಯವಲ್ಲವೆ ? ಎಂದೂ ಕೇಳಿಕೊಳ್ಳುವಂತಾದ. ಶ್ರೀನಿವಾಸ ಯೋಚನೆಯಲ್ಲಿ ಮುಳುಗಿದ್ದನ್ನು ನೋಡಿ ಕಾವೇರಿ ಕೇಳಿದಳು :

"ಅದೇನು ? ಹೀಗೆ ಒಮ್ಮೆಲೆ ಸುಮ್ಮನಾಗಿಬಿಟ್ಟಿರಲ್ಲ ?"

ಶ್ರೀನಿವಾಸ ಯಾವ ಉತ್ತರವನ್ನೂ ಹೇಳಲಿಲ್ಲ ಏನು ಹೇಳಬೇಕು ? ಅಲ್ಲದೆ, ಈ ಎಲ್ಲ ಯೋಚನೆಗಳಿಗೆ ಹಿನ್ನೆಲೆಯಾಗಿ ಮನಸ್ಸಿನ ಅಂಚಿನಲ್ಲಿ ಬೇರೊಂದು ವಿಚಾರವೂ ಸುಳಿದಾಡುತ್ತಿತ್ತು. ಕಾವೇರಿಯ ಮನಸ್ಸು ಓಡಾಡುತ್ತಿರುವುದು ಭಾವನಾಪ್ರಪಂಚದಲ್ಲಿ, ಕಲ್ಪನೆಯ ಸಾಮ್ರಾಜ್ಯದಲ್ಲಿ. ಅದರಿಂದ ಆಕೆಗೇನೊ ಸಮಾಧಾನ. ಆದರೆ ತಾನಾದರೂ ಆಕೆಯಂತೆಯೆ ಅದೆ ಪ್ರಪಂಚವನ್ನು ಸೇರಿ, ಆಕೆಯಂತೆಯೆ ಹುಚ್ಚು ಕಲ್ಪನೆಗಳ ಕುದುರೆಯನ್ನೇರಿ ಸವಾರಿ ಮಾಡುತ್ತಿದ್ದೇನಲ್ಲ ಎಂದು ತೋರಿತ್ತು. ಕಲ್ಪನೆಯ ಕುದುರೆ ಅದನ್ನೇರಿದವರನ್ನು ಒಂದಿಲ್ಲೊಂದು ಕ್ಷಣದಲ್ಲಿ ಕೆಡಹುವುದು ಖಂಡಿತ. ಏನು ಹುಚ್ಚು ? ಎಂದುಕೊಂಡು ನಸುನಕ್ಕ. ಆ ನಸುನಗೆಯೆ ಕಾವೇರಿಯ ಪ್ರಶ್ನೆಗೆ ಉತ್ತರವಾಯಿತು.

"ಅದೇನು, ಹಾಗೆ ನಕ್ಕುಬಿಟ್ಟಿರಿ ? ಏನು, ನನ್ನ ಮಾತೆಲ್ಲ ಹುಚ್ಚಿಯ ಮಾತು ಅನ್ನಿಸುತ್ತಿದೆಯೆ, ನಿಮಗೆ ?"

"ನಿನ್ನ ಮಾತು ಹುಚ್ಚಿಯ ಮಾತು, ಎಂತಲ್ಲ. ನಮ್ಮಿಬ್ಬರ ಮಾತೂ ಹುಚ್ಚರ ಮಾತು ಎಂದೆನಿಸಿತು. ಅದಕ್ಕೆ ನಕ್ಕೆ...."

"ನಮ್ಮ ಮಾತು ಹುಚ್ಚರ ಮಾತೆ ?"

"ಅಲ್ಲವೆ ಮತ್ತೆ ? ಹಾಲಿಲ್ಲ, ಬಟ್ಟಲಿಲ್ಲ ಗುಟುಕ್ ಎಂದರಂತೆ !"

ಆ ಒಂದು ಮಾತಿನಿಂದ ಕಾವೇರಿ ವಾಸ್ತವ ಪ್ರಪಂಚಕ್ಕಿಳಿದಳು. ಕನಸಿನಲ್ಲಿ ಕುದುರೆಯನ್ನೇರಿದವ ನೆಲಕ್ಕೆ ಬಿದ್ದು ಎಚ್ಚರವಾದಂತಾಯಿತು, ಆಕೆಯ ಮನಃಸ್ಥಿತಿ. ನೆಲಕ್ಕೆ ಬಿದ್ದ ಮನಸ್ಸಿಗೆ ಪೆಟ್ಟು ತಗಲಿತು, ನೋವೂ ಆಯಿತು. ರಾತ್ರಿಯ ನಿಶ್ಶಬ್ದತೆ, ಶೂನ್ಯತೆ ಕಣ್ಣೆದುರು ಸುಳಿಯಿತು. ಬಂಜೆ

ತನ್ನ ಬದುಕನ್ನೆ ಇರಿದು ಗಾಯಗೊಳಿಸಿತು. ನಿಶ್ಚೇಷ್ಟವಾದ ಕಣ್ಣುಗಳನ್ನು ತೊಟ್ಟಿಲೆಡೆಗೆ ತಿರುಗಿಸಿದಳು. ತೊಟ್ಟಿಲು ಬರಿದಾಗಿಯೆ ಇದ್ದಿತು. ಪುಟ್ಟು ಆಡಲಿಕ್ಕೆಂದು ಹೋಗಿರಲಿಲ್ಲವೆ ?

ಮರುದಿನ ಸಾಯಂಕಾಲ ಶ್ರೀನಿವಾಸ ಆಫೀಸಿನಿಂದ ಬರುವ ಹೊತ್ತಿಗೆ ಕಾವೇರಿ ಹಾಸಿಗೆಯಲ್ಲಿ ಮಲಗಿಬಿಟ್ಟಿದ್ದಳು. ಎರಡು ಮೂರು ಬಾರಿ ಶ್ರೀನಿವಾಸ ಹತ್ತಿರಕ್ಕೆ ಬಂದು ಮಾತನಾಡಿಸಿದರೂ ಮಿಸುಕಲಿಲ್ಲ. ಕೊನೆಗೆ, ಮೈಮೇಲೆ ಕೈಯಾಡಿಸಿ ಕೇಳಿದ :

" ಯಾಕೆ ಕಾವಿ ? ಮೈಯಲ್ಲಿ ಸ್ವಸ್ಥವಿಲ್ಲವೆ ? "

" ಅದರಿಂದ ನಿಮಗೇನು ? ಸುಮ್ಮನೆ ಯಾವಾಗದರೊಮ್ಮೆ—"

" ಅಲ್ಲ, ಏನಾಯಿತು ಹೇಳಬಾರದೆ ? "

" ಆಗುವುದೇನು ? ಇದನ್ನೆಲ್ಲ ಪುಟ್ಟೂಗೆ ನೀವೆ ಕಲಿಸಿದ್ದು."

" ಏನು ಮಾಡಿದ, ಪುಟ್ಟು ? "

" ಇಂದು ಮಧ್ಯಾಹ್ನ ನನ್ನನ್ನು ಹೊಡೆದುಬಿಟ್ಟ ! "

" ಹೊಡೆದೇಬಿಟ್ಟನೆ ? " ಶ್ರೀನಿವಾಸನಿಗೆ ನಗು ತಡೆಯಲಾಗಲಿಲ್ಲ.

" ಹೌದು. ಅದಕ್ಕೆ ನಾನು ಹೇಳುವುದು. ಹೊಡೆದ ಎಂದು ನಾನು ಹೇಳಿದರೆ ನಕ್ಕುಬಿಡುತ್ತೀರಿ. ಆತನಿಗೆ ಯಾರ ಹೆದರಿಕೆಯೂ ಇಲ್ಲದಾಗಿದೆ. ನನ್ನನ್ನಂತೂ ಕೇಳುವುದೆ ಇಲ್ಲ. ನಿಮ್ಮೆದುರಿಗೆ ಹೇಳಿದರೆ ನೀವು ನಕ್ಕುಬಿಡುತ್ತೀರಿ...." ಕಾವೇರಿಯ ದನಿ ಭಾರವಾಗಿತ್ತು.

" ಯಾತರಿಂದ ಹೊಡೆದ ? ಕಟ್ಟಿಗೆಯಿಂದಲೆ ? "

ಕಾವೇರಿಗೆ ನಿಜವಾಗಿಯೂ ಸಿಟ್ಟು ಬಂದಿತೆಂದು ಕಾಣುತ್ತದೆ. ಅವಳೆಂದಳು :

" ಸಾಕು. ಮತ್ತೆ ಅದೇ ಚೇಷ್ಟೆ. ಕಟ್ಟಿಗೆಯಿಂದೇನು ಹೊಡೆಯುತ್ತಾನೆ ? ಅವನಿಗೇನು ಕೈಗಳಿಲ್ಲವೆ ? ಕಾಲುಗಳಿಲ್ಲವೆ ? ಇಂದಂತೂ ತನ್ನ ಎರಡೂ ಕೈಗಳಿಂದ ಗುದ್ದಿದ, ಪರಚಿದ. ದಡದಡನೆ ಒದೆದ. ಇಷ್ಟೂ ಸಾಲದೆ, ಕೊನೆಗೆ, ತನ್ನ ಎರಡೂ ಹಲ್ಲುಗಳಿಂದ ನನ್ನ ಬೆರಳನ್ನು ಕಡಿದುಬಿಟ್ಟ. ನಿಮಗೆ ಹೇಗೆ ಗೊತ್ತಾಗಬೇಕು ? ನನ್ನ ಮೈ ಹೇಗೆ ನೋವಾಗಿದೆ ! ಈ ಬೆರಳಂತೂ....ಊಹ್...." ಎಂದು ತನ್ನ ಬಲಗೈ ಬೆರಳೊಂದನ್ನು ಎಡಗೈ

ಮುಷ್ಟಿಯಲ್ಲಿ ಹಿಡಿದುಕೊಂಡು ನಿಜವಾಗಿಯೂ ನೋವಾದಂತೆ ಮುಖ ಕಿವುಚಿದಳು.

"ನೋಡುವಾ, ಏನಾಗಿದೆ ಬೆರಳಿಗೆ?"

"ಆಗುವುದೇನು? ಕಡಿದುಬಿಟ್ಟ....ಎಷ್ಟು ಒದ್ದಾಡಿದರೂ ಬಿಡಲಿಲ್ಲ" ಎಂದು ಬೆರಳು ತೋರಿಸಿದಳು. ಬೆರಳ ಮೇಲೆ ಎರಡು ಹಲ್ಲುಗಳು ಮೂಡಿದ್ದವು. ನೋವಾಗುವ ಮಟ್ಟಿಗೂ ಹಲ್ಲುಗಳು ಚುಚ್ಚಿದ್ದವು. ಕಾವೇರಿ ತಾನಾಗಿಯೆ ಕಚ್ಚಿಕೊಂಡಿದ್ದಳೆಂಬುದರಲ್ಲಿ ಸಂದೇಹವೆ ಇರಲಿಲ್ಲ. ಅದಕ್ಕೆ ಶ್ರೀನಿವಾಸನೆಂದ:

"ಅದಿರಲಿ ಬಿಡು. ನಾನು ಪುಟ್ಟೂಗೆ ಚೆನ್ನಾಗಿ ಪಾಠ ಕಲಿಸುತ್ತೇನೆ, ಏಟು ಕೊಡುತ್ತೇನೆ. ಆಮೇಲೆ ಇನ್ನೆಂದಿಗೂ ಹಾಗೆ ಮಾಡಲಾರ...."

"ನೀವು ಹೇಳುವುದು ಹೀಗೆಯೆ, ಯಾವಾಗಲೂ. ಒಂದು ದಿನವೂ ನೀವು ಒಂದು ಮಾತನ್ನು ಕೂಡ ಆಡುವುದಿಲ್ಲ ಆತನಿಗೆ, ಅಂತೆಯೆ...."

"ಈಗ ಬರಲಿ, ನೋಡುವಿಯಂತೆ....ಈಗ ಏಳು....ಚಹ ಮಾಡುವಿಯಲ್ಲವೆ?" ಎಂದು ಹಾಸಿಗೆಯಿಂದ ಎಬ್ಬಿಸಿ ಅಡಿಗೆಯ ಮನೆಗೆ ಕಳಿಸಿದ. ಕಾವೇರಿ ಚಹ ಮಾಡುವುದರಲ್ಲಿ ತೊಡಗಿದಳು. ಶ್ರೀನಿವಾಸ ಕಾಟಿನ ಮೇಲೆ ಕುಳಿತು ದೀರ್ಘವಾದ ಯೋಚನೆಯಲ್ಲಿ ಮುಳುಗಿದ. ಇದುವರೆಗೆ ಕಾವೇರಿ ಪುಟ್ಟುವಿನ ವಿಚಾರವಾಗಿ ಮಾತುಗಳನ್ನು ಮಾತ್ರ ಆಡುತ್ತಿದ್ದಳು. ಆದರೆ ಇಂದು ನಡೆದ ಘಟನೆ ಶ್ರೀನಿವಾಸನನ್ನು ಚಿಂತೆಗೀಡುಮಾಡಿತು. ಇದನ್ನು ಹೀಗೆಯೆ ಬೆಳೆಯಗೊಟ್ಟರೆ ಇದಕ್ಕೆ ಕೊನೆ ಎಲ್ಲಿ? ಹುಚ್ಚೆ? ಆದರೆ ಈಗಲೆ ಕಾವೇರಿ ಯಾವ ಮೆಟ್ಟಲನ್ನು ಮುಟ್ಟಿದ್ದಾಳೆಯೊ? ಪುಟ್ಟೂನ ವಿಚಾರ ಬಂದಾಗ ಆಕೆ ಸಂಪೂರ್ಣವಾಗಿ ಮೈಮರೆತು ಮಾತನಾಡುತ್ತಿದ್ದುದು ನಿಜ. ಆದರೆ ಬೆರಳು ನೋವಾಗುವಂತೆ ತಾನಾಗಿಯೆ ಕಡಿದುಕೊಳ್ಳಬೇಕೆಂದರೆ—ಅದೂ ಮಗು ಕಡಿಯುತ್ತಿದೆ ಎಂದು ಭಾವಿಸಿ? ಕಡಿದಾದ ಮೇಲೂ, ತಾನು ಆಫೀಸಿನಿಂದ ಬರುವ ವರೆಗೂ ಅದೆ ಕಲ್ಪನೆಯಲ್ಲಿ ಇದ್ದುಬಿಡಬೇಕೆಂದರೆ ಆಕೆಯ ಮನಸ್ಸು ವಾಸ್ತವಕ್ಕಿಂತ ಹೆಚ್ಚಾಗಿ ಬೇರೆಯಾದ ಪ್ರಪಂಚದಲ್ಲಿಯೆ ಇದ್ದಂತಲ್ಲವೆ? ತಾನು ಮಾತನಾಡಿಸಿದಾಗ ವಾಸ್ತವಕ್ಕೆ ಹಿಂದಿರುಗಿ ಬರುತ್ತಿದ್ದಳೇನೊ ನಿಜ. ಆದರೆ ಬರುಬರುತ್ತ ಕನಸಿನ ಪ್ರಭಾವ

ಇನ್ನೂ ಬಲವತ್ತರವಾಗಿ, ವಾಸ್ತವಕ್ಕೆ ಹಿಂದಿರುಗುವ ಸಾಮರ್ಥ್ಯವನ್ನೆ ಆಕೆಯ ಮನಸ್ಸು ಕಳೆದುಕೊಂಡುಬಿಟ್ಟರೆ? ಹುಚ್ಚು ಅಂದರೆ ಅಷ್ಟೆ ಅಲ್ಲವೆ? ಇದಕ್ಕೆ ತಡೆಯನ್ನು ಹಾಕಲೇಬೇಕು ಎಂದುಕೊಂಡ. ಆದರೆ ಹೇಗೆ? ತಾನು ಮನೆಯಲ್ಲಿ ಇಲ್ಲದಾಗ ಇನ್ನಾರೂ ಅವಳ ಜತೆಗೆ ಇಲ್ಲದುದರ ಪರಿಣಾಮವೆ ಇದು? ಹಾಗಾದರೆ ಮನೆಯಲ್ಲಿ ಒಂದು ಆಳನ್ನಾದರೂ ತಂದರೆ ಎಲ್ಲವೂ ಸರಿಹೋಗಬಹುದು—ಎಂದು ಹತ್ತಾರು ದಾರಿ ಹುಡುಕಿದ. ಚಹವನ್ನು ತೆಗೆದುಕೊಂಡು ಬಂದು ಕಾವೇರಿ ಎದುರಿಗೆ ನಿಂತಾಗಲೆ ಶ್ರೀನಿವಾಸ ತನ್ನ ಯೋಚನೆಗಳಿಂದ ಎಚ್ಚತ್ತ. ಆಕೆಯ ಕೈಯಿಂದ ಚಹದ ಕಪ್ಪನ್ನು ತೆಗೆದುಕೊಳ್ಳುತ್ತಿರುವಾಗ ಆಕೆಯ ಮುಖವನ್ನೆ ತೀಕ್ಷ್ಣವಾಗಿ ನಿರುಕಿಸಿದ. ಆದರೆ ಕಣ್ಣಿಗೆ ಕಾಣಬಹುದಾದ ಯಾವ ವ್ಯತ್ಯಾಸವೂ ಅಲ್ಲಿರಲಿಲ್ಲ.

ತನ್ನ ಮನಸ್ಸಿನಲ್ಲಿದ್ದುದನ್ನು ಕಾವೇರಿಗೆ ತಿಳಿಸುವುದು ಹೇಗೆ ಎಂಬುದೆ ಶ್ರೀನಿವಾಸನಿಗೆ ಯೋಚನೆಯಾಯಿತು ಒಮ್ಮೆಲೆ ಸಿಟ್ಟು ಮಾಡಿದರೆ ಆಕೆ ನೊಂದುಕೊಳ್ಳುತ್ತಾಳೆ. ಹೇಗೆ ಹೇಳಿದರೂ, ಇದು ಸರಿಯಲ್ಲ, ಅದರಿಂದ ಅಪಾಯವಿದೆ, ಎಂದು ಮನವೊಲಿಸಿ ತಿಳಿಸಿ ಹೇಳಬೇಕು. ಅದಕ್ಕೆಂದೆ, ರಾತ್ರಿ ಊಟಕ್ಕೆ ಕುಳಿತಾಗ ನಿಧಾನವಾಗಿ ದಾರಿ ಕಡಿಯತೊಡಗಿದ.

"ನಿನಗೆ ಮಕ್ಕಳು ಅಂದರೆ ಬಹಳ ಇಷ್ಟ ಅಲ್ಲವೆ, ಕಾವಿ?" ಎಂದು ನಕ್ಕ.

"ನಿಮಗೆ ಅಲ್ಲವೇನೊ...." ಎಂದು ಪ್ರತಿಯಾಗಿ ಹೇಳಿದಳು.

"ನನಗೆ ಹೇಗೂ ಇರಲಿ, ನಿನಗೆ?"

"ಅದನ್ನೆಲ್ಲ ತೆಗೆದುಕೊಂಡು ಈಗೇನು? ಸುಮ್ಮನೆ ಊಟ ಮಾಡ ಬಾರದೆ? ಬೇಕು ಎಂದರೆ ಬರುವ ಮಾತೆ ಅದು?"

"ಹಾಂ, ಅದೆ ನಾನು ಹೇಳುವುದು...."

"ಬೇಕು ಅಂದರೆ ಸಿಕ್ಕುವುದೆ ಇಲ್ಲವಂತೆ...." ಕಾವೇರಿಯ ದನಿ ನಿರಾಶೆಯದಾಗಿತ್ತು.

"ಅದನ್ನಲ್ಲ, ನಾನು ಹೇಳುವುದು...." ಶ್ರೀನಿವಾಸನಿಗೆ ಮಾತು ಹೇಗೆ ಮುಂದರಿಸಬೇಕೆನ್ನುವುದು ತಿಳಿಯದೆ ತಡೆದ.

"ನಿಮ್ಮ ಔಷಧ—ಸುಮ್ಮನೆ ದುಡ್ಡು ಹಾಳು, ಅಷ್ಟೆ."

"ನಮಗೇನು ತಿಳಿದೀತು? ಡಾಕ್ಟರರು ಹೇಳಿದರು...."

"ಡಾಕ್ಟರರು ಹೇಳಿದರು—ನಾನು ಕುಡಿದೆ. ಕುಡಿದು ಕುಡಿದು ಬಾಯಿಯೆಲ್ಲ ಕಹಿಯಾಗಿ ಹೋಗಿದೆ...."

ಶ್ರೀನಿವಾಸ ಬೇರೆ ದಾರಿ ಹಿಡಿದ.

"ನೀನು ಚಿಕ್ಕವಳಿದ್ದಾಗ ಆಟ ಏನು ಆಡುತ್ತಿದ್ದೆ?"

"ಅದೆಲ್ಲ ಯಾಕೆ?"

"ಹೇಳಬಾರದೆ? ಮಕ್ಕಳಾಟ ಆಡುತ್ತಿದ್ದೆಯಾ?"

"ಹುಂ....ಅದೂ ಇದು. ಏನೇನೊ ಆಡುತ್ತಿದ್ದೆವು."

"ಅದರಲ್ಲಿಯೂ ಬೊಂಬೆಯ ಆಟ...."

"ಬರಿ ಆಟವೇಕೆ? ಬೊಂಬೆ ಮದುವೆ ಮಾಡುತ್ತಿದ್ದೆ. ಅವುಗಳ ನಿಬ್ಬಣ, ಬಾಣಂತಿತನ.... ಏನೇನೊ...."

"ಅದಕ್ಕೆ ಕೇಳಿದೆ. ಅಷ್ಟು ಗೊತ್ತಾಗುವುದಲ್ಲವೆ ನನಗೆ?"

"ಏನದು, ಗೊತ್ತಾಗುವುದು ?"

"ನೀನು ಬೊಂಬೆ ಆಟ ಆಡುತ್ತಿದ್ದಿ ಎನ್ನುವುದು!"

"ಹೇಗೆ?"

"ಇಂದಿಗೂ ಆಡುತ್ತಿದ್ದೀಯಲ್ಲ! ಇಷ್ಟು ದೊಡ್ಡವಳಾದರೂ ಬೊಂಬೆ ಆಟದ ಮೋಹ ಇನ್ನೂ ಹೋಗಲಿಲ್ಲ ಅಲ್ಲವೆ?"

ಕಾವೇರಿ ಸುಮ್ಮನಾದಳು. ಶ್ರೀನಿವಾಸನ ಮಾತಿನ ಹೊಳವು ಆಕೆಗೆ ಅರ್ಥವಾಯಿತೊ, ಇಲ್ಲವೊ! ಆ ಮಾತಿನಿಂದ ಆಕೆಯ ಮನಸ್ಸು ಹತ್ತು ಹದಿನಾರು ವರ್ಷ ಹಿಂದಕ್ಕೆ ಜಿಗಿಯಿತು. ತಾಯಿಯ ನೆನಪಾಯಿತು. ತಾವು ಹೆಚ್ಚಾಗಿ ಗೆಳತಿಯರ ಕೂಡ ಬೊಂಬೆಯಾಟಗಳನ್ನು ಆಡುತ್ತಿದ್ದಾಗ, ಬೊಂಬೆಗಳು ಮದುವೆ ಮಕ್ಕಳು ಎಂದು ಹೇಳಿಕೊಳ್ಳುತ್ತಿದ್ದಾಗ, ತಾಯಿ ಅನ್ನುತ್ತಿದ್ದಳು 'ಅದೆಂಥಾ ಆಟ, ಕಾವಿ? ಹಾಗೆಲ್ಲ ಆಡಬಾರದು' ಎನ್ನುತ್ತಿದ್ದಳು. ಹಾಗೆ ಆಡಿದರೆ ಏನಾಗುತ್ತದೆ ಎಂಬುದನ್ನು ಹೇಳಿದ್ದಳು ಆ ನೆನಹಿನಿಂದ ಕಾವೇರಿಯ ಮನಸ್ಸಿಗೆ ನೋವಾಯಿತು. ತಟ್ಟನೆ ಕೇಳಿದಳು:

"ಚಿಕ್ಕವರಿದ್ದಾಗ ಮಕ್ಕಳು ಮರಿ ಎಂದು ಆಟ ಆಡಿದರೆ ಆಮೇಲೆ ಅವರಿಗೆ ಮಕ್ಕಳಾಗುವುದಿಲ್ಲವೆ?"

"ಯಾರು ಹೇಳುತ್ತಾರೆ ಹಾಗೆ?"

"ನಾವು ಆಡುತ್ತಿದ್ದಾಗ ನನ್ನ ತಾಯಿ ಅನ್ನುತ್ತಿದ್ದಳು."

"ಬಹಳ ಹಂಬಲ ಇರಬಾರದು, ಅಷ್ಟೆ. ಅದಕ್ಕೂ ಇದಕ್ಕೂ ಯಾವ ಸಂಬಂಧ?"

"ಯಾವ ಸಂಬಂಧವೊ ಏನೊ ಆದರೆ ನಾನು ಮಾತ್ರ ಹಾಗೆ ಬಹಳ ಆಡಬಾರದಾಗಿತ್ತು ಅನಿಸುತ್ತದೆ ಒಮ್ಮೊಮ್ಮೆ...."

ಮಾತಿನಲ್ಲಿ ಕಾವೇರಿಯ ನಿರಾಶೆ ವ್ಯಕ್ತವಾಗುತ್ತಿತ್ತು. ಆ ನಿರಾಶೆಯ ಮೂಲಕವೆ ಆಕೆಯ ಕಣ್ಣುಗಳು ತೇವಗೊಂಡವೆಂದು ಶ್ರೀನಿವಾಸನಿಗೆ

ಎನಿಸಿತು. ಆಕೆ ಆ ಮನಃಸ್ಥಿತಿಯಲ್ಲಿದ್ದಾಗ ಆಕೆಯನ್ನು ಹೆಚ್ಚಿಗೆ ಮನ ನೋಯಿಸಲಾಗದೆ ಶ್ರೀನಿವಾಸ ಸುಮ್ಮನಾದ. ಆದರೆ ಆತನ ಮನಸ್ಸಿನಲ್ಲಿಯ ದುಗುಡ ಮಾತ್ರ ಮಾಯವಾಗಲಿಲ್ಲ.

ಮರುದಿವಸ ಸಾಯಂಕಾಲ ಶ್ರೀನಿವಾಸ ಮನೆಗೆ ಬಂದಾಗ ಸಿಡಿಪಿಡಿಗೊಂಡಿದ್ದ. ಅದಕ್ಕೆ ಕಾವೇರಿ ಕಾರಣಳಾಗಿರಲಿಲ್ಲ. ಅಂದು ಆಫೀಸಿಗೆ ಹೋಗಲು ಹತ್ತು ನಿಮಿಷ ತಡವಾಗಿತ್ತು. ಕಿಟಕಿಯಲ್ಲಿ ಗದ್ದಲ ಮಾಡುತ್ತಿದ್ದ ಜನ ಮೇಲಧಿಕಾರಿಯ ಕಡೆಗೆ ತಕರಾರು ಮಾಡಿದ್ದರು. ಶ್ರೀನಿವಾಸ ತಡ ಮಾಡಿ ಬಂದದ್ದಕ್ಕಾಗಿ ಅನ್ನಿಸಿಕೊಳ್ಳಬೇಕಾಗಿದ್ದಿತು. ಅಂದು ಸೋಮವಾರವಾದ್ದರಿಂದ ಕೆಲಸದ ಗಲಾಟೆಯೂ ವಿಶೇಷವಾಗಿ, ಮನೆಗೆ ಬಂದಾಗ ತೀರ ದಣಿದು ನೊಂದವನಾಗಿದ್ದ. ಮನೆಗೆ ಬರುವಷ್ಟರಲ್ಲಿ ಕಾವೇರಿ ತನ್ನ ವಿಚಾರದಲ್ಲಿಯೆ ಇದ್ದಳು. ಆತನ ಮನಸ್ಸಿನ ದುಃಸ್ಥಿತಿಯನ್ನು ತಿಳಿದವಳಾಗಿದ್ದರೆ ಬೇರೆಯಾಗಿ ಮಾತನಾಡುತ್ತಿದ್ದಳೇನೊ. ಆದರೆ ಅದಾವುದೂ ತಿಳಿಯದೆ ಕೇಳಿದಳು :

" ತೊಟ್ಟಿಲ ನೋಡಿದಿರಾ ? ಹೇಗಿದೆ...."

ಶ್ರೀನಿವಾಸ ಸುಮ್ಮನಾಗಿಯೆ ಇದ್ದ. ಕೋಟು ತೆಗೆದಿಟ್ಟು, ಬಚ್ಚಲವರೆಗೆ ಹೋಗಿ ಕೈಕಾಲು ಮೋರೆ ತೊಳೆದುಕೊಂಡು ಬಂದರೂ ಒಂದು ಮಾತನ್ನೂ ಆಡಲಿಲ್ಲ. ಆದರೆ ಕಾವೇರಿ ತನ್ನ ಯೋಚನೆಯಲ್ಲಿಯೆ ಇದ್ದಳು.

" ದಿನದಿನಕ್ಕೆ ಪುಟ್ಟು ಚಿಕ್ಕವನಾಗುತ್ತಾನೆ ಅನ್ನುತ್ತೀರಾ ? ತೊಟ್ಟಿಲು ಕಟ್ಟಲಿಕ್ಕೆ ಬೇರೆ ಗಟ್ಟಿಯಾದ ಹಗ್ಗ ತಂದುಕೊಡಿರಿ, ಎಂದು ಹತ್ತು ಸಾರೆ ಹೇಳಿದೆ. ದಾರದಿಂದ ಕಟ್ಟಿದ ಈ ತೊಟ್ಟಿಲಲ್ಲಿ ಪುಟ್ಟು ಮಲಗಿದಾಗ—ಹರಿದುಬಿದ್ದರೆ—"

" ಹರಿದರೆ ಹರಿಯಿತು—"

" ಪುಟ್ಟು ಬಿದ್ದುಬಿಟ್ಟರೆ ?—"

ಕಾವೇರಿಗೆ ಇನ್ನೂ ತಿಳಿಯಲಿಲ್ಲ, ಶ್ರೀನಿವಾಸನ ಮಾತಿನ ಸರಣಿ. ಹಸಿವು, ಬೇಸರ, ಆಫೀಸಿನಲ್ಲಿಯ ಅಧಿಕಾರಿಯ ಬಿರುನುಡಿ ಎಲ್ಲವೂ ಆತನ ತಾಳ್ಮೆಯನ್ನು ಕೆಣಕಿದ್ದವು. ಅವನಂದ :

" ಏನು ಕಾವಿ ? ನಿನಗೆ ಇನ್ನೂ ತಿಳಿಯುವುದಿಲ್ಲವೆ ? ಹಗಲು ಹನ್ನೆ

ರಡು ಗಂಟೆಯೂ ಅದನ್ನೆ ಮಾತನಾಡಬಾರದು ಎಂಬುದು? ಬಂದಾಗ ಹೋದಾಗ ಕುಳಿತಾಗ ನಿಂತಾಗ ಯಾವಾಗಲೂ ಪುಟ್ಟು ಪುಟ್ಟು ಪುಟ್ಟು. ಸಾಕಾಗಿ ಹೋಗಿದೆ ನನಗಂತೂ....ಇನ್ನೊಮ್ಮೆ ಆ ಪುಟ್ಟುವಿನ ಮಾತನ್ನು ಎತ್ತಿದರೆ ನೋಡು...."

ಕಾವೇರಿಗೆ ತಲೆಯ ಮೇಲೆ ಆಕಾಶವೆ ಕಳಚಿ ಬಿದ್ದಂತಾಯಿತು. ಶ್ರೀನಿವಾಸ ಸಿಡಿಸಿಡಿಗೊಂಡದ್ದನ್ನು ಆಕೆ ಕಳೆದ ಮೂರು ನಾಲ್ಕು ಬಾರಿ ಕಂಡಿದ್ದಳಾದರೂ ಆತ ಈ ಪರಿಯಾಗಿ ಹಠಾತ್ತಾಗಿ ಕಟುವಾಗಿ ಮಾತನಾಡ ಬಹುದೆಂದೆಣಿಸಿರಲಿಲ್ಲ ಏನೊ ಮನಸ್ತಾಪವಾಗಿರಬಹುದೆಂದು, ಹತ್ತಿರ ಬಂದು ಮೃದುವಾಗಿ ಕೇಳಿದಳು :

"ಯಾಕೆ? ಹೀಗೇಕೆ ಒಮ್ಮೆಲೆ ಮಾತನಾಡುತ್ತೀರಿ?" ಎಂದಳು.

ಆದರೆ ಶ್ರೀನಿವಾಸನ ಮನಸ್ಸು ಒಲಿಯುವ ಸ್ಥಿತಿಯಲ್ಲಿರಲಿಲ್ಲ.

"ಮತ್ತೆ, ನನ್ನನ್ನೆ ಯಾಕೆ ಎಂದು ಕೇಳುತ್ತೀಯಾ? ಆಟಕ್ಕಾದರೂ ಏನಾದರೊಂದು ಮಿತಿ ಇದೆಯೊ ಇಲ್ಲವೊ? ದಿನ ನಿತ್ಯ ಅದೆ ಹಾಡಾದರೆ ಎಡ ಬಲದ ನಾಲ್ಕು ಜನ ಕೇಳಿದವರು ಏನೆಂದಾರೆಂಬುದನ್ನಾದರೂ ಯೋಚಿಸ ಬೇಡವೆ?"

ಕಾವೇರಿಗೆ ದಿಗ್ಭ್ರಮೆಯಾಯಿತು. ನಿರುಪಾಯಳಾಗಿ, ಏನು ಹೇಳ ಬೇಕೆಂಬುದು ತಿಳಿಯದೆ ಕರುಣೆಯಿಂದ ತೊಟ್ಟಿಲದೆಡೆಗೆ ನೋಡಿದಳು. ಬೊಂಬೆ ಕಣ್ಣುಬಿಟ್ಟು ನೋಡುತ್ತಿತ್ತು. ಮೊಟ್ಟಮೊದಲನೆಯ ಸಾರಿ ಆ ಕಣ್ಣುಗಳು ಆಕೆಗೆ ನಿಸ್ತೇಜವಾಗಿ ಕಂಡವು. ಮಗು ಬೊಂಬೆಯಾಯಿತು! ಅಯ್ಯೊ! ಎಂದು ನರಳಿತು ಕಾವೇರಿಯ ಹೃದಯ. ದಿನ ಕಳೆದಂತೆ ಹೊಸಹೊಸದಾಗಿ ಹೆಣೆದ ಕೂಸೆಂಬ ಕನಸು ಒಡೆದು ಚೂರುಚೂರಾಯಿತು. ಆ ದುಃಖ ಆಕೆಯನ್ನು ದಿಕ್ಕುಗೆಡಿಸಿತು. ಹೆಚ್ಚು ಕಡಿಮೆ ಮೈಮೇಲಿನ ಪ್ರಜ್ಞೆಯೆ ತಪ್ಪಿದಂತಾಗಿರಬೇಕು. ಗಿರಗಿರನೆ ಸುತ್ತಲಿನ ದೃಶ್ಯವೆಲ್ಲವೂ ತಿರುಗಿತು. ಅದರ ಜತೆಯಲ್ಲಿ ಶ್ರೀನಿವಾಸನೂ ತಿರುಗಿದ. ತಿರುಗುತ್ತಿದ್ದ ಶ್ರೀನಿವಾಸ ತನ್ನ ಮೈಮೇಲೆ ಏರಿ ಬಂದು ಹೊಡೆಯಬೇಕೆನ್ನುತ್ತಿರುವಂತೆ ಭಾಸವಾಯಿತು. 'ಬೇಡ, ಬೇಡ' ಎಂದು ಚಿಟ್ಟನೆ ಚೀರಿ, ಆಚೆಗೆ ಓಡ ಬಯಸಿದಳು. ಓಡುವಾಗ ಬಲಗೈ ತೊಟ್ಟಿಲದ ದಾರದಲ್ಲಿ ಸಿಲುಕಿ ಓಡಿದ

ಆವೇಗಕ್ಕೆ ಹರಿದು ತೊಟ್ಟಿಲ–ಬೊಂಬೆ ಎಲ್ಲವೂ ಬಿದ್ದವು. ಆದರೆ ಕಾವೇರಿಗೆ ಅದು ತಿಳಿಯಿತೊ ಇಲ್ಲವೊ! 'ಬೇಡ, ಬೇಡ' ಎಂದು ಮತ್ತೆ ಚೀರಿ ಆಚೆ ಕಡೆಗೆ ಗೋಡೆ ಇದ್ದುದನ್ನು ಗಮನಿಸದೆ ಓಡಿದಾಗ ಅದಕ್ಕೆ ದೊಪ್ಪೆಂದು ತಾಕಿ ಮುದ್ದೆಯಾಗಿ ನೆಲಕ್ಕೆ ಬಿದ್ದಳು.

ಶ್ರೀನಿವಾಸನಿಗೆ ಏನೂ ತೋಚದಾಯಿತು. ತಾನು ಆಡಿದ್ದರ ಪರಿಣಾಮ ತಕ್ಷಣ ಇಷ್ಟು ದೂರ ಹೋಗಬಹುದೆಂದು ಆತ ಎಣಿಸಿರಲಿಲ್ಲ. ಓಡಿ ಹೋಗಿ ಹತ್ತಿರ ಕುಳಿತು, ಮುಖವನ್ನು ಮೇಲಕ್ಕೆತ್ತಿ ನೋಡಿದ. ಎಲ್ಲಿಯೂ ಪೆಟ್ಟು ತಾಕಿರಲಿಲ್ಲ. ಕಾವೇರಿ ಕಣ್ಣು ಮುಚ್ಚಿದ್ದಳು ಉಸಿರು ಜೋರಾಗಿ ಸಾಗಿತ್ತು. ಮುಖವೆಲ್ಲ ಕೆಂಪಡರಿ ಹೋಗಿತ್ತು. ಆಕೆಗೆ ಪ್ರಜ್ಞೆ ಇರಲಿಲ್ಲ ಎಂಬುದು ಸ್ಪಷ್ಟವಾಗಿತ್ತು. ಶ್ರೀನಿವಾಸ ಒಳಗಿನಿಂದ ನೀರು ತಂದು ತಲೆಗೆ ಬಡಿದ, ಮುಖದ ಮೇಲೆ ಚಿಮುಕಿಸಿದ. ಇಷ್ಟಾಗುವಷ್ಟರಲ್ಲಿ ಎಡಬಲದ ಇಬ್ಬರು ಮೂವರು ಬಂದು 'ಏನು?', 'ಏನಾಯಿತು?' ಎಂದು ಮುಂತಾಗಿ ಕುತೂಹಲಕ್ಕಾಗಿ ಕಳವಳಕ್ಕಾಗಿ ಕೇಳುತ್ತ ಕಲೆತರು. ಶ್ರೀನಿವಾಸನಿಗೆ ಯಾರ ಗದ್ದಲವೂ ಬೇಡವಾದ್ದರಿಂದ 'ಏನೂ ಇಲ್ಲ, ಆಕೆಗೆ ಪಿತ್ಥಪ್ರಕೋಪ ಆಗೀಗ ಆಗುತ್ತದೆ. ಏನು ವಿಶೇಷವೂ ಇಲ್ಲ' ಎಂದು ಹೊರಗಡೆ ಸಾಗಿಸಿ, ಕಾವೇರಿಗೆ ನಿಧಾನವಾಗಿ ಗಾಳಿ ಬೀಸಿದ. ಒಂದೆರಡು ನಿಮಿಷಗಳನಂತರ ಕಾವೇರಿ ಕಣ್ತೆರೆದು ಸುತ್ತಲೂ ನೋಡಿದಳು. ತಾನು ಇದ್ದುದ್ದು ಎಲ್ಲಿ, ನಡೆದದ್ದು ಏನೆಂಬುದಾವುದೂ ತಿಳಿಯುದವಳ ಶೂನ್ಯದೃಷ್ಟಿಯಾಗಿತ್ತು. ಮತ್ತೆ ಕಣ್ಣು ಮುಚ್ಚಿದಳು. ಶ್ರೀನಿವಾಸನ ಬಾಯಿಗೆ ಮಾತುಗಳೆ ಬರಲೊಲ್ಲವು.

ಹತ್ತು ಹದಿನೈದು ನಿಮಿಷಗಳನಂತರ ಕಾವೇರಿ ತಾನಾಗಿಯೆ ಎದ್ದು ಕುಳಿತಳು. ಇದುವರೆಗೆ ನಡೆದುದೆಲ್ಲವನ್ನೂ ನೆನೆಯುವವಳಂತೆ ಸುಮ್ಮನಾಗಿಯೆ ಇದ್ದಳು. ಶ್ರೀನಿವಾಸನಿಗೆ ತಡೆಯದಾಗಿ ಕೇಳಿದ :

"ಏನಾಯಿತು, ಕಾವಿ? ಹೀಗೆ ಒಮ್ಮೆಲೆ—"

"ಏ—ನಿ—ಲ್ಲ...."

ಹಣೆಯ ಮೇಲೆ ಕೈಯಾಡಿಸಿಕೊಂಡು ಕಾವೇರಿ ಏಳುವುದರಲ್ಲಿದ್ದಳು. ಶ್ರೀನಿವಾಸನೆಂದ: "ಈಗಲೆ ಏಳಬೇಡ—ಏನವಸರ?"

"ಚಹ ಮಾಡುತ್ತೇನೆ."

ಕಾವೇರಿಯ ದನಿ ಗಡಸಾಗಿತ್ತು.

"ಆಮೇಲೆ ಮಾಡುವಿಯಂತೆ...."

ಆದರೆ ಕಾವೇರಿ ತಡೆಯಲಿಲ್ಲ. ಶ್ರೀನಿವಾಸ ತನ್ನನ್ನು ತಡೆಯುವುದೂ ಬೇಡವೆಂದೆನಿಸಿರಬೇಕು. ಆಕೆಗೆ ಎದುರಾಗಿ ಯಾವುದನ್ನೂ ಮಾಡುವ, ಹೇಳುವ ಧೈರ್ಯ ಶ್ರೀನಿವಾಸನಿಗೆ ಎಷ್ಟು ಮಾತ್ರವೂ ಉಳಿದಿರಲಿಲ್ಲ. ಚಹವನ್ನೇನೊ ಮಾಡಿ ತಂದು ಕೊಟ್ಟಳು. ಅದರಂತೆಯೆ, ರಾತ್ರಿಯ ಅಡಿಗೆ ಊಟಗಳೂ ಆದವು. ಆದರೆ ಎಲ್ಲವೂ ಯಾಂತ್ರಿಕವಾಗಿ ನಡೆದಂತಿತ್ತು. ಶ್ರೀನಿವಾಸನ ಎರಡು ಮಾತಿಗೆ ಒಂದು ಉತ್ತರ ಸಿಕ್ಕರೆ ಸಿಕ್ಕುತ್ತಿತ್ತು, ಇಲ್ಲವಾದರೆ ಇಲ್ಲ. ತೀರ ನೊಂದವಳ ಮುಖವಾಗಿತ್ತು. ಸಂಜೆಯ ಉದ್ವೇಗದ ಮೂಲಕ ಹಾಗಾಗಿರಬೇಕೆಂದುಕೊಂಡ ಶ್ರೀನಿವಾಸ. ಆದರೆ ಏನು ಮಾಡಿದರೂ ಎಷ್ಟು ಮಾತನಾಡಿಸಿದರೂ ಕಾವೇರಿಯಿಂದ ಆತ್ಮೀಯತೆಯನ್ನು ಸೆಳೆಯುವುದು ಮಾತ್ರ ಅಸಾಧ್ಯವಾಗಿ ಕಾಣುತ್ತಿತ್ತು.

ನಡುರಾತ್ರಿ ಮೀರಿಹೋಗಿತ್ತು. ನಡೆದುದರ ಪರಿಣಾಮವಾಗಿ ಶ್ರೀನಿವಾಸನಿಗೆ ನಿದ್ರೆ ಬರಲಿಲ್ಲ. ಕಾವೇರಿಗಂತೂ ನಿದ್ರೆ ಬರುವುದು ಸಾಧ್ಯವಾಗಿಯೆ ಕಾಣಲಿಲ್ಲ. ಕಾವೇರಿ ನಿದ್ರಿಸುವ ವರೆಗೆ ಶ್ರೀನಿವಾಸನ ಮನಸ್ಸಿಗೆ ನೆಮ್ಮದಿ ಬರುವಂತಿಲ್ಲ. ಹೀಗಾಗಿ, ಆಗೊಂದು ಈಗೊಂದು ಮಾತನಾಡುತ್ತಿದ್ದಾಗ ವೇಳೆ ಕುಂಟುತ್ತ ಸಾಗಿತ್ತು. ಕೊನೆಗೆ ಶ್ರೀನಿವಾಸನೆಂದ :

"ಯಾಕೆ, ಕಾವಿ? ಏನಾಯಿತು? ನಿನ್ನನ್ನು ನಾನು ಹೊಡೆಯಲು ಬಂದಿದ್ದೆನೆ?"

"ಏನಾಯಿತೊ ಏನೊ! ನನಗಂತೂ ಒಂದೂ ಜ್ಞಾಪಕವಿಲ್ಲ."

"ಹಾಗೇಕೆ ಮಾಡಿದೆ? ಒಂದನ್ನೆ ಕಟ್ಟಿಕೊಂಡು, ಅದನ್ನೆ ಧೇನಿಸುವುದು ಒಳ್ಳೆಯದಲ್ಲ, ಕಾವಿ. ಅದಕ್ಕೆ ಹೇಳಿದೆ...."

ಕಾವೇರಿ ಉತ್ತರ ಕೊಡಲಿಲ್ಲ ಆಕೆಯ ಯೋಚನೆ ಒಂದೆ ದಿಕ್ಕಿನಲ್ಲಿ ಹರಿಯುತ್ತಲೆ ಇರಲಿಲ್ಲ.

"ನಿನಗಿನ್ನೂ ನಿದ್ರೆ ಬರಲಿಲ್ಲವೆ, ಕಾವಿ?"

"ನಿಮಗೆ ಬಂದಿದ್ದರೆ ನೀವು ಮಲಗಬಾರದೆ?"

ದನಿಯಲ್ಲಿ ಸಿಡುಕು ಸ್ಪಷ್ಟವಾಗಿದ್ದಿತು. ಆದರೆ ಅಷ್ಟೊಂದು ತೀಕ್ಷ್ಣ

ವಾಗಿರಲಿಲ್ಲ, ಮಾತು. ಅಲ್ಲದೆ, ಏನಿದ್ದರೂ ಶ್ರೀನಿವಾಸ ಆಕೆಗೆ ಎದುರಾಗಿ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಆಕೆಗೆ ನಿದ್ರೆ ಹತ್ತಿದ ಮೇಲೆಯೆ ತಾನು ಮಲಗಿಕೊಳ್ಳತಕ್ಕದ್ದೆಂದು ಮಾಡಿದ ನಿರ್ಧಾರ ನಿಲ್ಲುವ ಹಾಗೆ ಕಾಣಲಿಲ್ಲ. ನಿಧಾನವಾಗಿ ಶ್ರೀನಿವಾಸನ ಯೋಚನೆಗಳು ಮಸಕಾಗತೊಡಗಿದವು. ತೂಗಾಡುತ್ತಿದ್ದ ಮನಸ್ಸು ಎಚ್ಚರದೆಡೆಗೆ ಒಲಿದಾಗ ತಡೆದ ಯೋಚನೆ ಮುಂದರಿಯುತ್ತಿತ್ತು. ಹಾಸಿಗೆಯಲ್ಲಿ ಅತ್ತಿಂದಿತ್ತ ಮಗ್ಗುಲಾಗುತ್ತಿದ್ದ ಕಾವೇರಿಯನ್ನು ನೆನೆದು, ಈಕೆ ಇನ್ನೂ ಮಲಗಲಿಲ್ಲ, ಎಂದುಕೊಳ್ಳುತ್ತಿದ್ದ. ಈಕೆಗೆ ನಿದ್ರೆ ಏಕೆ ಇಲ್ಲದಾಗಿರಬೇಕು? ಮನಸ್ಸು ಹಿಡಿತದಲ್ಲಿ ಇಲ್ಲದಾಗ ನಿದ್ರೆ ಇಲ್ಲದಾಗುತ್ತದೆ, ಎನ್ನುತ್ತಾರೆ. ಹಾಗಾದರೆ ಕಾವೇರಿಯ ಮನಸ್ಸು ಇನ್ನೂ ಸರಿಯಾಗಿರಲಿಕ್ಕಿಲ್ಲವೆ? ಇದು ಹೀಗೆಯೆ ಉಳಿದರೆ? ಛೆ! ಹಾಗಾಗಲಿಕ್ಕಿಲ್ಲ, ಆಗುವುದಿಲ್ಲ. ಹಾಗಿದ್ದರೆ ಸಂಜೆಯಿಂದ ಸರಿಯಾಗಿ ಮಾತನಾಡಿರಲಿಲ್ಲವೆ? ಮಾತೇನೂ ದಿನದಕಿಂತ ಕಡಿಮೆಯಾಗಿತ್ತು. ಆದರೆ ಆ ಸನ್ನಿವೇಶದಲ್ಲಿ ಅದು ಸರಿಯೆ. ತಾನಾದರೂ ಇಷ್ಟಕ್ಕಾಗಿ ಆಕೆಯನ್ನು ನೋಯಿಸಬಾರದಾಗಿತ್ತು. ಆದರೆ ಒಂದು ನಿಷ್ಠುರವಾದ ಮಾತಿಗೆ ಆಕೆ ಇಷ್ಟು ನೊಂದುಕೊಳ್ಳಬಹುದೆಂದು ಯಾರಿಗೆ ಗೊತ್ತು? ನಾಳೆಯಿಂದ ಆಕೆಗೆ ಮನ ನೋಯುವಂತೆ ಆಡುವಹಾಗಿಲ್ಲ. ಆದರೆ ಆಕೆ ಮತ್ತೆ ಅದೆ ಬೊಂಬೆ, ಅದೆ ಆಟ, ಮಾತು—ಮೊದಲುಮಾಡಿದರೆ? ಅದು ಆಕೆಯ ದೃಷ್ಟಿಯಿಂದಲೆ ಹಿತಕಾರಿಯಲ್ಲ....ಏನಾದರೂ ಮಾಡಿ ಆಕೆ ಮೊದಲಿನಂತೆ ಸರಸದಿಂದ ಇರುವಂತೆ ಮಾಡಬೇಕು....

ಕಾವೇರಿಗೆ ನಿದ್ರೆ ಬಾರಲೆ ಇಲ್ಲ. ಒಂದರ ಗಂಟೆ ಕೇಳಿಸಿತು ಎರಡರದೂ ಕೇಳಿಸಿತು. ಹಾಸಿಗೆಯಲ್ಲಿ ಅತ್ತಿತ್ತ ಹೊರಳಾಡಿ ಬೇಸರವೆನಿಸತೊಡಗಿತು. ದೀಪ ಉರಿಯುತ್ತಲೆ ಇತ್ತು. ನಿದ್ರೆ ಬಾರದಾಗ ಕಾವೇರಿ ಎದ್ದು ಕಿಟಕಿಯೊಳಗಿಂದ ಹೊರಗಿನ ದೃಶ್ಯವನ್ನು ನೋಡುತ್ತಿದ್ದಳು. ಈ ದಿನವೂ ಹಾಗೆಯೆ ಆಯಿತು ಮನಸ್ಸು ಇಂದು ನಿಯತವಾಗಿ ಒಂದೆಡೆ ಓಡುತ್ತಿರಲಿಲ್ಲ ದಿಕ್ಕು ತಪ್ಪಿದಂತಿತ್ತು. ಎಷ್ಟು ಯೋಚಿಸಿದರೂ ಹೀಗೆ ಹಠಾತ್ತಾಗಿ ಶ್ರೀನಿವಾಸ ತನ್ನ ಕನಸನ್ನು ಒಡೆದುಬಿಟ್ಟನಲ್ಲಾ ಎಂದು ಒಂದು ಗಳಿಗೆ ದುಃಖವಾಗುತ್ತಿತ್ತು. ಒಡೆದದ್ದು ಕನಸು, ತಾನು ಕಳೆದುಕೊಂಡದ್ದು ನಿಜವಾಗಿಯೂ

ಕೂಸಾಗಿರದೆ ಕೂಸಿನ ಭಾವನೆ, ಎಂಬ ಅರಿವು ಆಕೆಗೆ ಬರಬೇಕಾದರೆ ಬಹಳ ಕಾಲ ಹಿಡಿಯಿತು. ನಿಜವಾಗಿದ್ದ ಕೂಸೆ ಕಳೆಯಿತೆಂಬ ಭಾವನೆಯೆ ಆಘಾತ ವಾಗಿ ಪರಿಣಮಿಸಿತ್ತು. ಆದರೆ ಇದಾವುದರ ಯೋಚನೆಯೆ ಆಕೆಗಿರಲಿಲ್ಲ. ಬದುಕಿನಲ್ಲಿ ಎಲ್ಲವನ್ನು ಕಳೆದುಕೊಂಡು, ಬಾಳು ಬರಿದಾದ ಹಾಗೆ, ಆಕೆಗೆ ತನಗೆ ತಿಳಿಯದ—ಪೂರ್ತಿಯಾಗಿ ಅರ್ಥವಾಗದ—ಶೂನ್ಯತೆ ವ್ಯಥೆಪಡಿಸು ತ್ತಿತ್ತು, ಅಷ್ಟೆ. ಆ ಶೂನ್ಯತೆ ಆಕೆಗೆ ಅರ್ಥವಾಗುತ್ತಿದ್ದರೆ, ಎಲ್ಲವೂ ಸರಿ ಹೋಗಬಹುದಿತ್ತು. ಅಥವಾ ಅಂಥ ಆಘಾತವಾಗಬಹುದಾದಂಥ ಮನ ಸ್ಥಿತಿಗೆ ಆಕೆ ಬರುತ್ತಲೆ ಇರಲಿಲ್ಲ. ಆಕೆಗೆ ಕನಸೆ ನನಸಾಗಿತ್ತು. ನನಸು ಇಲ್ಲದಾಗ ಇರವು ಇಲ್ಲದಾದಂತೆ ಮನಸ್ಸು ತೆರವಾಗಿತ್ತು. ರಾತ್ರಿ ನಿಶ್ಯಬ್ದ ವಾಗಿ ಮರೆಯುತ್ತಿತ್ತು—ನಿರಾಶೆಯೆ ಮೂರ್ತಿವೆತ್ತು ನಿಂತಂತೆ.

ಕಾವೇರಿ ಅತ್ತಿತ್ತ ಕಣ್ಣು ಹೊರಳಿಸಿದಳು. ಹರಿದುಬಿದ್ದ ತೊಟ್ಟಿಲನ್ನು ಶ್ರೀನಿವಾಸ ಒಂದೆಡೆಗೆ ಸರಿಸಿ ಇಟ್ಟಿದ್ದ. ದೊಡ್ಡದಾದ ಬೊಂಬೆ ಹೇಗೊ ಹಾಗೆ ಅಸ್ತವ್ಯಸ್ತವಾಗಿ ಬಿದ್ದಿತ್ತು. ನಿರ್ವಿಕಾರವಾಗಿ ಕಾವೇರಿ ಅದನ್ನು ದಿಟ್ಟಿ ಸಿದಳು. ಮರುಕ್ಷಣ ಸುಖವಾಗಿ ನಿದ್ರೆಹೋದ ಶ್ರೀನಿವಾಸನನ್ನು ನೋಡಿ ದಳು. ಆತನಿಂದ ತಾನು ನಾಲ್ಕಾರು ಅಡಿ ಮಾತ್ರ ದೂರದಲ್ಲಿ ನಿಂತುಕೊಂಡಿ ದ್ದರೂ ತನ್ನ ಆತನ ನಡುವೆ ಯಾವುದೊ ಒಂದು ತೆರೆ ಬಂದಹಾಗಿತ್ತು. ನೋಡುನೋಡುತ್ತಿರುವಾಗಲೆ ಶ್ರೀನಿವಾಸ ದೂರ ದೂರ ಸರಿಯುತ್ತಿರುವಂತೆ ಭಾಸವಾಯಿತು. ಆದರೆ ಯಾವ ಭಾವನೆಯೂ ಉದ್ವೇಗದ ಮಟ್ಟವನ್ನು ಮುಟ್ಟಲಾಗದಂತೆ ಆಕೆಯ ಮನಸ್ಸು ದಣಿದುಹೋದಂತಿತ್ತು. ಏನನ್ನೊ ನೋಡುತ್ತಿದ್ದಳು, ಏನನ್ನೊ ನೆನೆಯುತ್ತಿದ್ದಳು. ಹೇಳಬರಲ್ಲದ ಅಸಮಾ ಧಾನ ತಾನತಾನಾಗಿ ನಿಂತು ಮನಸ್ಸನ್ನು ಆವರಿಸುತ್ತಿತ್ತು. ಕಾವೇರಿ ನಿಂತೇ ಇದ್ದಳು. ಹೊರಗಡೆಯಲ್ಲಿ ಇಣುಕಿ ನೋಡಿಯೆ ನೋಡಿದಳು. ಕಣ್ಣು ಗಳು ನೋಡುತ್ತಿದ್ದವು; ಆದರೆ ಮನಸ್ಸಿಗೆ ಯಾವುದೂ ಗೋಚರಿಸುತ್ತಿ ದ್ದಿಲ್ಲ. ದೇಹ ದಣಿಯಿತು. ಕೊನೆಗೆ ದೀಪವನ್ನಾರಿಸಿ ಬಂದು ಮತ್ತೆ ಹಾಸಿಗೆ ಯಲ್ಲಿ ಮಲಗಿದಳು. ನಿದ್ರೆಹತ್ತಿತೊ ಇಲ್ಲವೊ. ಆಗೀಗ ಕಣ್ಣಮುಂದೆ ಚಿತ್ರವಿಚಿತ್ರವಾದ ಚಿತ್ರಗಳು ಕುಣಿಯುತ್ತಿದ್ದವು.

ಅಂದು ಸಾಯಂಕಾಲ ನಡೆದ ಘಟನೆ ಕಣ್ಣಿಗೆ ಚಿಕ್ಕದಾದರೂ ಶ್ರೀನಿವಾಸ ಕಾವೇರಿಯರ ಅನ್ಯೋನ್ಯ ಸಂಬಂಧಗಳ ದೃಷ್ಟಿಯಿಂದ ಬಹಳ ಮಹತ್ವದ್ದಾಯಿತು. ಕಾವೇರಿಗೆ ಶ್ರೀನಿವಾಸ ಯಾವುದೋ ಒಂದು ಬಗೆಯಲ್ಲಿ ದೂರ ದೂರವೆನಿಸತೊಡಗಿದ. ಆತ ತನ್ನ ಬಗೆಯಲ್ಲಿ ತೋರಿದ—ತೋರಿಸುತ್ತಿದ್ದ—ಅನುರಾಗ ಅನುನಯಗಳೆಲ್ಲವೂ ತೋರಿಕೆಯವು, ಎಂಬ ಭಾವನೆಯೂ ಮೂಡಿರಬೇಕು, ಆಕೆಯ ಮನಸ್ಸಿನಲ್ಲಿ. ಇದರ ಪರಿಣಾಮವಾಗಿ ಹುಟ್ಟಿಕೊಂಡ ಸಿಡುಕು ಆಕೆಯ ಸ್ವಭಾವದಲ್ಲಿಯೆ ಬೇರೂರತೊಡಗಿತು. ರಾತ್ರಿ ನಿದ್ದೆಗೇಡಾದ್ದರಿಂದ ಮರುದಿನ ಮುಂಜಾನೆ ಕಾವೇರಿ ತೀರ ತಡವಾಗಿ ಎದ್ದಳು. ಯಾವ ಆಸ್ಥೆ ಉತ್ಸಾಹಗಳಿಲ್ಲದೆಯೆ ಅಡಿಗೆ ಊಟಗಳ ಕಾರ್ಯಕ್ರಮ ನಡೆಯಿತು. ನಿರ್ವಿಕಾರವಾಗಿ ಉರಿಯುತ್ತಿದ್ದ ಮಧ್ಯಾಹ್ನದ ಬಿಸಿಲಿನಂತೆಯೆ ಏಕಾಕಿನಿಯಾಗಿ ಮನೆಯಲ್ಲಿ ಕಾಲ ಕಳೆಯಬೇಕಾಗಿದ್ದ ಕಾವೇರಿಯ ಮನಸ್ಸು ಕಾವುಗೊಂಡಿತು. ಸಂಜೆಯ ಸುಮಾರಿಗೆ ಕಾವು ಕಡಿಮೆಯಾಗುತ್ತಿದ್ದರೂ ಅದರ ಉದ್ವೇಗ, ಜಳ—ಶ್ರೀನಿವಾಸನಿಗೆ ತಾಕದೆ ಇರುತ್ತಿರಲಿಲ್ಲ.

ಕಾವೇರಿ ಪ್ರತಿನಿತ್ಯವೂ ತಡವಾಗಿಯೆ ಏಳತೊಡಗಿದಳು. ದಿನ ಸವೆದ ಹಾಗೆ ತನಗೆ ಮಕ್ಕಳಿಲ್ಲವೆಂಬ ಭಾವನೆಯ ಜತೆಗೆ ತನಗೆ ಮಕ್ಕಳಾಗುವುದಿಲ್ಲವೆಂಬ ನಿರಾಶೆಯೂ ಬಲಿಯತೊಡಗಿತು. ಆ ನಿರಾಶೆಯ ಪರಿಣಾಮವಾಗಿಯೆ, ತಾನು ಏನು ಮಾಡಿದರೇನು, ಮಾಡದಿದ್ದರೇನು, ಎಂಬ ಮನೋವೃತ್ತಿಯೂ ಪ್ರಬಲಿಸಿತು. ಹೀಗಾಗಿ, ಮನೆಯ ಯಾವ ಕೆಲಸದಲ್ಲಿಯೂ ಕಾವೇರಿ ಮೊದಲಿನಂತೆ ಉತ್ಸಾಹವನ್ನು ತೋರದಾದಳು. ಆದರಾಯಿತು, ಹೋದರೆ ಹೋಯಿತು, ಎಂಬುದೆ ನಿತ್ಯದ ಕ್ರಮವಾಯಿತು. ಒಂದೊಂದು ಸಲ ಶ್ರೀನಿವಾಸನಿಗೆ ಬೆಳಗ್ಗೆ ಊಟ ಸಿಕ್ಕರೆ ಸಿಕ್ಕಿತು; ಸಾಯಂಕಾಲ ಬಂದ ನಂತರ ಚಹ ಉಪಹಾರ ಆದರಾಯಿತು, ಇಲ್ಲವಾದರೆ ಇಲ್ಲ, ಎನ್ನುವ ಸ್ಥಿತಿ ಬಂದಿತು. ಮೊದಮೊದಲು ಶ್ರೀನಿವಾಸ ಯಾವುದೋ ಒಂದು ಹೆದರಿಕೆಯಿಂದ, ಸಹಾನುಭೂತಿಯಿಂದ ತಾಳ್ಮೆ ತೋರಿಸಿದ. ಆದರೆ ಆತನ ತಾಳ್ಮೆಗೂ

ಒಂದು ಮಿತಿ ಇದ್ದಿತಲ್ಲವೆ? ಆಗೀಗ ಕೋಪಿಸಿಕೊಳ್ಳುತ್ತಿದ್ದ, ಬಿರುಮಾತ ನಾಡುತ್ತಿದ್ದ. ಆದರೆ ಅದಾವುದರ ಪರಿಣಾಮವೂ ಕಾವೇರಿಯ ಮನಸ್ಸಿನ ಮೇಲೆ ಆಗದಷ್ಟರಮಟ್ಟಿಗೆ ಕಾವೇರಿಯ ಹೃದಯ ಬಧಿರವಾಗಿತ್ತು.

ಒಂದು ದಿನ ಮುಂಜಾನೆ ಒಂಬತ್ತು ಗಂಟೆಯಾಗುತ್ತ ಬಂದಿದ್ದರೂ ಅಡಿಗೆಯ ಯಾವ ಸಿದ್ಧತೆಯೂ ಇಲ್ಲದ್ದನ್ನು ನೋಡಿ ಶ್ರೀನಿವಾಸನಿಗೆ ಕಡೆಯ ದಾಯಿತು. ಅದಾಗಲೆ, ಕಳೆದ ವಾರದಲ್ಲಿ ಎರಡು ಮೂರು ಸಲ ತಡ ಮಾಡಿ ಹೋಗಿದ್ದ. ತಡವಾಗಿದ್ದರೂ ಸರಿಯಾದ ಊಟ ಸಿಕ್ಕಿರಲಿಲ್ಲ. ಹಿಂದಿನ ರಾತ್ರಿಯ ಊಟವೂ ಹಾಗೆಹಾಗೆಯೆ ಆಗಿದ್ದರಿಂದ, ಹೊಟ್ಟೆಯಲ್ಲಿ ಹಸಿವೆಯೂ 'ಚುರು'ಗುಡುತ್ತಿತ್ತು. ಶ್ರೀನಿವಾಸನೆಂದ:

"ಅಲ್ಲ ಕಾವಿ, ಒಂಬತ್ತು ಗಂಟೆಯಾಗುತ್ತ ಬಂದಿತು ಇನ್ನೂ ಅಡಿಗೆಗೆ ಏನೂ ಸಿದ್ಧತೆ ಇಲ್ಲವಲ್ಲ....? ನಿತ್ಯ ಹೀಗೆ ತಡ ಮಾಡಿ ಆಫೀಸಿಗೆ ಹೋದರೆ–"

"ಅದಕ್ಕೆ ನಾನೇನು ಮಾಡಲಿ?—"

ಹೆಚ್ಚಾದರೆ ಸುಮ್ಮನಾಗಿ ಉಳಿಯಬಹುದೆಂದೆಣಿಸಿದ ಶ್ರೀನಿವಾಸನನ್ನು ಈ ಮಾತು ಕೆರಳಿಸಿತು. ಆದರೂ ತಾಳ್ಮೆಗೆಡದೆ ಕೇಳಿದ:

"ನಾನೇನು ಮಾಡಲಿ, ಎಂದರೆ? ಅಡಿಗೆ ಮಾಡುವುದಿಲ್ಲವೆ?"

"ಮಾಡುತ್ತೇನೆ—"

ಮಾತಿನಲ್ಲಿಯ ಬಿಗುಮಾನ ಸ್ಪಷ್ಟವಾಗಿದ್ದಿತು.

"ಯಾವಾಗ?"

"ನನಗೆ ಆದಾಗ ಮಾಡುತ್ತೇನೆ—"

ಈಗ ಮಾತ್ರ ಶ್ರೀನಿವಾಸನಿಗೆ ತಾಳ್ಮೆ ಉಳಿಯಲಿಲ್ಲ. ಅವನೆಂದ:

"ಏನು ಹಾಗೆಂದರೆ? ವೇಳೆಗೆ ಸರಿಯಾಗಿ ಒಂದು ಅಡಿಗೆಯನ್ನು ಮಾಡಲೂ ಆಗದಾಗಿದೆ ನಿನಗೆ—"

ಕಾವೇರಿ ಸುಮ್ಮನಾಗಿಯೆ ಇದ್ದಳು. ಶ್ರೀನಿವಾಸನನ್ನು ಆ ನೀರವತೆ ರೇಗಿಸಿತು.

"ಏನು? ಆಗಿದೆಯಾದರೂ ಏನು, ನಿನಗೆ?"

"ನನಗೇನಾಗುತ್ತದೆ. ಏ—ನೂ ಇಲ್ಲ!"

"ಹಾಗಿದ್ದರೆ, ಇದೆಲ್ಲ ಏನದು, ನೀನು ನಡಸಿದ್ದು?"

" ಏನದು, ನಾನು ನಡಸಿದ್ದು ? "

" ಈಗ ಒಂದು ತಿಂಗಳಿಂದ ಒಂದು ಹೊತ್ತಾದರೂ ಸರಿಯಾಗಿ ಅಡಿಗೆ ಮಾಡಿ ಊಟ ಹಾಕಿದ್ದೀಯಾ ? ಒಂದು ಸಾರಿಯಾದರೂ ಸರಿಯಾಗಿ ಚಹ ಉಪಹಾರ ಮಾಡಿದ್ದೀಯಾ ? "

ಕಾವೇರಿ ಮತ್ತೆ ಸುಮ್ಮನಾದಳು.

" ಯಾಕೆ ? ನಾನೇನು ಕೇಳಿದೆ ? "

" ನಾನೇನು ಹೇಳಲಿ ? "

" ಏನು ಹೇಳುವುದೂ ಬೇಡ, ಕೇಳುವುದೂ ಬೇಡ. ಸರಿಯಾದ ಊಟ ಹಾಕಿದರೆ ಸಾಕಾಗಿದೆ...."

" ಇಷ್ಟು ದಿನ ಊಟ ಮಾಡದೆ ಇದ್ದಿರುವ ಹಾಗೆ ಹೇಳುತ್ತೀರಿ...."

" ಸಾಕು ಮಾಡು, ನಿನ್ನ ಮಾತು. ಯಾವಾಗಲೂ ಅಷ್ಟೆ. ಮಾತಿಗೊಂದು ಪ್ರತಿಯಾಗಿ ಮಾತು. ಇತ್ತೀಚೆಗಂತೂ ಕೇಳಿ ಕೇಳಿ ಸಾಕಾಗಿ ಹೋಗಿದೆ ನನಗಂತೂ...."

" ಹೌದೆ ? ಹಾಗಿದ್ದರೆ—"

" ಏನು ಹಾಗಿದ್ದರೆ ? "

ಕಾವೇರಿ ಮತ್ತೆ ಸುಮ್ಮನಾದಳು. ಸುಮ್ಮನಾದ ಹಾಗೆ ಶ್ರೀನಿವಾಸನಿಗೆ ಕೋಪವೇರುತ್ತಿತ್ತು. ಆದರೆ ಆತ ಏನನ್ನೂ ಮಾಡಲಾರದವನಾಗಿದ್ದ. ಅದನ್ನು ತಿಳಿದೇ ಅಸಹಾಯನಂತೆ ಕೊನೆಗೆ ಕೇಳಿದ.

" ನನಗೀಗ ಹೊತ್ತಾಗುತ್ತದೆ. ಅಡಿಗೆ ಮಾಡುವ ಹಾಗಿದ್ದರೆ ಹೇಳು. ಇಲ್ಲವಾದರೆ ಎಲ್ಲಿಯಾದರೂ ಹೋಟಲಿನಲ್ಲಿ ಊಟ ಮಾಡಿಕೊಂಡು ಹೋಗುತ್ತೇನೆ...."

" ಅಷ್ಟು ಮಾಡುವ ಹಾಗಿದ್ದರೆ ನನ್ನನ್ನೇನು ಕೇಳುವುದು...."

" ನೀನು ಮಾಡದಿದ್ದರೆ ಎಂದೆ...."

" ಮಾಡುವುದಿಲ್ಲ ಎಂದೆನೆ, ನಾನು ? "

" ಆದಾಗ ಮಾಡುತ್ತೇನೆ, ಎಂದಿ...."

" ಹೌದು. ನನ್ನ ಕೈಲಾದಾಗ ಮಾಡುತ್ತೇನೆ...."

" ಅದಕ್ಕಾಗಿ ಕಾಯುತ್ತ ಕುಳಿತರೆ, ಆಫೀಸು ನಮ್ಮಪ್ಪನ ಮನೆಯುದೆ ? "

“ ಹಾಗಿದ್ದರೆ ಬೇಕಾದ ಅಡಿಗೆಯವರನ್ನು ತಂದಿಟ್ಟುಕೊಂಡು ಮಾಡಿಸಿಕೊಳ್ಳಿ....”

ಶ್ರೀನಿವಾಸ—ಅದೇಕೊ ಸುಮ್ಮನಾದ ಮಾತಿಗೊಂದು ಮಾತು ವಾಡಿಕೆಯಾಗಿಬಿಟ್ಟಿತ್ತು. ಸುಮ್ಮನೆ ಮಾತು ಬೆಳೆಸುವುದೇತಕ್ಕೆಂದು ಸುಮ್ಮನಾದ. ಆದರೆ ಪಡಸಾಲೆಯ ಕಡೆಗೆ ಬರುತ್ತಿರುವಾಗ ಹೆಚ್ಚು ಕಡಿಮೆ ತನ್ನಷ್ಟಕ್ಕೆಯೆ ಎಂಬಂತೆ ಅಂದುಕೊಂಡ: “ ಅಡಿಗೆಯವನನ್ನು ಇಟ್ಟುಕೊಳ್ಳುವ ಹಾಗಿದ್ದರೆ ಈ ಸುಡುಗಾಡು ಕೆಲಸಕ್ಕೇತಕ್ಕೆ ಬರುತ್ತಿದ್ದೆ ? ” ಮಾತು ಕಾವೇರಿಗೆ ಕೇಳಿಸದಿರಲಿಲ್ಲ. ತಟ್ಟನೆ ಹೇಳಿದಳು :

“ ಅಡಿಗೆಯವನನ್ನು ಇಟ್ಟುಕೊಳ್ಳುವುದಾಗಿದ್ದರೆ ಇನ್ನೊಬ್ಬಳನ್ನು ಮದುವೆ ಮಾಡಿಕೊಳ್ಳಿರಿ. ಎಲ್ಲವೂ ಸರಿಯಾದೀತು....”

ಮಾತು ತೀರ ಅನಿರೀಕ್ಷಿತವಾಗಿದ್ದಿತು. ಗೂಟದ ಮೇಲಿನಿಂದ ಶರ್ಟನ್ನು ತೆಗೆದುಕೊಳ್ಳುತ್ತಿದ್ದ ಶ್ರೀನಿವಾಸನ ಕೈ ಅಲ್ಲಿಯೆ ಅರೆಕ್ಷಣ ತಡೆಯಿತು. ಈಕೆಯೆದುರು ಮಾತನಾಡುವುದೆ ಕಷ್ಟವಾಯಿತು ಎಂದುಕೊಂಡಿರಬೇಕು ಶ್ರೀನಿವಾಸ. ಆದರೆ ಆ ಅಸಹಾಯತೆಗಿಂತ ಹೆಚ್ಚಾಗಿ, ಕಾವೇರಿಯ ಕೊನೆಯ ಮಾತು ಆತನ ಮನಸ್ಸನ್ನು ಚುಚ್ಚಿತು ಅಂತೆಯೆ ಆತನ ಕೈ ತಡೆದಿರಬೇಕು. ಅದಕ್ಕೆ ಬೇರೆಯಾದ ಕಾರಣಗಳಿದ್ದವು.

ಕಾವೇರಿ ಶ್ರೀನಿವಾಸನ ಜತೆಗೆ ಬೆಳಗಾಂವಿಗೆ ಹೊರಟದ್ದು ಭಾಗವ್ವನಿಗೆ ಸರಿಬೀಳದಿದ್ದದ್ದು ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಈ ವಿಷಯದಲ್ಲಿ ಆಕೆ ಕೊಟ್ಟ ಅನುಮತಿ—ಅನುಮಾನದಿಂದ ಕೂಡಿದ್ದಾಗಿತ್ತೆಂಬುದನ್ನು ಶ್ರೀನಿವಾಸ ಮೊದಲು ಬಾರಿ ಆ ಮಾತನ್ನೆತ್ತಿದಾಗಲೆ ತಿಳಿದಿದ್ದ. ಆದರೂ ತಾಯಿಯ ಬಗೆಯಲ್ಲಿ ಎಷ್ಟು ಹಂಬಲ ಪ್ರೀತಿಗಳಿದ್ದರೂ ತನ್ನ ಅನಾನುಕೂಲಗಳ ಜತೆಯಲ್ಲಿ ಕಾವೇರಿಯ ಒಡನೆ ಕೆಲಕಾಲವಾದರೂ ಇಬ್ಬರೆ ಸುಖವಾಗಿ ಇರುವಾ ಎಂಬ ಯೌವನಕ್ಕೆ ಸಹಜವಾದ ಆಕಾಂಕ್ಷೆಯು ಎಲ್ಲವನ್ನು ಮರೆಯಿಸಿತ್ತು. ಆದರೆ ಶ್ರೀನಿವಾಸನ ಜತೆಯಲ್ಲಿ ಕಾವೇರಿ ಹೊರಟು ಹೋದನಂತರ ಭಾಗವ್ವನ ಮನಃಸ್ಥಿತಿ ತನ್ನ ಸೊಸೆಯ ವಿಚಾರದಲ್ಲಿ ವಿಚಿತ್ರವಾಯಿತು. ಮೊದಲಿನಿಂದಲೆ ಯಾವ ಅಕ್ಕರೆಯನ್ನೂ ತೋರದ ಆಕೆ ಈಗ ಹೆಚ್ಚು ಕಡಿಮೆ ಆಕೆಗೆ ವಿರುದ್ಧವಾಗಿಯೆ ನಿಂತುಕೊಂಡಂತಾಯಿತು. ಆಕೆ ಹೊರಟುಹೋದದ್ದು ಯಾವ ತಪ್ಪು? ಶ್ರೀನಿವಾಸ ಬಂದು ಕರೆದುಕೊಂಡು ಹೋದನೆಂತಲ್ಲವೆ ಆಕೆ ಹೋದದ್ದು? ಆತ ಕರೆದುಕೊಂಡು ಹೋಗಬೇಕೆಂದು ಆಕೆ ಒತ್ತಾಯ ಮಾಡಿದ್ದರೂ ಆಕೆಯ ಮೇಲೆ ತಪ್ಪು ಹೊರಿಸಲಾಗುವಂತಿರಲಿಲ್ಲ. ಆದರೆ ಅಂಥ ಒತ್ತಾಯವನ್ನು ಆಕೆ ಎಂದಿಗೂ ಮಾಡಿದವಳಲ್ಲ. ಎದೆಯಲ್ಲಿ ಆಸೆ ಎಷ್ಟು ಉಕ್ಕಿ ಬಂದರೂ ಅದನ್ನು ಹತ್ತಿಕ್ಕಿ ಹಿಡಿದು ಬಂದುದನ್ನು ಎಚ್ಚರಿಕೆಯ ನಿಸ್ಸೀಮ ಸಹನೆಯೆ, ಆಕೆಯ ಜೀವನದ ತತ್ವವಾಗಿದ್ದನ್ನು ಭಾಗವ್ವ ತಿಳಿಯದೆ ಹೋಗಿದ್ದರೆ ಆಶ್ಚರ್ಯವಿರಲಿಲ್ಲ. ಯಾವ ಪುರಾಕೃತಕ್ಕಾಗಿಯೋ ಅವರಿಬ್ಬರ ಸಂಬಂಧಗಳಲ್ಲಿ ಮೊದಲಿನಿಂದಲೂ [illegible] ಕೊಂಡ ವಿರಸ ಅವಳ ಪ್ರಯಾಣದಿಂದ ಇನ್ನೂ ಬಲವಾಯಿತು ; ಬೇರೂರಿತು. ಇದಕ್ಕೆ ಸರಿಯಾಗಿ ಕಾವೇರಿಗೆ ಮಕ್ಕಳಾಗಿರಲಿಲ್ಲ. ಭಾಗವ್ವನ ದೃಷ್ಟಿಯಿಂದ ಅದೂ ಒಂದು ಆಕೆಯ ಅಪರಾಧವೆ. ದಿನ ಕಳೆದ ಹಾಗೆ ಇಂದಿಲ್ಲ ನಾಳೆ ಮಕ್ಕಳಾಗಬಹುದೆಂಬ ಆಸೆ ಬಯಲಾಗುತ್ತ ಬಂದು, ಆಕೆ ಬಂಜೆ—ನಿರ್ಭಾಗ್ಯೆ—ಎಂಬ ಭಾವನೆ ಮೂಡಿದಾಗಲೆಲ್ಲ ಆಕೆಯನ್ನು ಶ್ರೀನಿವಾಸನಿಗೆ ಮದುವೆ ಮಾಡಿಕೊಳ್ಳಬಾರದಿತ್ತು—ಇವಳಿಂದ ಆತನ—ತನ್ನ

—ವಂಶ ನಿಂತುಹೋಗುವಂತಾಯಿತು, ಎಂಬೆಲ್ಲ ವಿಚಾರಗಳೂ ಕೂಡಿ ಕಾವೇರಿಯ ಬಗೆಯಲ್ಲಿ ಆಕೆಯ ಮನಸ್ಸು ಇನ್ನೂ ನಿಷ್ಠುರಗೊಳ್ಳುತ್ತಿತ್ತು.

ಭಾಗಮ್ಮನ ಈ ಮನೋವೃತ್ತಿ ಬಲಗೊಳ್ಳುತ್ತಿದ್ದ ಹಾಗೆ ಅದಕ್ಕೆ ಅನುಕೂಲವಾಗುವಂತೆ ಆಕೆಗೆ ಬೇಕಾದವಳಾದ ಲಕ್ಷ್ಮೀಬಾಯಿಯಿಂದ ಉತ್ತೇಜನ ದೊರೆಯುತ್ತಿತ್ತು. ನಿತ್ಯ ಜತೆಯಲ್ಲಿಯೇ ಪುರಾಣ ಪುಣ್ಯ ಕಥೆಗಳಿಗೆ ಹೋಗಿ ಬರುವುದಲ್ಲದೆ ಒಂದಿಲ್ಲೊಂದು ನೆಪ ಹೂಡಿಕೊಂಡು ಭಾಗಮ್ಮನಲ್ಲಿಗೆ ಬಂದು ಒಂದರ್ಧ ಗಂಟೆ ಹರಟೆ ಹೊಡೆದು ಹೋಗದಿದ್ದರೆ ಲಕ್ಷ್ಮೀಬಾಯಿಗೆ ನಿದ್ರೆ ಬರುತ್ತಿರಲಿಲ್ಲವೆಂದು ಕಾಣುತ್ತದೆ. ಒಂದು ದಿನ ಪುರಾಣದಲ್ಲಿ ಯಾವುದೊ ಒಂದು ಉಪನ್ಯಾಸ ನಡೆದು ಆಚಾರ್ಯರು ಒಳ್ಳೆ ರಸವತ್ತಾಗಿ ಮನೆಗೆ ಮಕ್ಕಳಿರುವುದರ ಮಹತ್ವವನ್ನು ವಿವರವಾಗಿ ಹೇಳಿದ್ದರು. ಮಕ್ಕಳಿದ್ದರೆ ಮನೆ ಸೊಗಸು ಎಂಬ ಮಾತಿಗಿಂತ ಹೆಚ್ಚಾಗಿ, ಮಕ್ಕಳಿಲ್ಲದವರಿಗೆ ಇಹದಲ್ಲಿ ಸುಖವಿಲ್ಲ, ಪರದಲ್ಲಿ ಗತಿಯಿಲ್ಲ; ಮನುಷ್ಯನಿಗಾಗಿ ಸ್ವರ್ಗದ ಬಾಗಿಲು ತೆರೆಯುವುದು ಮಕ್ಕಳಿಂದಲೆ ಎಂದು ಮುಂತಾಗಿ ಹೇಳಿದ್ದು ಭಾಗಮ್ಮನ ಮನಸ್ಸಿನ ಮೇಲೆ ಹೆಚ್ಚಾಗಿ ಪರಿಣಾಮವನ್ನು ಮಾಡಿತ್ತು. ಅದನ್ನು ಕೇಳಿದಾಗಿನಿಂದ ಶ್ರೀನಿವಾಸನಿಗೆ ಮಕ್ಕಳಾಗದಿದ್ದುದನ್ನು ನೆನೆದು, ಆತನ ಬಗೆಯಲ್ಲಿ ದುಃಖ, ಅದರ ಜತೆಗೆ, ಅದಕ್ಕೆಲ್ಲ ಕಾವೇರಿಯೆ ಕಾರಣಳೆಂಬಂತೆ ಆಕೆಯ ಬಗೆಯಲ್ಲಿ ರೊಚ್ಚು ಭಾಗಮ್ಮನ ಮನಸ್ಸಿನಲ್ಲಿ ಮೂಡಿ ನಿಂತಿದ್ದವು. ಮರುದಿನ ಮಧ್ಯಾಹ್ನ ಲಕ್ಷ್ಮೀಬಾಯಿ ಭಾಗಮ್ಮನಲ್ಲಿಗೆ ಬಂದಾಗ ಮತ್ತೆ ಅದೇ ಮಾತನ್ನು ಎತ್ತಿ ಮುಂದುವರಿಸಿದ್ದಳು. ಮಾತಿಗೆ ಮಾತು ಜೋಡಿಸಿಕೊಂಡು ಬಂದು ಒಂದೇ ವಿಷಯವನ್ನು ಎತ್ತುವುದರಲ್ಲಿ ಲಕ್ಷ್ಮೀಬಾಯಿಯ ಮನಸ್ಸಿನಲ್ಲಿ ಬೇರೆಯಾದ ಯಾವುದೋ ಉದ್ದೇಶವಿರಬೇಕೆಂಬುದು ಭಾಗಮ್ಮನಿಗೆ ತಿಳಿಯುವಂತಿರಲಿಲ್ಲ.

"ನೋಡಿದಿರಾ? ನಿನ್ನೆ ಪುರಾಣ ಎಷ್ಟು ಚೆನ್ನಾಗಿ ಹೇಳಿದರು? ನಿನ್ನೆ ಅದನ್ನೆಲ್ಲ ಕೇಳಿದಾಗಿನಿಂದ ನನಗಂತೂ ಮನಸ್ಸಿನಲ್ಲಿ ಸಮಾಧಾನವೆ ಇಲ್ಲ"

"ಹಾಗೇಕೆ ಹೇಳುತ್ತಿ, ಲಕ್ಷ್ಮೀ? ಏನಿಲ್ಲದಿದ್ದರೂ ನಿನಗೆ ಒಬ್ಬ ಮಗಳಾದರೂ ಇದ್ದಾಳೆ ನನಗೂ ಅದೆ ಯೋಚನೆಯಾಗಿದೆ—ನನ್ನ ಶ್ರೀನಿವಾಸನ ಬಗೆಯಲ್ಲಿ. ಆ ಸುಡುಗಾಡು ಹೆಣ್ಣು ಯಾವ ಮುಹೂರ್ತಕ್ಕೆ ಗಂಟು ಬಿದ್ದಿತೊ—"

"ಹಾಗೆಲ್ಲ ಅನ್ನಬಾರದು. ಈಗಾದರೇನಾಯಿತು? ಕಾವೇರಿಗೇನೂ ಆಗಬಾರದ ವಯಸ್ಸಾಗಿಲ್ಲವಲ್ಲ. ಆಕೆಗೇನು ಮಕ್ಕಳಾಗದೆ ಇರುತ್ತದೆಯೆ?"

ಲಕ್ಷ್ಮೀಬಾಯಿಯ ಈ ಮಾತು ಕೇವಲ ತೋರಿಕೆಯದಾಗಿತ್ತು. ಅಲ್ಲದೆ, ಕಾವೇರಿಗೆ ಇನ್ನುಮೇಲೆ ಮಕ್ಕಳಾಗುವುದಿಲ್ಲವೆಂಬ ಭಾವನೆಯನ್ನು ಆಕೆಯಲ್ಲಿ ಬೆಳೆಯಿಸಬೇಕೆಂಬ ಯೋಜನೆಗೆ ಅದೊಂದು ರೀತಿಯ ಪೂರ್ವ ಸೂಚನೆಯಾಗಿತ್ತು.

"ಆಯಿತು. ಆಗಬೇಕಾಗಿದ್ದರೆ ಇಷ್ಟು ದಿನ ತಡೆಯಬೇಕಾಗಿತ್ತೆ? ನಾಳಿನ ಫಾಲ್ಗುಣಕ್ಕೆ ಶ್ರೀನಿವಾಸನ ಲಗ್ನವಾಗಿ ಒಂಬತ್ತು ವರುಷ—"

"ಅದೇನು? ಒಬ್ಬೊಬ್ಬರಿಗೆ ತಡವಾಗಿ ಆಗುವುದೂ ಉಂಟಲ್ಲವೆ?"

"ಅದೇನೊ ಸರಿ. ಆದರೆ ಆ ಹುಡುಗಿಯ ಲಕ್ಷಣವೆ ಸರಿಯಾಗಿಲ್ಲ. ಆಕೆ ಬಂದಾಗಿನಿಂದ ಒಂದಿಲ್ಲೊಂದು ಕಿರುಕುಳ ಇದ್ದೆ ಇದೆ....ಇಲ್ಲಿಂದ ಆಕೆ ಹೊರಟುಹೋದದ್ದು ನನಗಂತೂ ಒಂದು ಪೀಡೆ ತಪ್ಪಿದಹಾಗಾಗಿದೆ."

ಲಕ್ಷ್ಮೀಬಾಯಿ ಸುಮ್ಮನಾದಳು. ತನ್ನ ಮನಸ್ಸಿನಲ್ಲಿಯ ಸೂಚನೆಯನ್ನು ಮುಂದರಿಸಲಿಕ್ಕೆ ಎಷ್ಟರಮಟ್ಟಿಗೆ ಅವಕಾಶವಿದೆ ಎಂಬುದನ್ನು ತಿಳಿಯದಾಗದಕ್ಕೆಯೆ ಆಕೆ ಸುಮ್ಮನಾಗಿರಬೇಕು. ಕೊನೆಗೆ, ಒಂದು ನಿಮಿಷ ಯೋಚಿಸಿ ಕೇಳಿದಳು:

"ಹುಂ....ಬೆಳಗಾಂವಿಗೆ ಹೋದಾಗಿನಿಂದ ಏನಂತೆ ಸಮಾಚಾರ?"

"ಏನಿರಬೇಕು ಆಕೆಯ ಸಮಾಚಾರ?"

"ಅಲ್ಲ....ಅಂದರೆ....ಏನಾದರೂ?...."

"ಆಯಿತು. ನಿಮಗೇನೊ ಹುಚ್ಚು ಆಸೆ...."

ನಿಜವಾಗಿಯೂ ಲಕ್ಷ್ಮೀಬಾಯಿಯ ಹೃದಯದಲ್ಲಿ ಅಂಥ ಆಸೆ ಮೂಡಿರಲೆ ಇಲ್ಲ. ಅಂಥ ಔದಾರ್ಯ ಆಕೆಯಲ್ಲಿ ಇರಲಿಲ್ಲ. ಅಲ್ಲದೆ, ಕಾವೇರಿಯ ಬಗೆಯಲ್ಲಿ ಅಂಥ ಆಸೆಯನ್ನು ಆಕೆ ಇಟ್ಟುಕೊಳ್ಳುವುದಾದರೆ ಆಕೆ ತನ್ನ ಯೋಜನೆಯನ್ನೆ ಮರೆತು ಬಿಡಬೇಕಾಗುತ್ತಿದ್ದಿತೆಂದಮೇಲೆ ಕಾವೇರಿಗೆ ಮಕ್ಕಳಾಗಲಿ—ಆಗಬೇಕು—ಎಂಬ ಇಚ್ಛೆ ಆಕೆಯಲ್ಲಿ ಇರುವುದು ಹೇಗೆ ಸಾಧ್ಯ? ಲಕ್ಷ್ಮೀಬಾಯಿ ಏನೇನನ್ನೊ ಯೋಚಿಸುತ್ತಿರುವಾಗ ಭಾಗಮ್ಮ ತನ್ನಷ್ಟಕ್ಕೆ ಎಂಬಂತೆ ಉಸಿರಿದಳು:

"ಹಾಗೆ ನೋಡಿದರೆ ಎಷ್ಟೋ ಸಲ ಸ್ವಾನೆ ಅಂದುಕೊಂಡಿದ್ದೇನೆ. ಇದನ್ನೆಲ್ಲ ನೋಡಿ, ನಮ್ಮ ಶೀನುವಿಗೆ ಬೇರೆಯೊಂದು ಮದುವೆಯನ್ನು ಯಾಕೆ ಮಾಡಬಾರದು, ಎಂದು...."

ಈ ಮಾತನ್ನು ಭಾಗಮ್ಮನಿಂದ ಹೊರಡಿಸಬೇಕೆಂದು ಗಂಟಿಗಟ್ಟಲೆ—ಅದೇಕೆ, ದಿನದಿನವೂ ಹಾತೊರೆಯುತ್ತಿದ್ದ ಲಕ್ಷ್ಮೀಬಾಯಿಗೆ ಅದರಿಂದ ಸಂತೋಷವೆ ಆಯಿತು. ಆದರೆ ಅದನ್ನು ತೋರಗೊಡುವುದು ಸಭ್ಯ ಲಕ್ಷಣದ ಮಾತು ಹಾಗಿರಲಿ—ತನ್ನ ಆಸೆ ಉದ್ದೇಶಗಳಿಗೆಯೆ ಬಾಧಕವಾಗಬಹುದೆಂಬ ದೂರಾಲೋಚನೆಯಿಂದ ಉಪಚಾರದ ಸೋಗನ್ನು ಹಾಕಿ ಹೇಳಿದಳು:

"ಛೆ! ಎಂಥ ಮಾತು ಭಾಗಮ್ಮ? ಉಂಟೆ ಎಲ್ಲಾದರೂ? ಏನೊ ಛೆ, ಪಾಪ! ಸುಮ್ಮನೆ ಆ ಮಗುವಿಗೆ ಅನ್ಯಾಯ ಮಾಡಬೇಡಿರಿ."

"ಅನ್ಯಾಯ!" ಭಾಗಮ್ಮನ ದನಿಯಲ್ಲಿಯ ತಿರಸ್ಕಾರ ಸ್ಪಷ್ಟವಾಗಿತ್ತು. "ಅನ್ಯಾಯ ಏನದರಲ್ಲಿ? ಈಕೆಯ ಬಂಜೆತನಕ್ಕಾಗಿ ನನ್ನ ಮಗು ಒದ್ದಾಡಬೇಕೆ? ಮೊದಲಿನಿಂದಲೂ ನಮ್ಮ ಶೀನೂವಿಗೆ ಮಕ್ಕಳು ಅಂದರೆ ಎಷ್ಟು ಪ್ರೀತಿ!"

"ಆದರೂ—ಆದರೂ—"

"ಆದರೂ ಇಲ್ಲ, ಏನೂ ಇಲ್ಲ. ಇನ್ನೊಂದು ಸಲ ಶೀನೂ ಇಲ್ಲಿಗೆ ಬಂದಾಗ ಆತನಿಗೆಯೆ ಹೇಳಿಬಿಡುತ್ತೇನೆ. ಇದೇನೂ ಬಗೆಹರಿಯುವುದಿಲ್ಲ, ಎಲ್ಲಾದರೂ ಒಂದು ಲಕ್ಷಣವಾದ ಕನ್ಯೆಯನ್ನು ನೋಡಿಬಿಡು, ಎಂದು...."

ಭಾಗಮ್ಮನ ಈ ನಿರ್ಧಾರದ ಮಾತಿಗಿಂತಲೂ ಹೆಚ್ಚಾಗಿ, ಆಕೆಯ ಹಟಮಾರಿ ಸ್ವಭಾವವೆ ಲಕ್ಷ್ಮೀಬಾಯಿಗೆ ಬೇಕಾದ ಉತ್ತೇಜನವನ್ನು ಕೊಡುವಂತಹದಾಗಿತ್ತು. ಈಗ ವರ್ಷಾರು ತಿಂಗಳಿಂದ ಭಾಗಮ್ಮ-ಕಾವೇರಿಯರ ನಡುವಿನ ವಿರಸವನ್ನು ನೆನೆದು—ಅದರಲ್ಲಿಯೂ ಮಕ್ಕಳಾಗದ್ದಕ್ಕೆ ಆ ವಿರಸ ಬೆಳೆಯುತ್ತಿದ್ದುದನ್ನು ಗಮನಿಸಿ—ಶ್ರೀನಿವಾಸ ತನ್ನ ಬೆಳೆದು ನಿಂತ ಸುಮಿತ್ರೆಯನ್ನು ಯಾಕೆ ಮದುವೆಯಾಗಬಾರದು ಎಂದು ಎಷ್ಟೊ ಬಾರಿ ಅಂದುಕೊಂಡಿದ್ದಳು. ಭಾಗಮ್ಮನ ಇಂದಿನ ಮಾತಿನಿಂದ ಅದಕ್ಕೆ ಇನ್ನೂ ಹೆಚ್ಚಾಗಿ ಆಸ್ಪದವಾಯಿತು. ಆ ಸ್ವಾರ್ಥಕ್ಕಾಗಿಯೆ ಎಷ್ಟೊ ಸಲ ಆಕೆ ಕಾವೇರಿಯ ವಿರುದ್ಧವಾಗಿ ಇಲ್ಲದ್ದನ್ನು ಹೇಳಿ, ಹೇಳಿಸಿ, ಭಾಗಮ್ಮನ

ಮನಸ್ಸನ್ನು ಕೆಡಿಸಿಯೂ ಇದ್ದಳು. ಆಕೆಯು ನಡಸಿದ ಎರಡನೆಯ ಮದುವೆಯ ಯೋಜನೆಯನ್ನು ಕೇಳಿದನಂತರವಂತೂ ಏನು ಮಾಡಿದರೂ ಸರಿ, ತನ್ನ ಮಗಳನ್ನೆ ಅಲ್ಲಿಗೆ ಸೇರಿಸುವುದೆಂಬ ನಿರ್ಧಾರವನ್ನು ಆಕೆ ಆ ಕ್ಷಣಕ್ಕೆ ಕಟ್ಟಿದಳು. ಆಕೆಯ ಸ್ವಭಾವದ ಮೂಲಕ ಬೇರೆ ಯೋಚನೆಗಳು, ಯೋಗ್ಯ-ಅಯೋಗ್ಯ—ಎಂಬ ವಿಚಾರದ ಸುಳಿವು ಕೂಡ ಆಕೆಯನ್ನು ಸೋಂಕುವುದು ಸಾಧ್ಯವಿರಲಿಲ್ಲ.

ಯಾವ ಶುಭಮುಹೂರ್ತದಲ್ಲಿ ಆ ಮಾತು ಭಾಗಮ್ಮನ ಬಾಯಿಗೆ ಬಂದಿತೊ! ಆ ಕ್ಷಣದಿಂದ ಅದು ಅವಳ ಮನಸ್ಸಿನಲ್ಲಿ ನಟ್ಟು ನಿಂತಿತು. ಯೋಚಿಸಿದ ಹಾಗೆ ಶ್ರೀನಿವಾಸನಿಗೆ ಬೇರೆಯೊಂದು ಮದುವೆಯನ್ನು ಮಾಡಿಯೇ ಬಿಡುವುದು, ಎಂಬ ನಿರ್ಧಾರಕ್ಕೆಯೇ ಬಂದಿತು. ದಿನ ಕಳೆದ ಹಾಗೆ ಈ ಯೋಚನೆ ಫಲಿಸುವುದು ಹೇಗೆ, ಯಾರನ್ನು ಕೇಳುವುದು, ಹೇಗೆ ಸಾಧಿಸುವುದು, ಎಂಬ ಕಡೆಗೆ ಹರಿಯತೊಡಗಿತೆ ವಿನಹ, ಅದರಿಂದ ಕಾವೇರಿಗೆ ಆಗಬಹುದಾದ ಅನ್ಯಾಯದ ಕಡೆಗಾಗಲಿ, ಅಥವಾ ಯಾವ ತವರಿನ ಅಥವಾ ಬೇರೆ ಬಳಗದವರ ಆಶ್ರಯವಿಲ್ಲದ ಕಾವೇರಿಯ ಗತಿಯೇನು ಎಂಬುದರ ಕಡೆಗಾಗಲಿ ಹರಿಯಲಿಲ್ಲ. ಇದಕ್ಕೆ ಸರಿಯಾಗಿ, ಆ ಯೋಚನೆಗಳಿಗೆ ಅನುಕೂಲವಾಗುವಂತೆ ಲಕ್ಷ್ಮೀಬಾಯಿಯಿಂದ ಉತ್ತೇಜನವೂ ದೊರಕತೊಡಗಿತು. ಹೆಚ್ಚು ಕಡಿಮೆ, ಅಂದಿನಿಂದಲೆ ಲಕ್ಷ್ಮೀಬಾಯಿ ತನ್ನ ಮಗಳನ್ನು ಹೆಚ್ಚಾಗಿ ಭಾಗಮ್ಮನ ಹತ್ತಿರವೆ ಸುಳಿದಾಡುವಂತೆ ಏರ್ಪಾಡುಗಳನ್ನು ಮಾಡತೊಡಗಿದಳು ಇಲ್ಲದ ಕೆಲಸಗಳನ್ನು ಹುಡುಕಿಕೊಂಡು ಸುಮಿತ್ರಾ ಭಾಗಮ್ಮನ ಕಡೆಗೆ ಬರತೊಡಗಿದಳು. ತಿಂಗಳೊಪ್ಪತ್ತಿನಲ್ಲಿ ಮುಂಜಾನೆ, ಮಧ್ಯಾಹ್ನ, ಸಂಜೆ, ಯಾವಾಗ ನೋಡಿದರೂ ಸುಮಿತ್ರಾ ಭಾಗಮ್ಮನ ಮನೆಯಲ್ಲಿಯೆ ಸುಳಿದಾಡುತ್ತಿದ್ದಳು. ಎಲ್ಲ ಕೆಲಸಗಳಲ್ಲಿ ಭಾಗಮ್ಮನಿಗೆ ನೆರವಾಗುತ್ತಿದ್ದಳು. ಪಾತ್ರೆ ಉಪಕರಣಗಳನ್ನು ತೊಳೆಯುವುದು, ಮನೆಯ ಕಸ ಗುಡಿಸುವುದು, ಬೇಳೆ-ಕಾಳು ಹಸನಾಗಿಸುವುದು, ಮನೆಯ ಯಾವ ಕೆಲಸವಾದರೂ ಸರಿ, ಭಾಗಮ್ಮನಿಗೆ ಸುಮಿತ್ರೆಯ ನೆರವು ಇದ್ದೆ ಇರುವಂತಾಯಿತು.

ಕಾವೇರಿ ಹೊರಟುಹೋದಂದಿನಿಂದ ಎಲ್ಲ ಕೆಲಸಗಳನ್ನು ತಾನೇ

ಪೂರೈಸಿಕೊಳ್ಳಬೇಕಾಗಿದ್ದ ಭಾಗಮ್ಮನಿಗೆ ಇದರಿಂದ ಅನುಕೂಲವೇ ಆಯಿತು. ಯಾವ ತರದ ಸಿಡುಕು-ಅಸಮಾಧಾನಗಳಿಲ್ಲದೆ ಒಳ್ಳೆ ಚಟುವಟಿಕೆಯಿಂದ ಎಲ್ಲ ಕೆಲಸಗಳನ್ನು ಮಾಡುತ್ತಿದ್ದ ಸುಮಿತ್ರಾ ಕೆಲಕಾಲದಲ್ಲಿಯೆ ಭಾಗಮ್ಮನಿಂದ ಒಳ್ಳೆಯ ಅಭಿಪ್ರಾಯವನ್ನೂ ಪ್ರಶಂಸೆಯನ್ನೂ ಪಡೆದಿದ್ದರೆ ಆಶ್ಚರ್ಯವಿರಲಿಲ್ಲ. ಅಲ್ಲದೆ, ಒನಪು-ಒಯ್ಯಾರಗಳ ಕಲೆಯನ್ನು ರಕ್ತಗತವಾಗಿಯೆ ಎಂಬಂತೆ ಕಲಿತುಕೊಂಡ ಸುಮಿತ್ರಾ ತನ್ನ ಯೌವನದ ಆಕರ್ಷಕತೆಯನ್ನು ಭಾಗಮ್ಮನ ಮನಸ್ಸಿನಲ್ಲಿ ಬಿಂಬಿಸುವಂತೆ ನಡೆದುಕೊಳ್ಳುತ್ತಿದ್ದಳಾದ್ದರಿಂದ ಶ್ರೀನಿವಾಸನಿಗೆ ಎರಡನೆಯ ಮದುವೆಯನ್ನು ಮಾಡುವುದಾದರೆ— ಮಾಡಬೇಕೆಂಬುದರಲ್ಲಿ ಸಂದೇಹವೇ ಇರಲಿಲ್ಲ—ಸುಮಿತ್ರೆಯನ್ನೆ ಏಕೆ ಮಾಡಿಕೊಳ್ಳಬಾರದು ಎಂದು ಕೇಳಿಕೊಳ್ಳುವಂತಾಗಲು ಭಾಗಮ್ಮನಿಗೆ ಬಹುಕಾಲ ಹಿಡಿಯಲಿಲ್ಲ. ಲಕ್ಷ್ಮೀಬಾಯಿಯ ಯೋಜನೆ ಫಲಿಸುವಂತಾಯಿತು. ಆದರೆ ಇದೆಲ್ಲವೂ ತಾಯಿ ಮತ್ತು ಮಗಳು ಇಬ್ಬರೂ ಕೂಡಿ ಪೂರ್ತಿಯಾಗಿ ಯೋಚಿಸಿ ಯೋಚಿಸಿ ನಡೆಸುತ್ತಿದ್ದ ನಾಟಕವೆಂಬುದು ಭಾಗಮ್ಮನಿಗೆ ಕೊನೆಗೂ ತಿಳಿಯಲಿಲ್ಲ. ತಿಳಿಯುವಂತೆಯೂ ಇರಲಿಲ್ಲ. ಅಂಥ ಚಾಣಾಕ್ಷತೆ ಇದ್ದಿತು— ತಾಯಿ ಮಕ್ಕಳಲ್ಲಿ!

ಅಂತೆಯೆ ಮರುತಿಂಗಳ ವಾಡಿಕೆಯಂತೆ ಶ್ರೀನಿವಾಸ ಬೆಳಗಾಂವಿಯಿಂದ ಬಂದಾಗ ಈ ವಿಷಯವನ್ನೆತ್ತಲು ಭಾಗಮ್ಮನಿಗೆ ಯಾವ ಸಂಕೋಚವೂ ಎನ್ನಿಸಲಿಲ್ಲ. ಆದರೆ ಶ್ರೀನಿವಾಸನನ್ನು ನೇರವಾಗಿ ಕೇಳುವ ಹಾಗಿರಲಿಲ್ಲ. ಕೇಳಿದರೆ ಆತ ಏನನ್ನುವನೊ ಎಂಬ ಅಧೈರ್ಯ. ಹೆಚ್ಚುಕಡಿಮೆ ಎಲ್ಲವನ್ನು ತನ್ನ ಮಟ್ಟಿಗೆ ನಿರ್ಧರಿಸಿಕೊಂಡವಳಾದ್ದರಿಂದ ಕೇಳದೆ ಇರುವ ಮನಃಸ್ಥಿತಿಯೂ ಇರಲಿಲ್ಲ. ಆದ್ದರಿಂದ ಸಾಯಂಕಾಲದ ಊಟಕ್ಕೆ ಕುಳಿತಾಗ ಭಾಗಮ್ಮ ನಿಧಾನವಾಗಿ ಮಾತಿಗೆ ಮಾತು ಹೊಂದಿಸಿಕೊಂಡು ಶ್ರೀನಿವಾಸನನ್ನು ಕೇಳುವುದೆಂದುಕೊಂಡಿದ್ದಳು. ಆತ ಬಂದಾಗಲೆಲ್ಲ, ಬೆಳಗಾಂವಿಯ ಕ್ಷೇಮಸಮಾಚಾರಗಳನ್ನು ಕೇಳುತ್ತಲೆ ಇದ್ದರೂ ಆ ದಿನದ ಬಗೆಯಲ್ಲಿ ವಿಶೇಷವಾದ ಆಸ್ಥೆಯಿತ್ತು. ತಾಯಿಯ ಅಕ್ಕರೆಯ ಮಾತುಗಳಿಂದ ಶ್ರೀನಿವಾಸ ಪೂರ್ತಿಯಾಗಿ ಮೈಮರೆತು ಹೋಗುವಂತಾದ. ಭಾಗಮ್ಮ ಕೇಳಿದಳು:

"ಅದೇನು ಶೀನು? ಈ ಸಲ ನೀನು ಹೋದ ಸಲಕ್ಕಿಂತ ಬಹಳ ಸೊರಗಿಹೋಗಿದ್ದೀಯಲ್ಲ? ಕೆಲಸ ಬಹಳವಾಗಿದೆಯೆ?"

"ಸಾಕು ಬಿಡಮ್ಮ. ಎಂದಿಗಾದರೂ ನೀನು ಹೀಗೆಯೆ ಕೇಳುವುದು. ಇದಕ್ಕಿಂತ ಹೆಚ್ಚಾಗಿ ಯಾವಾಗಲಾದರೂ ನಾನು ದಪ್ಪನಾಗಿದ್ದೆನೆ? ನಾನು ಇರುವುದೆ ಹೀಗೆ"

"ಅಷ್ಟೂ ಗೊತ್ತಾಗುವುದಿಲ್ಲವೆ ನನಗೆ? ನಿನಗೆ ಹೇಗೆ ತಿಳಿಯಬೇಕು? ತಿಂಗಳು ಎರಡು ತಿಂಗಳಿಗೊಮ್ಮೆ ನೋಡುವ ನನಗೆ ಒಮ್ಮೆಲೆ ಕಣ್ಣು ಹಿಡಿಯುತ್ತದೆ. ಯಾಕೆ, ಮೈಯಲ್ಲಿ ಸರಿಯಾಗಿರಲಿಲ್ಲವೆ?"

"ಸರಿಯಾಗಿದೆಯಲ್ಲ—"

"ಹಾಗಾದರೆ ಕಾವೇರಿ ಊಟ ಉಪಚಾರ ಎಲ್ಲ ಸರಿಯಾಗಿ ಮಾಡುತ್ತಾಳೆ—"

"ಹುಂ........"

ಆದರೆ ಶ್ರೀನಿವಾಸನ ದನಿಯಲ್ಲಿ ಅನುಮಾನವಿದ್ದಿತು. ಅನುಮಾನಕ್ಕೆ ಕಾರಣವೂ ಇದ್ದಿತು. ಆದರೆ ಅದೆಲ್ಲವನ್ನು ಹೇಳುವುದುಂಟೆ? ಕಾವೇರಿಯ ಬಗೆಯಲ್ಲಿ ವಿಶೇಷವಾದ ಅಕ್ಕರೆಯನ್ನು ತನ್ನ ತಾಯಿ ತೋರದೆ ಇದ್ದುದನ್ನು ತಿಳಿದ ಶ್ರೀನಿವಾಸ ಆಕೆಯಲ್ಲಿ ಇತ್ತೀಚೆಗೆ ತೋರಿದ ಬದಲಾವಣೆಯನ್ನು ತಾಯಿಗೆ ಹೇಳಿ, ಸುಮ್ಮನೆ ಇದ್ದ ಮನಸ್ತಾಪವನ್ನು ಬೆಳೆಯಿಸುವುದು ಸರಿಯಲ್ಲವೆಂದು, ಕೇಳಿದ ಪ್ರಶ್ನೆಗೆ ಸುಮ್ಮನೆ 'ಹುಂ' ಎಂದು ಉತ್ತರ ಕೊಟ್ಟನೇನೊ ಸರಿ. ಆದರೆ ಆ ಉತ್ತರ ಹೇಳುವಾಗ ಆತನ ಕಣ್ಣೆದುರು ಕಳೆದ ಒಂದೆರಡು ತಿಂಗಳಲ್ಲಿ ಕಾವೇರಿ ಮನೆಯ ಕೆಲಸಗಳಲ್ಲಿ ತೋರುತ್ತಿದ್ದ ಅನಾಸ್ಥೆ, ಊಟ ಉಪಚಾರಗಳಲ್ಲಿ ನಡೆಯುತ್ತಿದ್ದ ನಿರ್ಲಕ್ಷ್ಯ, ಅದರಿಂದ ತನಗಾಗುತ್ತಿದ್ದ ಅನಾನುಕೂಲ ಎಲ್ಲವೂ ನಿಂತವು....ಶ್ರೀನಿವಾಸನ ದನಿಯ ಅನುಮಾನವನ್ನು ಭಾಗಮ್ಮ ಗುರುತಿಸದೆ ಇರಲಿಲ್ಲ. ಅಂತೆಯೆ ಹೇಳಿದಳು:

"ಇದು ನೋಡು, ಶೀನೂ. ನೀನು ಏನು ಬೇಕಾದ್ದು ಅಂದರೂ ಸರಿ. ನಿನ್ನ ಹೆಂಡತಿಯ ವಿಚಾರ ಕೆಟ್ಟ ಮಾತು ಹೇಳುತ್ತೇನೆ ಎಂದು ಅಂದುಕೊಳ್ಳಬೇಡ. ಆಕೆ ನಿನ್ನನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಇದನ್ನೇನೊ ನಾನು ಆಡಬಾರದು. ಆದರೆ ಏನು ಮಾಡುವುದು? ಹೆತ್ತ ಕರುಳು ಅದಿ

ಸುತ್ತಿದೆ...." ಎಂದು ಸುಮ್ಮನಾದಳು. ಶ್ರೀನಿವಾಸನಿಗೂ ಏನು ಹೇಳಬೇಕೆಂಬುದು ತಿಳಿಯದೆ ಸುಮ್ಮನಾದ. ಆದರೂ ಕಾವೇರಿಯ ಬಗೆಯಲ್ಲಿ ಇಂಥ ಮಾತನ್ನು ಕೇಳಲಾಗದೆ ಹೇಳಿದ :

"ಸರಿಯಾಗಿ ನೋಡಿಕೊಳ್ಳುವುದು ಎಂದರೇನು? ಸುಮ್ಮನೆ ನೀನು ಏನಾದರೊಂದು ತಲೆಯಲ್ಲಿ ಹಾಕಿಕೊಳ್ಳಬೇಡ. ಎಲ್ಲ ಸರಿಯಾಗಿದೆ, ಎಂದು ನಾನು ಹೇಳಿದರಲ್ಲವೆ?"

"ಆಗಲಪ್ಪ. ನೀನು ಹೇಳಬೇಕು, ನಾನು ಕೇಳಬೇಕು. ನನ್ನ ಮಾತು ಯಾರು ಕೇಳುತ್ತಾರೆ? ಏನೊ, ನನಗೆನಿಸಿದ್ದನ್ನು ಹೇಳಬೇಕು ಎಂದೆ...."

"ನಾನು ಬೇಡ ಎಂದೆನೆ? ಸುಮ್ಮನೆ ಏನಾದರೊಂದು ಅಂದರೆ ಆಯಿತೆ?"

"ಸುಮ್ಮನೆ ಹೇಗಾದೀತು, ಶೀನು? ಆಕೆಗಾದರೂ ಮನಸ್ಸು ಸರಿಯಾಗಿರಬೇಕಲ್ಲವೆ? ಆಕೆ ಇಲ್ಲಿದ್ದಾಗಲೆ ನೋಡುತ್ತಿದ್ದೆ. ಆಕೆಗೆ ಯಾವಾಗಲೂ ಒಂದು ಸ್ವಲ್ಪ ನಿರ್ಲಕ್ಷ್ಯ....ನಿರುತ್ಸಾಹ...."

ಶ್ರೀನಿವಾಸ ಸುಮ್ಮನಾಗಿಯೆ ಇದ್ದ—ಮಾತನಾಡಿ ಏನು ಪ್ರಯೋಜನ ಎಂದು. ಆತನ ನೀರವತೆಯಿಂದ ಭಾಗಮ್ಮನಿಗೆ ಬೇಕಾದ ಅವಕಾಶ ದೊರೆಯಿತು. ಭಾಗಮ್ಮ ಮುಂದುವರಿದಳು :

"ಅದೂ ಸ್ವಾಭಾವಿಕ ಅನ್ನು. ಬಹಳ ದಿವಸ ಮಕ್ಕಳಾಗದಿದ್ದರೆ ಹಾಗೆಯೆ ಆಗುತ್ತದೆ. ಆಕೆಯಾದರೂ ಏನು ಮಾಡಬೇಕು?"

"ಅದಕ್ಕಿನ್ನೇನು ಮಾಡುವುದು? ಸುಮ್ಮನೆ ಯೋಚನೆ ಮಾಡಿದರೆ ಏನಾಗಬೇಕಾಗಿದೆ? ಬೇಕು ಅಂದರೆ ಬರುವ ಬದುಕೆ ಅದು?"

"ಅದೆ ನಾನು ಹೇಳುವುದೂ, ಮಕ್ಕಳಿಲ್ಲದ ಮನೆಯೆ ಹಾಗೆ. ಬಿಕೊ ಅನ್ನುತ್ತದೆ. ಮಕ್ಕಳಿದ್ದರೆಯೆ ಮನೆ. ತುಂಬಿದ ಹಾಗಿರುತ್ತದೆ. ಇಲ್ಲದೆ ಹೋದರೆ—"

"ಹೌದು. ಅದೆಲ್ಲಾ ಸರಿ. ಆದರೇನು ಮಾಡುವುದು?"

"ಆದರೇನು ಮಾಡುವುದು, ಎಂದು ಕೈಚೆಲ್ಲಿ ಕುಳಿತರೆ ಹೇಗೆ? ಕಾವೇರಿಗೆ ಏನಾದರೂ ಔಷಧ ಉಪಚಾರ ಮಾಡಿಸಿದ್ದೀಯಾ? ಹೋದ

ಸಲ ನೀನು ಬಂದಾಗಲೆ ಕೇಳಬೇಕು ಅಂದುಕೊಂಡಿದ್ದೆ...." ಎಂದು ನೋಗಿನ ಸಹಾನುಭೂತಿಯನ್ನು ಬೀರಿದಳು.

"ಔಷಧ ಆಯಿತು, ಉಪಚಾರ ಆಯಿತು. ಒಬ್ಬನಲ್ಲದೆ ಇಬ್ಬರು ದೊಡ್ಡ ಡಾಕ್ಟರರಿಗೆ ತೋರಿಸಿದೆ. ನಮ್ಮ ಪ್ರಾರಬ್ಧದಲ್ಲಿಯೆ ಇರದಿದ್ದರೆ ಯಾವ ಔಷಧ ಏನು ಮಾಡೀತು?"

ತನಗೆ ಬೇಕಾದ ಅವಕಾಶ ಬಂದಿತೆಂದು ಭಾಗಮ್ಮ ಉತ್ತೇಜಿತಳಾದಳು. ಆದರೂ ಏನೊ ಒಂದು ಬಗೆಯ ಅಧೈರ್ಯ. ಅರೆನಿಮಿಷ ತಡೆದು ಹೇಳಿದಳು:

"ಏನು, ಬರಿಯ ಪ್ರಾರಬ್ಧ ಪ್ರಾಗಬ್ಧ ಅಂದರೆ—"

"ಅಲ್ಲವೆ ಅವ್ವ, ನಮ್ಮ ದೈವದಲ್ಲಿ ಮಕ್ಕಳೆ ಇರದಿದ್ದರೆ—"

"ಹಾಗೆಲ್ಲ ಅಭದ್ರ ನುಡಿಯಬೇಡ, ಶೀನು. ನಮ್ಮ ಮನೆತನದಲ್ಲಿ ಹಾಗೆಂದಿಗೂ ಆಗುವುದು ಸಾಧ್ಯವಿಲ್ಲ. ನೀನು ಹುಟ್ಟಿದಾಗಲೆ ಹಾಕಿದ ಜಾತಕ ಇದೆ ನನ್ನ ಹತ್ತಿರ. ಮೊನ್ನೆ ಅದನ್ನೆ ಜೋಯಿಸರ ಕಡೆಯಿಂದ ಓದಿಸಿ ನೋಡಿದೆ...."

"ಏನೂಂತ ಹೊರಟಿತು, ಜಾತಕದಲ್ಲಿ?" ಎಂದು ಶ್ರೀನಿವಾಸ ಹುಸಿನಗೆ ನಕ್ಕ.

"ನಿನಗೇನೊ ಎಲ್ಲ ಮಾತು ನಗೆಯಾಟ...."

"ನಗೆಯಾಟ ಯಾಕೆ? ಏನೂಂತ ಹೇಳಿದರು ಜೋಯಿಸರು, ಎಂದು ಕೇಳಬಾರದೆ?"

"ನಿಮ್ಮ ಶ್ರೀನಿವಾಸನಿಗೆ ಮಕ್ಕಳಾಗುವುದು ಖಂಡಿತ—ಎಂದರು."

"ಆಯಿತಲ್ಲ, ಹಾಗಾದರೆ—"

"ಏನಾಯಿತು, ನಿನ್ನ ತಲೆ. ಅವರು ಹೇಳಿದರು—"

"ಮತ್ತೇನು ಹೇಳಿದರು, ಮತ್ತೆ?"

"ನೀನು ಹೀಗೆ ಮಾತನಾಡಿದರೆ ಏನು ಹೇಳಲಿ? ನಿನಗೆ ಜಾತಕ ಅಂದರೂ ಚೇಷ್ಟೆ ಆಗಿದೆ....ಜೋಯಿಸರು ಹೇಳಿದ ಮಾತು ಎಂದಿಗೂ ಸುಳ್ಳಾಗಿಲ್ಲ ಇದುವರೆಗೆ—"

"ಮತ್ತೇನು ಹೇಳಿದರು?"

"ಅವರು ಹೇಳಿದರು—ಬಿಡಪ್ಪ. ನಿನಗೆ ಬೇಡವಾದರೆ ನಾನೇನು ಮಾಡಬಹುದು ?"

"ಯಾವ ಮಾತನ್ನೂ ಪೂರ್ತಿಯಾಗಿ ಹೇಳಬೇ ಹೀಗೆಂದರೆ...."

"ಅವರೆಂದರು, ಕಾವೇರಿಯು ಜಾತಕದಲ್ಲಿ ಮಕ್ಕಳಿಲ್ಲ...."

"ಸರಿ. ಹಾಗಾದರೆ ನನಗೆ ಮಕ್ಕಳಾದಹಾಗಾಯಿತಲ್ಲ!" ಎಂದು ನಕ್ಕ—ಶ್ರೀನಿವಾಸ, ಆ ಮಾತಿನಲ್ಲಿಯ ಸೂಚನೆ ಹೊಳೆಯದೆ.

"ಆಕೆಯ ಜಾತಕದಲ್ಲಿ ಮಕ್ಕಳಿರದಿದ್ದರೆ ನಿನಗೆ ಆಗುವುದಿಲ್ಲ ಎಂದೆ ಅರ್ಥ ?"

"ಅಂದರೆ—?"

"ಅಂದರೆ—" ಭಾಗಮ್ಮ ಸುಮ್ಮನಾದಳು. ಶ್ರೀನಿವಾಸನಿಗೆ ಈಗ ತಿಳಿಯಿತು. ಆ ಸೂಚನೆ ಹೊಳೆದೊಡನೆ ಆತ ಅವಾಕ್ಕಾದ. ಕ್ಷಣಾರ್ಧದಲ್ಲಿ ಹತ್ತಾರು ಯೋಚನೆಗಳು ಮಿಂಚಿನಂತೆ ಮನಸ್ಸಿನಲ್ಲಿ ಮೂಡಿ ಮಾಯವಾದವು. ಏನು ? ತಾಯಿ ಅನ್ನುತ್ತಿರುವುದಾದರೂ ಏನು ? ನೇರವಾಗಿ ಒಂದು ದಿಕ್ಕಿನಲ್ಲಿ ಯೋಚನೆಯೆ ಓಡಲಿಲ್ಲ ಕಾವೇರಿಗೆ ಮಕ್ಕಳಾಗದಿದ್ದರೂ ತನಗೆ ಆಗಬಹುದು ! ಅಂದರೆ....? ಅಂದರೆ ಕಾವೇರಿ ಇಲ್ಲದಾಗುವಳೆ ? ಎದೆಯಲ್ಲಿ ಬಾಣ ಹೊಡೆದಂತಾಯಿತ . ಕಳೆದ ಒಂದೆರಡು ತಿಂಗಳಲ್ಲಿ ತನಗೆ ಬೇಸರವಾಗುವಂತೆ ಕಾವೇರಿ ಎಷ್ಟು ಬಗೆಯಲ್ಲಿ ನಡೆದುಕೊಂಡಿದ್ದರೂ ಆಕೆ ಇಲ್ಲದಾಗುವುದೆಂದರೆ ? ಛಿ ! ಅದರ ಕಲ್ಪನೆ ಕೂಡ ಶ್ರೀನಿವಾಸನಿಗೆ ಸಹಿಸಲು ಅಸಾಧ್ಯವಾಯಿತು. ಅಥವಾ....ಏನೇನನ್ನೊ ಯೋಚಿಸಿದ ಎಷ್ಟು ಯೋಚಿಸಿದರೂ ಕಾವೇರಿಯ ಮೂರ್ತಿ ಕಣ್ಣೆದುರು ನಿಲ್ಲುತ್ತಿತ್ತೆ ವಿನಹ ತಾಯಿಯ ಅರ್ಥ ಆತನಿಗೆ ಹೊಳೆಯಲಿಲ್ಲ ಊಟ ಮಾಡುತ್ತಿದ್ದ ಕೈ ಹಾಗೆಯೆ ತಡೆಯಿತು ಕಣ್ಣೆದುರಿನ ದೃಶ್ಯ ಮಸಕಾಯಿತು. ತನ್ನ ತಾಯಿ ಯಾಕೆ ಹೀಗೆ ಮಾತಾಡುತ್ತಿದ್ದಾಳೆ ? ಯಾವುದರ ಯೋಚನೆಯೂ ಆಕೆಗೆ ಇದ್ದ ಹಾಗಿಲ್ಲವಲ್ಲ....? ಕೊನೆಗೆ, ಭಾಗಮ್ಮನೆ ನೀರವತೆಯನ್ನು ಭೇದಿಸಿದಳು.

"ಇದು ನೋಡು ಶೀನು, ಇದು ಯಾರ ಕೈಯಲ್ಲಿಯ ಮಾತೂ ಅಲ್ಲ. ಏನೊ ಮಾತಿಗೆ ಮಾತು ಬಂದಿತೆಂದು ಹೇಳಿದೆ, ಅಷ್ಟೆ. ಏನೊ, ಮೊಮ್ಮಕ್ಕಳ ಮುಖ ಕಾಣಬೇಕು ಎಂದು ನನಗೂ ಆಸೆ. ಅದರಲ್ಲಿ ತಪ್ಪೇನು, ಹೇಳು. ನಿನಗಾದರೂ ಮಕ್ಕಳು ಬೇಡವಾಗಿದೆಯೆ ?"

"ತಪ್ಪೇನೂ ಇಲ್ಲ, ಅವ್ವ. ಆದರೆ—"

"ಏನು, ಆದರೆ....?"

"ಜೋಯಿಸರ ಮಾತು ನಂಬಬಹುದಾದರೆ—"

ಮುಂದೆ ಶ್ರೀನಿವಾಸನಿಗೆ ಮಾತು ಹೊರಡಲಿಲ್ಲ. ಕಾವೇರಿಯ ಚಿತ್ರ ಮತ್ತೆ ಕಣ್ಣ ಮುಂದೆ ನಿಂತಿತು. ಅದರ ಬೆನ್ನ ಹಿಂದೆಯೆ ಇನ್ನೊಂದು ರುದ್ರ ದೃಶ್ಯ ಕಾಣಿಸಿಕೊಂಡಿತು. ಕಾವೇರಿ ಇಲ್ಲದಾಗಿದ್ದಾಳೆ! ಯಾರು? ಯಾರೊ ಬಂದಿದ್ದಾರೆ....

ಅದು ಹೇಗೆ, ಯಾರು ಬಲ್ಲರು? ಶ್ರೀನಿವಾಸನ ಯೋಚನೆ ಭಾಗಮ್ಮ ನಿಗೆ ಅರ್ಥವಾಯಿತು. ತಟ್ಟನೆ ಹೇಳಿದಳು:

"ನಿನ್ನ ವಿಚಾರ ನನಗೆ ಅರ್ಥವಾಯಿತು, ಶೀನು. ಆದರೆ ಕೆಡಕೆನಿಸಿ ಕೊಳ್ಳಲು ಕಾರಣವೆ ಇಲ್ಲ. ಜೋಯಿಸರ ಮಾತು ನಿಜವಾಗಬೇಕಾದರೆ ಯಾವ ಕೆಡಕೂ ಆಗಬೇಕಾದದ್ದಿಲ್ಲ. ನೀನು ಇನ್ನೊಂದು ಮದುವೆ ಮಾಡಿಕೊಳ್ಳಬೇಕು, ಅಷ್ಟೆ."

ಹೇಳಬೇಕಾದುದನ್ನು ಹೇಳಿದ ಸಮಾಧಾನವಿತ್ತು, ಭಾಗಮ್ಮನ ಮಾತಿನಲ್ಲಿ. ಆದರೆ ಶ್ರೀನಿವಾಸನಿಗೆ ಒಂದು ದೃಷ್ಟಿಯಿಂದ ಸಮಾಧಾನವಾದರೂ ಮನಸ್ಸಿನ ದುಗುಡ ಕಡಿಮೆಯಾಗಲಿಲ್ಲ ತನ್ನಷ್ಟಕ್ಕೆ ಎಂಬಂತೆ ಉಸುರಿದ:

"ಎ-ರ-ಡ-ನೆ-ಯ ಮ-ದು-ವೆ!"

"ಹುಂ....ಯಾಕಾಗಬಾರದು?"

"ಎಂಥ ಮಾತವ್ವ, ಇದು? ಹಾಗೆ ಮಾಡುವುದು ಸರಿಯೆ?"

"ಏನು ತಪ್ಪು? ಮಕ್ಕಳಾಗದಿದ್ದರೆ ಏನು ಮಾಡುವುದು ಹಾಗಾದರೆ?"

"ಆಯಿತು. ಮಕ್ಕಳು ಬೇಕು ಎಂದ ಮಾತ್ರಕ್ಕೆ ಇಂಥ ಅನ್ಯಾಯ ಮಾಡಬಹುದೆ?"

"ಅನ್ಯಾಯ ಯಾತರದು? ಇನ್ನೊಂದು ಮದುವೆ ಮಾಡಿಕೊಂಡರೆ ನೀನೇನೂ ಕಾವೇರಿಯನ್ನು ಹೊರಗೆ ದೂಡಬೇಕಾಗಿಲ್ಲವಲ್ಲ? ಇಬ್ಬರೂ ಸುಖವಾಗಿಯೆ ಇರಬಹುದು!"

"ನಿನಗೇನೊ ಭ್ರಮೆ. ಅಲ್ಲದೆ, ಇಂಥ ಪರಿಯಿಂದ ಮಕ್ಕಳಾಗ ಬೇಕಿದ್ದರೆ—"

" ಹಾಗೆನ್ನಬೇಡ, ಶೀನು. ಮಕ್ಕಳಿಲ್ಲದ ಮನೆ ದೀಪವಿಲ್ಲದ ಹಾಗೆ.... ಅಲ್ಲದೆ, ಯಾರೂ ಮಾಡದ್ದನ್ನು ನೀನೇನೂ ಮಾಡಬೇಕಾಗಿಲ್ಲ ಮೊದಲನೆ ಯವಳಿಗೆ ಮಕ್ಕಳಾಗದ್ದಕ್ಕೆ ಇನ್ನೊಂದು ಮದುವೆ ಮಾಡಿಕೊಂಡವರಿಲ್ಲವೆ? ಬೇಕಾದಷ್ಟು ಜನ ಇದ್ದಾರೆ....ಅವರು ಯಾರೂ ನಿನ್ನ ಹಾಗೆ ಯೋಚನೆ ಯನ್ನೆ ಮಾಡಿಲ್ಲ ಅನ್ನುತ್ತೀಯಾ?"

"ಮನೆತನದ ಆಸ್ತಿ ಪಾಸ್ತಿ, ದುಡ್ಡು ದುಗಾಣಿ ಇನ್ನೊಬ್ಬರಿಗೆ ಹೋಗು ತ್ತದೆ ಎಂಬ ಸ್ವಾರ್ಥಕ್ಕಾಗಿ ದುಡ್ಡಿದ್ದ ಹತ್ತು ಜನ ಹಾಗೆ ಮಾಡಿದ್ದಾರು. ಅಷ್ಟಕ್ಕೆ ಅದು ಸರಿ ಎಂದು ಹೇಳಲಾಗುತ್ತದೆಯೆ? ಅಲ್ಲದೆ ಈಗ ನಮ್ಮದೇನು ಅಂಥ ಜಹಗೀರು ಇನಾಮು ಮಕ್ಕಳಿಗಾಗಿ ಅಳುತ್ತ ಕಾದಿದೆ?"

" ಇದು ಬರಿ ಆಸ್ತಿಯ ಪ್ರಶ್ನೆಯಲ್ಲ. ತಾನು ಹೋದಮೇಲೆ ಆಸ್ತಿ ಏನಾದರೆ ಏನು? ಆದರೆ ಮಕ್ಕಳಿಲ್ಲದಿದ್ದರೆ ಮುಂದೆ ಗತಿ ಇಲ್ಲ! ಎಂದು ಹೇಳುತ್ತಾರೆ. ಮೊನ್ನೆ ಪುರಾಣದಲ್ಲಿ ಅದನ್ನೆ ಹೇಳಿದರು. ಮಕ್ಕಳಿದ್ದವರಿಗೆ ಮಾತ್ರ ಸ್ವರ್ಗದ ಬಾಗಿಲು ತೆರೆಯುತ್ತದೆ! ಇದನ್ನಾದರೂ ಯೋಚನೆ ಮಾಡ ಬೇಡವೆ? ನೀನು ಏನು ಬೇಕಾದ್ದನ್ನು ಅನ್ನು, ಆದರೆ—ನಿನ್ನಿಂದ ನಮ್ಮ ವಂಶ ಇಲ್ಲಿಗೆ ನಿಲ್ಲಬಾರದು....ಆ ಕಲಂಕ ನಿನಗೆ ಬರಬಾರದು!"

ಭಾಗಮ್ಮ ಸುಮ್ಮನಾದಳು. ಆದರೆ ಆಕೆಯ ಮಾತು ಶ್ರೀನಿವಾಸನ ಕಿವಿಗಳಲ್ಲಿ ಪ್ರತಿಧ್ವನಿಸುತಿತ್ತು—'ಮಕ್ಕಳಿದ್ದವರಿಗೇ ಸ್ವರ್ಗದ ಬಾಗಿಲು ತೆರೆಯುತ್ತದೆ!' ಹೌದೆ? ಇಡಿ ರಾತ್ರಿ ಶ್ರೀನಿವಾಸ ಯೋಚನೆಗೊಳಗಾದ. ತನಗೆ ಮಕ್ಕಳಾಗಬೇಕಾದದ್ದು ನಿಜ. ಚೆಲುವಾದ ನೆರೆಹೊರೆಯವರ ಮುದ್ದು ಮಕ್ಕಳ ಮುದ್ದು ಮುಖಗಳನ್ನು ನೋಡಿದಾಗ, ನೆನೆದಾಗಲೆಲ್ಲವೂ ಶ್ರೀನಿವಾಸನನ್ನು ಆ ಕೊರತೆ ಕಾಡುತ್ತಿತ್ತು. ಆ ಬಯಕೆ ಮೂಡದ ದಿನ ವಿರಲಿಲ್ಲ. ಆದರೆ? ಅದಕ್ಕಾಗಿ, ತಾಯಿ ಹೇಳಿದ ಹಾಗೆ ಮಾಡುವುದೆ? ಎಂಥ ಅನ್ಯಾಯ? ಕಾವೇರಿಯ ಬಗೆಯಲ್ಲಿಯ ಆತನ ಅಕ್ಕರೆ, ಕನಿಕರ— ನೂರು ಮುಖವಾಗಿ ಬಂದು ಆತನ ಹೃದಯವನ್ನು ಇರಿದು ಗಾಸಿ ಮಾಡಿತು. ಇಲ್ಲದಿದ್ದರೆ ಇಲ್ಲ; ಎಲ್ಲರಿಗೂ ಇರುತ್ತವೆಯೆ? ಮಕ್ಕಳಿಲ್ಲದ ದುರ್ಭಾಗ್ಯರು ಎಷ್ಟು ಜನಗಳಿರಲಿಲ್ಲ! ಅವರೆಲ್ಲರೂ ಬೇರೆಯೊಂದು ಮದುವೆಯಾಗುತ್ತಾ ರೆಯೆ? ಅದಾವುದೂ ಬೇಡ, ಎಂದು ಯೋಚನೆಯನ್ನು ದೂರ ತಳ್ಳಲೆತ್ನಿ

ಸಿದ. ಆದರೆ ತಳ್ಳಲೆತ್ನಿಸಿದಷ್ಟೂ ಬಲವತ್ತರವಾಗಿ ಮತ್ತೆ ಅದೇ ಯೋಚನೆ! ಅದೇ ಕೊರತೆ—ಬಹು ಮುಖವಾಗಿ ಮುಂದೆ ಬಂದು ನಿಲ್ಲುತ್ತಿತ್ತು. ಕೊನೆಯಾಗಿ, ತಾಯಿ ಏನೆಂದಿದ್ದಳು? 'ನಮ್ಮ ವಂಶ ಇಲ್ಲಿಗೆ ನಿಂತುಹೋಗಬಾರದು!' ನಿಂತು ಹೋಗಬಾರದು, ನಿಜ. ಆದರೆ ಮಾಡುವುದೇನು? ಇದಕ್ಕಿಂತ ಹೆಚ್ಚಾಗಿ, ತಾಯಿಯ ಇನ್ನೊಂದು ಮಾತು ಮನಸ್ಸಿನೆದುರು ಹಠಾತ್ತಾಗಿ ನಿಲ್ಲುತ್ತಿತ್ತು. ಮಕ್ಕಳಿಲ್ಲದವರಿಗೆ ಗತಿಯಿಲ್ಲ! ಮಕ್ಕಳೆ ಸ್ವರ್ಗದ ಬಾಗಿಲು! ಇಹ-ಪರ-ದೈವಗಳ ಯೋಚನೆಯಲ್ಲಿ ಸಿಲುಕುವಂತಾದ ಶ್ರೀನಿವಾಸ. ಮಕ್ಕಳಿಂದ ಸ್ವರ್ಗದ ಬಾಗಿಲು ತೆರೆಯುತ್ತದೆಯೆ? ಯಾರು ಹೇಳಿದವರು? ನೋಡಿ ಬಂದು ಹೇಳಿದವರುಂಟೆ? ಮುಂದೆ ಗತಿಯಿಲ್ಲ, ಎಂದರೇನು? ಯಾವುದಕ್ಕೂ ಉತ್ತರವನ್ನು ಹೇಳುವಂತಿರಲಿಲ್ಲ. ಉತ್ತರವಿಲ್ಲವೆಂದು ಮನಸ್ಸು ಶಾಂತವಾಗಲಿಲ್ಲ. ಶ್ರೀನಿವಾಸನ ಮನಸ್ಸು ಪರಮಾರ್ಥ-ದೈವ-ದೈವತಗಳ ಕಡೆಗೆ ಒಲವಿಲ್ಲದ್ದಾಗಿದ್ದರೆ ಈ ಯೋಚನೆಗಳು ಆತನನ್ನು ಬಾಧಿಸುತ್ತಿರಲಿಲ್ಲ. ಆದರೆ ಆತ ಬೆಳೆದದ್ದು ಅಂಥ ವಿಚಾರಗಳ ಪರಂಪರೆಯ ಆಶ್ರಯದಲ್ಲಿಯೆ. ಹೀಗಿದ್ದರೂ, ಪರದಲ್ಲಿ ಸ್ವರ್ಗದ ಬಾಗಿಲು ತೆರೆಯುತ್ತದೆ ಎಂಬ ಆಸೆಗಾಗಿ ಇಹದಲ್ಲಿ ನರಕದ ಬಾಗಿಲನ್ನು ತೆರೆಯಲೊಪ್ಪುವ ವಿಚಾರಶೂನ್ಯನೂ ಆತನಾಗಿರಲಿಲ್ಲ. ಅಂತೆಯೆ, ಆತನ ತೊಳಲಾಟ. ಎಷ್ಟು ಯೋಚಿಸಿದರೂ ಕೊನೆಗಾಣದ ತೊಳಲಾಟ ಅದು ಶ್ರೀನಿವಾಸನಿಗೆ ವಿಚಿತ್ರವೆನಿಸಿತು. ತನ್ನ ತಾಯಿಯ ಮನಸ್ಸಿನಲ್ಲಿ ಇಂಥ ಯಾವ ತೊಳಲಾಟವೂ ಇರಲಿಲ್ಲ. ಇಹಪರಗಳ ವಿಚಾರ ಹಾಗಿರಲಿ, ಸಾಮಾನ್ಯವಾದ ನ್ಯಾಯ, ಅನ್ಯಾಯಗಳ ಯೋಚನೆಯೂ ಇರಲಿಲ್ಲವಲ್ಲ? ಅಥವಾ ಆಕೆ ಎಲ್ಲವನ್ನೂ ಯೋಚಿಸಿಕೊಂಡೆ ಹೀಗೆ ಮಾತನಾಡಿರಬಹುದೆ! ಆಕೆಯ ಮಟ್ಟಿಗೆ, ಒಂದು ನಿರ್ಧಾರಕ್ಕೆ ಬಂದು ಎಲ್ಲವನ್ನೂ ನಿಶ್ಚಯಿಸಿಕೊಂಡೆ ಮಾತನಾಡುತ್ತಿರುವ ಹಾಗಿತ್ತು. ಕನ್ಯೆಯನ್ನು ನೋಡಬಹುದೆ! ಎಂದುಕೊಂಡ. ನೋಡಿದ್ದರೇನಾಯಿತು? ತಾನು ಒಪ್ಪಬೇಕಲ್ಲ. ಒಪ್ಪಬೇಕೆ? ಒಪ್ಪದಿದ್ದರೆ ತಾಯಿ ತೀರ ನೊಂದುಕೊಳ್ಳುವಳು. ಇಲ್ಲದ ಹಟ ಹಿಡಿದು ನೊಂದುಕೊಂಡರೆ ತಾನೇನು ಮಾಡಬಹುದು? ಮರುದಿನ ಮುಂಜಾನೆ ಮತ್ತೆ ಅದೆ ಮಾತು ಬರುವುದು ಖಂಡಿತ. 'ನೋಡೋಣ, ಈಗಲೆ ಯಾತಕ್ಕೆ?' ಎಂದು

ಮುಂದೂಡಿದರಾಯಿತು, ಎಂದು ಸಮಾಧಾನ ತಂದುಕೊಳ್ಳಲೆತ್ನಿಸಿದ. ಆದರೆ ಸಮಸ್ಯೆಯನ್ನು ಮುಂದೂಡಿದರೆ ಮುಗಿಸಿದ ಹಾಗಾಯಿತೆ? ತಾಯಿಯ ಮನೋವೃತ್ತಿಯನ್ನು ನೆನೆದರೆ, ಇಂದಿಲ್ಲ ನಾಳೆ—ಹೆಚ್ಚಾದರೆ ಒಂದೆರಡು ತಿಂಗಳಲ್ಲಿ—ಈ ಪ್ರಶ್ನೆಗೆ ಖಂಡಿತ ಉತ್ತರ ಹೇಳಬೇಕಾಗುವುದು....ಯಾಕೆ ಒಪ್ಪಬಾರದು? ಮತ್ತೆ ಕಾವೇರಿಯ ಚಿತ್ರ! ಕಾವೇರಿ ಏನೆನ್ನುವಳೊ? ಆಕೆಯನ್ನೆ ಕೇಳಿದರೆ? ತಮ್ಮಿಬ್ಬರಿಗೂ ಮಕ್ಕಳು ಬೇಕಾಗಿದ್ದುವಲ್ಲವೆ? ಬೇಕಾದರೇನಾಯಿತು? ಇನ್ನೊಂದು ಹೆಣ್ಣನ್ನು ತಂದು ತಾನು ಮಕ್ಕಳನ್ನು ಪಡೆದರೆ ಕಾವೇರಿಗೆ ಯಾವ ಸಮಾಧಾನ? ತನಗೇನೊ ಆಗಬಹುದು.... ಆದರೆ ಕಾವೇರಿಯನ್ನು ಕೇಳುವುದು....! ಹೇಗೆ?....

ಅಂದಿನ ಮಟ್ಟಿಗೆ, ಮಾತು ಅಲ್ಲಿಗೆ ನಿಂತರೂ ಮರುದಿನ ಮಧ್ಯಾಹ್ನ ಶ್ರೀನಿವಾಸ ತಿರುಗಿ ಊರಿಗೆ ಹೊರಟಾಗ ಭಾಗಮ್ಮ ಮತ್ತೆ ಅದನ್ನೆ ಎತ್ತಿದಳು. ಆದರೆ ಎಷ್ಟು ಯೋಚಿಸಿದರೂ ಕೂಡಲೆ ಯಾವ ನಿರ್ಣಯಕ್ಕೂ ಬರಲಾಗದ ಆತ ಯಾವ ಉತ್ತರವನ್ನೂ ಹೇಳದೆ ಸುಮ್ಮನಿರಬೇಕಾಯಿತು. ಹಿಂದಿನ ರಾತ್ರಿ ಮೊದಲ ಸಲ ಮಾತನ್ನೆತ್ತಿದಾಗ ಎಷ್ಟೊ ಮಾತುಗಳನ್ನು ಪ್ರತಿಯಾಗಿ ಹೇಳಿದವ ಈಗ ಸುಮ್ಮನಿದ್ದದ್ದು ಭಾಗಮ್ಮನಿಗೆ ಒಂದು ಬಗೆಯ ಸಮ್ಮತಿಯೆಂದೆ ಭಾವನೆಯಾಯಿತು. ಅಂತೆಯೆ ಆತ ಹೊರಡುವಾಗ ಹೇಳಿದಳು:

"ನೀನು ಸುಮ್ಮನೆ ಏನಾದರೊಂದು ಯೋಚನೆ ಕಟ್ಟಿಕೊಂಡು ಒದ್ದಾಡಬೇಡ. ನಾನು ಹೇಳುತ್ತೇನೆ ಕೇಳು. ನಿನ್ನ ಒಳ್ಳೆಯದಕ್ಕೆಯೆ ಅಲ್ಲವೆ, ನಾನು ಹೇಳುವುದು? ನೀನು ಒಂದು ಮಾತು ಹೇಳು. ನಾನು ಅಲ್ಲಿ, ಇಲ್ಲಿ ನೋಡುತ್ತ ಇರುತ್ತೇನೆ. ಅದರಲ್ಲಿ ಯಾವ ತಪ್ಪೂ ಇಲ್ಲ...." ಇತ್ಯಾದಿಯಾಗಿ ಹೇಳಿದ್ದಳು. ಮನವೊಲಿಸಲು ಪ್ರಯತ್ನಪಟ್ಟಿದ್ದಳು. ಸಾವಿತ್ರಿಯ ಹೆಸರನ್ನು ಮಾತ್ರ ಭಾಗಮ್ಮ ಮೊದಲಿನಿಂದಲೂ ಎತ್ತಿದ್ದಿಲ್ಲ.

ಮುಂದಿನ ಒಂದೆರಡು ತಿಂಗಳಲ್ಲಿ ಶ್ರೀನಿವಾಸ ತಾಯಿಯ ಕಡೆಗೆ ಬಂದಾಗ ಇದೆ ಮಾತು ನಡೆಯಿತು. ಇದಕ್ಕೂ ಹೆಚ್ಚಿನ ಒತ್ತಾಸೆಯಿಂದ ತಾಯಿ ಪ್ರತಿಪಾದಿಸಿದ್ದಳು. ತನಗೆ ದಿನದಿನಕ್ಕೆ ವಯಸ್ಸಾಗುತ್ತಿತ್ತೆಂದೂ ತನ್ನ ಮೊಮ್ಮಕ್ಕಳ ಆಸೆಯೊಂದನ್ನು ಪೂರೈಸಬೇಕೆಂದೂ ಪರಿಪರಿಯಿಂದ ಭಾಗಮ್ಮ ಶ್ರೀನಿವಾಸನ ಮನಸ್ಸಿನ ಮೇಲೆ ಪರಿಣಾಮ ಮಾಡಿ, ಆತ

ಒಮ್ಮೆಲೆ ಪೂರ್ತಿ ಒಪ್ಪದಿದ್ದರೂ, ಯಾಕೆ ಒಪ್ಪಬಾರದು, ಎಂದು ಕೇಳಿಕೊಳ್ಳುವಂತೆ ಮಾಡಿದ್ದಳು ಶ್ರೀನಿವಾಸನ ಮನಃಸ್ಥಿತಿಯಲ್ಲಿಯ ಈ ನಿಧಾನವಾದ ಬದಲಾವಣೆಗೆ ಬಹುಮಟ್ಟಿಗೆ ಕಾವೇರಿ ಮನೆಯಲ್ಲಿ ನಡೆದುಕೊಳ್ಳುತ್ತಿದ್ದ ರೀತಿಯೆ ಕಾರಣವಾಗಿತ್ತೆಂದೂ ಹೇಳಬಹುದು. ಆದರೆ ನೇರವಾಗಿ ಕಾವೇರಿಯೊಡನೆ ಮಾತನಾಡದ ಹೊರತು, ಆಕೆ ಒಪ್ಪದ ಹೊರತು, ತಾನು ಸಮ್ಮತಿಸುವಂತಿಲ್ಲವೆಂದು ನಿರ್ಧರಿಸಿದ್ದ. ಕಾವೇರಿಯನ್ನು ಮಾತನಾಡಿಸಲು ಹವಣಿಸಿಯೂ ಇದ್ದ. ಆದರೆ ಆಕೆ ಶ್ರೀನಿವಾಸನ ಯಾವ ಮಾತಿಗೂ ಅವಕಾಶ ಕೊಡುವಂತಿರಲಿಲ್ಲ.

'ಅಡಿಗೆಯವನನ್ನು ಇಡುವುದಾಗದಿದ್ದರೆ ಇನ್ನೊಂದು ಮದುವೆಯನ್ನು ಮಾಡಿಕೊಳ್ಳಿರಿ. ಅಂದರೆ ಎಲ್ಲವೂ ಸರಿಯಾಗುತ್ತದೆ' ಎಂದು ಕಾವೇರಿ ಹೇಳಿದಾಗ ಶರ್ಟನ್ನು ಎತ್ತಿಕೊಳ್ಳಲಿಕ್ಕೆಂದು ಗೂಟಕ್ಕೆ ಕೈಹಾಕಿದ ಶ್ರೀನಿವಾಸನ ಕೈ ಅಲ್ಲಿಯೆ ತಟ್ಟನೆ ತಡೆಯಿತೆಂದು ಹೇಳಿದೆನಲ್ಲವೆ? ಅದು ಇಷ್ಟಕ್ಕಾಗಿಯೆ. ಕಳೆದ ಮೂರು ನಾಲ್ಕು ತಿಂಗಳಲ್ಲಿ ತಾಯಿ ಅದೇ ವಿಷಯದಲ್ಲಿ ಒತ್ತಾಯಪಡಿಸುತ್ತಿದ್ದಳು. ಮನೆಯಲ್ಲಿ ನಡೆದ ವಿರಸಕ್ಕಾಗಿ ತಾನಾದರೂ ಯಾಕೆ ಒಪ್ಪಬಾರದು ಎಂದುಕೊಳ್ಳುತ್ತಿರುವಾಗ ಅನಿರೀಕ್ಷಿತವಾಗಿ ಕಾವೇರಿಯೆ ಆ ಮಾತನ್ನು ಹೇಳಬೇಕೆಂದರೆ? ಆಕೆಯಾದರೊ ಆ ಮಾತನ್ನು ಸಿಡುಕಿನಲ್ಲಿ ಹೇಳಿದ್ದಳು, ನಿಜ. ಆದರೆ ಶ್ರೀನಿವಾಸನಿಗೆ ಆ ಮಾತು ವಿಚಿತ್ರವೆನಿಸಿತು. ಎಲ್ಲಿಯೊ ಮನಸ್ಸಿಗೆ ಬರೆ ಕೊಟ್ಟಂತಾಯಿತು. ಆದರೂ ಅದೇಕೊ ತನಗೆ ತಿಳಿಯದ ಹಾಗೆ ಪರಿಸ್ಥಿತಿ ವಿಪರೀತವಾಗಿ ಬೆಳೆಯುತ್ತಿದೆಯಲ್ಲಾ ಎಂದು ವಿಷಾದಪಡುವಂತಾಯಿತು. ಯಾವ ಒಂದೂ ಮಾತನಾಡದೆ ಬಟ್ಟೆಗಳನ್ನು ಹಾಕಿಕೊಂಡು ಆಫೀಸಿಗೆ ಹೊರಟುಹೋದ. ಆ ದಿನ ಊಟವನ್ನೆ ಮಾಡಲಿಲ್ಲ. ಕಾವೇರಿಯಾದರೂ ಅಷ್ಟೆ. ಆತ ಹೊರಡುವಾಗ ಏನೊ ಅಡಿಗೆ ಮಾಡಬೇಕೆಂದು ಸಿದ್ಧತೆಗೆ ತೊಡಗಿದವಳು ಶ್ರೀನಿವಾಸ ಹಾಗೆಯೆ ಹೊರಟು ಹೋದುದನ್ನು ನೋಡಿ, ಎಲ್ಲವನ್ನೂ ಅಲ್ಲಿಯೆ ನಿಲ್ಲಿಸಿ, ಇಡಿ ದಿವಸ ಹಾಸಿಗೆಯಲ್ಲಿ ಬಿದ್ದುಕೊಂಡವಳು ಶ್ರೀನಿವಾಸ ಮುಚ್ಚಂಜೆಯ ಹೊತ್ತಿಗೆ ಮನೆಗೆ ಮರಳಿ ಬಂದರೂ ಎದ್ದಿರಲಿಲ್ಲ!

ಕಾವೇರಿಯ ಈ ವಿಪರೀತ ಮನೋವೃತ್ತಿಗೆ ಮುಖ್ಯ ಕಾರಣ ಯಾವುದು ಎಂಬುದನ್ನು ಶ್ರೀನಿವಾಸ ಸ್ಪಷ್ಟವಾಗಿ ತಿಳಿಯುವಂತಿದ್ದರೆ ಆತ ಸರಿಪಡಿಸಲಿಕ್ಕೆ ಯಾವ ಬೇಕಾದ ಪ್ರಯತ್ನವನ್ನೂ ಮಾಡಬಹುದಾಗಿತ್ತು. ಆದರೆ ಆಕೆ ಹಾಗೆ ಹೇಗೆ ಮತ್ತು ಯಾಕೆ ಪರಿವರ್ತನ ಹೊಂದಿದಳು—ಆಕೆ ಹಾಗೆ ನಡೆಯುತ್ತಿದ್ದುದು ಯಾತಕ್ಕಾಗಿ—ಎಂಬುದು ಶ್ರೀನಿವಾಸನ ಯೋಚನೆಗೆ ನಿಲುಕದ ವಿಷಯವಾಯಿತು. ತನಗೆ ತಿಳಿದ ಮಟ್ಟಿಗೆ, ಬೊಂಬೆ ಮಗು ವಾಗಲಾರದು, ಅಂಥ ಹುಚ್ಚು ಕನಸನ್ನು ಕಟ್ಟಿಕೊಂಡರೆ ಹೆಚ್ಚಿನ ಮಾನಸಿಕ ಅಪಾಯಕ್ಕೆ ಆಸ್ಪದವಾಗಬಹುದೆಂಬ ಹೆದರಿಕೆಯಿಂದ 'ಪುಟ್ಟು' ಎಂಬ

ಕನಸನ್ನು ಬಿರುಸಾಗಿ ಒಡೆದಿದ್ದನೇನೊ ನಿಜ. ಆದರೆ ಕಾವೇರಿಯೇನು ಚಿಕ್ಕ ಮಗುವೆ? ಆದರೆ ಅದು ಶ್ರೀನಿವಾಸನ ವಿಚಾರವಾಯಿತು. ಕಾವೇರಿಗೆ? ಆ ಕನಸು ಒಡೆದಂದಿನಿಂದ ಆಕೆಯ ಜೀವನವೆ ಒಂದು ವಿಧವಾಯಿತು. ಸ್ನೇಹಸೌಹಾರ್ದಗಳು ನಿಧಾನವಾಗಿ ಮಾಯವಾಗತೊಡಗಿದ್ದವು ಶ್ರೀನಿವಾಸನ ತಾಳ್ಮೆ ದಿನದಿನವೂ ಕರಗತೊಡಗಿತು. ಆದರೆ ಎಷ್ಟೋ ಸಲ ಮಿತಿ ಮೀರಿದ ತಾಳ್ಮೆಯಿಂದ ಆಕೆಯನ್ನು ಮನವೊಲಿಸಿ ಮತ್ತೆ ಮೊದಲಿನಂತೆ ಆಕೆ ಇರುವಂತಾಗಲೆಂದು ನೂರಾರು ಪ್ರಯತ್ನ ಮಾಡಿದ. ಅಂದು ಸಂಜೆಯೂ ಹಾಗೆಯೆ ಆಯಿತು. ಇಡಿ ದಿನ ಊಟವಿಲ್ಲದೆ ವ್ಯಾಪಾರಿ ಆಫೀಸಿನಲ್ಲಿ ದುಡಿದು ಸಾಯಂಕಾಲ ಮನೆಗೆ ಬಂದಾಗ ಕಾವೇರಿ ಇನ್ನೂ ಹಾಸಿಗೆಯಲ್ಲಿಯೆ ಬಿದ್ದುಕೊಂಡವಳಾಗಿದ್ದರೂ ಶ್ರೀನಿವಾಸ ತಾಳ್ಮೆಗೆಡಲಿಲ್ಲ. ನಗೆಯಾಟದ ದನಿಯಲ್ಲಿಯೆ ಕೇಳಿದ:

"ಏನೆ, ಕಾವಿ, ಎಷ್ಟುದು ಮಲಗುವುದು? ಈ ಸರಿ ಮಲಗಿದರೆ ಕಣ್ಣು ಯಾತಕ್ಕೆ ಬಂದಾವು! ಏಳು...."

ಶ್ರೀನಿವಾಸನ ತಾಳ್ಮೆ ಕಾವೇರಿಗೆ ಆ ಮನಃಸ್ಥಿತಿಯಲ್ಲಿಯೂ ವಿಚಿತ್ರ ವೆನಿಸಿರಬೇಕು. ಅಂತೆಯೆ, ನಿಧಾನವಾಗಿ ಎದ್ದು ಸ್ಟವ್ ಹೊತ್ತಿಸಲು ಅಣಿಯಾದಳು. ಕೈಕಾಲು ಮೋರೆ ತೊಳೆದು ಬಂದು ಶ್ರೀನಿವಾಸ ಕೇಳಿದ:

"ಇಡಿ ಮಧ್ಯಾಹ್ನವೆಲ್ಲ ಮಲಗಿಕೊಂಡೆ ಇದ್ದೆಯಾ?"

"ಹೌದು...."

"ಯಾಕೆ? ಮೈಯಲ್ಲಿ ಸರಿಯಾಗಿಲ್ಲವೆ?"

"ಇರದೆ ಏನು? ನನಗೇನಾಗಿದೆ?"

"ಅಲ್ಲ, ಅಂದರೆ ಹೀಗೆ ಮಲಗಿಕೊಂಡೆ, ಅದಕ್ಕೆಂದೆ...."

ಮಾತು ಕುಂಟುವಂತಾಯಿತು. ಆದರೆ ಚಹಕ್ಕೆ ಸಕ್ಕರೆ ಹಾಕುವಾಗ ಶ್ರೀನಿವಾಸ ನೀರು ಒಂದೇ ಕಪ್ಪಿನಷ್ಟಿದ್ದುದನ್ನು ನೋಡಿ ಕೇಳಿದ:

"ಚಹ ಒಂದೆ ಕಪ್ಪು ಇದ್ದಹಾಗಿದೆಯಲ್ಲ? ನೀನು ತೆಗೆದುಕೊಳ್ಳುವುದಿಲ್ಲವೆ?"

"ನನಗೆ ಬೇಡ."

"ಹಾಗಾದರೆ ನನಗೂ ಬೇಡ" ಎಂದು ಸ್ಟವ್ ನಂದಿಸಲು ಹೋದ.

" ಸುಮ್ಮನಿರಬಾರದೆ ? "

" ನೀನು ಕುಡಿಯದಿದ್ದರೆ ನಾನೂ ಕುಡಿಯುವುದಿಲ್ಲ ! "

" ನನಗೆ ಬೇಡವಾಗಿದೆ, ಎಂದರೆ—"

" ನನಗೂ ಬೇಡವಾಗಿದೆ."

" ನಿಮಗೆ ಬೇಡವಾಗಿದ್ದರೆ ಇಷ್ಟು ಹೊತ್ತು ಸುಮ್ಮನೆ ಯಾಕೆ ಇದ್ದಿರಿ?"

" ನಿನಗೆ ಬೇಡವಾದದ್ದು ನನಗೆ ಗೊತ್ತಾಗಿರಲಿಲ್ಲ, ಅದಕ್ಕಾಗಿ."

" ಅದು ಹೇಗೂ ಇರಲಿ—"

" ಹೇಗೂ ಇಲ್ಲ, ಹಾಗೂ ಇಲ್ಲ. ನೀನು ಕುಡಿಯದಿದ್ದರೆ, ಇದೊ...."

ಎಂದವನೆ ಅಡಿಗೆಮನೆಯಿಂದ ಹೊರಗೆ ಬಂದು ಕುಳಿತ. ಕಾವೇರಿ ಒಂದೆರಡು ನಿಮಿಷ ಅಲ್ಲಿಯೆ ಇಳಿಸಿಟ್ಟ ಚಹದ ಪಾತ್ರೆಯ ಎದುರು ಅದನ್ನೆ ನಿರ್ವಿಕಾರವಾಗಿ ನೋಡುತ್ತ ಏನನ್ನೊ ಯೋಚಿಸುತ್ತ ಕುಳಿತಳು ಶ್ರೀನಿವಾಸ ಹೊರಗಡೆ ಕುರ್ಚಿಯಲ್ಲಿ ಮೈಚೆಲ್ಲಿದ್ದ. ನಾಲ್ಕೈದು ನಿಮಿಷ ಕಳೆದವು. ಕೊನೆಗೆ ಕಾವೇರಿ ನಿದ್ರೆಯಿಂದ ಎಚ್ಚತ್ತವಳಂತೆ ಚಹವನ್ನು ಸಿದ್ಧಪಡಿಸಿ, ಕಪ್ಪನ್ನು ಶ್ರೀನಿವಾಸನೆದುರು ತಂದು ಹಿಡಿದಳು.

" ನೀನು ಕುಡಿಯುವುದಿಲ್ಲವೆ ? "

" ನನಗೆ ಬೇಡ...."

" ಯಾಕೆ ? "

" ನನಗೆ ಬೇಡವಾಗಿದೆ...."

" ಯಾಕೆ ಹೇಳಬಾರದೆ ?

" ಯಾಕೆ ಅಂದರೆ ಏನು ಹೇಳಲಿ ? ತಲೆ ತಿರುಗಿದ ಹಾಗಾಗುತ್ತದೆ."

" ನಿಜವಾಗಿಯೂ ? "

ಕಾವೇರಿ ಸುಮ್ಮನಾದಳು ಶ್ರೀನಿವಾಸನಿಗೆ ಆ ಉತ್ತರದಿಂದ ಸಮಾಧಾನವಾಗದಿದ್ದರೂ ಮಾತು ಬೆಳೆಯಿಸಲು ಮನಸ್ಸು ಮಾಡಲಿಲ್ಲ. ಅರ್ಧ ಚಹ ಕುಡಿದಾದಮೇಲೆ ಶ್ರೀನಿವಾಸನೆಂದ :

" ಇಂದು ಪಿಕ್ಚರಿಗೆ ಹೋಗೋಣವೆ ? "

" ನೀವು ಹೋಗುತ್ತೀರಾ ? "

" ನೀನು ಬಂದರೆ ಹೋಗೋಣ. ಗಂಗಾಧರ ಹೋಗುವ ಎಂದಿದ್ದ...."

"ನೀವು ಹೋಗಿಬನ್ನಿರಿ, ಬೇಕಾದರೆ—"

"ನೀನು ಬರುವುದಿಲ್ಲವೆ?"

"ನನಗೆ ಸ್ವಸ್ಥವಾಗಿಲ್ಲ...."

ಶ್ರೀನಿವಾಸನಿಗೆ ವಿಶ್ವಾಸವಾಗಲಿಲ್ಲ. ಅವನೆಂದ:

"ಏನಾಗಿದೆ, ನಿನಗೆ? ಎಲ್ಲದಕ್ಕೂ ಹೀಗೆಯೆ ಹೇಳುತ್ತಿದ್ದೀಯಲ್ಲ?"

ಕಾವೇರಿ ಸುಮ್ಮನಾದಳು. ಅದು ಅವಳ ರೀತಿಯೆ ಆಗಿಬಿಟ್ಟಿತ್ತು. ಬಂದ ಹೊಸದರಲ್ಲಿ ಒಂದು ಮಾತಿಗೆ ಹತ್ತು ಮಾತುಗಳನ್ನು ಹೇಳುತ್ತಿದ್ದ ಅವಳು ಈಗ ಹತ್ತು ಸಾರಿ ಮಾತನಾಡಿಸಿದರೆ ಒಂದು ಉತ್ತರ ಹೇಳಿದರೆ ಹೆಚ್ಚಾಗಿತ್ತು. ಅದೆ ಶ್ರೀನಿವಾಸನ ತಾಳ್ಮೆಯನ್ನು ಕೆಡಿಸುತ್ತಿತ್ತು. ಕೊನೆಗೆ ಹೇಳಿದ:

"ಇಂದು ಸಿನೀಮಾಕ್ಕೆ ಹೋಗತಕ್ಕದ್ದೇ—"

"ಹೋಗಿರಲ್ಲ. ನಾನು ಬೇಡ ಅನ್ನುತ್ತಿದ್ದೇನೆಯೆ?"

"ಹೋಗತಕ್ಕದ್ದು, ಎಂದರೆ ಇಬ್ಬರೂ...."

"ನಾನು ಬರುವುದಿಲ್ಲ!"

ಬಾರದೆ ಇರುವುದಕ್ಕಿಂತ ಹೆಚ್ಚಾಗಿ 'ಬರುವುದಿಲ್ಲ' ಎಂದು ಖಡಾ ಖಂಡಿತವಾಗಿ ಹೇಳುತ್ತಿರುವುದು ಶ್ರೀನಿವಾಸನನ್ನು ಕೆರಳಿಸಿತು.

"ಈ ಹಟ ಸರಿಯಾದದ್ದಲ್ಲ, ಕಾವಿ...."

"ಅಲ್ಲದಿದ್ದರೆ ಇಲ್ಲ."

"ನೀನು ಬರಲೇಬೇಕು—"

"ನಾನು ಬರುವುದಿಲ್ಲ!"

"ಯಾಕೆ ಬರುವುದಿಲ್ಲ?"

"ಯಾಕೇನು? ಬರುವುದಿಲ್ಲ, ಅಂದರೆ ಬರುವುದಿಲ್ಲ!"

ಕಾವೇರಿ ಹಾಗೆ ಹೇಳಿ ಒಳಗಡೆ ಹೋಗಿರದಿದ್ದರೆ ಶ್ರೀನಿವಾಸ ಎದ್ದು ಒಂಪೇಟು ಹೊಡೆಯುವಷ್ಟು ರೇಗಿದ್ದ. ಆದರೆ ಮರುಕ್ಷಣದಲ್ಲಿಯೆ ಸುಮ್ಮ ನಾಗಿಬಿಟ್ಟ. ಕಾವೇರಿ ಆತನನ್ನು ಬಿಡಿಸಲಾರದ ಸಮಸ್ಯೆಯಾಗಿ ನಿಂತಿದ್ದಳು. ದಿನವೂ ಅಲ್ಲದ, ರಾತ್ರಿಯೂ ಅಲ್ಲದ ಮುಬ್ಬುಗತ್ತಲನ್ನು ನಿಟ್ಟಿಸಿ ನೋಡುತ್ತ ಕಾವೇರಿ ಹಿತ್ತಿಲ ಬಾಗಿಲಲ್ಲಿ ಹೋಗಿ ನಿಂತಿದ್ದಳು. ಶ್ರೀನಿವಾಸನ ಮನ

ಪ್ರೊಲಿಸುವ ಯತ್ನಗಳೆಲ್ಲವೂ ಕೊನೆಗೆ ಇದೆ ರೀತಿಯಾಗಿ ಮುಗಿಯು ತ್ತಿದ್ದವು. ಇತ್ತೀಚೆಗೆ ಆ ಯತ್ನಗಳನ್ನು ಮಾಡುವುದನ್ನೂ ಕಡಿಮೆ ಮಾಡಿದ್ದ. ಆದರೂ ಎಷ್ಟೋ ಬಾರಿ ಎಷ್ಟು ತಾಳ್ಮೆಗೆಟ್ಟರೂ ಮನಸ್ಸು ನಿಲ್ಲದೆ ಮೆತ್ತಗಾಗಿ ಮಾತನಾಡಿಸುತ್ತಿದ್ದ. ಆದರೆ ಯಾವುದರ ಪ್ರಯೋಜನವೂ ಆಗುವಂತೆ ಇರಲಿಲ್ಲ.

ಬರುಬರುತ್ತ ಕಾವೇರಿಯ ಈ ಸಿಡುಕು ವಿಪರೀತವಾಯಿತು. ಅದು ಕೇವಲ ಶ್ರೀನಿವಾಸನ ಬಗೆಯಲ್ಲಿ ಮಾತ್ರ ವ್ಯಕ್ತವಾಗುತ್ತಿದ್ದಿಲ್ಲ; ಕಾವೇರಿಯ ಮನೋವೃತ್ತಿಯೆ ಹಾಗೆ ವಿಚಿತ್ರವಾಗಿ, ವಿಪರೀತವಾಗಿ ಮಾರ್ಪಟ್ಟಾಗಿಬಿಟ್ಟಿದ್ದಿತು. ಇಡಿ ಪ್ರಪಂಚದ ಮೇಲೆಯೆ ಯಾವುದೊ ಅವ್ಯಕ್ತವಾದ, ಬಹುತರವಾಗಿ ಅನಿರ್ವಚನೀಯವಾದ ಕಾರಣಕ್ಕಾಗಿ ಆಕೆ ರೇಗಿಕೊಂಡಂತಿತ್ತು. ಒಂದೊಂದು ಸಲ, ಮನೆಯಲ್ಲಿಯ ನಿರ್ಜೀವ ವಸ್ತುಗಳು ಕೂಡ ಆಕೆಯ ಕೋಪಕ್ಕೆ ಗುರಿಯಾಗುತ್ತಿದ್ದವು. ಯಾವುದೊಂದು ಪಾತ್ರೆ ಅಪ್ಪಿ ತಪ್ಪಿ ದಾರಿಯಲ್ಲಿಯೆ ಉಳಿದು ಆಕೆಯ ಕಾಲಿಗೆ ತಾಕಿದ್ದಾದರೆ ಅದನ್ನು ಆಕೆ ಎತ್ತಿ ಇಡಬೇಕಾದ ಸ್ಥಳದಲ್ಲಿ ಇಡುತ್ತಿರಲಿಲ್ಲ. ತಾಕಿದ ಕಾಲಿನಿಂದಲೆ ಅದು ಆಚೆಯ ಗೋಡೆಗೆ ಹೋಗಿ ಅಪ್ಪಳಿಸುವಂತೆ ಬಲವಾಗಿ ಒದೆದು ಬಿಡುತ್ತಿದ್ದಳು. ಹೀಗಾಗಿ, ಮನೆಯಲ್ಲಿಯ ಒಂದೆರಡು ಕಪ್ಪು ಬಸಿ ಜೊತೆಗಳು ಆಕೆಯ ಇಂಥ ಸಿಟ್ಟಿಗೆ ಗುರಿಯಾಗಿಹೋಗಿದ್ದವು. ಆಗೀಗ ಜಡೆ ಹೆಣೆದುಕೊಳ್ಳಲಿಕ್ಕೆಂದು ಎದುರಿನಲ್ಲಿ ಕನ್ನಡಿಯನ್ನು ಸರಿಯಾಗಿ ಇಟ್ಟುಕೊಳ್ಳುತ್ತಿರುವಾಗ ಆ ಕನ್ನಡಿ ಸರಿಯಾಗಿ ನಿಲ್ಲದಿದ್ದರೆ ಕನ್ನಡಿಯನ್ನೆ ಎತ್ತಿ ಚೂರುಚೂರಾಗಿ ಒಡೆದುಹೋಗುವಂತೆ ಎಸೆದದ್ದೂ ಉಂಟು. ಹೀಗೆ, ವಾರಕ್ಕೆ ಒಂದೆರಡು ಸಾಮಾನುಗಳು ಹಾಳಾಗುವಂತಾಯಿತು. ಎರಡು ತಿಂಗಳಲ್ಲಿ ಮೂವರು ಕೆಲಸ ಮಾಡುವ ಒಕ್ಕಲಗಿತ್ತಿಯರು ದೂರವಾದರು. ಎಡಬಲದಲ್ಲಿಯ ಜನರ ಕೂಡ ಜಗಳಗಳೂ ಆದವು; ಅದೂ ನಿಷ್ಕಾರಣವಾಗಿ. ಒಂದು ಸಲ ನೆರೆಹೊರೆಯ ಮಗುವೊಂದು ಆಡುತ್ತ ಕಾವೇರಿಯ ಕಡೆಗೆ ಬಂದಿತು. ಎಲ್ಲಿಲ್ಲದ ಅಕ್ಕರೆಯನ್ನು ತೋರಿಸುತ್ತ ಅದನ್ನೆತ್ತಿಕೊಂಡು ಆಡುತ್ತಿರುವಾಗಲೆ ಆ ಮಗುವಿನ ತಾಯಿ ಬಂದು ಮಗುವನ್ನು ಒತ್ತಾಯದಿಂದ ಕರೆದುಕೊಂಡು ಹೋದದ್ದೆ ಒಂದು ಕಾರಣವಾಯಿತು. ಆಕೆ

ಮಗುವನ್ನು ಕರೆದುಕೊಂಡು ಹೋದುದನ್ನು ತಡೆಯಲಾಗದೆ ಕಾವೇರಿ ಹೇಳಿದ್ದಳು :

"ಹೀಗೇಕೆ ಮಗುವನ್ನು ಒತ್ತಾಯದಿಂದ ಕಸಿದುಕೊಂಡು ಹೋಗುತ್ತೀರಿ ? ನಾನೇನು ನಿಮ್ಮ ಮಗುವನ್ನು ತಿಂದುಹಾಕುತ್ತೇನೆಯೆ ? "

ಆದರೆ ಕಾವೇರಿಯ ನಡತೆಯ ಪ್ರತಾಪವನ್ನು ಹತ್ತಾರು ಸನ್ನಿವೇಶಗಳಲ್ಲಿ ಕಣ್ಣಾರೆ ಕಂಡ ನೆರೆಹೊರೆಯ ಯಾವ ಹೆಣ್ಣು ಮಕ್ಕಳೂ ತಮ್ಮ ಮಕ್ಕಳನ್ನು ಆಕೆಯ ಹತ್ತಿರ ಬಿಡಲು ಧೈರ್ಯ ಮಾಡುತ್ತಿರಲಿಲ್ಲ. ಕಾವೇರಿಯ ಪ್ರಶ್ನೆಗೆ ಮಗುವಿನ ತಾಯಿ ಆಗಲೆ ಯಾವ ಉತ್ತರವನ್ನು ಹೇಳಿರದಿದ್ದರೂ ಅಮೇಲೆ—ಆಕೆ ತಮ್ಮ ಮನೆಯಲ್ಲಿ, "ಮಗುವನ್ನು ತಿಂದುಹಾಕುತ್ತೇನೆಯೆ ?—ಎಂದು ಕೇಳುತ್ತಾಳೆ. ಕಳೆದ ಜನ್ಮದಲ್ಲಿ ಎಷ್ಟು ಮಕ್ಕಳನ್ನು ತಿಂದಿದ್ದಾಳೆಯೊ ಯಾರಿಗೆ ಗೊತ್ತು ? ಅಂತೆಯೆ ಈ ಜನ್ಮದಲ್ಲಿ ಕುಳಿತಿದ್ದಾಳೆ, ಮಕ್ಕಳಿಲ್ಲದೆ ! ಈ ಬಂಜೆಯ ಕೈ ತಾಗಿದರೆ ನಮ್ಮ ಮಕ್ಕಳು ಬಾಡಿ ಹೋದಾವು" ಎಂದಿದ್ದಳಂತೆ. ಅದು ಹೇಗೊ ಕಾವೇರಿಯ ಕಿವಿಯ ವರೆಗೆ ಬಂದು, ಒಂದು ದೊಡ್ಡ ಜಗಳಕ್ಕೆಯೆ ಕಾರಣವಾಗಿತ್ತು. ಹೀಗೆ, ಒಬ್ಬರ ಜತೆಯಲ್ಲಿ ಒಂದೊಂದು ತರಹ ಜಗಳವಾಗಿ, ಮೊದಲೇ ಏಕಾಕಿನಿಯಾದ ಕಾವೇರಿ ಇನ್ನೂ ಏಕಾಕಿನಿಯಾಗಿದ್ದಳು.

ತನ್ನೊಡನೆಯಾಗಲಿ, ಸುತ್ತಲಿನವರೊಡನೆಯಾಗಲಿ ಕಾವೇರಿ ನಡೆದುಕೊಳ್ಳುತ್ತಿದ್ದ ರೀತಿಯ ಮೂಲಕ ಶ್ರೀನಿವಾಸನಿಗೆ ತೀರ ಬೇಸರವೆನಿಸತೊಡಗಿತು. 'ಬಹಳವಾದರೆ ಬೊಂಬೆಯನ್ನೆ ಮಗುವೆಂದು ಭಾವಿಸಿಕೊಂಡು ಸುಖವಾಗಿ ಇರುತ್ತಿದ್ದಳು. ಎಲ್ಲವೂ ಸರಿಯಾಗಿರುತ್ತಿತ್ತು. ತಾನು ಹಾಗೆ ಆಕೆಯನ್ನು ನೋಯಿಸಿ ಯಾವ ಪ್ರಯೋಜನವೂ ಆಗಲಿಲ್ಲ' ಎಂದು ಶ್ರೀನಿವಾಸನಿಗೆ ಆಗೀಗ ಅನಿಸುತ್ತಿತ್ತು. ಈಗ ಆತನಿಗೆ ಕಾವೇರಿಯನ್ನು ತಿರುಗಿ ಸರಿಯಾದ ದಾರಿಯ ಮೇಲೆ ತರಲು ತೋಚಿದ ಉಪಾಯವೆಂದರೆ ಅದೇ. ಆದರೆ ಅದರ ವಿಷಯದಲ್ಲಿಯೂ ಸಾಶಂಕನೆ ಆಗಿದ್ದ. ಆ ಕ್ಷಣದಿಂದ ಕಾವೇರಿ ಮಗುವಿನ—ಪುಟ್ಟುವಿನ—ಮಾತನ್ನೆ ಎತ್ತಿರಲಿಲ್ಲ. ಅದಕ್ಕೆ ದೂರದಿಂದ ಸಂಬಂಧಿಸಿದ ಮಾತನ್ನು ಕೂಡ ಆಕೆ ಆಡುತ್ತಿರಲಿಲ್ಲ. ಮತ್ತೆ ಅದೆ ಕನಸನ್ನು ಆಕೆಯ ಮನಸ್ಸಿನಲ್ಲಿ ಕಟ್ಟುವುದು ಸಾಧ್ಯವೆ ಎಂದು ಯೋಚಿಸಿ

ಶ್ರೀನಿವಾಸ ಒಂದು ಸಂಜೆ ಆಫೀಸಿನಿಂದ ಬಂದು, ಒಳ್ಳೆ ಸಲಿಗೆಯಿಂದ ಕೇಳಿದ :

"ಏನು ಕಾವಿ? ಎಷ್ಟು ದಿನವಾಯಿತು, ನಿನ್ನ ಪುಟ್ಟುವಿನ ಒಂದು ಸಮಾಚಾರವನ್ನೂ ನನ್ನೆದುರು ಹೇಳುವುದೆ ಇಲ್ಲವಲ್ಲ!" ಎಂದ.

ಕಾವೇರಿ ಕೇಳಿಯೂ ಕೇಳದ ಹಾಗೆ ಸುಮ್ಮನಾಗಿದ್ದಳು.

"ಯಾಕೆ ಕಾವಿ? ಆ ದಿನ ನೀನು ಹೇಳಿದ ಹಾಗೆ ಆತನ ತೊಟ್ಟಿಲಕ್ಕೆಂದು ಉತ್ತಮವಾದ ಗಟ್ಟಿಮುಟ್ಟಾದ ಹಗ್ಗವನ್ನು ಮರುದಿನವೆ ತಂದು ಕೊಟ್ಟೆ.... ನೀನು ತೊಟ್ಟಿಲನ್ನು ಕಟ್ಟಲಿಲ್ಲ. ಎಲ್ಲವೂ ಹಾಗೆಯೆ ಬಿದ್ದಿದೆ...."

ಆಚೆಯ ಮೂಲೆಯಲ್ಲಿ ಎಷ್ಟೋ ವಾರಗಳಿಂದ ಆ ಬೆತ್ತದ ತೊಟ್ಟಿಲು ಬಿದ್ದಿತ್ತು. ಅದರಲ್ಲಿ ಏನೇನೊ ಸಾಮಾನುಗಳು. ಆ ಸಾಮಾನುಗಳ ಬುಡದಲ್ಲಿ ಎಲ್ಲಿಯೊ 'ಪುಟ್ಟು' ಸಿಕ್ಕಬಿದ್ದಿದ್ದ. ಒಂದು ಕಾಲು ಮಾತ್ರ ಕಾಣುತ್ತಿತ್ತು. ಕಾವೇರಿ ಸುಮ್ಮನಾಗಿಯೆ ಇದ್ದಳು. ಶ್ರೀನಿವಾಸ ಮತ್ತೆ ಹೇಳಿದ :

"ನೀನು ಏನು ಬೇಕಾದ್ದನ್ನು ಹೇಳು. ನಾನಿಂದು ಮತ್ತೆ ತೊಟ್ಟಿಲವನ್ನು ಕಟ್ಟಿಯೇಬಿಡುವವ. ಎಲ್ಲಿದೆ, ಆ ಹಗ್ಗ, ಕಾವಿ?...."

ಕಾವೇರಿ ಅಡಿಗೆಮನೆಯಿಂದ ನಡುವಿನ ಬಾಗಿಲ ಬಳಿ ಬಂದು ನಿಂತಳು. ಮುಖ ವಿಲಕ್ಷಣವಾಗಿ ಗಂಭೀರವಾಗಿತ್ತು. ಆಕೆ ಹಾಗೆ ನಿಲ್ಲುವ ಬಗೆ ಸಹಜವಾದದ್ದಾಗಿ ಕಾಣುತ್ತಿರಲಿಲ್ಲ.

"ಎಲ್ಲಿದೆ ಆ ಹಗ್ಗ—ಆ ಹೊಸದು—ನಾನು ತಂದದ್ದು?"

"ಯಾತಕ್ಕೆ ಬೇಕು?"

"ತೊಟ್ಟಿಲ ಕಟ್ಟುತ್ತೇನೆ....ಅದಕ್ಕೆಯೆ ಅಲ್ಲವೆ ಅದನ್ನು ತಂದದ್ದು?"

ಕಾವೇರಿಯ ಮುಖ ಇನ್ನೂ ಗಂಭೀರವಾಯಿತು. ಹುಬ್ಬುಗಳು ತುಸು ಗಂಟಿಕ್ಕಿದ ಹಾಗೆ ಕಂಡಿತು. ಕಣ್ಣುಗಳು ನಿರ್ವಿಕಾರವಾಗಿದ್ದವು. ಯಾವ ಅಂಗಾಂಗವೂ ಚಲಿಸದಂತೆ ಸ್ತಬ್ಧಳಾಗಿ ನಿಂತಿದ್ದಳು. ಕಾವೇರಿ ಹೇಳಿದಳು :

"ಆ ತೊಟ್ಟಿಲವನ್ನು ಕಟ್ಟಬೇಡಿರಿ!"

"ಯಾಕೆ?"

"ಕಟ್ಟಬೇಡಿರಿ!"

"ಪುಟ್ಟುವಿಗೆ ತೊಟ್ಟಿಲು ಬೇಡವೆ?"

"ಎಲ್ಲಿದ್ದಾನೆ ಪುಟ್ಟು?"

"ನಿನಗೆಯೆ ಗೊತ್ತು!"

"ಹೌದು, ನನಗೆಯೆ ಗೊತ್ತು. ಪುಟ್ಟು ಸತ್ತುಹೋಗಿದ್ದಾನೆ!"

"ಕಾವಿ!"

"ಪುಟ್ಟು ಸತ್ತುಹೋಗಿದ್ದಾನೆ. ಅದಕ್ಕೆಂದೇ ಹೇಳಿದೆ, ತೊಟ್ಟಿಲ ಬೇಡ ಎಂದು!" ಕಾವೇರಿ ಗಟ್ಟಿಯಾಗಿ ಹೇಳಿದಳು.

ಶ್ರೀನಿವಾಸ ಅವಾಕ್ಕಾಗಿ ನಿಂತ! ಆತನ ಕೈ ನಿಂತಲ್ಲಿಯೆ ನಿಂತವು. ಆ ಕ್ಷಣಕ್ಕೆ ಕಾವೇರಿಯ ಬಗೆಯಲ್ಲಿ ಸಂಪೂರ್ಣ ಹತಾಶನಾದ.

ಕಳೆದ ನಾಲ್ಕೈದು ತಿಂಗಳುಗಳಲ್ಲಿ ತಾಯಿಯ ಒತ್ತಾಯ ಎಷ್ಟೇ ಹೆಚ್ಚಾಗಿದ್ದರೂ ಶ್ರೀನಿವಾಸನ ಮನಸ್ಸು ಕಾವೇರಿಯ ವಿಷಯದಲ್ಲಿ ಹೆಚ್ಚಾಗಿ ವಿರಸಗೊಂಡುತ್ತ ನಡೆದಿದ್ದರೂ ಆತ ತನ್ನ ಸ್ಪಷ್ಟವಾದ ಒಪ್ಪಿಗೆಯನ್ನು ಹೇಳಿರಲಿಲ್ಲ. ಇದರಿಂದ ಭಾಗಮ್ಮನೂ ಯೋಚನೆಗೀಡಾಗಿದ್ದಳು. ಮುಖ್ಯ, ಶ್ರೀನಿವಾಸನಿಂದಲೆ ಸಮ್ಮತಿ ಇರದಿದ್ದರೆ ಆಕೆ ಏನನ್ನೂ ಮಾಡುವಂತಿರಲಿಲ್ಲ. ಆಕೆಯಂತೆಯೆ ಲಕ್ಷ್ಮೀಬಾಯಿಗೂ ತುಸು ಉತ್ಸಾಹ ಭಂಗವಾಗಿತ್ತು. ಆಕೆಯ ಎಣಿಕೆಯಲ್ಲಿ, ಇಷ್ಟರಲ್ಲಿ ಎಲ್ಲವೂ ಮುಗಿದು ಹೋಗಿರಬೇಕಾಗಿತ್ತು. ಆದ್ದರಿಂದ ಈ ಸಲ ಶ್ರೀನಿವಾಸ ಬಂದಾಗ ಹೆಚ್ಚು ಕಡಿಮೆ ಮಾತುಗಳನ್ನಾಡದೆ ಸುಮಿತ್ರೆಯನ್ನೆ ಮುಂದಕ್ಕೆ ತಳ್ಳಿ, ಆಕೆಯೆ ಶ್ರೀನಿವಾಸನನ್ನು ತನ್ನೆಡೆಗೆ ಸೆಳೆದುಕೊಳ್ಳಲು ಅನುಕೂಲವಾಗುವಂತೆ ನೋಡಿಕೊಳ್ಳತಕ್ಕದ್ದೆಂದು ಭಾಗಮ್ಮ ಲಕ್ಷ್ಮೀಬಾಯಿ ಇಬ್ಬರೂ ಯೋಜಿಸಿಕೊಂಡಿದ್ದರು. ಈ ವಿಷಯ ಸ್ವತಃ ಸುಮಿತ್ರೆಗೆ ತಿಳಿದಿತ್ತೊ ಇಲ್ಲವೊ! ಆಕೆಗೆ ಯೋಜನೆ ತಿಳಿಯಬೇಕಾದದ್ದೆ ಇರಲಿಲ್ಲ. ಶ್ರೀನಿವಾಸನ ಬಗೆಯಲ್ಲಿ ತಾಯಿಯ ಇಂಗಿತವೇನೆಂಬುದು ಆಕೆಗೆ ತಿಳಿದಿತ್ತು. ಮೊದಲೆ ಒಯ್ಯಾರದವಳಾದ ಆಕೆಗೆ ತನ್ನ ಒನಪು ಒಯ್ಯಾರಗಳನ್ನು ಬೀರಲು ಬೇರೆಯಾಗಿ ಯಾರೂ ಹೇಳಬೇಕಾದದ್ದೆ ಇರಲಿಲ್ಲ.

ವಾಡಿಕೆಯಾಗಿ ಶ್ರೀನಿವಾಸ ಊರಿಗೆ ಬರುವುದು ಶನಿವಾರ. ತಾಯಿಯನ್ನು ನೋಡಿಕೊಂಡು, ಪೂರೈಸಬೇಕಾದ ಸಣ್ಣಪುಟ್ಟ ಕೆಲಸಗಳನ್ನು ನೋಡಿಕೊಂಡು, ತಿರುಗಿ ಸೋಮವಾರ ಸರಿಯಾಗಿ ಕೆಲಸಕ್ಕೆ ಹಾಜರಾಗುತ್ತಿದ್ದ. ಈ ಸಲ, ಹೊಲಮನೆಗೆ ಸಂಬಂಧಪಟ್ಟ ಒಂದೆರಡು ವಿಷಯಗಳನ್ನು ಬಗೆಹರಿಸಬೇಕಾಗಿದ್ದರಿಂದ ಎರಡು ದಿನದ ರಜೆ ಪಡೆದು ಬಂದಿದ್ದ. ಒಟ್ಟಿನಲ್ಲಿ, ತನಗೆ ನಾಲ್ಕಾರು ದಿನ ಇರಬೇಕಾದ್ದರಿಂದ ಹೊರಡುವಾಗ ಕಾವೇರಿಯನ್ನೂ ಹೊರಡಲು ಕೇಳಿದ್ದ. ಆದರೆ ಯಾವ ಒತ್ತಾಯಕ್ಕೂ ಮಣಿಯದೆ, ತಾನು ಅಲ್ಲಿಯೆ ಇರತಕ್ಕದ್ದೆಂದು ಹಟ ಹಿಡಿದಿದ್ದಳಾದ್ದರಿಂದ ಎಂಟನಂತೆ ಶ್ರೀನಿವಾಸ ಒಬ್ಬನೆ ಬಂದಿದ್ದ. ಜತೆಯಲ್ಲಿ ಆ ಸಲ ಕಾವೇರಿ ಬಂದಿದ್ದರೆ

ಮುಂದೆ ನಡೆಯಬೇಕಾದುದರಲ್ಲಿ ಎಷ್ಟಾದರೂ ವ್ಯತ್ಯಾಸವಾಗಬಹುದಾಗಿತ್ತೊ ಏನೊ? ಯಾರು ಬಲ್ಲರು? ಬದುಕು ನಡೆಯುವುದೆ ಹೀಗಲ್ಲವೆ?

ಶ್ರೀನಿವಾಸ ಬಾಗಿಲುಕೋಟೆಗೆ ಬಂದ ಎರಡನೆಯ ದಿನದ ಮಧ್ಯಾಹ್ನ ನಾಲ್ಕು ಗಂಟೆಯಾಗಿರಬಹುದು. ಮಲಗಿ ಆಗ ಎದ್ದು, ಏನೊ ಕಾಗದಪತ್ರಗಳನ್ನು ನೋಡುತ್ತ ಕೋಣೆಯಲ್ಲಿ ಕುಳಿತಿದ್ದ. ಊಟವಾದ ಒಂದು ಗಂಟೆಯಲ್ಲಿಯೆ ಭಾಗಮ್ಮ "ಇಂದು ಪುರಾಣಮಂಗಳ. ನನಗೆ ಬೇಗನೆ ಹೋಗಬೇಕಾಗಿದೆ. ನಿನಗೆ ಚಹ ಮಾಡಿಕೊಳ್ಳುವುದಾದರೆ ಅಲ್ಲಿಯೆ ಹಾಲು ಇಟ್ಟಿದ್ದೇನೆ" ಎಂದು ಹೇಳಿ, ಯಾವಾಗಲೊ ಹೊರಟುಹೋಗಿದ್ದಳು. ಓದುತ್ತಿದ್ದ ಹಾಗೆ ಹೊರಬಾಗಿಲು ಧಡಾರನೆ ತೆರೆಯಿತು. ಕುಳಿತಲ್ಲಿಂದಲೆ ಶ್ರೀನಿವಾಸ ಕೇಳಿದ:

"ಯಾರವರು?"

ಉತ್ತರವಿಲ್ಲ. ಶ್ರೀನಿವಾಸ ಏಳುವುದರಲ್ಲಿದ್ದ. ಮತ್ತೆ ಕೇಳಿದ:

"ಯಾರವರು?"

"ನಾನು—"

"ಯಾರು?" ಎನ್ನುವಷ್ಟರಲ್ಲಿ ಶ್ರೀನಿವಾಸ ಕೋಣೆಯ ಬಾಗಿಲಿಗೆ ಬರುವುದಕ್ಕೂ ಸಾವಿತ್ರಿ ಅದೆ ಬಾಗಿಲಿಗೆ ಬರುವುದಕ್ಕೂ ಸರಿಯಾಯಿತು. ಬಂದ ಸಾವಿತ್ರಿ ವೇಷಭೂಷಣಗಳಿಂದ ಸುಸಜ್ಜಿತಳಾಗಿದ್ದಳು. ಆಕೆ ಬಾಗಿಲ ಹತ್ತಿರಕ್ಕೆ ಬಂದಾಗ ಸಮೀಪದಲ್ಲಿಯೆ ಇದ್ದ ಶ್ರೀನಿವಾಸನಿಗೆ ಆಕೆಯ ಪ್ರಸಾಧನದ ಪರಿಮಳ ತಗಲದೆ ಇರಲಿಲ್ಲ. ಅರೆಕ್ಷಣ ಬೆಚ್ಚಿದ ಹಾಗೆ ನಿಂತ.

"ಓ! ನೀನೆ...." ಎಂದ ಕೊನೆಗೆ.

"ಭಾಗಮ್ಮ ಅವರು ಇಲ್ಲವೆ?"

"ಇಲ್ಲವಲ್ಲ...."

"ನಮ್ಮ ತಾಯಿ ಬಂದಿದ್ದಳೆ?"

"ಇಲ್ಲ. ಬಂದಹಾಗಿಲ್ಲ."

"ಎಲ್ಲಿಗೆ ಹೋದರೊ, ಹಾಗಾದರೆ—"

"ಎಲ್ಲಿಗೆ ಹೋಗುತ್ತಾರೆ? ಪುರಾಣಕ್ಕೆ ಹೋಗಿರಬಹುದು. ಯಾಕೆ?"

"ಯಾಕೇನು? ಮನೆಗೆ ಬೀಗ ಹಾಕಿಕೊಂಡು ಬಂದಿದ್ದಾಳೆ. ನನಗೆ—"

"ನಿನ್ನ ಹತ್ತಿರ ಬೀಗದ ಕೈ ಇಲ್ಲವೆ?"

"ಇದ್ದರೆ ಈಕೆಯನ್ನು ಯಾತಕ್ಕೆ ಹುಡುಕಾಡುತ್ತಿದ್ದೆ?"

"ನೀನು ಎಲ್ಲೋ ಹೊರಟಿಹಾಗಿದೆಯಲ್ಲ?"

"ನಿಮಗೇನು ಗೊತ್ತು?"

"ನನಗೇನು ಗೊತ್ತೆ? ನಿನ್ನನ್ನು ನೋಡಿದರೆ ಗೊತ್ತಾಗುತ್ತದೆ!" ಎಂದು ನಸುನಕ್ಕ. ಶ್ರೀನಿವಾಸ ಸುಮಿತ್ರೆಯನ್ನು ಅಡಿಯಿಂದ ಮುಡಿಯ ವರೆಗೆ ನೋಡಿದ. ತನ್ನ ಕಣ್ಣೆದುರಿಗೆ ಬೆಳೆದ ಹುಡುಗಿ, ಎಷ್ಟು ದೊಡ್ಡವ ಳಾಗಿಬಿಟ್ಟಿದ್ದಾಳೆ, ಎಂದುಕೊಂಡ. ಆಕೆಯೊಡನೆ ಯಾವ ಆತಂಕವೂ ಇಲ್ಲದೆ ನಿಸ್ಸಂಕೋಚವಾಗಿ ಮಾತನಾಡುತ್ತಿದ್ದ.

"ನನ್ನನ್ನು ನೋಡಿದರೆ ಏನು ಗೊತ್ತಾಗುತ್ತದೆ?"

"ನೀನೆಲ್ಲೋ ಸಿನೀಮಾಕ್ಕೆ ಹೊರಟ ಹಾಗಿದೆ, ಎಂಬುದು!"

"ಹೋಗಿರಿ. ನಿಮಗೆ ಯಾರೋ ಹೇಳಿದ್ದಾರೆ!"

"ಅಂದರೆ ನೀನು ಹೊರಟಿದ್ದು ಸಿನೀಮಾಕ್ಕೆ ಅಂದ ಹಾಗಾಯಿತಲ್ಲ?"

"ಆದರೆ ತಾಯಿ ಸಿಕ್ಕಲೆ ಇಲ್ಲವಲ್ಲ...."

"ಯಾವುದಿದೆ ಚಿತ್ರ?"

"ದಿಲ್‌ಕಾ ಪ್ಯಾರ್...."

"ದಿಲ್‌ಕಾ ಪ್ಯಾರ್! ಅಂದರೇನೆ?" ಎಂದು ಮತ್ತೆ ನಸುನಕ್ಕ.

"ಗೊತ್ತಿಲ್ಲವೆ ನಿಮಗೆ?"

"ನನಗೇನು ಗೊತ್ತು? ನಾನೇನು ಸಿನೀಮಾಕ್ಕೆ ಹೊರಟಿದ್ದೇನೆಯೆ?"

"ಹೊರಡಿರಿ ಹಾಗಾದರೆ—ಗೊತ್ತಾಗುತ್ತದೆ!"

ಅದೇಕೊ ಹೀಗೆಯೆ ಮಾತಿಗೆ ಮಾತು ಬೆಳೆಯಿತು. ಸುಮಿತ್ರೆಯೊಡನೆ ಮಾತನಾಡುತ್ತಿದ್ದರಲ್ಲಿ ಶ್ರೀನಿವಾಸ ತನ್ನನ್ನೆ ಮರೆತಂತಿತ್ತು. ಆಕೆಯನ್ನು ಮತ್ತೊಮ್ಮೆ ಪೂರ್ತಿಯಾಗಿ ನೋಡಿದ. ಸುಮಿತ್ರಾ ಅಂಥ ಚೆಲುವೆಯಲ್ಲ ದಿದ್ದರೂ ಸುಖವಾಗಿ ಬೆಳೆದು ನಿಂತ ಹದಿನೆಂಟು ವರ್ಷದ ತಾರುಣ್ಯ ಆಕೆಯ ಅಂಗಾಂಗಗಳಲ್ಲಿ ಸೂಸುತ್ತಿತ್ತು. ಮಾತುಮಾತಿಗೆ ಮುಖ ಕೆಂಪೇ ರುತ್ತಿತ್ತು. ಕಣ್ಣುಗಳಲ್ಲಿ ಚಾಂಚಲ್ಯ ಕುಣಿಯುತ್ತಿತ್ತು. ನೀಳವಾದ ಕೈ ಬೆರಳುಗಳಿಂದ ಮುಂದಲೆಗಳನ್ನು ಹಿಂದಕ್ಕೆ ಸರಿಸುವಾಗ ಮೋಹಕತೆ

ವೈದೋರಿ ನಿಲ್ಲುತ್ತಿತ್ತು. ಆ ವೈ, ಆದರ ವಿಲಾಸ, ಆದರ ಬಳುಕನ್ನು ನೋಡಿ, ಕಳೆದ ನಾಲ್ಕಾರು ತಿಂಗಳುಗಳಲ್ಲಿ ಕಾವೇರಿಯ ಸಿಡುಕು ವಿಪರೀತ ವೃತ್ತಿಗಳ ಮೂಲಕ ಯಾವ ಬಗೆಯ ಸರಸಕ್ಕೂ ಎರವಾದ ಶ್ರೀನಿವಾಸನ ಮನಸ್ಸು ಸುಮಿತ್ರೆಯ ಅಂಗಲಾವಣ್ಯದಿಂದ ಸೂರೆಗೊಂಡಿದ್ದರೆ ಆಶ್ಚರ್ಯ ವಲ್ಲ. ವಯಸ್ಸಿಗೆ ಸಹಜವಾದ ರಸಿಕತೆಗಾಗಿ ತನಗೆ ತಿಳಿಯದಲೆ ಹಾತೊರೆದು ಆಕೆಯೊಡನೆ ಮಾತಿನಲ್ಲಿಯೆ ಒಂದು ಬಗೆಯ ಅಸ್ಪಷ್ಟವಾದ, ಆದರೂ ಸಂತೋಷಕರವಾದ ಸುಖಾನುಭವವನ್ನು ಶ್ರೀನಿವಾಸ ಪಡೆಯುತ್ತಿದ್ದರೆ ಅಸ್ವಾಭಾವಿಕವಾಗಿರಲಿಲ್ಲ. ಅಂಥ ಸರಸದ ಮನೋವೃತ್ತಿಯಲ್ಲಿಯೆ ಕೇಳಿದ:

"ಅಂದರೆ, ನಾನೂ ಸಿನೀಮಾಕ್ಕೆ ಹೊರಡಬೇಕೆ?"

"ಯಾಕೆ ಹೊರಡಬಾರದು?"

"ಹೊರಡಬಹುದು. ಆದರೆ ನಮ್ಮನ್ನು ಯಾರು ಕರೆದುಕೊಂಡು ಹೋಗುವವರು ಹೇಳು, ಸುಮಿತ್ರಾ!" ಎಂದು ಸೋಗಿನ ನಗೆಯಾಡಿದ.

"ನಿಮ್ಮನ್ನು ಇನ್ನೊಬ್ಬರು ಕರೆದುಕೊಂಡು ಹೋಗಬೇಕೆ? ಹಾಗಾದರೆ, ನೀವು ಇನ್ನೊಬ್ಬರನ್ನು ಕರೆದುಕೊಂಡು ಹೋಗುವುದಂತೂ ದೂರವೆ ಉಳಿಯಿತು!"

"ನಿನ್ನನ್ನು ಕರೆದುಕೊಂಡು ಹೋಗುತ್ತೇನೆಂದರೆ ಬರುತ್ತೀಯಾ?"

"ಹೋಗುತ್ತೇನೆ ಅಂದರೆ ಅಲ್ಲ. ಹೋದರೆ—"

"ಹೋದರೆ ಬರುತ್ತೀಯಾ?"

"ಖಂಡಿತವಾಗಿ!"

"ನೋಡು! ಬರಿ ಮಾತಲ್ಲ" ಎಂದ ಶ್ರೀನಿವಾಸ ಉತ್ತೇಜಿತನಾಗಿ.

"ಬರಿ ಮಾತೇಕೆ? ನೀವು ಕರೆದುಕೊಂಡು ಹೋಗುವುದು ಬರಿ ಮಾತಾಗದಿದ್ದರೆ—"

"ಬರುವಿಯಾ ಹಾಗಾದರೆ?"

"ನೀವು ಕರೆದುಕೊಂಡು ಹೋದರೆ ಇಲ್ಲ ಅನ್ನುತ್ತೇನೆಯೆ?" ಎಂದು ಓರೆ ನೋಟ ಬೀರಿದಳು.

ಶ್ರೀನಿವಾಸನಿಗೆ ಅದರ ಅರ್ಥ ಹೊಳೆಯಲಿಲ್ಲವೆಂದು ಕಾಣುತ್ತದೆ. ಆ ಅರ್ಥ ಹೊಳೆಯುವ ಮನಃಸ್ಥಿತಿಯಲ್ಲಿ ಆತನಿರಲಿಲ್ಲ. ಅವನೆಂದ:

"ಯಾವ ಆಟಕ್ಕೆ ಹೋಗೋಣ?"

"ಯಾವ ಆಟವೇನು? ಈಗಲೆ, ಮೊದಲ ಆಟಕ್ಕೆ."

"ಈಗಲೇನೆ? ಈಗ ಐದಾಗಿಹೋಯಿತು. ನಾನಿನ್ನೂ ಚಹವನ್ನು ಕೂಡ ಕುಡಿದಿಲ್ಲ."

"ಇನ್ನೂ ಚಹವನ್ನು ಕುಡಿದಿಲ್ಲವೆ?"

"ಅವ್ವ ಮಧ್ಯಾಹ್ನವೆ ಹೊರಟುಹೋದಳು. ನಾನು ಇದೆ ಎದ್ದು ಇನ್ನು ಮೇಲೆ ಮಾಡಿಕೊಳ್ಳೋಣ ಎನ್ನುತ್ತಿದ್ದೆ...."

"ಹಾಗಾದರೆ ನೀವು ಹೊರಡಲು ಸಿದ್ಧವಾಗಿರಿ. ನಾನೀಗ ಚಹ ಮಾಡಿಕೊಂಡು ಬಂದುಬಿಡುತ್ತೇನೆ" ಎಂದು ಒಳ್ಳೆ ಉತ್ಸಾಹದಿಂದ ಒಳಗಡೆ ಓಡಿದಳು. ಆ ಉತ್ಸಾಹದಲ್ಲಿ, ಆ ಚಟುವಟಿಕೆಯಲ್ಲಿ ಕೂಡ ಒಂದು ಬಗೆಯ ಮನಸೆಳೆಯುವ ಚಮತ್ಕೃತಿ ಕಂಡಿತು ಶ್ರೀನಿವಾಸನಿಗೆ.

ಈ ಎಲ್ಲ ಮಾತು ನಡೆದದ್ದು ಕೋಣೆಯ ಬಾಗಿಲಲ್ಲಿಯೆ ಸುಮಿತ್ರಾ ಒಳಗೆ ಹೋದಾಗ ಶ್ರೀನಿವಾಸನೂ ಕೋಣೆಯ ಒಳಕ್ಕೆ ತಿರುಗಿದ ಆದರೆ ಅಲ್ಲಿ ಹೋಗಿ ಏನು ಮಾಡುವುದು ತಿಳಿಯದಾಗಿ, ಅತ್ತಿತ್ತ ಅಲ್ಲಿಯೆ ಅಲೆದಾಡಿದ. ಮನಸ್ಸು ಎಲ್ಲೆಲ್ಲಿಯೊ ಅಲೆದಾಡುತ್ತಿತ್ತು. ಹತ್ತಿಪ್ಪತ್ತು ಹೆಜ್ಜೆ ಹಾಕುವುದರಲ್ಲಿಯೆ ಬೀದಿಯ ಬದಿಯ ಕಿಟಕಿಯ ಹತ್ತಿರ ಹೋಗಿ ನಿಂತ. ಬೀದಿಯಲ್ಲಿ ಯಾರೋ ಆಚೆಗೆ ಹೋಗುತ್ತಿದ್ದರು. ~~ಒಂದು ನಾಯಿ ಇನ್ನೊಂದರ ಬೆನ್ನ ಹಿಂದೆ ಓಡುತ್ತಿತ್ತು~~. ಆದರೆ ಇದಾವುದರ ಕಡೆಗೆ ಶ್ರೀನಿವಾಸನ ಲಕ್ಷ್ಯವೆ ಇರಲಿಲ್ಲ. ಆತನ ಲಕ್ಷ್ಯ ಪಡಸಾಲೆಯನ್ನು, ನಡುಮನೆಯನ್ನು ದಾಟಿ ಅಡಿಗೆಮನೆಯಲ್ಲಿದ್ದ ಸುಮಿತ್ರೆಯನ್ನು ಸೇರಿತ್ತು. ಅರೆಕ್ಷಣದಲ್ಲಿ ಆ ಅಡಿಗೆಮನೆಯನ್ನೂ ದಾಟಿ ಬೆಳಗಾಂವಿಯ ವರೆಗೆ ಓಡಿ ಕಾವೇರಿಯನ್ನು ಸೇರಿತ್ತು. ಕಾವೇರಿ—ಸುಮಿತ್ರಾ! ಎಂಥ ವ್ಯತ್ಯಾಸ! ಉಪೇಕ್ಷೆ—ಅಪೇಕ್ಷೆ! ಒಂದೆಡೆ ಬಾಡಿ ಬಳಲಿಹೋದ ಹೂವು; ಇನ್ನೊಂದೆಡೆ ಅದೀಗ ಅರಳಲಿದ್ದ ಮೊಗ್ಗು! ಶ್ರೀನಿವಾಸನ ಮನಸ್ಸು ದುಂಬಿಯಂತೆ ಅಲೆಯಿತು, ದುಂಬಿಯಂತೆ ಒಲಿಯಿತು. ಕಾವೇರಿಯ ಚಿತ್ರ ಮಸಕಾಯಿತು. ಮನಸ್ಸು ಮರಳಿ ಬಂದು ಮತ್ತೆ ಅಡಿಗೆಮನೆಯನ್ನು ಸೇರಿತು. ಅಲ್ಲಿಗೆ ತಾನೂ ಹೋಗಬೇಕೆಂದ. ಆದರೆ ಯಾತಕ್ಕೆ? ಅದರ ಯೋಚನೆಯೆ ಉಳಿಯ

ಲಿಲ್ಲ. ಆ ಯೋಚನೆ ಮೂಡಿ, ಅದರ ಇತ್ಯರ್ಥವಾಗುವುದರ ಒಳಗಾಗಿ ಶ್ರೀನಿವಾಸ ನಡುಮನೆಯ ವರೆಗೆ ಬಂದಿದ್ದ. ಅಡಿಗೆಮನೆಯಲ್ಲಿ ಸುಮಿತ್ರಾ ಯಾವುದೊ ಒಂದು ಹಾಡನ್ನು ಅತ್ಯಂತ ಸಂತೋಷದಿಂದ ಹಾಡುತ್ತಿದ್ದಳು.

ಬಂದುದಕ್ಕಾಗಿ ನೆಪವೆಂದು ಬಚ್ಚಲುಮನೆಯ ವರೆಗೆ ಹೋಗಿ ಮುಖ ತೊಳೆದುಕೊಂಡು ಬಂದ. ಸುಮಿತ್ರೆಯ ಹಾಡು ಸರಾಗವಾಗಿ ಸಾಗಿಯೆ ಇತ್ತು. ತಡೆಯದೆ ಶ್ರೀನಿವಾಸನೆಂದ:

"ಏನು, ಬಹಳ ಸಂತೋಷವಾಗಿ ಹಾಡುತ್ತಿದ್ದೀಯಲ್ಲ?"

"ಸಂತೋಷವಾಗಿಯೇನು? ಹಾಡುತ್ತಿದ್ದೇನೆ—"

"ಹಾಗಲ್ಲ. ಇಂದೇನು ವಿಶೇಷ ಎಂದೆ—"

"ವಿಶೇಷವೇನೂ ಇಲ್ಲ. ನಾನು ಯಾವಾಗಲೂ ಇಷ್ಟೆ...."

"ಹೌದೆ?"

ಶ್ರೀನಿವಾಸನ ಕಣ್ಣೆದುರು ಮತ್ತೆ ಅದೇ ಚಿತ್ರ. ಕಾವೇರಿ–ಸುಮಿತ್ರಾ! ಅದೆ ವ್ಯತ್ಯಾಸ. ಕಾವೇರಿಯು ಹಾಗೆ ಹಗಲು ಹನ್ನೆರಡು ಗಂಟೆಯೂ ಮುಖ ಮುದುಡಿಕೊಂಡು ಹುಬ್ಬುಗಂಟಿಕ್ಕಿಕೊಂಡು ಇದ್ದರೆ ಯಾತಕ್ಕೆ ಬಂತು? ಇರಬಹುದಾದಾಗ ಸುಮಿತ್ರೆಯಂತೆ ಸುಖವಾಗಿ ಸರಸವಾಗಿ ಇರಬಾರದೆ? ಅದನ್ನು ಯಾರು ಹೇಳಬೇಕು? ಅಲ್ಲದೆ, ಎಷ್ಟು ಹೇಳಿದರೂ ಕಾವೇರಿ ಕೇಳಲು ಸಿದ್ಧಳಿಲ್ಲಿದ್ದಳು? ಈ ಯೋಚನೆಗಳಲ್ಲಿ ತೊಡಗಿದ್ದಾಗ ಶ್ರೀನಿವಾಸ ಸುಮ್ಮನಾದದ್ದನ್ನು ನೋಡಿ ಸುಮಿತ್ರೆಯೆಂದಳು:

"ಯಾಕೆ, ಸುಮ್ಮನಾಗಿಬಿಟ್ಟಿರಿ?"

"ಒಂದು ಕಾಲಕ್ಕೆ ಒಂದೇ ಕೆಲಸ ಮಾಡುವವ ನಾನು!" ಎಂದು ನಕ್ಕ.

"ಈಗ ಯಾವ ಕೆಲಸ ನಡೆದಿದೆ, ಹಾಗಾದರೆ?"

"ನಿನಗೆ ಗೊತ್ತಿಲ್ಲವೆ?"

"ನನಗೆ ಗೊತ್ತಾದದ್ದು ನೀವು ಸುಮ್ಮನಾದದ್ದು! ಅದೂ ಒಂದು ಕೆಲಸವೆ?"

"ನಾನು ಸುಮ್ಮನಾಗಿದ್ದೇನೆಯೆ?"

"ಅಲ್ಲವೆ?"

"ಸುಮ್ಮನಾಗಿದ್ದರೂ—" ಯಾಕೊ ಶ್ರೀನಿವಾಸ ಅನುಮಾನಿಸಿದ.

"ಏನು ಸುಮ್ಮನಾಗಿದ್ದರೂ?"

"ಸುಮ್ಮನಾಗಿದ್ದರೂ ಸುಖಪಡುತ್ತಿದ್ದೇನೆ!"

"ಯಾತರಿಂದ?"

"ಇದರಿಂದ!" ಎಂದು ಆಕೆಯ ಭುಜಕ್ಕೆ ಬೆರಳು ತಟ್ಟಿದ.

"ಅಂದರೆ?"

"ಅಂದರೆ—ಅಂದರೆ—ಸೌಂದರ್ಯದಿಂದ!"

"ಹೋಗಿರಿ—"ಎಂದು ಸುಮಿತ್ರಾ ಒಯ್ಯಾರ ಬೀರಿದಳು. ಸುಮಿತ್ರೆಗೆ ಅಭಿಮಾನ, ಆತ್ಮವಿಶ್ವಾಸ—ತನ್ನ ಕೆಲಸವಾಯಿತು ಎಂದು! ಶ್ರೀನಿವಾಸನೆಂದ:

"ಜಪ ಆಯಿತೊ ಇಲ್ಲವೊ?"

"ಆಯಿತಲ್ಲ!"

"ಎಷ್ಟು ತಡ, ಏನು ಕತೆ?"

"ನೀವು ಬಂದು ಮಾತು ಹೂಡಿದರೆ ನಾನೇನು ಮಾಡಲಿ?"

"ಬಿಡು ಹಾಗಾದರೆ, ನಾನು ಕೋಣೆಯಲ್ಲಿಯೆ ಇರುತ್ತೇನೆ!"

ಎಂದು ನಿಧಾನವಾಗಿ ಆ ಕಡೆಗೆ ಹೊರಟ. ಹೊರಡುವಾಗ ಹಿಂದಿರುಗಿ ನೋಡಿ "ಹಾಲು ಆ ಪೆಟ್ಟಿಗೆಯಲ್ಲಿರಬೇಕು, ನೋಡು" ಎಂದ. "ಹಾಲು ಎಲ್ಲಿರುತ್ತದೆ ಎಂಬುದು ನನಗೆ ಗೊತ್ತಿಲ್ಲವೆ?" ಎಂದು ಸುಮಿತ್ರೆಯ ಮರುಮಾತು.

"ನಿನಗೆ ಹೇಗೆ ಗೊತ್ತು?"

"ಹೇಗೆಯೆ? ನೀವಿಲ್ಲಿ ಇಲ್ಲದಾಗ ನಾನು ಹೆಚ್ಚುಕಡಿಮೆ ಇಲ್ಲಿಯೆ ಇರುತ್ತೇನೆ!"

"ಯಾಕೆ?"

"ಸುಮ್ಮನೆ. ಭಾಗಮ್ಮನಿಗೆ ನೆರವಾಗಲೆಂದು!"

"ಹೌದೆ?"

ಸುಮಿತ್ರಾ ಗೋಣು ಹಾಕಿದಳು.

"ನಿನ್ನ ಕೆಲಸವೆಲ್ಲ ಅವ್ವನಿಗೆ ಸರಿಬೀಳುತ್ತದೆಯೆ?"

"ಸರಿಬೀಳುವ ಹಾಗೆಯೆ ಮಾಡುತ್ತೇನೆ!"

"ಏನು, ಆಕೆಯ ಮೇಲೆ ಬಹಳ ಭಕ್ತಿ ಇದ್ದ ಹಾಗಿದೆಯಲ್ಲ?"

"ಹುಂ...." ಎಂದು ದನಿ ಎಳೆದಳು.

"ಯಾಕೊ?"

"ಸರಿ, ನೀವು ಕೋಣೆಗಲ್ಲವೆ ಹೊರಟಿದ್ದು? ಮತ್ತೆ ಇಲ್ಲಿ...."

"ಹೊರಟೆ. ಆಯಿತೆ? ಚಹ ಅಲ್ಲಿಗೆ ಬರುತ್ತದೆಯೆ?"

"ಬ-ರು-ತ್ತ-ದೆ!"

ಶ್ರೀನಿವಾಸ ಆ ಒಯ್ಯಾರಕ್ಕೆ ಮನಸೋತು ಕೋಣೆಯ ಕಡೆಗೆ ನಡೆದ. ಮತ್ತೆ ಅದೆ ಪ್ರಶ್ನೆ. ಕೋಣೆಯಲ್ಲಿ ಏನು ಮಾಡುವುದು? ಮತ್ತೆ ಕಿಟಕಿಯ ಹತ್ತಿರ ನಿಂತ. ಮನಸ್ಸು ಕಾತರವಾಗಿತ್ತು. ಆದರೆ ಧೈರ್ಯ ವಿರಲಿಲ್ಲ. ಮನಸ್ಸಿನ ಯಾವುದೊ ಒಂದು ಮೂಲೆಯಲ್ಲಿ ವಿವೇಕ ಮುದುಡಿ ಕೊಂಡು ಬಿದ್ದು ನರಳುತ್ತಿತ್ತು. ಒಂದೆರಡು ನಿಮಿಷಗಳಲ್ಲಿಯೆ ಚಹ ತೆಗೆದುಕೊಂಡು ಸುಮಿತ್ರಾ ಕೋಣೆಯನ್ನು ಪ್ರವೇಶಿಸಿದ ಸದ್ದಿಗೆ ಶ್ರೀನಿವಾಸ ಕಿಟಕಿಯಿಂದ—ಕಾಡುತ್ತಿದ್ದ ಯೋಚನೆಗಳಿಂದ—ಹಿಂದಿರುಗಿದ. ಎರಡೂ ಕೈಗಳಲ್ಲಿ ಕಪ್ಪು ಬಸಿಗಳಿದ್ದುದರಿಂದ ಮೊದಲೆ ಭುಜದ ಮೇಲೆ ತೂಗಬಿಟ್ಟ ಸೆರಗು ಸ್ಥಳ ಬಿಟ್ಟು ಇನ್ನೂ ಸರಿದಿತ್ತು. ಅದನ್ನು ಸರಿಪಡಿಸಿಕೊಳ್ಳುವುದು ಸಾಧ್ಯವಿರಲಿಲ್ಲ—ಶ್ರೀನಿವಾಸ ಒಂದು ಕಪ್ಪನ್ನು ತೆಗೆದುಕೊಳ್ಳುವ ತನಕ. ಕಪ್ಪನ್ನು ಕೈಯಲ್ಲಿ ಕೊಡಬೇಕಾದರೆ ಹತ್ತಿರಕ್ಕೆ ಬರಬೇಕು. ಶ್ರೀನಿವಾಸನ ಲಕ್ಷ್ಯ ಆಕೆಯ ಮೈಯ ಮೇಲೆಯೆ ಇದ್ದಿತು. ಇಬ್ಬರಿಗೂ ಎಚ್ಚರವಿದ್ದ ಹಾಗಿರಲಿಲ್ಲ. ಸುಮಿತ್ರಾ ಬಸಿಯನ್ನು ಕೈಯಲ್ಲಿ ಹಿಡಿದಿದ್ದರೂ ಶ್ರೀನಿವಾಸ ಕಪ್ಪನ್ನು ಎತ್ತಿಕೊಂಡ. ಕೆಳಗಿನ ಬಸಿ ನೆಲಕ್ಕೆ ಬಿದ್ದಿತು! ಅದರ ಸಪ್ಪಳ ಕ್ಕೆಯೆ ಇಬ್ಬರಿಗೂ ಎಚ್ಚರ! ಒಡೆದ ಬಸಿ ಶ್ರೀನಿವಾಸನ ವಿವೇಕದ ಪ್ರತೀಕವಾದಂತಿತ್ತು. 'ಇದು ಅಲ್ಲ, ಇದು ಸಲ್ಲದು, ಇದು ಅನ್ಯಾಯ!' ಎಂದು ಸಾರುವಂತೆ, ಎಚ್ಚರಿಸುವಂತೆ ಅದರ ದನಿ ಕೋಣೆಯಲ್ಲಿ ಪ್ರತಿ ಧ್ವನಿಸಿತು. ಶ್ರೀನಿವಾಸನಿಗೆ ನಿಜವಾಗಿಯೂ ಎಚ್ಚರವಾದಂತಾಯಿತು. ಆ ಬಸಿ ಆ ಕ್ಷಣಕ್ಕೆ ಬಿದ್ದಿರದಿದ್ದರೆ ಆತನ ಆತುರ ನಿಜವಾಗಿಯೂ ವಿವೇಕದ ಎಲ್ಲೆಯನ್ನು ಮೀರುವ ಸ್ಥಿತಿಯಲ್ಲಿದ್ದಿತು. ಆದರೂ ವಿವೇಕದ ದನಿ ಕಾಡಿ

ನಲ್ಲಿಯು ಕೂಗೆ ಆಯಿತು ಇದಕ್ಕೆ ಕಾರಣವೆಂದರೆ ಶ್ರೀನಿವಾಸನ ಮನಸ್ಸಿನಲ್ಲಿಯ ತೊಳಲಾಟ ಸುಮಿತ್ರೆಯ ಪಾಲಿಗೆ ಇರಲಿಲ್ಲ. ಅದಕ್ಕೆಂದೆ ಬಸಿ ಬಿದ್ದು ಒಡೆದುಹೋದರೂ ಆಕೆ ಗಟ್ಟಿಯಾಗಿ ನಕ್ಕುಬಿಟ್ಟಳು. ಆ ನಗುವಿಗೆ—ಅದರ ಜತೆಯಲ್ಲಿ ಸುಮಿತ್ರೆ ತೋರಿದ ಭಾವಭಂಗಿಗೆ—ಅಂಗ ವೈಖರಿಗೆ—ಶ್ರೀನಿವಾಸ ಸಂಪೂರ್ಣ ಸೋತ. ಮದುವೆಯಾಗುವುದಾದರೆ ಈಕೆಯನ್ನೇಕೆ ಆಗಬಾರದು ? ಎಂದುಕೊಂಡ. ಮೊತ್ತಮೊದಲು ಬಾರಿ ತೊಳಲಾಟ ಮುಗಿದಂತೆನಿಸಿತು. ಯಾಕಾಗಬಾರದು ? ಆದರೆ ಸುಮಿತ್ರಾ ಒಪ್ಪಬಹುದೆ ? ಒಪ್ಪಬಹುದಾಗಿ ಕಾಣುತ್ತಿತ್ತು. ಕೇಳೋಣವೆ ? ಮನಸ್ಸಾಗಲಿಲ್ಲ ತೊಳಲಾಟ ಪೂರ್ತಿಯಾಗಿ ಬಗೆಹರಿದಿರಲಿಲ್ಲ. ಕಾವೇರಿಯ ಚಿತ್ರ ಮತ್ತೆ ಕಣ್ಣಮುಂದೆ ನಿಂತಿತು ಅದನ್ನು ಹಠಾತ್ತಾಗಿ ಕಿತ್ತೊಗೆಯಲು ಪ್ರಯತ್ನಿಸಿದ ಚಹ ಕುಡಿಯುತ್ತಿರುವಾಗಲೆಲ್ಲ ಇದೆ ಯೋಚನೆಯೆ ಯೋಚನೆ.

ಸುಮಿತ್ರಾ ಚಹ ಕುಡಿದಾದ ಮೇಲೆ ಕಪ್ಪುಗಳನ್ನೆತ್ತಿಕೊಳ್ಳುವ ಮೊದಲು ಸೀರೆ ಸೆರಗನ್ನು ಸರಿಮಾಡಿಕೊಂಡಳು. ಆಗ ಸೀರೆಯ ನಯವಾದ ಬಣ್ಣ–ಹೊಳಪು ಶ್ರೀನಿವಾಸನ ಲಕ್ಷ್ಯವನ್ನು ಸೆಳೆದಿರಬೇಕು. ಆತ ಕೇಳಿದ :

“ ಹೊಸದಾಗಿ ತೆಗೆದುಕೊಂಡೆಯಾ ಇದನ್ನು ? ”

“ ಹೊಸದೆ ಇದು ? ಆರೇಳು ತಿಂಗಳಾಯಿತು ! ”

“ ಆದರೂ, ಒಳ್ಳೆ ಹೊಸದು ಇದ್ದಹಾಗೆಯೆ ಇದೆ ”

“ ಹೊಸದೊಂದನ್ನು ತರಿಸಲಿಕ್ಕೆ ಭಾಗಮ್ಮನಿಗೆ ಎಷ್ಟೊ ಬಾರಿ ಹೇಳಿದ್ದೆ....”

“ ಅವ್ವನಿಗೆಯೆ ? ”

“ ಹುಂ—”

“ ಯಾಕೆ ? ”

“ ಬೆಳಗಾಂವಿಯಿಂದ ತರಲಿಕ್ಕೆ ನಿಮಗೆ ಹೇಳಿರಿ ಎಂದಿದ್ದೆ—”

“ ಬೆಳಗಾಂವಿಯಿಂದೆ ? ”

“ ಹುಂ.... ಅಲ್ಲೇನೊ ಬಹಳ ಒಳ್ಳೆ ಸೀರೆ ಸಿಕ್ಕುತ್ತವಂತಲ್ಲ ? ”

"ಹೌದೆ?"

"ನಿಮಗೆ ಗೊತ್ತಿಲ್ಲವೆ?"

"ನನಗೇನು ಗೊತ್ತಾಗಬೇಕು, ಸೀರೆ ವಿಷಯ?"

"ಅಂದರೆ? ಅಲ್ಲಿ ಹೋದನಂತರ ಕಾವೇರಕ್ಕನಿಗೆ ತಂದುಕೊಟ್ಟಿಲ್ಲವೆ?"

"ನಾನು ತರಲಿಲ್ಲ. ಒಂದು ಬೇಕಾದಾಗ ಆಕೆಯೆ ಯಾರೊ ನೆರೆ ಹೊರೆಯವರ ಜತೆಗೆ ಹೋಗಿ ತಂದಿದ್ದಳು, ಎಂದು ಕಾಣುತ್ತದೆ."

"ಸೀರೆ ಅನ್ನಬೇಕು ಶಾಹಪುರದ ಸೀರೆಗೇನೆ?"

"ನಿನಗೆ ಬಹಳ ಇಷ್ಟ ಅಂತ ಕಾಣುತ್ತದೆ."

"ಅಂತೆಯೆ ಹೇಳಿದ್ದೆ. ಆದರೆ—"

"ಹಾಗಾದರೆ ಇನ್ನೊಂದು ಸಲ ಬರುವಾಗ ತಂದೇಬಿಡುತ್ತೇನೆ."

"ನಿಜವಾಗಿಯೂ ತರುತ್ತೀರಾ?"

"ಅದಕ್ಕೇನಂತೆ?"

"ಹಾಗಿದ್ದರೆ, ತಾಯಿಗೆ ಹೇಳಿಬಿಡುತ್ತೇನೆ, ನಾಳೆ ದುಡ್ಡು ಕೊಡು ಎಂದು."

"ನಾನೀಗ ದುಡ್ಡು ಕೇಳಿದೆನೆ?"

ಸುಮಿತ್ರಾ ಆಗ ಏನು ಕೇಳಿದ್ದರೂ ಕೊಡಲು ಸಿದ್ಧನಾಗಿದ್ದನೆಂಬುದಕ್ಕೆ ಆ ಒಂದು ಮಾತು ಸಾಕ್ಷಿಯಾಗಿತ್ತು.

"ಹಾಗಾದರೆ ಇನ್ನೊಮ್ಮೆ ಬರುವಾಗ ಖಂಡಿತವಾಗಿ ತರಬೇಕು!"

"ಖಂಡಿತವಾಗಿ ತರುತ್ತೇನೆ."

"ಇನ್ನೊಮ್ಮೆ ಎಂದರೆ, ನೀವು ಬರುವುದು ಎಂದು?"

ಶ್ರೀನಿವಾಸನಿಗೆ ಯೋಚನೆಯಾಯಿತು. ಸಾಧ್ಯವಿದ್ದಷ್ಟು ಬೇಗನೆ ಯಾಕೆ ಬರಬಾರದು ಎಂದುಕೊಳ್ಳುತ್ತಿದ್ದ. ಕೊನೆಗೆ ಹೇಳಿದ:

"ಒಂದು ತಿಂಗಳಾಗಬಹುದು."

"ಒಂದು ತಿಂಗಳು!"

"ಯಾಕೆ, ಬಹಳ ದೂರವಾಯಿತೆ?"

"ದೂರವೇನಲ್ಲ. ಆದರೂ ಯಾರ ಕೈಲಾದರೂ ಕಳಿಸಲಾಗುವುದಿಲ್ಲವೆ?"

"ಆಗಬಹುದು. ನೋಡುವಾ...."

ಸುಮಿತ್ರೆಯ ಸಂತೋಷಕ್ಕೆ ಪಾರವೇ ಉಳಿದಿರಲಿಲ್ಲ. ಕಪ್ಪುಗಳನ್ನು ಒಳಗೆ ಇಟ್ಟು ಬಂದು ಶ್ರೀನಿವಾಸನನ್ನು ಜ್ಞಾಪಿಸಿದಳು.

"ಸಿನೀಮಾಕ್ಕೆ ಬರುತ್ತೇನೆಂದು ಹೇಳಿದ್ದೀರಿ. ಇನ್ನೂ—?"

"ಈಗಲೆ ಹೊರಟುಬಿಡಬೇಕೆ?"

"ಈಗಲೆ ಎಂದರೆ? ಐದೂವರೆಯಾಗುತ್ತ ಬಂದಿತು."

ಅದೇಕೊ ಮೊದಲು ಬಾರಿ ಶ್ರೀನಿವಾಸನಿಗೆ ಸಿನೀಮಾಕ್ಕೆ ಹೋಗುವುದು ಅಷ್ಟೊಂದು ಸರಿಯಾಗಿ ಕಾಣಲಿಲ್ಲ. ರಾತ್ರಿಗೊ ಒಂದು ಉತ್ಸಾಹಭರದಲ್ಲಿ ಆ ಮಾತನ್ನು ಹೇಳಿದ್ದನೇನೊ ನಿಜ ಅನವಶ್ಯಕವಾಗಿಯೇ ಕೇಳಿದ:

"ನಾನೂ ಬರಲೇಬೇಕೆ?"

"ನೋಡಿದಿರಾ? ನನಗೆ ಗೊತ್ತು, ನೀವು ಹೀಗೆ ಕೊನೆಗೆ...."

"ನಾನೀಗ ಬರುವುದಿಲ್ಲ ಎಂದೆನೆ?"

"ಬರಲೇಬೇಕೆ ಎಂದು ಕೇಳುತ್ತೀರಲ್ಲ ಮತ್ತೆ?"

"ಅಂದರೆ, ಬರಲೇಬೇಕು ಎಂದರೆ ಬರುತ್ತೇನೆ ಎಂದರ್ಥ!"

"ಅದನ್ನು ನಾನು ಯಾವಾಗಲೊ ಹೇಳಿಬಿಟ್ಟಿದ್ದೇನೆ."

"ಸರಿ ಹಾಗಾದರೆ—"

ಅಷ್ಟಕ್ಕಾಗಿ ಯಾಕೆ ಮಾತು ತಪ್ಪಿಸಿ ಆಕೆಗೆ ನಿರಾಶೆಗೊಳಿಸಬೇಕು ಎಂದುಕೊಂಡು ಮಾಡಿದ ಅನುಮಾನವನ್ನು ಬದಿಗಿರಿಸಿ ಸಿದ್ಧನಾದ.

ನೆರೆಮನೆಯವರಲ್ಲಿ ಬೀಗದ ಕೈಯನ್ನು ಇಟ್ಟು ಇಬ್ಬರೂ ಹೊರಟರು. ಬೀದಿಯ ಎಡ ಬಲಗಳಲ್ಲಿ ನಡುವಯಸ್ಸಿನ ಹೆಣ್ಣು ಮಕ್ಕಳು ವಾಡಿಕೆಯಂತೆ ತಮ್ಮ ತಮ್ಮ ಮನೆಗಳೆದುರಿನ ಕಟ್ಟೆಗಳ ಮೇಲೆ ಗುಂಪುಗುಂಪಾಗಿ ಕುಳಿತು ಹಾಯ್ದುಹೋಗುವವರ ವಿಷಯವಾಗಿ ಪಿಸುಗುಟ್ಟುವ ತಮ್ಮ ಜನ್ಮಸಿದ್ಧವಾದ ಹಕ್ಕನ್ನು ಪ್ರಸ್ತಾಪಿಸಿದರು. ಅದರಲ್ಲಿಯೂ ಇವರಿಬ್ಬರ—ಮನೆತನಗಳ—ಆಗುಹೋಗುಗಳ—ಹಿನ್ನೆಲೆಯನ್ನು ಕೂಲಂಕಷವಾಗಿ ತಿಳಿದ ಅವರು ಪಿಸುಗುಟ್ಟದೆ ಇರುತ್ತಾರೆಯೆ? ಸುಮಿತ್ರಾ ತನ್ನ ಗೆಲುವಿನಲ್ಲಿಯಾದರೆ ಶ್ರೀನಿವಾಸ ತನ್ನ ಯೋಚನೆಯಲ್ಲಿ ಇದಾವುದರ ಕಡೆಗೂ ಗಮನಕೊಡುವ ಸ್ಥಿತಿಯಲ್ಲಿರಲಿಲ್ಲ. ಇವರಿಬ್ಬರು ಗಮನ ಕೊಡದಿದ್ದರೂ ನೋಡಿದವರು—ನೋಡಿ ನೋಡಿದ್ದನ್ನು ನೋಡದ್ದನ್ನು ಬೆರಸಿ—ಬೆಳೆಯಿಸುವುದರ ಹೊರತು

ಬೇರೆ ಕೆಲಸವಿಲ್ಲದೆ ಕಟ್ಟೆಗಳ ಮೇಲೆ ಕುಳಿತವರು—ಗಮನಿಸದೆ ಇರುತ್ತಾರೆಯೆ ?

ಶ್ರೀನಿವಾಸ ರಾತ್ರಿ ಮನೆಗೆ ಬರಬೇಕಾದರೆ ಸುಮಾರು ಹತ್ತು ಗಂಟೆಯಾಗುತ್ತ ಬಂದಿತ್ತು. ಭಾಗಮ್ಮ ಕಾಯುತ್ತಿದ್ದಳು. ಆದರೆ ಎಲ್ಲ ವಿಷಯವನ್ನು ಬಲ್ಲವಳಾದ್ದರಿಂದ ಬೇಸರವೆನಿಸಿರಲಿಲ್ಲ. ಹಾಗೆ ನೋಡಿದರೆ, ತನ್ನ ಯೋಜನೆ ತಾನಾಗಿಯೆ ಸುಗಮವಾಗಿ ಸಫಲವಾಗಲಿವೆ ಎಂಬುದಕ್ಕಾಗಿ ಉತ್ಸಾಹಿತಳಾಗಿಯೆ ಇದ್ದಳು. ಆದರೂ ಯಾವುದನ್ನೂ ತೋರಗೊಡದೆ ಶ್ರೀನಿವಾಸ ಬಂದೊಡನೆ ಕೇಳಿದಳು :

" ಏನಪ್ಪಾ, ಎಷ್ಟು ರಾತ್ರಿಯಾಗಿಬಿಟ್ಟಿತಲ್ಲ ? ಎಲ್ಲಿಗೆ ಹೋಗಿದ್ದೆ ? "

" ಹೌದಮ್ಮ. ತಡವಾಗಿಬಿಟ್ಟಿತು. ಸಿನೀಮಾಕ್ಕೆ ಹೋಗಿದ್ದೆ...."

" ಮಧ್ಯಾಹ್ನ ನೀನೇನೂ ಹೇಳಲೆ ಇಲ್ಲ, ಹೋಗುತ್ತೇನೆಂದು ? "

" ಹೋಗುವುದಿರಲೆ ಇಲ್ಲ ನನಗೆ. ಆದರೆ ಆ ಸುಮಿತ್ರಾ ಬಂದಳು...."

" ಸುಮಿತ್ರಾ ಬಂದಿದ್ದಳೆ ? "

" ಹುಂ....ಸಾಯಂಕಾಲ. ಆಕೆ ಹೊರಟೇ ಇದ್ದಳು. ಏನೊ, ಬರುತ್ತೇನೆ ಎಂದುದಕ್ಕಾಗಿ ಆಕೆ ಕೊನೆಗೆ ಬಿಡಲೆ ಇಲ್ಲ."

ಅಂತು, ನಿರೀಕ್ಷಿಸಿದಂತೆ ಸುಮಿತ್ರಾ ಜಾಣಾಕ್ಷತೆಯಿಂದ ನಡೆಸಿಕೊಂಡು ಹೋಗಿದ್ದಳೆಂದು ಭಾಗಮ್ಮನಿಗೆ ಸಂತೋಷವೆ ಆಯಿತು. ಆದರೆ ಯಾವುದನ್ನೂ ತೋರಗೊಡದೆ, ಏನೂ ತಿಳಿಯದವಳಂತೆಯೆ ತನ್ನ ನಟನೆಯನ್ನು ಇಟ್ಟಿದ್ದಳು.

" ಸರಿಯಾಯಿತು ಬಿಡು...." ಎಂದು ಸುಮ್ಮನಾದಳು.

" ಹಾಂ....ಆ ಸುಮಿತ್ರಾ ನಿನಗೆ ಸೀರೆಯ ವಿಚಾರ ಏನಾದರೂ ಹೇಳಿದ್ದಳೆ ? "

" ಆಕೆ ಏನಾದರೂ ಹೇಳಿದಳೆ ? "

" ಹೌದು. ಆಕೆಗೇನೊ ಬೆಳಗಾಂವಿಯಿಂದ ಒಂದು ಸೀರೆ ಬೇಕಾಗಿತ್ತಂತೆ...."

" ಹುಂ....ಏನೊ ಅಂದಿದ್ದಳು. ಆದರೆ ನನಗೆ ಜ್ಞಾಪಕ ಉಳಿದಿರಲಿಲ್ಲ. ಈಗ ಮತ್ತೆ ತೆಗೆದುಕೊಂಡು ಬರಬೇಕೆಂದಳೆ ? "

"ಇನ್ನೊಂದು ಸಲ ಬರುವಾಗ ತರುತ್ತೇನೆಂದು ಹೇಳಿದೆ."

"ಅವಕ್ಕೆ ದುಡ್ಡು ?" ಎಂದು ಬೇಕೆಂತಲೆ ಕೇಳಿದಳು ಭಾಗಮ್ಮ.

"ತಂದುಕೊಡುತ್ತೀನೆ ಅಂದಳು. ಕೊಡಬಹುದಲ್ಲವೆ ?"

"ಕೊಡಬಹುದು. ಅದಕ್ಕೇನು ? ಮಗಳು ಎಂದರೆ ಏನು ಬೇಕಾದ್ದನ್ನು ಮಾಡಿಯಾಳು ಆಕೆ ..."

"ಬಹಳ ಸುಖವಾಗಿ ಬೆಳೆದಿದ್ದಾಳೆ. ಅಲ್ಲ, ಎಷ್ಟು ದೊಡ್ಡವಳಾಗಿಬಿಟ್ಟಿದ್ದಾಳೆ....ಮದುವೆ ಮಾಡುವುದಿಲ್ಲವೆ ?"

ಶ್ರೀನಿವಾಸ ಪೂರ್ತಿಯಾಗಿ 'ಹಾದಿಗೆ ಬಂದಿದ್ದಾನೆ' ಎಂದುಕೊಂಡಳು ಭಾಗಮ್ಮ. ಇದರ ತಾನು ಯೋಚಿಸಿದ್ದ ಈಕೆಯನ್ನ ಎಂದಾಗಲಿ, ಲಕ್ಷ್ಮೀಬಾಯಿ ಕೇಳಲು ಸಿದ್ಧಳಾಗಿದ್ದಾಳೆಂಬುದನ್ನಾಗಲಿ ಕೂಡಲೆ ಹೇಳಿದರೆ ಸರಿಯಾಗಲಿಕ್ಕಿಲ್ಲವೆಂದುಕೊಂಡು ತಾನಾಗಿಯೆ 'ಸರಿಯಾದ' ದಾರಿಯಲ್ಲಿ ನಡೆದದ್ದು ತಾನಾಗಿಯೆ [illegible] ತೋರುತ್ತಿರುವಾಗ ತಾನು ಮಾಡಬೇಕಾದುದು ಏನೂ ಇಲ್ಲವೆಂದು ಬೇಕೆಂತಲೆ ಅಂದಳು:

"ಲಕ್ಷ್ಮಿ ಏನೊ ಮದುವೆ ಮಾಡಬೇಕು ಅನ್ನುತ್ತಾಳೆ. ಆಚೆ ಈಚೆ ನಾಲ್ಕು ಕಡೆ ತೋರಿಸಿಯೂ ಆಗಿವೆ. ಆದರೆ ಈಕೆಯೊಂದು ಒಪ್ಪಬೇಕಲ್ಲ...."

"ಅಂದರೆ, ಈಕೆ ಮದವೆ ಬೇಡ ಅನ್ನುತ್ತಾಳೆಯೆ ?"

"ಮದುವೆ ಬೇಡ ಅನ್ನುವುದಿಲ್ಲ. ಆದರೆ ತನ್ನ ಮನಸ್ಸಿಗೆ ತಕ್ಕಂತೆ ವರ ಸಿಕ್ಕಬೇಕೆಂದೆನ್ನುತ್ತಾಳೆ...."

"ಮನಸ್ಸಿಗೆ ತಕ್ಕಂತೆ ಅಂದರೆ ?"

"ಕಲಿತವನಾಗಿರಬೇಕು, ಕೆಲಸವಿರಬೇಕು, 'ಸುಧಾರಿಸಿದವ'ನಿರಬೇಕು. ಏನೇನೊ ಹೇಳುತ್ತಾಳೆ....ಹುಚ್ಚು ಹುಡುಗಾಟ—"

ಶ್ರೀನಿವಾಸ ಸುಮ್ಮನಾದ. ಅರೆನಿಮಿಷ ತಡೆದು ಭಾಗಮ್ಮನೆ ಹೇಳಿದಳು :

"ಈಗ ಎಂಟು ಹತ್ತು ದಿನಗಳ ಹಿಂದೆ ಯಾರೊ ನೋಡಿಹೋದರು" ಎಂದು ಸುಳ್ಳು ಕತೆ ಪ್ರಾರಂಭಿಸಿದಳು. "ಎಲ್ಲವೂ ಸರಿಯಾಗಿತ್ತು. ತಾಯಿಯೂ ಒಪ್ಪಿದ್ದಳು. ಆ ವರನೂ ಒಪ್ಪಿದ್ದ. ಆದರೆ ಈಕೆ ಒಪ್ಪಲಿಲ್ಲ. ಕೇಳಿದರೆ ಏನು ಹೇಳಿದಳು ಗೊತ್ತೆ ? ಆತನ ಬಟ್ಟೆ ಬರೆ ಅಷ್ಟು ಚೆನ್ನಾಗಿರ

ಲಿಲ್ಲವಂತೆ! ಆಮೇಲೆ ಹೇಳಿದಳಂತೆ, ಗಂಡ ಅಂದರೆ ನಿನ್ನ ಹಾಗೆಯೆ ಇರಬೇಕಂತೆ! ಲಕ್ಷ್ಮಿ ಮರುದಿನ ಬಂದು ಹೇಳಿದಳು. ಇಂಥಾ ಹುಡುಗಿ ಆಕೆ...."

ಸುಮಿತ್ರೆಯ ಮನಸ್ಸನ್ನು ತಿಳಿಯಲು ಶ್ರೀನಿವಾಸನಿಗೆ ಅನುಕೂಲವಾಯಿತು. ಸಂಜೆ ನಡೆದುದರ ಮೇಲಿಂದ ಇಷ್ಟನ್ನೂ ಆತ ಗ್ರಹಿಸಿದ್ದ. ಆದರೆ ಈ ಮಾತಿನಿಂದ ಆತನಿಗೆ ಸಮಾಧಾನವಾಯಿತು. ಮಾಡಿಕೊಳ್ಳುವುದೆ ಆದರೆ ಈ ಕೆಲಸವನ್ನೆ ಮಾಡಿಕೊಳ್ಳಬಹುದು ಎಂದುಕೊಂಡ. ಭಾಗ್ಯಮ್ಮ ತಾಯಿ ವಿಷಯವನ್ನೆತ್ತಿದರೆ ಈ ಅಭಿಪ್ರಾಯವನ್ನು ಸೂಚಿಸೋಣ ಎಂದುಕೊಂಡು ಸುಮ್ಮನಾದ. ಆದರೆ ಭಾಗಮ್ಮ ಆ ವಿಷಯವನ್ನು ಎತ್ತಲೆ ಇಲ್ಲ. ಮೂರು ನಾಲ್ಕು ದಿನ ಊರಲ್ಲಿದ್ದರೂ ಈ ಸಲ ಭಾಗಮ್ಮ ಮದುವೆಯ ಮಾತನ್ನೆ ಎತ್ತದಿದ್ದುದು ಶ್ರೀನಿವಾಸನಿಗೆ ಆಶ್ಚರ್ಯವನ್ನಲ್ಲದೆ ನಿರಾಶೆಯನ್ನೂ ಉಂಟು ಮಾಡಿತು.

ಶ್ರೀನಿವಾಸ ತಿರುಗಿ ಬೆಳಗಾಂವಿಗೆ ಬಂದಾಗ ಸಂಜೆಯಾಗಿತ್ತು. ಮನೆಯಲ್ಲಿ ಕಾಲಿಟ್ಟಾಗಲೆ ಆತನಿಗೆ ಆಶ್ಚರ್ಯವಾಗಿತ್ತು. ಮನೆಯಲ್ಲಿ ತಾನು ಹೊರಡುವಾಗಿನ ಅವ್ಯವಸ್ಥೆಯ ಯಾವ ಸುಳಿವೂ ಕಾಣಲಿಲ್ಲ. ಎಲ್ಲವೂ ಮೊದಲಿನಂತೆ ಅಚ್ಚುಕಟ್ಟಾಗಿ ನಿಂತಿತ್ತು. ಇದಕ್ಕೂ ಮಿಗಿಲಾಗಿ, ಕಾವೇರಿಯ ಮುಖದಲ್ಲಿ ಪ್ರತೀಕ್ಷೆಯ ತಿಳಿನಗು ಮಿನುಗುತ್ತಿತ್ತು! ಬಿಸಿಲುಗಾಲದಲ್ಲಿ ಒಂದೊಂದು ದಿನ ಇಳಿಮಧ್ಯಾಹ್ನದ ಸುಮಾರಿಗೆ ಒಮ್ಮೆಲೆ ಮೋಡ ಕವಿದು, ಗುಡುಗಾಟದ ಅರ್ಭಟಿ ನಡೆದು, ಪ್ರಳಯಕಾಲವೆ ಬಂದಿತೆನ್ನಿಸುವಂತಾದರೂ ಮುಂದೆ ಒಂದರ್ಧ ಗಂಟೆಯಲ್ಲಿ ಎಲ್ಲ ಮೋಡಗಳೂ ಬಯಲಾಗಿ ಸಂಜೆ ಮತ್ತೆ ಪ್ರಶಾಂತ ರಮಣೀಯವಾಗುವುದಿಲ್ಲವೆ? ಕಾವೇರಿಯ ತಿಳಿನಗುವಿನಲ್ಲಿ ಅಂಥ ಪ್ರಶಾಂತ ರಮಣೀಯತೆ ಇದ್ದಿತು. ಮುಂಜಾವಿನ ಪ್ರಸನ್ನತೆಯಲ್ಲ; ಸಂಜೆಯ ಶಾಂತತೆ.

ಈ ಸ್ಥಿತ್ಯಂತರಕ್ಕೆ ಯಾವ ವಿಶೇಷ ಕಾರಣವೂ ಇರಲಿಲ್ಲ. ಇದುವರೆಗೆ ಶ್ರೀನಿವಾಸ ಎಷ್ಟು ಸಲ ಬಾಗಿಲುಕೋಟೆಗೆ ಹೋಗಿದ್ದರೂ ಹೋದಷ್ಟು ಒಂದು ದಿನದ ಮಟ್ಟಿಗೆ, ಹೆಚ್ಚಾದರೆ ಒಂದೂವರೆ ದಿನ. ಈ ಸಲ ನಾಲ್ಕಾರು ದಿನ ಹೋಗಿದ್ದ. ಶ್ರೀನಿವಾಸ ಹೊರಟುಹೋದ ಮಾರುದಿನ ಸಾಯಂಕಾಲದವರೆಗೆ ಕಾವೇರಿ ಎಂದಿನಂತೆಯೆ ಇದ್ದಳು. ಆದರೆ ಬರುಬರುತ್ತ ಶ್ರೀನಿವಾಸನಿಲ್ಲದಿದ್ದುದು ನಿಧಾನವಾಗಿ ಭಾಸವಾಗತೊಡಗಿತು. ತಾನು ಎಷ್ಟು ರೀತಿಯಿಂದ, ಹೇಗೆ ನಡೆದುಕೊಂಡರೂ ಆತ ಮನೆಯಲ್ಲಿದ್ದರೆ ಒಂದು ಸಮಾಧಾನವೆಂಬುದು ಆತ ಇಲ್ಲದಾಗ ಮೊದಲು ಬಾರಿ ಅನುಭವಕ್ಕೆ ಬಂದಿತು. ಶ್ರೀನಿವಾಸ ಒಬ್ಬನೆ ಬೆಳಗಾಂವಿಯಲ್ಲಿ—ಅಲ್ಲಿ ಇಲ್ಲಿ ಇರುತ್ತಿದ್ದಾಗ, ತಾನು ಬಾಗಿಲುಕೋಟೆಯಲ್ಲಿ ಆತನ ಸಾನ್ನಿಧ್ಯಕ್ಕಾಗಿ ಕಾತರಳಾಗಿ ಕಾಯುತ್ತಿದ್ದ ದಿನಗಳ ನೆನಹು ಮರಳಿ ಬಂದು, ಆತ ಇಲ್ಲದಿದ್ದರೆ ತನ್ನ ಬದುಕು ಎಷ್ಟು ಬರಡು, ಎಷ್ಟು ಬೇಸರ ಎಂಬ ಅರಿವು ಸುಳಿಯತೊಡಗಿತು. ದಿನಬೆಳಗುವ ಮುನ್ನವೆ ಅಲ್ಲವೆ ಕಗ್ಗತ್ತಲೆ? ಕಗ್ಗತ್ತಲೆಯ ಮಡಿಲಲ್ಲಿಯೆ ಬೆಳಕು ಮೂಡುವಂತೆ ಈ ಅರಿವು ಎರಡು ದಿನಗಳಲ್ಲಿ ಕಾವೇರಿಯನ್ನು ಶ್ರೀನಿವಾಸನ ಬರವಿಗಾಗಿ

ಕಾಯುವಂತೆ ಮಾಡಿತು. ಆ ಪ್ರತೀಕ್ಷೆಯೊಂದಿಗೆ ತಾನು ಇದುವರೆಗೆ ಎಷ್ಟು ಸರಿಯಾಗಿ ಶ್ರೀನಿವಾಸನಿಗೆ ವ್ಯರ್ಥ ಪರಿತಾಪವನ್ನುಂಟುಮಾಡಿದೆನಲ್ಲಾ ಎಂದು ಕಳವಳಪಡುವಂತಾಯಿತು. ಯೋಚಿಸಿದ ಹಾಗೆ, ತಾನು ಮಾಡಿದ್ದು ತಪ್ಪು, ಶ್ರೀನಿವಾಸ ಮಾಡಿದ್ದಾಗಲೂ ಏನು? ಎಷ್ಟು ಸರಿಯೆಂಬ ಆತ ಸಹನೆಯನ್ನು ತೋರಿರಲಿಲ್ಲ? ಎಂದು ಸಮಂತಾಗಿ ಕೇಳಿಕೊಳ್ಳುವಂತಾದಳು. ಮಕ್ಕಳ ಯೋಚನೆ ಬಂದಾಗ ಮನಸ್ಸು ದುಃಖಿಸುತ್ತಿತ್ತು. ಆದರೆ ಅದಕ್ಕೆ ಶ್ರೀನಿವಾಸನೇನು ಮಾಡಬೇಕು? ತನ್ನ ದೈವ! ಅವನಿಗಾದರೂ ಮಕ್ಕಳು ಬೇಡವಾಗಿವೆಯೇ? ಆತನೇನು ಕಡಿಮೆ ಯತ್ನ ಮಾಡಿದನೆ? ಆದಾಗ ಆಗಲಿ. ಇಲ್ಲದಿದ್ದರೆ ಬೆರೆಯುವರ ಮಕ್ಕಳಿಲ್ಲವೆ? ಎಲ್ಲರ ಮಕ್ಕಳೂ ನನ್ನ ಮಕ್ಕಳು ಎಂದು ತಿಳಿದರಾಯಿತು, ಎಂದು ಒಂದು ಅತ್ಯಂತ ನಯವಾದ, ಸುಸಂಸ್ಕೃತವಾದ ಭಾವವನ್ನು ಮನಸ್ಸು ತಾನಾಗಿಯೇ ಹುಟ್ಟಿಸುವಂತಾಯಿತು. ಒಂದು ವಸ್ತು ಇಲ್ಲದಿದ್ದಾಗಲಲ್ಲವೆ ನಮಗೆ ಅದರ ಬೆಲೆ ತಿಳಿಯುವುದು? ಶ್ರೀನಿವಾಸನಲ್ಲದೆ ತನಗೆ ಬೇರೆ ಯಾರಿದ್ದಾರೆ? ಆತನನ್ನೆ ತಾನು ನೋಯಿಸುವುದಾದರೆ ಹೆಂಡತಿಯಾದ ತಾನು ಬೇರೆ ಯಾವ ಪಾಪವನ್ನು ಮಾಡಬೇಕೆ? ಹಿಂದೆ ಹತ್ತಾರು ಬಾರಿ ಯಾರೊ ಹೇಳಿದ ಮಾತು ಆಗೀಗ ಜ್ಞಾಪಕಕ್ಕೆ ಬಂದಿತು ಗಂಡನ ಸೇವೆಯಿಂದಲೆ ಹೆಂಡತಿಗೆ ಸ್ವರ್ಗದ ಬಾಗಿಲು ತೆರೆಯುವುದು, ಎಂದು ಬಾಗಿಲುಕೋಟೆಯಲ್ಲಿದ್ದಾಗ ಅಂಥ ಸೇವೆಗಾಗಿ ಆತುರಪಡುತ್ತಿದ್ದವಳು ಇಲ್ಲಿಗೆ ಬಂದನಂತರ ತಾನು ನಡಸಿದ್ದೇನು? ಶ್ರೀನಿವಾಸ ಹೋದದ್ದು ಐದು ದಿನಗಳೆ ಆದರೂ ಅಷ್ಟರಲ್ಲಿ ಈ ಪರಿವರ್ತನೆ ನಿಧಾನವಾಗಿ ನಡೆದು ಅದರ ಪರಿಣಾಮವನ್ನು ಶ್ರೀನಿವಾಸ ಮರಳಿ ಬಂದೊಡನೆಯೆ ಕಾಣುವಂತೆ ಮಾಡಿತ್ತು. ಇಷ್ಟರಲ್ಲಿ ಆ ಪರಿವರ್ತನೆ ಪೂರ್ತಿಯಾಗಿತ್ತೆನ್ನುವುದಕ್ಕಿಂತ ಪೂರ್ತಿಯಾಗುವ ದಾರಿಯಲ್ಲಿತ್ತೆಂದು ಹೇಳಬಹುದು.

ಶ್ರೀನಿವಾಸ ಬಂದೊಡನೆ ಚಹ ಫಲಹಾರವಾಯಿತು. ಎಲ್ಲವನ್ನೂ ಚಾಚೂ ತಪ್ಪದೆ ಕಾವೇರಿ ನಡಸಿದ್ದಳು. ಬಂದಾಗಿನಿಂದ ರಾತ್ರಿ ಊಟವಾಗುವ ವರೆಗೂ ಎಂದಿಲ್ಲದಂತೆ ಮಾತು ನಡೆದೇ ಇತ್ತು. ಶ್ರೀನಿವಾಸನಿಗೆ ಹಿಡಿಸಲಾಗದ ಆಶ್ಚರ್ಯ ನಾಲ್ಕಾರು ದಿನಗಳ ಅವಧಿಯಲ್ಲಿದೆಷ್ಟು ವ್ಯತ್ಯಾಸ? ಯಾವ ಮಾಯೆ ಈಕೆಯನ್ನು ಈ ರೀತಿ ಬದಲಾಯಿಸಿತು? ಕೇಳಿಬಿಡೋ

ಣವೆ? ಎಂದೂ ಅಂದುಕೊಂಡ. ಆದರೆ ಸಹಜವಾಗಿಯೆ ಇಷ್ಟು ಸರಸವಾಗಿದ್ದವನ್ನು ಬಾಯಿಂದ ಏಕೆ ಎಂದು ಕೇಳಿ ವಿರಸಗೊಳಿಸುವುದರಲ್ಲಿ ಏನು ಪ್ರಯೋಜನ ಎಂದು ಸುಮ್ಮನಾದ. ವಾಡಿಕೆಗಿಂತ ಊಟ ಮೊದಲೆ ಆಯಿತು ಇದನ್ನೆಲ್ಲ ನೋಡಿ, ಬಾಗಿಲುಕೋಟೆಯಲ್ಲಿಯ ತನ್ನ ಎರಡು ಮೂರು ದಿನಗಳ ಅನುಭವವನ್ನು ನೆನೆದಾಗ ಶ್ರೀನಿವಾಸನಿಗೆ ತನ್ನಷ್ಟಕ್ಕೆ ನಾಚಿಕೆಗೊಳ್ಳುವಂತಾಯಿತು. ಅಲ್ಲಿಯಂತೆ ಮತ್ತೆ ಅದೇ ಚಿತ್ರ ಕಣ್ಣಮುಂದೆ ನಿಂತಿತು ಕಾವೇರಿ—ಸುವಿತ್ರ! ಎಂಥ ವ್ಯತ್ಯಾಸ? ಸುವಿತ್ರಾ ಕಾವೇರಿಗಿಂತ ಚಿಕ್ಕವಳಾಗಿದ್ದಳು. ಯೌವನದ ಹೊಸತನದ ಹುರುಪುಗಳು ಆಕೆಯಲ್ಲಿ. ಆದರೆ ಅನೇಕ ಕಾವೇರಿ ತೋರಿದ—ಆಕೆಯ ನಡೆ-ನುಡಿ-ನಯಗಳಲ್ಲಿ ಕಾಣುತ್ತಿದ್ದ ಆತ್ಮೀಯತೆ, ಪರಾರ್ಥ ತ್ಯಾಗ ಸವಿತ್ರಿಯಲ್ಲಿ ಇದ್ದ ಹಾಗೆ ಕಾಣಲಿಲ್ಲ. ಈ ಆತ್ಮೀಯತೆ ಶ್ರೀನಿವಾಸನ ಮನಸ್ಸನ್ನು ಸೆರೆಹಿಡಿದರೂ ಸುವಿತ್ರೆಯ ಉತ್ಸಾಹವಾದ, ಮನಸ್ಸನ್ನು ಹಠಾತ್ತಾಗಿ ಸೆಳೆಯುವ ಯೌವನದ ದೇಹಸೌಂದರ್ಯ ಮನಸ್ಸಿನಿಂದ ದೂರವಾಗಲಿಲ್ಲ. ಆಸಕ್ತಿಯ ಆವೇಗ ಕಡಿಮೆಯಾದರೂ ವ್ಯಾಮೋಹದ ಬಲ ಕಡಿಮೆಯಾಗಲಿಲ್ಲ. ಕಾವೇರಿಯ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿರುವಾಗಲೆಲ್ಲ ಶ್ರೀನಿವಾಸ ಇಂಥ ಭಾವನೆಗಳ, ಯೋಚನೆಗಳ ಉಯ್ಯಾಲೆಯಲ್ಲಿ ತೂಗಾಡುತ್ತಿದ್ದ.

ರಾತ್ರಿ ಊಟ ಉಪಚಾರಗಳೆಲ್ಲ ಮುಗಿದಮೇಲೆ ಹತ್ತಿರ ಕುಳಿತು ಕೇಳಿದಳು :

“ಏನೇನು ಮಾಡಿದಿರಿ, ಬಾಗಿಲುಕೋಟೆಯಲ್ಲಿ? ಒಳ್ಳೆ ನಾಲ್ಕಾರು ದಿನ ಹೋಗಿದ್ದಿರಿ ವಿವರವಾಗಿ ಹೇಳಲೆ ಇಲ್ಲವಲ್ಲ?”

ಪ್ರಶ್ನೆ ಏನೊ ಸ್ವಾಭಾವಿಕವೆ ಆಗಿತ್ತು. ಆದರೆ ಶ್ರೀನಿವಾಸನಿಗೆ ಚುಚ್ಚಿದಂತಾಯಿತು. ಅರೆಕ್ಷಣ ಹಿಂತೆಗೆದ. ಏಕೆ ಎಂಬುದನ್ನು ಹೇಳಲೇ ಬೇಕಲ್ಲ

“ಏನು ಮಾಡುವುದು. ಹೊಲಮನೆ ಕೆಲಸ ಎಂದು ಹೇಳಿದೆನಲ್ಲವೆ?” ಎಂದು ಶ್ರೀನಿವಾಸ ಮಾತು ತೇಲಿಸಿದ.

“ಎಲ್ಲಿಯೂ ಹೊರಗೆ ಹೋಗಲೆ ಇಲ್ಲವೆ?”

ಶ್ರೀನಿವಾಸನಿಗೆ ಮತ್ತೆ ಅದೆ ಕೊಳಲಾಟ.

"ಎಲ್ಲಿ ಹೋಗುವುದು? ಒಂದು ದಿನ ಹಳ್ಳಿಗೆ ಹೋಗಿದ್ದೆ."

"ಎಲ್ಲ ಕೆಲಸ ಸರಿಯಾಯಿತೆ?"

"ಹುಂ...."

"ಬರಬೇಕಾದ ದುಡ್ಡು?"

"ಹುಂ....ಆದರೂ ಇನ್ನೂ ಪೂರ್ತಿ ವಸೂಲಾಗಲಿಲ್ಲ...."

"ಅದು ಹೋಗಲಿ. ನಿಮ್ಮ ತಾಯಿ ಹೇಗಿದ್ದಾರೆ?"

"ಹೇಗೇನು? ಇದ್ದಾಳೆ...."

"ಅವರಿಗೆ ಒಬ್ಬರೆ ಆಗಿ ತೀರಾ ತೊಂದರೆಯಾಗಿರಬೇಕು."

"ತೊಂದರೆ, ಆಗಿಯೇ ಆಗುತ್ತದೆ. ಅದಕ್ಕೆಯೆ—"

"ಇಲ್ಲಿಗೆ ಬರಹೇಳಿದಿರಾ?"

"ಆಗಲೆ ಹೇಳಿದ್ದೆ...."

"ಈ ಸಲ ಮತ್ತೆ ಹೇಳಬೇಕಿತ್ತು...."

"ಆಕೆ ಏನು ಬರುತ್ತಾಳೆ? ಬರುವ ಹಾಗಿದ್ದರೆ ಆಗಲೆ ಬರುತ್ತಿದ್ದಳು."

"ಇನ್ನೊಮ್ಮೆ ಹೋದಾಗ ಮತ್ತೆ ಹೇಳಿರಿ ಎಷ್ಟು ದಿನ ಹೀಗೆ ಅವರು ಒಬ್ಬರೆ ಒದ್ದಾಡಬೇಕು? ದಿನದಿನಕ್ಕೆ ಕೈಯಿಂದ ಕೆಲಸವಾದರೂ ಆಗಬೇಕಲ್ಲ...."

"ಅದಕ್ಕೇನೂ ಆಕೆಗೆ ತೊಂದರೆ ಇಲ್ಲ. ಅವರು ಇವರು ಯಾರಾದರೂ ಎಷ್ಟೊ ಕೆಲಸ ಮಾಡಿಕೊಡುತ್ತಾರೆ."

ತನಗೆ ತಿಳಿಯದಲೆ ಮಾತು ಸುಮಿತ್ರೆಯ ಹತ್ತಿರಕ್ಕೆ ಬಂದಿತೆಂದು ಶ್ರೀನಿವಾಸ ಎಚ್ಚರಗೊಂಡ. ಕಾವೇರಿ ಎಂದಳು:

"ಅವರು ಇವರು ಯಾರು ಬರುತ್ತಾರೆ? ಯಾರು ಬಂದರೂ ಮಧ್ಯಾಹ್ನ ಹರಟೆಗೆಂದು ಬರುತ್ತಾರೆ...."

"ಹಾಗೇನಿಲ್ಲ. ಅವ್ವನೆ ಹೇಳಿದಳು. ಆ ಸುಮಿತ್ರಾ ಬಂದು ಎಷ್ಟೊ ಕೆಲಸಗಳಲ್ಲಿ ನೆರವಾಗುತ್ತಾಳೆ, ಎಂದು."

"ಸುಮಿತ್ರಾ ಕೆಲಸಕ್ಕೆ ನೆರವಾಗುತ್ತಾಳೆಯೆ?"

"ಯಾಕೆ?"

"ಅದೇನು ಕೆಲಸ ಮಾಡೀತು?"

"ಅದೇಕೆ? ಮಾಡುತ್ತಾಳಲ್ಲ, ಮಾಡದೆ ಏನು?"

"ನೀವು ನೋಡಿದ್ದೀರಾ? ನೀವು ಹೋದಾಗ ಬಂದಿದ್ದಳೆ?"

ಶ್ರೀನಿವಾಸನಿಗೆ ದನಿ ಗಂಟಲಲ್ಲಿ ಸಿಕ್ಕಿದಂತಾಯಿತು.

"ಬರುವುದೇನು? ಹೆಚ್ಚು ಕಡಿಮೆ ಅಲ್ಲಿಯೆ ಇರುತ್ತಾಳೆ."

"ಅಂತೂ ಆಕೆಯಲ್ಲಿ ಬಹಳ ಬದಲಾವಣೆಯಾಗಿದೆ ಅಂದಹಾಗಾಯಿತು."

"ಬದಲಾವಣೆಯೇನು?"

"ಇಷ್ಟೊಂದು ಹೆಚ್ಚಿಗೆ ಒಂದು ಕೆಲಸ ಮಾಡುತ್ತಾಳೆ ಅಂದರೆ?"

"ಅದೇಕೊ ಆಕೆಯ ವಿಷಯದಲ್ಲಿ ನಿನ್ನ ಅಭಿಪ್ರಾಯ ಸರಿಯಾಗಿಲ್ಲ ಎಂದು ಕಾಣುತ್ತದೆ...."

"ಗಯ್ಯಾಳಿ!"

ಆಕೆಯ ವಿಷಯದಲ್ಲಿ ತನ್ನ ಪಕ್ಷಪಾತ ವ್ಯಕ್ತವಾಗಬಹುದೆಂದು ಶ್ರೀನಿವಾಸ ಸುಮ್ಮನಾಗಿಯೇ ಇದ್ದ. ಕಾವೇರಿ ತಡೆಯದಾಗದೆ ಮುಂದುವರಿದಳು:

"ತಾನು ಚೆಲುವೆ ಎಂದು ಅಹಂಕಾರ. ತನಗಿಂತ ಚೆಲುವೆ ಯಾರೂ ಇಲ್ಲವೆ ಇಲ್ಲ, ಎಂದು ತಿಳಿದಿದ್ದಾಳೆ"

"ಆಕೆ ಚೆಲುವೆ ಅಲ್ಲ ಅನ್ನುತ್ತೀಯಾ, ಹಾಗಾದರೆ?" ಎಂದು ಶ್ರೀನಿವಾಸ ಹುಸಿನಗೆ ಬೀರಿದ.

"ಅದೇನು ಚೆಲುವು, ನೋಡಲಾರೆ. ಹರೆಯ ಬಂದರೆ ಹೇಸರಕತ್ತೆ ಕೂಡ ಚೆಲುವಾಗಿ ಕಾಣುತ್ತದೆ ಅದೂ ಹೋಗಲಿ, ಸುಳ್ಳು ಎಷ್ಟು ಅದು ಮಾತನಾಡುವುದು? ಅದೂ ನಿಷ್ಕಾರಣವಾಗಿ—"

"ನಿನಗೇನೆ ಆಕೆ ಮಾಡಿದ್ದು?"

"ಏನು ಮಾಡಿದ್ದೆ? ಹಿಂದಕ್ಕೆ ಆ ಬಳೆಗಳ ಕತೆ ಹೇಳಲಿಲ್ಲವೆ? ಅಷ್ಟು ಸಾಕಲ್ಲ! ನಾನು ಕಿಟಕಿಯೊಳಗಿಂದ ಅವನ್ನು ಕೊಟ್ಟದ್ದು ನೋಡಿದೆ ಎಂದಳು. ಅದೇ ಬಳೆಗಳನ್ನು ಮುಖದ ಮುಂದೆ ತಂದು ಹಿಡಿದಾಗ ನೋಡಬೇಕಾಗಿತ್ತು, ಆ ಮುಖದ ಚೆಲುವನ್ನು?"

"ಹೋಗಲಿ ಬಿಡು. ನಮಗೇನು ಮಾಡುವುದು?"

ಎಂದು ಶ್ರೀನಿವಾಸ ಬಾಯಿಂದ ಹೇಳಿದರೂ ಹೃದಯದಲ್ಲಿ ಅಸಮಾ

ಧಾನ ಕುಣಿದಾಡುತ್ತಿತ್ತು. ಸುಮಿತ್ರೆಯ ಬಗೆಯಲ್ಲಿ ಕಾವೇರಿಗೆ ನಿಜವಾಗಿ ಸಿಟ್ಟು ಬಂದಿತ್ತು. ಅವಳೆಂದಳು :

"ಮುಖಕ್ಕೆ ಬಣ್ಣ, ಮೈಗೆ ಬಟ್ಟೆಯನ್ನು ಯಾರಾದರೂ ತಂದು ಕೊಟ್ಟರೆ ಸಾಕು. ಅದಕ್ಕಾಗಿ ಆಕೆ ಏನನ್ನೂ ಮಾಡಿಯಾಳು...."

"ಹುಂ ನೀನೆನ್ನುವುದು ಒಂದು ರೀತಿಯಿಂದ ಸರಿಯೆ. ಆಕೆಗೇನೊ ಒಂದು ಸೀರೆ ಇಲ್ಲಿಂದ ಬೇಕಂತೆ."

"ನಿಮ್ಮ ಹಂಗೆ ಹೇಳಿದಳೆ?"

ಸೀರೆಯ ವಿಷಯವನ್ನು ಎತ್ತಬಾರದಾಗಿತ್ತು ಎನಿಸಿತು ಶ್ರೀನಿವಾಸನಿಗೆ. ಆದರೆ ಕಾವೇರಿಯ ಮಾತಿನ ಓಘದಲ್ಲಿ ಸಿಕ್ಕು ತಾನೂ ಮೈಮರೆತು ಹೇಳಿದ್ದ. ಅದಕ್ಕೆಂಬ ಸಾವರಿಸಿಕೊಂಡು ಹೇಳಿದ:

"ನನ್ನ ಮುಂದೇನು ಹೇಳುತ್ತಾಳೆ? ಈಗ ಎರಡು ತಿಂಗಳಿಂದ ಅಪ್ಪನಿಗೆ ಹೇಳಿ ಹೇಳಿ ಕಾಡುತ್ತಿದ್ದಾಳಂತೆ. ಅದಕ್ಕೆ ಈ ಸಲ ತೆಗೆದುಕೊಂಡು ಬಾ ಎಂದಳು, ಅಪ್ಪ—"

"ಹುಂ....ಹಾಗಾದರೆ ಸುಮಿತ್ರೆಗಾಗಿ ಸೀರೆ ತಂದೇ ತರುವವರು ನೀವು ಅನ್ನಬಾರದೆ?"

"ಇಲ್ಲಿಯ ಸೀರೆಯೇನೊ ಆಕೆಗೆ ಬಹಳ ಮೆಚ್ಚಿಕೆಯಂತೆ...."

"ದುಡ್ಡು ಕೊಟ್ಟಿದ್ದಾಳೆಯೆ?"

"ಕೊಡದೆ? ದುಡ್ಡು ಕೊಡದೆ ಯಾರು ತಂದುಕೊಟ್ಟಾರು?" ಎಂದು ಸುಳ್ಳು ಹೇಳಿದ.

"ನನಗೆ ಕೇಳಿದರೆ ನೀವು ಸೀರೆ ಕಳಿಸಬೇಡಿರಿ...."

"ಯಾಕೆ, ಕಾವಿ?"

"ಅದೇನು? ಅದರ ಯೋಗ್ಯತೆಯೇನು? ಅದಕ್ಕಾಗಿ—"

"ಬಹಳ ತಿರಸ್ಕಾರ ಆಯಿತು ಬಿಡು, ನಿನ್ನದೂ—"

"ನಿಮಗೇನೊ ಆಕೆಯನ್ನು ಕಂಡರೆ ವಿಶ್ವಾಸ ಅಂತ ಕಾಣುತ್ತದೆ. ಈ ಸಲ ಏನೊ ಆಕೆ ಬಹಳ ಪ್ರಭಾವ ಬೀರಿದ ಹಾಗೆ ಕಾಣುತ್ತದೆ...." ಎಂದು ನಕ್ಕಳು. ಕಾವೇರಿಯ ಮಟ್ಟಿಗೆ ಮಾತು ನಗೆ ಮಾತಾಗಿ, ಸಹಜವಾಗಿ ಬಂದಿದ್ದರೂ ಶ್ರೀನಿವಾಸನಿಗೆ ಅದೇ ಮಾತು ಮರ್ಮಭೇದಿಯಾಯಿತು.

ಆದರೆ ಏನೂ ಮಾಡುವಂತಿಲ್ಲ. ಅಲ್ಲದೆ, ಆ ಮಾತನ್ನು ಹೇಳಿಸಿಕೊಂಡು ಸುಮ್ಮನಾಗಿಯೂ ಇರುವಂತಿರಲಿಲ್ಲ. ಅಂತೆಯೇ, ಸೋಗಿನ ಸ್ವಾಭಿಮಾನದಿಂದ,

"ನನ್ನ ಮೇಲೇನು ತನ್ನ ಪ್ರಭಾವ ಬೀರುತ್ತಾಳೆ?...." ಎಂದೇನೊ ಅಂದ. ಆದರೆ ಒಳಗೆ ಮನಸ್ಸು ಅಳುಕಿತು 'ಬೀರಿದ್ದಿಲ್ಲವೆ?' ಎಂದು ಕೇಳಿಕೊಂಡ. ಆ ಪ್ರಭಾವದಿಂದ ಇನ್ನೂ ತಾನು ಪಾರಾಗಿದ್ದಿಲ್ಲ, ಪಾರಾಗುವಂತೆಯೂ ಕಾಣುತ್ತಿರಲಿಲ್ಲ. ಕಾವೇರಿ ಕೇಳಿದಳು:

"ಎಂಥ ಸೀರೆ ಬೇಕಂತೆ?"

"ಇಲ್ಲಿಯದೆ, ಶಾಹಪೂರದ್ದು."

"ದುಡ್ಡು ಎಷ್ಟು ಕೊಟ್ಟಿದ್ದಾಳೆ?"

"ಐವತ್ತು...." ಎಂದು ಶ್ರೀನಿವಾಸ ಮತ್ತೆ ಸುಳ್ಳು ಹೇಳಿದ.

"ಹುಂ....?"

'ಇದು ಭಾರಿ ಶೋಕಿಯಾಯಿತು' ಎನ್ನುವ ಅರ್ಥವಿದ್ದಿತು ಕಾವೇರಿಯ ಆ ಒಂದು ಹುಂಕಾರದಲ್ಲಿ.

"ಹುಂ ... ಯಾವಾಗ ತರುವವರು ಸೀರೆ?"

"ಯಾವಾಗೇನು? ನಾಳೆ ನಾಡಿದ್ದರಲ್ಲಿ ಕಳಿಸಿಬಿಡಬೇಕು. ನೀನು ಬಂದರೆ ನಾಳೆಯೇ ತಂದುಬಿಡೋಣ...."

"ಆಕೆಯ ಸೀರೆ ನೋಡಲಿಕ್ಕೆ ನಾನು ಬರಬೇಕೆ?"

"ಹೌದು ಮತ್ತೆ? ತೋಟಲ್ಲಿ ಏನು ಬಲ್ಲ ತಿಮ್ಮಪ್ಪ!"

"ಅಂಥ ತಿಮ್ಮಪ್ಪ ತಂದುಕೊಟ್ಟದ್ದೆ ಆಕೆಗೆ ಸರಿ! ನೀವೆ ತಂದು ಕೊಡುವವರು, ಆಕೆ ಉಟ್ಟುಕೊಂಡು ಮೆರೆಯುವವಳು! ನಡುವೆ ಸುಮ್ಮನೆ ನಾನೇತಕ್ಕೆ?" ಎಂದು ಕಾವೇರಿ ನಕ್ಕಳು. ಮಾತು ಮತ್ತೆ ಶ್ರೀನಿವಾಸನ ಮನಸ್ಸಿಗೆ ತಾಕಿತು. ಆದರೆ ಯಾವುದನ್ನೂ ಆಡುವಂತಿರಲಿಲ್ಲ. ಅದನ್ನು ಮರೆಯಲೆಂದು ಹೇಳಿದ:

"ಆಕೆಗಾಗಿ ಬರಬೇಡ ನಿನಗಾಗಿಯಾದರೂ ಬರುವಿಯೊ ಇಲ್ಲವೊ?"

"ಅಂದರೆ, ನನಗೂ ಒಂದು ಕೊಳ್ಳುತ್ತೀರಾ?"

"ಬರುತ್ತೇನೆಂದರೆ ಕೊಳ್ಳುತ್ತೇನೆ!"

"ಕೊಳ್ಳುತ್ತೇನೆಂದರೆ ಬರುತ್ತೇನೆ!"

"ಎಷ್ಟರದಾಗಬೇಕು ?"

"ನನಗೇನೂ ಐವತ್ತು ರೂಪಾಯಿಯದು ಬೇಕಿಲ್ಲ. ಸುಮ್ಮನೆ ಕೊಳ್ಳುವುದೆಂದಮೇಲೆ ಒಂದು ಸಾದಾ ಸೀರೆಯಾದರೂ ಆದೀತು!"

ಇದನ್ನು ಕೇಳಿ, ಒಟ್ಟಿನಲ್ಲಿ ಸಂಜೆ ಬಂದಾಗಿನಿಂದ ಆಕೆ ನಡೆದುಕೊಳ್ಳುತ್ತಿದ್ದ ರೀತಿಯನ್ನು ನೆನೆದು, ಶ್ರೀನಿವಾಸನಿಗೆ ತಡೆಯದಾಗಿ ಕೇಳಿಬಿಟ್ಟ:

"ಏನು ಕಾವಿ? ನಿನಗೆ ಆಗಿದೆಯಾದರೂ ಏನು, ಈ ಹೊತ್ತು? ಯಾವ ದೇವರು ಸೇರಿದೆ ಇಂದು, ನಿನ್ನಲ್ಲಿ?"

ಕಾವೇರಿಗೆ ನಾಚಿಕೆಯಾಯಿತು. ಅದಕ್ಕೆಂದೆ ಸುಮ್ಮನಾದಳು. 'ನನ್ನಲ್ಲಿ ಯಾವ ದೇವರು ಸೇರುತ್ತಾನೆ? ಸೇರಿದ ದೆವ್ವ ದೂರವಾಗಿದೆ, ಇಷ್ಟೆ. ದೇವರು ಮನೆ ಸೇರಿದ್ದಾನೆ ಅದಕ್ಕೆಂದು ಇದು!' ಎಂದು ಮನಸ್ಸಿನಲ್ಲಿಯೆ ಅಂದುಕೊಂಡಳು.

ಮರುದಿನ ಸಾಯಂಕಾಲ ಶ್ರೀನಿವಾಸ ಕಾವೇರಿಯರಿಬ್ಬರೂ ಪೇಟೆಗೆ ಹೋಗಿ ಸೀರೆಗಳನ್ನು ತಂದರು. ಸುಮಿತ್ರೆಗಾಗಿ ಐವತ್ತು ರೂಪಾಯಿಯ ಉತ್ತಮವಾದ ರೇಶಿಮೆಯದು, ಕಾವೇರಿಗಾಗಿ ಇಪ್ಪತ್ತು ರೂಪಾಯಿಗಳ ಸಾದಾ ನೂಲಿನ ಸೀರೆ ಒಂದು. ಸುಮಿತ್ರೆಗಾಗಿ ಸೀರೆಯನ್ನು ಹೆಚ್ಚುಕಡಿಮೆ ಶ್ರೀನಿವಾಸನೆ ಆರಿಸಬೇಕಾಯಿತು. ಅದನ್ನು ಆರಿಸುವಾಗ ಯಾವ ಬಣ್ಣ ಆಕೆಗೆ ಒಪ್ಪಬಹುದು, ಯಾವ ತರಹದ್ದಾದರೆ ಆಕೆಯ ರೂಪು ಎದ್ದುಕಾಣಬಹುದೆಂಬುದನ್ನು ನಿರ್ಣಯಿಸುವಾಗ ಬಾಗಿಲುಕೋಟೆಯಲ್ಲಿ ನಡೆದ ಸನ್ನಿವೇಶವನ್ನು ಕಣ್ಣಮುಂದಿಟ್ಟುಕೊಂಡೆ ಶ್ರೀನಿವಾಸ ತನ್ನ ಆಯ್ಕೆಯನ್ನು ಮಾಡಿದ್ದ. ಕೊನೆಯದಾಗಿ ಒಂದನ್ನು ಗೊತ್ತುಮಾಡಿದಾಗ ಕಾವೇರಿಯನ್ನು ಕೇಳಿದ:

"ಇದು ಇರಲೆ?"

"ನನಗೆ ಬೇಡ!"

"ನಿನಗಾಗಿ ಅಲ್ಲ, ನಾನು ಕೇಳುವುದು!"

"ಅದನ್ನು ನಾನೇನು ಹೇಳಲಿ? ನಿಮಗೆ ಆಕೆ ಎಂಥದು ಹೇಳಿದ್ದಾಳೊ!"

"ಸರಿ. ಈ ಸೀರೆ ಚೆನ್ನಾಗಿದೆ ಅನ್ನುತ್ತೀಯೊ ಇಲ್ಲವೊ?"

" ಚೆನ್ನಾಗಿದೆ. ಆದರೆ—"

" ಆದರೆ, ಬೇಕಾಗಿಲ್ಲ."

" ಹಾಗಿದ್ದರೆ ನಾನೇನೂ ಹೇಳುವುದಿಲ್ಲ. ಯಾಕೆಂದರೆ—"

" ಯಾಕೆ ? "

" ಹೌದು. ನಾನಿದನ್ನು ಒಪ್ಪಿದೆ, ಅದಕ್ಕೆ ಕಳಿಸಿದೆ ಎಂದು ನೀವು ಹೇಳುವವರು. ಒಂದು ವೇಳೆ ಅದು ಆಕೆಗೆ ಒಪ್ಪಿಗೆಯಾಗದಿದ್ದರೆ, ಸುಮ್ಮನೆ ನನ್ನ ಮೇಲೆ ಒಣ ಜವಾಬ್ದಾರಿ...."

ಕೊನೆಗೆ, ಶ್ರೀನಿವಾಸನೆ ನಿರ್ಣಯ ಮಾಡಬೇಕಾಯಿತು. ಅದಾದ ಮೇಲೆ ಕಾವೇರಿ ಒಳ್ಳೆಯ ಸೀರೆಯನ್ನು ತೆಗೆದುಕೊಳ್ಳಲಿಲ್ಲ ಎಂದು ಒಳ ಮನಸ್ಸಿನಲ್ಲಿ ಅಳುಕು. ಆಕೆಗೆ ಹೇಳಿದಂತೆ, ಸುವಿತ್ರಿಯಿಂದ ನಿಜವಾಗಿಯೂ ದುಡ್ಡು ಬಂದಿದ್ದರೆ, ಅಥವಾ ಅದೊಂದು ಕೇವಲ ವ್ಯವಹಾರದ ವಿಷಯ ವಾಗಿದ್ದರೆ ಇಂಥ ಅಳುಕು ಇರಬೇಕಾಗಿದ್ದಿಲ್ಲ. ಆದರೆ ಸುವಿತ್ರಿಯ ತಾಯಿ ಯಿಂದ ದುಡ್ಡು ಬಾರದಿದ್ದರೂ ತಾನು ಸೀರೆಯನ್ನು ತಂದು ಕೊಡಲು ಸಿದ್ಧ ನಾಗಿದ್ದ ಮನಃಸ್ಥಿತಿಯೆ ಕಾವೇರಿಯ ಸೀರೆಯ ಬಗ್ಗೆ ಅಳುಕನ್ನುಂಟು ಮಾಡಿದ್ದಿತು.

" ನೀನೂ ಒಂದು ಒಳ್ಳೆಯದನ್ನೆ ತೆಗೆದುಕೊಂಡಿದ್ದರೆ ಆಗುತ್ತಿದ್ದಿತು " ಎಂದ ಕೊನೆಗೆ.

" ಏನು ಮಾಡುವುದು ? ಒಳ್ಳೆಯದೆನ್ನುವುದು, ಪೆಟ್ಟಿಗೆಯಲ್ಲಿಟ್ಟು ಬಿಡುವುದು. ಅಷ್ಟು ಬೆಲೆಯದೆಂದವೇಲೆ ದಿನನಿತ್ಯದ ಬಳಕೆಯಲ್ಲಿ ಉಡುವುದಂತೂ ಸಾಧ್ಯವಿಲ್ಲ."

" ಉಟ್ಟರೂ ಆಯಿತು. ಅದೇನು ದೊಡ್ಡ ಮಾತು ? " ಎಂದು ಶ್ರೀನಿವಾಸ.

" ಅದೇನೊ, ರಾಯರ ಶ್ರೀಮಂತಿಕೆ ಬಹಳವಾಯಿತು ! " ಎಂದು ಕಾವೇರಿ ನಕ್ಕುಬಿಟ್ಟಳು. ಆದರೆ ಆ ನಗೆ ಪರಿಶುದ್ಧ ವಿನೋದವಾಗಿತ್ತು. ವ್ಯಂಗ್ಯದ ಯಾವ ಸೋಂಕೂ ಅದರಲ್ಲಿ ಇರಲಿಲ್ಲ.

ಮರುದಿನ ಟಪಾಲಿನಿಂದ ಸುವಿತ್ರಿಯ ಸೀರೆ ಭಾಗಮ್ಮನ ವಿಳಾಸಕ್ಕೆ ಹೋಯಿತು. ಶ್ರೀನಿವಾಸ ಎಷ್ಟು ಹೇಳಿದರೂ ಕಾವೇರಿ ಹೊಸ ಸೀರೆಯನ್ನು ಆಗಲೆ ಉಡಲಿಲ್ಲ.

"ಉಡುವಹಾಗಿರದಿದ್ದರೆ ತಂದದ್ದು ಯಾತಕ್ಕೆ?"

"ತರಬೇಕೆಂದಿರಿ ಎಂದದ್ದಕ್ಕೆ ತಂದದ್ದು. ಕೂಡಲೆ ಉಟ್ಟುಕೊಂಡು ಬಿಡಬೇಕೆನ್ನುವುದಕ್ಕೆ ಏನಂಥ ಅವಸರ?"

"ಅವಸರ ಯಾವುದೂ ಇಲ್ಲ. ನೀನು ಉಟ್ಟಿದ್ದನ್ನು ನೋಡಿದರೆ ನನಗೆ ಸಂತೋಷ....ಇಷ್ಟೆ" ಎಂದು ಶ್ರೀನಿವಾಸ ನಗೆಯಾಡಿದ. ಇದೆ ಮಾತನ್ನು ಸುಮಿತ್ರೆಗೆ ಹೇಳಿದ್ದರೆ—ಆಕೆ ಹೊಸ ಸೀರೆಯನ್ನುಟ್ಟು ಮುಂದೆ ಬಂದರೆ—ಎಂದು ಶ್ರೀನಿವಾಸನ ಮನಸ್ಸು ಎಲ್ಲಿಯೊ ದೂರ ಓಡಿತ್ತು.

"ನಾನು ಉಟ್ಟರೆ ನಿಮಗೆ ಸಂತೋಷವೆ?"

"ಅಲ್ಲವೆ?"

"ಹಾಗಿದ್ದರೆ ನಾಳೆ ಉಡುವೆ."

ಎಂದು ಮಾತು ಕೊಟ್ಟರೂ ಕಾವೇರಿ ಆ ವಿಷಯವನ್ನೆ ಮರೆತುಬಿಟ್ಟಳು. ಸೀರೆ ಪೆಟ್ಟಿಗೆಯನ್ನು ಸೇರಿ ಕಣ್ಮರೆಯಾದ್ದರಿಂದ ಶ್ರೀನಿವಾಸನಿಗೂ ಅದರ ಜ್ಞಾಪಕ ಉಳಿಯಲಿಲ್ಲ. ಹದಿನೈದು ಇಪ್ಪತ್ತು ದಿನ ಕಳೆಯಿತು.

ಈ ಮೂರು ವಾರಗಳಲ್ಲಿ ಕಾವೇರಿಯ ಪರಿವರ್ತನೆ ಪೂರ್ತಿಯಾಯಿತೆಂದು ಹೇಳಬಹುದಾಗಿತ್ತು. ಶ್ರೀನಿವಾಸನೆ ಆಕೆಗೆ ಸರ್ವಸ್ವವಾದನು. ತಾಯಿ ತಂದೆ ಮಗು—ಎಲ್ಲವೂ ಆತನೆ ಎನ್ನುವಂತಾಯಿತು. ಬಹುಮಟ್ಟಿಗೆ ತನಗೆ ಮಕ್ಕಳಿಲ್ಲವೆಂಬ ಕೊರಗು ಕೂಡ ಮಾಯವಾಯಿತು. ಪತಿಯೇ ಪರದೈವವೆಂದು ನಂಬಿ ತನುಮನಗಳ ಸಂಪೂರ್ಣ ಸಮರ್ಪಣೆಯಿಂದ ಸತಿಯು ಸ್ವರ್ಗದ ಬಾಗಿಲನ್ನು ತೆರೆಯುವಳೆಂಬ ಮಾತು ನಿಜವಾಗಿದ್ದಾದರೆ ಕಾವೇರಿಗೆ ಆ ಬಾಗಿಲು ಖಂಡಿತವಾಗಿ ತೆರೆದಿರಬೇಕು. ಆದರೆ ಯಾರು ಬಲ್ಲರು? ಈ ಮೂರು ವಾರಗಳಲ್ಲಿ ಕಾವೇರಿಯ ನಡೆನುಡಿಗಳನ್ನು ನೆನೆದು—ನೋಡಿ, ಶ್ರೀನಿವಾಸ ಕೂಡ ತಾನು ಬಾಗಿಲುಕೋಟೆಗೆ ಹೋದಾಗ ಮಾಡಿದ್ದು, ಬಂದ ನಂತರ ಕೂಡ ಅಲ್ಲಿಯದನ್ನು ನೆನೆದದ್ದು, ಎಷ್ಟೋ ಬಾರಿ ಸುಮಿತ್ರೆಯ ದೇಹವನ್ನು ಬಯಸಿದ್ದು ಶುದ್ಧ ಅವಿವೇಕವೆಂದುಕೊಳ್ಳುವಂತಾಯಿತು. ಆ ವ್ಯಾಮೋಹ ಪೂರ್ತಿಯಾಗಿ ಅಡಗದಿದ್ದರೂ ಅದರ ಸೆಳೆತ ಎಷ್ಟೊ ಪಾಲಿಗೆ ಕಡಿಮೆಯಾಯಿತು. ಇನ್ನೂ ಕೆಲಕಾಲ ಹೀಗೆಯೆ ನಡೆದಿದ್ದರೆ ಸಂಪೂರ್ಣವಾಗಿ ಮರೆತುಬಿಡಲೂ ಸಾಧ್ಯವಾಗುತ್ತಿತ್ತು. ಆದರೆ—

ಆದರೆ ಒಂದು ದಿನ ಮಧ್ಯಾಹ್ನ ಅಕಸ್ಮಾತ್ತಾಗಿ ಕಾವೇರಿಯ ಹೆಸರಿಗೆ ಒಂದು ಕಾಗದ ಬಂದಿತು. ಶ್ರೀನಿವಾಸ ಎಂದಿನಂತೆ ಆಫೀಸಿಗೆ ಹೋಗಿದ್ದ. ದಿಂಬಿನ ಮೇಲೆ 'ಸ್ವಾಗತ'ವೆಂದು ಹೆಣೆಯುತ್ತ ಕುಳಿತಿದ್ದ ಕಾವೇರಿ ಪತ್ರವನ್ನೆತ್ತಿಕೊಂಡು ನೋಡಿದಳು. ಪತ್ರ ತನ್ನ ಹೆಸರಿಗಿತ್ತಲ್ಲದೆ ವಿಳಾಸದ ಬರೆಹ ಹೆಣ್ಣು ಕೈಯದಾಗಿತ್ತು. ಲಗುಬಗೆಯಿಂದ ಒಡೆದು ನೋಡಿದಳು. ಅವಳ ಸಂತೋಷಕ್ಕೆ ಪಾರವೆ ಉಳಿಯಲಿಲ್ಲ. ಆಕೆಯ ಜೀವದ ಗೆಳತಿ ಚಂಪಕ್ಕನಿಂದ ಆ ಕಾಗದ ಬಂದಿತ್ತು. ಇಷ್ಟು ದಿವಸಗಳನಂತರವಾದರೂ ಬರೆದಳು. ತಾನು ಬಂದ ಹೊಸದರಲ್ಲಿ ಬರೆದ ಕಾಗದಕ್ಕೆ ಉತ್ತರವನ್ನೂ ಬರೆಯದವಳಿಗೆ ಈಗಲಾದರೂ ಬರೆಯಬೇಕೆಂಬ ನೆನಪು ಬಂದಿತಲ್ಲ ಎಂದು ಸಂತೋಷಗೊಂಡಳು. ಆದರೆ ಪತ್ರವನ್ನು ಓದತೊಡಗಿದ ಹಾಗೆ ಮುಖ ಬಾಡತೊಡಗಿತು. ಸಂತೋಷ ಅಡಗಿತು. ಚಂಪಕ್ಕ ಬರೆದಿದ್ದಳು :

ಬಾಗಿಲುಕೋಟೆ

ಗೆಳತಿ ಕಾವೇರಕ್ಕನಿಗೆ,

ಬಹಳ ದಿವಸಗಳನಂತರ ಬರೆಯುತ್ತಿದ್ದೇನೆ. ಆದರೆ ಈ ಪತ್ರವನ್ನು ಬರೆಯಲು ನನಗೆ ಅತ್ಯಂತ ದುಃಖವಾಗುತ್ತದೆ. ನಿನಗೆ ಎಲ್ಲವೂ ತಿಳಿದಿರಲೇಬೇಕು ಆದರೂ ನನಗೆ ತಿಳಿದಮಟ್ಟಿಗೆ ಹೇಳಬೇಕು, ಸಾಧ್ಯವಾದರೆ ನಡೆಯಲಿದ್ದುದನ್ನು ತಪ್ಪಿಸಬೇಕು ಎಂದು ಬರೆಯುತ್ತಿದ್ದೇನೆ.

ನಿನಗೆ ಮಕ್ಕಳಾಗುವುದಿಲ್ಲವೆಂದು ನೀನು ಇಷ್ಟು ಬೇಗನೆ ನಿರಾಶಳಾಗಬಾರದಿತ್ತು. ಮಕ್ಕಳಿಗಾಗಿ ನಿನ್ನ ಯಜಮಾನ ಇನ್ನೊಬ್ಬಳನ್ನು ಮದುವೆಯಾದರೆ ಅವರಿಗೆ ಮಕ್ಕಳಾಗಬಹುದು ಆದರಿಂದ ನಿನಗೇನು ಸಮಾಧಾನ? ನೀನು ನಿನ್ನ ಒಪ್ಪಿಗೆಯನ್ನು ಹೇಗೆ ಕೊಟ್ಟೆ? ಇದೇ ನನಗೆ ತಿಳಿಯದಾಗಿದೆ. ನೀನು ಒಪ್ಪಿರುವಿ ಎಂಬುದನ್ನು ನಿಮ್ಮ ಅತ್ತೆಯೆ ಹೇಳುತ್ತಿದ್ದಾಳೆ. ಅಷ್ಟಕ್ಕಾಗಿ ನಿನ್ನ ಗುಣಗಾನ ಮಾಡುತ್ತಿದ್ದಾಳೆ. ಆದರೆ ನನಗೆ ವಿಶ್ವಾಸವಿಲ್ಲ.

ಸುಮಿತ್ರಾ ಮತ್ತು ಆಕೆಯ ತಾಯಿಯ ಸಂತೋಷಕ್ಕಂತೂ ಪಾರವೆ ಉಳಿದಿಲ್ಲ. ಇದೆಲ್ಲವೂ ನಿಮ್ಮ ಅತ್ತೆ ಮತ್ತು ಸುಮಿತ್ರೆಯ ತಾಯಿ ಕೂಡಿಯೆ ನಡಸಿದ ಆಟವಾಗಿದೆ. ಊರಿಗೆ ಊರೆ ಮಾತ ನಾಡುತ್ತಿದೆ. ಮುಂದಿನ ತಿಂಗಳಲ್ಲಿ ಮದುವೆಯನ್ನು ಮುಗಿಸಬೇಕೆನ್ನು ತ್ತಿದ್ದಾರೆ. ಈಗ ಹತ್ತು ಹನ್ನೆರಡು ದಿನಗಳ ಹಿಂದೆ 'ನಿಶ್ಚಯ'ದ ಸೀರೆ ನಿಮ್ಮಲ್ಲಿಂದಲೆ ಬಂದಿದೆ. ಅದನ್ನು ಕೂಡಾ ನೀನೇ ನೋಡಿ ಕಳಿಸಿ ರುವಿ, ಎಂದು ಹೇಳುತ್ತಾಳೆ, ನಿಮ್ಮ ಅತ್ತೆ.

ಸುಮಿತ್ರೆಯ ಸ್ವಭಾವವನ್ನು ನೀನು ಬಲ್ಲೆ. ಹೋದ ಸಲ ನಿನ್ನ ಯಜಮಾನರು ಇಲ್ಲಿಗೆ ಬಂದಾಗ ಆಗಲೆ ಮದುವೆಯಾದವರಂತೆ ಅವರ ಜೊತೆಯಲ್ಲಿ ಆಡ್ಡಾಡಿದಳು ನೋಡಿದವರಿಗೇ ನಾಚಿಕೆಯಾ ಯಿತು. ಒಂದು ದಿವಸ ಸಿನೀಮಾಕ್ಕೂ ಹೋಗಿದ್ದರಂತೆ. ನನಗೂ ತಡೆಯಲಾಗದೆ, ಈಗ ನಾಲ್ಕು ದಿನಗಳ ಹಿಂದೆ ನಿಮ್ಮ ಅತ್ತೆಯನ್ನೆ ಕೇಳಿದೆ. ಅವಳಿಗೆ ಇದೆಲ್ಲದರಿಂದ ಸಂತೋಷವೆ ಆಗಿದೆಯಾದ್ದರಿಂದ ಒಳ್ಳೆ ಉತ್ಸಾಹದಿಂದ ಎಲ್ಲವನ್ನೂ ಹೇಳಿದಳು. ನೀನು ನಿನ್ನ ಒಪ್ಪಿಗೆ ಯನ್ನು ಕೊಡಬಾರದಾಗಿತ್ತು. ಈಗಲಾದರೂ ಏನಾದರೂ ಮಾಡಿ ನಿನ್ನ ಯಜಮಾನರ ಮನಸ್ಸನ್ನು ತಿರುಗಿಸಲು ಪ್ರಯತ್ನಮಾಡ ಬೇಕೆಂದು ಬೇಡಿಕೊಳ್ಳುವೆ. ಸಂತೋಷದಿಂದ ಸವತಿಯನ್ನು ಸ್ವಾಗತಿ ಸುವ ನಿನ್ನನ್ನು ಏನೆನ್ನಲಿ? ಏನಾದರೂ ಮಾಡು. ನಿನ್ನ ಕೈಯಿಂದಲೆ ನಿನ್ನ ಬದುಕನ್ನು ಮುರಿಯಬೇಡ. ಇತಿ, ನಿನ್ನ ದುಃಖಿತಳಾದ,

ಜೀವದ ಗೆಳತಿ,
ಚಂಪಾ

ಪತ್ರವನ್ನೋದಿ ಕಾವೇರಿ ನೆಲಕ್ಕೆ ಕುಸಿದಳು. ತಾನು ಇದ್ದದ್ದು ಎಲ್ಲಿ, ಓದಿದ್ದು ಏನು—ಎಂಬ ಯಾವುದರ ಅರಿವೂ ಆಕೆಗೆ ಉಳಿಯಲಿಲ್ಲ. ಒಂದೆರಡು ನಿಮಿಷ ಮನಸ್ಸು ಸಂಪೂರ್ಣವಾಗಿ ಬಧಿರವಾದಂತಾಗಿತ್ತು. ಯೋಚನೆ ನಿಂತುಹೋದರೂ ಹೃದಯ ಒಡೆದುಹೋದಂತೆ, ಮೈಯೊಳಗಿನ ರಕ್ತವೆಲ್ಲವೂ ಹರಿದುಹೋಗಿ ಕ್ಷೀಣಕ್ಷೀಣವಾಗುತ್ತಿರುವಂತೆ ಇತ್ತು ಆಕೆಯ ಸ್ಥಿತಿ. ಸಾಧ್ಯವೆ? ಎಂದುಕೊಂಡಳು. ಆಕೆಗೆ ಮೊದಮೊದಲು ವಿಶ್ವಾಸವೆ

ಆಗಲಿಲ್ಲ. ಎರಡು ಮೂರು ಬಾರಿ ಪತ್ರವನ್ನೋದಿದಳು. ಚಂಪಾ ಸುಳ್ಳು ಬರೆಯುತ್ತಾಳೆಯೆ? ಇಷ್ಟು ದಿನ ಯಾವುದನ್ನೂ ಬರೆಯದೆ ಈಗ ಬರೆದಿದ್ದಾಳೆಂದಮೇಲೆ! ಅಲ್ಲದೆ, ಎಲ್ಲಕ್ಕೂ ಮಿಗಿಲಾಗಿ, ಕಳಿಸಿದ ಸೀರೆಯೆ ಸಾಕ್ಷಿ ಇದ್ದಿತು. ಅದನ್ನು ನೆನೆದ ಹಾಗೆ, ಶ್ರೀನಿವಾಸ ಆ ದಿನದ ಮಾತುಕತೆಗಳಲ್ಲಿ ಸುಮಿತ್ರೆಯ ಬಗೆಯಲ್ಲಿ ತೋರಿದ ಪಕ್ಷಪಾತ ಈಗ ಅರ್ಥವಾಗುವಂತಾಯಿತು. ಆ ಮಾತು, ಆ ಸನ್ನಿವೇಶ—ಎಲ್ಲವೂ ಸರ್ರನೆ ಆಕೆಯ ಕಣ್ಣಮುಂದೆ ಹಾಯ್ದು ಹೋದವು. ಕಾವೇರಿಗೆ ಹೇಳಲಾರದ ದುಃಖವಾಯಿತು. ಕಾಲ ಕೆಳಗಿನ ನೆಲವೇ ಕರಗಿ ತಾನೆಲ್ಲಿಯೊ ನಿರಾಶ್ರಿತಳಾಗಿ ತೇಲುತ್ತಿರುವಂತಾಯಿತು. ಹೀಗೆ ಮಾಡಬಹುದೆ? ಏನನ್ಯಾಯ? ನಂಬಿದವರನ್ನು ಹೀಗೆ ಸರಳಿಸಬಹುದೆ? ಕೊರಳಿಗೆ ಬಿದ್ದವರ ಕತ್ತು ಹಿಸುಕಬಹುದೆ? ಅಯ್ಯೋ! ಏನು ಗತಿ, ಎಲ್ಲಿಗೆ ಹೋಗಲಿ? ಅನಾಥಳಂತೆ ಅತ್ತಳು. ದಿಗ್ಭ್ರಾಂತಳಂತೆ ಸುಮ್ಮನಾದಳು.

ಒಂದು ಕ್ಷಣ ಕಾವೇರಿಗೆ ಶ್ರೀನಿವಾಸನ ಬಗೆಯಲ್ಲಿ ವಿಪರೀತ ಸಿಟ್ಟು ಬಂದಿತು. ಆದರೆ ಒಂದು ಕ್ಷಣ ಮಾತ್ರ. ಆತ ಬಂದ ಕೂಡಲೆ ಆ ಪತ್ರವನ್ನು ಅವನ ಮುಖಕ್ಕೆ ಹಿಡಿದು, ಏನಿದರರ್ಥ? ಎಂದು ಕೇಳೋಣವೆ ಎಂದುಕೊಂಡವಳು ಕೇಳಿಯಾದರೇನು, ಎಂದುಕೊಂಡಳು ಮರುಕ್ಷಣ 'ಹೌದು, ನಾನು ಇನ್ನೊಂದು ಮದುವೆಯನ್ನು ಒಪ್ಪಿದ್ದೇನೆ. ನಿನಗೆ ಮಕ್ಕಳಾಗದಿದ್ದರೆ ಏನು ಮಾಡುವುದು?' ಎಂದುಬಿಟ್ಟರೆ ತನ್ನದೇನು ಉಳಿಯಿತು? ಈಗಲಾದರೂ ಉಳಿದದ್ದೇನು? ಇನ್ನೊಂದು ನಿಮಿಷ, ಯೋಚನೆ ಇನ್ನೊಂದು ದಿಕ್ಕಿನಲ್ಲಿ ಓಡುತ್ತಿತ್ತು: ಮಕ್ಕಳಿಲ್ಲದ್ದಕ್ಕಾಗಿ ಮದುವೆಯನ್ನೆ ಮಾಡಿಕೊಳ್ಳುವದಾದರೆ ನನಗೆ ಹೇಳದೆಯೆ ಯಾಕೆ ಇದನ್ನೆಲ್ಲ ಮಾಡಬೇಕಾಗಿತ್ತು? ಎಂಥ ಮೋಸ? ಯಾರಾದರೂ ಇಂಥ ಮೋಸ ಮಾಡಬಹುದೆ—ಮಾಡುವುದು ಸಾಧ್ಯವೆ?—ಎಂಬುದೂ ತಿಳಿಯದ ಸರಳ ಹೃದಯದ ಕಾವೇರಿ ಕಣ್ಣೀರ ಕಾವೇರಿಯನ್ನೆ ಹರಿಸಿದಳು. ನನ್ನ ಹಣೆಬರಹ, ನನ್ನ ದೈವ, ಯಾರು ಏನು ಮಾಡಿಯಾರು? ಅದೇ ದೈವ ಅವರಿಗೆ ಈ ಬುದ್ಧಿ ಕೊಟ್ಟಿದೆ. ಎಂಥ ವೇಳೆಗೆ ಹುಟ್ಟಿದೆನೊ! ತಂದೆಯ ಮುಖವಿಲ್ಲದೆ, ತಾಯಿಯ ಆಶ್ರಯವೂ ಇಲ್ಲದೆ, ಸಮೀಪದವರ ಸಂಬಂಧವಿಲ್ಲದೆ, ಸುತ್ತಲಿನವರ ಸಹಾನುಭೂತಿಯೂ

ಇಲ್ಲದೆ ಬೆಳೆದು, ಯಾವುದೊ ಒಂದು ರೀತಿ ಬದುಕು ಒಂದು ದಡಕ್ಕೆ ಮುಟ್ಟಿತು ಎಂದು ಸಮಾಧಾನ ಪಡೆಯಲೆತ್ನಿಸುತ್ತಿದ್ದಾಗಲೆ ಇದ್ದ ಒಂದು ಆಶ್ರಯವೂ ಕಡಿಯಿತೆ? ದೇವರೆಂದು ತಿಳಿದ ಶಕ್ತಿಯೆ ದಾನವವಾಯಿತೆ? ಇಷ್ಟೆಲ್ಲ ಯೋಚನೆಗಳು ಕಾವೇರಿಯ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡಿದುವೊ ಇಲ್ಲವೊ! ಆದರೆ ಇವೆಲ್ಲವೂ ಸೇರಿ ಆಕೆಯ ಹೃದಯವನ್ನು ಗಾಸಿ ಮಾಡಿ ಮಾತು ಬಾರದ, ಮಾತಿಗೆ ಮೀರಿದ ಸಂಕಟಕ್ಕೆ ಗುರಿ ಮಾಡಿದವು. ದಿಙ್ಮೂಢಳಂತೆ ಕುಳಿತುಬಿಟ್ಟಳು! ಶ್ರೀನಿವಾಸ ಮನೆಗೆ ಬರುವ ಹೊತ್ತಿಗೆ ಕಾವೇರಿಯ ಹೃದಯದಲ್ಲಿ ನೆಲೆನಿಂತ ಭಾವನೆಗಳೆಂದರೆ ಶ್ರೀನಿವಾಸನ ವಿಷಯದಲ್ಲಿ ಕೋಪಕ್ಕಿಂತ ಹೆಚ್ಚಾಗಿ ತನ್ನ ವಿಷಯದಲ್ಲಿ ಕನಿಕರ; ಆತನ ವಿಷಯದಲ್ಲಿ ತಿರಸ್ಕಾರಕ್ಕಿಂತ ಹೆಚ್ಚಾಗಿ ತನ್ನ ಬಗೆಯಲ್ಲಿ ಅಸಹಾಯತೆ. ಈ ಆತ್ಮಾನುಕಂಪ, ಅಸಹಾಯತೆಗಳ ಮೂಲಕ ಆತನನ್ನು ನೇರವಾಗಿ ಮಾತಾಡಿಸುವ, ಕೇಳುವ ಧೈರ್ಯವಿಲ್ಲದಾಯಿತು. ಕೇಳುವುದಕ್ಕೆ ಹೆದರಿಕೆ, ಕೇಳದೆ ಇರುವುದಕ್ಕೆ ಅಸಮಾಧಾನ — ಹೀಗೆ ವಿಪನ್ನಾವಸ್ಥೆಯಲ್ಲಿಯೆ ಇದ್ದಳು.

ಶ್ರೀನಿವಾಸ ಮನೆಗೆ ಬಂದೊಡನೆ ಕಾವೇರಿಯು ಎದೆ ಬಡಿದುಕೊಳ್ಳಲಾರಂಭಿಸಿತು. ಯಾವುದೂ ಬೇಡವೆನಿಸುತ್ತಿತ್ತು. ಆದರೂ ನಿರುಪಾಯಳಾಗಿ ಎಂಬಂತೆ ಕುಳಿತಲ್ಲಿಂದ ಎದ್ದು ಚಹದ ಸಿದ್ಧತೆಗೆ ಮೌನವಾಗಿಯೆ ತೊಡಗಿದಳು. ಒಂದೆರಡು ನಿಮಿಷಗಳಲ್ಲಿಯೆ ಮನೆಯಲ್ಲಿಯ 'ವಾತಾವರಣ' ನಿತ್ಯದಂತಿಲ್ಲವೆಂಬುದು ಶ್ರೀನಿವಾಸನಿಗೆ ಮನವರಿಕೆಯಾಯಿತು. ಅದನ್ನು ನೆನೆದು ತುಸು ಹೆದರಿಕೆಯೂ ಎನಿಸಿತು. ಆದರೂ ನಗೆಯಾಟದಲ್ಲಿಯೆ ಪ್ರಾರಂಭಿಸಿದ:

"ಏನು? ಬಾಯಿಯವರು ಇಂದು ಯಾಕೊ ಬಹಳ ಗಂಭೀರವಾಗಿದ್ದ ಹಾಗಿದೆಯಲ್ಲ?"

ಹೃದಯ ಬಂದು ಕುತ್ತಿಗೆಯಲ್ಲಿ ಸಿಕ್ಕಂತೆನಿಸಿತು ಕಾವೇರಿಗೆ. ಬಾಯಿಗೆ ಮಾತೇ ಬರಲೊಲ್ಲದು. ದುಃಖ ಉಕ್ಕಿಬರುತ್ತಿತ್ತು. ಆದರೂ ಅದೆಲ್ಲವನ್ನು ಹತ್ತಿಕ್ಕಿ ಹಿಡಿದು ಹೇಳಿದಳು:

"ಗಂಭೀರವಿಲ್ಲ, ಯಾವುದೂ ಇಲ್ಲ!"

'ಯಾವುದೂ ಇಲ್ಲ' ಎನ್ನುವ ಭಾವನೆಯೆ ಮೂರ್ತಿವೆತ್ತಂತಿತ್ತು ಆ ಮಾತು.

"ಇಲ್ಲ, ಏನೊ ಆಗಿದೆ...."

"ಏನಾಗಬೇಕು—"

"ಯಾರ ಕೂಡ ಆದರೂ ನೆರೆಹೊರೆ ಮಾತು ಆಯಿತೆ?"

"ಇಲ್ಲ—"

"ಯಾರಾದರೂ ಏನಾದರೂ ಅಂದರೆ?"

"ಇಲ್ಲ—"

"ಹಾಗಾದರೆ ಹೀಗೇಕೆ ಇದ್ದೀ?"

ಕಾವೇರಿ ಸುಮ್ಮನಾಗಿಯೆ ಇದ್ದಳು. ನೇರವಾಗಿ ಆ ಕಾಗದವನ್ನು ಆತನ ಕೈಯಲ್ಲಿಟ್ಟುಬಿಟ್ಟರೆ ಎಲ್ಲವೂ ತಾನಾಗಿಯೆ ತಿಳಿಯುವುದಿಲ್ಲವೆ? ಎಂದು ಒಂದು ಕ್ಷಣ ಯೋಚಿಸಿದಳು. ಆದರೆ ಧೈರ್ಯವಾಗಲಿಲ್ಲ 'ಹೌದು' ಎಂದುಬಿಟ್ಟರೆ ಏನು ಗತಿ? ಅಲ್ಲದೆ ಇಷ್ಟೆಲ್ಲವನ್ನು ತನಗೆ ಹೇಳದೆ ಸಾಗಿಸಿದ ಶ್ರೀನಿವಾಸ ಏನಾದರೊಂದು ಹೇಳಿಬಿಟ್ಟರೆ ಅದರಿಂದ ಏನು ಸಮಾಧಾನ, ಎಂಬ ನಿರಾಶೆಯೂ ಮನಸ್ಸಿನಲ್ಲಿ ಆಗೀಗ ಮೂಡುತ್ತಿತ್ತಾದ್ದರಿಂದ ಸುಮ್ಮನಾಗಿಯೆ ಉಳಿದಳು. ಇತ್ತ, ಶ್ರೀನಿವಾಸನಿಗೆ ಯಾವುದೂ ತಿಳಿಯದೆ ಅಸಮಾಧಾನಕ್ಕೊಳಗಾದ ಹಿಂದಿನ ಅನುಭವ ಆತನನ್ನು ಎಚ್ಚರಿಸುತ್ತಿತ್ತು. ಹೇಳುವುದಾದರೆ ಎಲ್ಲವನ್ನೂ ಆಕೆಯೆ ಹೇಳುತ್ತಾಳೆ. ಸುಮ್ಮನೆ ಆಕೆಯನ್ನು ಬಲವಂತಪಡಿಸಿ ಕೆಣಕುವ ಧೈರ್ಯ ಆತನಿಗೂ ಇರಲಿಲ್ಲವಾದ್ದರಿಂದ ಆತನೂ ಸುಮ್ಮನಾದ. ಆದರೆ ಮೂರು ವಾರಗಳಿಂದಲೂ ಇಷ್ಟು ಆತ್ಮೀಯವಾಗಿ ನಡೆದುಕೊಂಡವಳಿಗೆ ಇಂದಿಗೆ ಒಮ್ಮೆಲೆ ಏಕೆ ಇಂಥ ದಗುಡ–ದುಮ್ಮಾನ ಬರಬೇಕೆಂಬುದು ತಿಳಿಯದೆ ಯೋಚನೆಗೊಳಗಾದ.

ರಾತ್ರಿ ಊಟವೂ ಹೆಚ್ಚು ಕಡಿಮೆ ಮೌನವಾಗಿಯೆ ನಡೆಯಿತು. ನಡೆದ ವಿಷಯವೇನೆಂಬುದನ್ನು ತಿಳಿಯಬೇಕೆಂದು ಶ್ರೀನಿವಾಸನ ಕುತೂಹಲ ಹೆಚ್ಚುತ್ತಿತ್ತಾದರೆ ಏನಾದರೊಂದು ನಿಷ್ಕರ್ಷೆ ಪಡೆಯಬೇಕೆಂದು ಕಾವೇರಿ ಕಾತರ ಪಡುತ್ತಿದ್ದಳು. ಆದರೆ ಆ ವಿಷಯವನ್ನೆತ್ತುವ ಧೈರ್ಯವೆ ಬರಲೊಲ್ಲದು. ಈ ಸಂಕಟದಲ್ಲಿಯೆ ಕಾವೇರಿ ಹಾಸಿಗೆಯಲ್ಲಿ ಬಂದು ಮಲಗಿದಳು.

ಶ್ರೀನಿವಾಸನಿಗೆ ತಡೆಯದಾಗಿ, ಹತ್ತಿರ ಸರಿದು, ಬೆನ್ನ ಮೇಲೆ ಕೈಯಾಡಿಸಿ ಮೆತ್ತಗಾಗಿ ಕೇಳಿದ:

"ಏನು, ಕಾವಿ? ಏನಾಗಿದೆ?"

ಕಾವೇರಿಗೆ ದುಃಖ ಉಕ್ಕತೊಡಗಿತು.

"ಏನಾಗಿದೆ, ಹೇಳಬಾರದೆ? ನನ್ನ ಮುಂದೆ ಹೇಳಬಾರದೆ?" ಎಂದು ಗಲ್ಲಗಳನ್ನು ಸವರಿದ.

ಕಾವೇರಿಗೆ ಬಿಕ್ಕು ತಡೆಯುವುದಾಗಲಿಲ್ಲ. ಕಣ್ಣೀರು ಪ್ರವಾಹವಾಗಿ ಹರಿಯತೊಡಗಿತು 'ಅಯ್ಯೋ' ಎಂದು ನರಳಿದಳು. ಬಿಕ್ಕು ಬಲವಾಗಿ ಬರತೊಡಗಿದವು ಅವಳ ದುಃಖಕ್ಕೆ ಮಿತಿ ಉಳಿಯಲಿಲ್ಲ, ಬಾಯಿ ಬರಲಿಲ್ಲ.

"ಹೀಗೆ ಮಾಡಿದರೆ ಹೇಗೆ, ಹೇಳು? ಕಾವಿ. ಏನು ಹೇಳಬಾರದೆ? ನೀನು ಹೀಗೆ ಮಾಡಿದರೆ ನಾನು ಏನು ಎಂದು ತಿಳಿಯಬೇಕು, ಹೇಳು...."

ಎಂದು ಪರಿಪರಿಯಾಗಿ ಶ್ರೀನಿವಾಸ ಸಮಾಧಾನ ಹೇಳಿದಷ್ಟೂ ಕಾವೇರಿಯ ದುಃಖ ಇಮ್ಮಡಿಸುತ್ತಿತ್ತು. ಅವನ ತೊಡೆಯಲ್ಲಿ ತಲೆಯನ್ನಿಟ್ಟು ಗೊಳೊ ಎಂದು ಕಾವೇರಿ ಅತ್ತಳು.

ಶ್ರೀನಿವಾಸನಿಗೆ ಏನೂ ತಿಳಿಯದಾಗಿ ಸುಮ್ಮನಾದ. ಕೂದಲುಗಳನ್ನು ಸವರುತ್ತಲೆ ಇದ್ದ ಕಾವೇರಿ ದೂರ ಸರಿಯಲೆತ್ನಿಸಿದಳು. ಶ್ರೀನಿವಾಸ ಮತ್ತೆ ಕೇಳಿದ:

"ಏನು ಕಾವಿ? ಏನು? ಹೇಳುವುದಿಲ್ಲವೆ?"

ಕಾವೇರಿ ಎದ್ದು ಕುಳಿತಳು. ಕಣ್ಣೀರು ಹರಿಯುತ್ತಲೆ ಇತ್ತು. ಶ್ರೀನಿವಾಸ ಕೇಳುತ್ತಲೆ ಇದ್ದ. ಕೊನೆಗೊಮ್ಮೆ ಧೈರ್ಯಮಾಡಿ ತನ್ನ ಸೀರೆಯ ನಿರಿಯಲ್ಲಿ ಮಡಿಸಿಟ್ಟ ಆ ಪತ್ರವನ್ನು ತೆಗೆದು ನಡುಗುವ ಕೈಗಳಿಂದ ಆತನ ಕೈಯಲ್ಲಿಟ್ಟಳು. ತೆರೆತೆರೆಯಾಗಿ ದುಃಖ ಬಂದು ಆಕೆಯ ಹೃದಯವನ್ನು ಆವರಿಸಿತು ಹಾಸಿಗೆಯಲ್ಲಿ ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಶ್ರೀನಿವಾಸ ದೀಪದ ಹತ್ತಿರ ಹೋಗಿ ಪತ್ರವನ್ನು ಬಿಚ್ಚಿದ. ಅದನ್ನು ಆಮೂಲಾಗ್ರವಾಗಿ ಓದಿದ ಅವಾಕ್ಕಾಗಿ ನಿಂತ. ತಲೆ ಗಿರ್ರೆಂದು ತಿರುಗಿತು. ಕಾವೇರಿಗೆ ಏನೆಂದು ಹೇಳುವುದು? ಏನೆಂದು ಸಮಾಧಾನ ಮಾಡುವುದು?

ಪತ್ರದಲ್ಲಿಯ ಮುಖ್ಯಾಂಶ ಸುಳ್ಳಾಗಿದ್ದರೂ, ಆ ಸುಳ್ಳಿಗೆ ಕೆಲಮಟ್ಟಿಗಾದರೂ ಸತ್ಯದ ಸಮರ್ಥನೆ ಇದ್ದಿತು. ಎಂಥ ಮೂರ್ಖತನವಾಯಿತು? ಎಂದುಕೊಂಡ. ಈ ರೀತಿಯಾಗಿ ಪತ್ರ ಹೇಗೆ ಬಂದಿರಬಹುದೆಂಬುದು ಆತನಿಗೆ ಸ್ಪಷ್ಟವಾಗಿಯೆ ಇದ್ದಿತು. ಖಂಡಿತವಾಗಿಯೂ ತಾನು ತನ್ನ ಸ್ಪಷ್ಟವಾದ ಒಪ್ಪಿಗೆಯನ್ನು ತಿಳಿಸಿರಲಿಲ್ಲ. ಅಲ್ಲದೆ, ತಾಯಿಯ ಮನಸ್ಸಿನಲ್ಲಿ ಸುಮಿತ್ರೆಯನ್ನೆ ಮಾಡುವುದಿದೆ—ಅಥವಾ ಇದ್ದಿರಬಹುದು—ಎಂಬುದು ಕೂಡ ತನಗೆ ತಿಳಿದಿರಲಿಲ್ಲ ಆದರೆ ತಾನು ಅಲ್ಲಿದ್ದಾಗ ಮಾಡಿದ 'ಅವಿವೇಕ'ದ ಫಲವಾಗಿ ಇಷ್ಟೆಲ್ಲ ನಡೆಯಿತೆಂಬುದರಲ್ಲಿ ಶ್ರೀನಿವಾಸನಿಗೆ ಸಂದೇಹವೆ ಉಳಿಯಲಿಲ್ಲ. ಆದದ್ದೇನೊ ಆಗಿಹೋಯಿತು ಆದರೆ ಕಾವೇರಿಗೆ ಏನೆಂದು ಹೇಳುವುದು ? ಆಕೆಯನ್ನು ಮನಗಾಣಿಸುವುದು ಹೇಗೆ? ಆ ಸೀರೆ! 'ಅಯ್ಯೊ' ಎಂದ. ಎಂಥ ಮೋಸವಾಯಿತು ? ತನ್ನ ಪ್ರತಿಯೊಂದು ಕೃತಿಗೂ ಪತ್ರದಲ್ಲಿ ಬರೆದ ಅರ್ಥವನ್ನು ಹೇಳುವುದು ಸಾಧ್ಯವಿತ್ತೆಂದರೂ ಮೇಲೆ ಕಾವೇರಿಗೆ ಹೇಗೆ ವಿಶ್ವಾಸ ಹುಟ್ಟಬೇಕು ? ಒಂದು ಕ್ಷಣ ತನ್ನ ತಾಯಿ ಮತ್ತು ಸುಮಿತ್ರಾ ಲಕ್ಷ್ಮೀಬಾಯಿ ಎಲ್ಲರ ಮೇಲೂ ವಿಪರೀತ ಕೋಪಿಸಿಕೊಂಡ ಆದರೆ ಏನು ಮಾಡುವ ಹಾಗಿದ್ದ ? ಮುಂದೆ ಹೇಗೂ ಆದೀತು. ಆದರೆ ಈಗ ಎದುರಿಗೆ ಸಹಜವಾದ ದುಃಖದಿಂದ ಮುದ್ದೆಯಾಗಿ ಬಿದ್ದ ಕಾವೇರಿಯನ್ನು ಸಂತೈಸುವುದು ಹೇಗೆ ಎಂಬುದು ಶ್ರೀನಿವಾಸನಿಗೆ ತಿಳಿಯದೆ ದಿಙ್ಮೂಢನಂತೆ ನಿಂತ. ಐದು ನಿಮಿಷಗಳಾದರೂ ಆಗಿರಬಹುದು.

ಕಾವೇರಿ ದುಃಖಿಸುತ್ತಲೆ ಇದ್ದಳು. ನಿಧಾನವಾಗಿ ಹೆಜ್ಜೆಗಳನ್ನೆಳೆಯುತ್ತ ಶ್ರೀನಿವಾಸ ಹತ್ತಿರ ಬಂದ. ಯಾವ ಮುಖದಿಂದ, ಯಾವ ಧೈರ್ಯದಿಂದ ಈಕೆಯನ್ನು ಮೈಮುಟ್ಟಿ ಸಮಾಧಾನ ಹೇಳಲಿ ? ಎಂದ. ಶ್ರೀನಿವಾಸನಿಗೆ ದುಃಖ ಚಿಮ್ಮಿಬಂದಿತು. ಕಣ್ಣುಗಳು ತೇವಗೊಂಡವು; ಕಂಠ ಬಿಗಿಯಿತು.

"ಕಾವಿ—" ಎಂದ.

ಆ ದನಿಯಿಂದ, ಆ ಒಂದು ಕರೆಯಿಂದ ಕಾವೇರಿಯ ಹೃದಯದಲ್ಲಿ ಇದುವರೆಗೆ ತಾಂಡವವಾಡಿದ್ದ ಹೆದರಿಕೆ ಮಾಯವಾಯಿತು. ಆದರೆ ದುಃಖ ಕಡಿಮೆಯಾಗಲಿಲ್ಲ. ಸುಮ್ಮನಾಗಿಯೆ ಇದ್ದಳು. ಶ್ರೀನಿವಾಸ ಗದ್ಗದಿತನಾಗಿ ಮತ್ತೆ ಕರೆದ :

"ಕಾವಿ—"

ಕಾವೇರಿ ಮಿಸುಕಲಿಲ್ಲ. ಶ್ರೀನಿವಾಸನಿಗೆ ತಡೆಯದಾಗದೆ ಹತ್ತಿರ ಸರಿದು ಉಸಿರಿದ:

"ಇದು ಸುಳ್ಳು, ಕಾವಿ ಇದೆಲ್ಲಾ ಸುಳ್ಳು, ಇದೆಲ್ಲಾ ಮೋಸ—"

ಕಾವೇರಿಗೆ ವಿಶ್ವಾಸವಾಗದಿದ್ದರೂ ಮುಖ ಮೇಲಕ್ಕೆತ್ತಿದಳು. ಶ್ರೀನಿವಾಸನ ಕಣ್ಣುಗಳಲ್ಲಿ ನೀರು ಧಾರೆಯಾಗಿ ಹರಿಯುತ್ತಿದ್ದಿತು. ಅದನ್ನು ಕಾವೇರಿಗೆ ನೋಡಲಾಗಲಿಲ್ಲ.

"ನೀವು ಕಣ್ಣೀರು ಹಾಕಬಾರದು, ದೇವರೆ ಬೇಡ, ಬೇಡ—"

"ನಿನಗೆ ಹೇಗೆ ಹೇಳಲಿ, ಕಾವಿ? ಹೇಗೆ ಹೇಳಲಿ? ಅಯ್ಯೊ! ಇದೆಲ್ಲಾ ಸುಳು—"

"ಸುಳ್ಳೆ?"

"ಸುಳ್ಳು, ಮೋಸ! ನನ್ನಲ್ಲಿ ವಿಶ್ವಾಸವಿಡು."

ಕಾವೇರಿ ಶ್ರೀನಿವಾಸನ ಮುಖ ನೋಡಿದಳು ತಿಳಿಯದೆ ನೋಯಿಸಿ—ಅಥವಾ ಇಷ್ಟೊಂದು ನೋವಾಗಬಹುದೆಂಬ ಯೋಚನೆಯಿಲ್ಲದೆ ನೋಯಿಸಿ—ಮಾಡಿದ ನೋವನ್ನು ಕಣ್ಣಾರೆ ಕಂಡಾಗ ವಿಪರೀತ ವ್ಯಥೆಪಡುವವನ ದೈನ್ಯವಿತ್ತು ಆ ಕಣ್ಣುಗಳಲ್ಲಿ ಸುಮ್ಮನಾದಳು. ಶ್ರೀನಿವಾಸನೆಂದ:

"ನೀನು ನನ್ನಲ್ಲಿ ವಿಶ್ವಾಸವಿಡು, ಕಾವಿ—"

"ನಾನೇನು ವಿಶ್ವಾಸವಿಡುವುದು, ದೊರೆ? ಎಲ್ಲವೂ ನಿಮ್ಮದೆ...."

"ನೀನು ಎಷ್ಟುಮಾತ್ರವೂ ದುಃಖಪಡಬೇಕಾಗಿಲ್ಲ—"

"ಇದೆಲ್ಲವೂ ಸುಳ್ಳೆ ಹಾಗಾದರೆ?"

"ಮೋಸ!"

"ಚಂಪಕ್ಕ ಸುಳ್ಳು ಬರೆಯುತ್ತಾಳೆಯೆ? ಆಕೆ ಎಂದಿಗೂ ಸುಳ್ಳು ಹೇಳಿದವಳಲ್ಲ!"

"ಇದು ನೋಡು, ಕಾವಿ; ಇದುವರೆಗೆ ಕೆಲವೊಂದು ಮಾತು ನಿನ್ನ ಮುಂದೆ ನಾನು ಬೇಕೆಂತಲೆ ಹೇಳಲಿಲ್ಲ—"

ಕಾವೇರಿಗೆ ಎದೆ ಡವಡವ ಎಂದು ಮತ್ತೆ ಬಡಿದುಕೊಳ್ಳಲು ಸುರು ಮಾಡಿತು.

" ಈಗ ನಾಲ್ಕಾರು ತಿಂಗಳಿಂದ ಅವ್ವ ಸುಮ್ಮನೆ ಹಟ ಹಿಡಿಯುತ್ತಿದ್ದಾಳೆ —"

" ಏನೆಂದು ? "

" ನಾನು ಇನ್ನೊಂದು ಮದುವೆ ಮಾಡಿಕೊಳ್ಳಬೇಕಂತೆ—"

" ಯಾಕೆ ? "

" ನೀನು ಸುಮ್ಮನೆ ಕೆಡಕೆನಿಸಿಕೊಳ್ಳಬಾರದು. ಇದು ಆಕೆ ತಿಳಿದುಕೊಳ್ಳುವ ರೀತಿ. ನಿನಗೆ ಮಕ್ಕಳಾಗಲಿಲ್ಲ, ಅದಕ್ಕೆ...."

ಕಾವೇರಿ ನಿಟ್ಟುಸಿರೆಳೆದಳು. ಅರೆನಿಮಿಷ ತಡೆದು ಕೇಳಿದಳು :

" ಅದಕ್ಕೆ ನೀವು ಒಪ್ಪಿದಿರಾ ? "

" ಸಾಧ್ಯವೆ ಕಾವಿ, ಎಂದಿಗಾದರೂ ? "

" ಕಾಗದದಲ್ಲಿ ಬರೆದಿದೆಯಲ್ಲ ಮತ್ತೆ ? "

" ಅದೇ ಮೋಸ! ನಾನು ಮಾಡಿಕೊಳ್ಳುವುದೆ ಆಗಿದ್ದರೆ ನಿನ್ನನ್ನು ಒಂದು ಮಾತೂ ಕೇಳದೆ ಇರುತ್ತಿದ್ದೆನೆ ? "

" ಮತ್ತೆ ನಾನು ಒಪ್ಪಿದ್ದೇನೆ ಎಂದೂ ಹೇಳಿದಹಾಗಿದೆಯಲ್ಲ ? "

" ನನ್ನ ಒಪ್ಪಿಗೆಯನ್ನೆ ಅವರು ಹಾಗೆ ಹುಟ್ಟಿಸಿ ಹೇಳುತ್ತಿದ್ದಾಗ ಇದೇನು ದೊಡ್ಡ ಮಾತು ? "

ಕಾವೇರಿ ಮತ್ತೆ ಸುಮ್ಮನಾದಳು. ಶ್ರೀನಿವಾಸನ ಮಾತು ಮುಖ ನೋಡಿದರೆ ಆತ ಹೇಳುತ್ತಿದ್ದುದೆ ನಿಜವೆನಿಸುವಂತಿತ್ತು. ಕಾವೇರಿಗೆ ಆದರೂ ವಿಶ್ವಾಸವಾಗಲಿಲ್ಲ. ಎಂದಿಗೂ ಬರೆಯದ—ಸುಳ್ಳು ಹೇಳದ—ಚಂಪಕ್ಕ ಹಾಗೆ ಬರೆಯುತ್ತಿದ್ದಳೆ ?

" ಈಗ ನಾಲ್ಕಾರು ಬಾರಿ ನಾನು ಹೋದಾಗಲೆಲ್ಲ ಅವ್ವ ಈ ಮಾತನ್ನೆತ್ತಿ ಪರಿಪರಿಯಿಂದ ಹೇಳಿದರೂ ನಾನು ಒಪ್ಪಲಿಲ್ಲ. ಅಂತೆಯೆ ಈ ಮೋಸ ಮಾಡಿದರು ಕಾವಿ. ಅವರು ಮಾಡಿದ ಮೋಸ ನನಗೆ ತಿಳಿದದ್ದು ಈಗ! ನಿಜವಾಗಿಯೂ ಈಗ! "

" ನೀವು ಒಪ್ಪಿದ್ದೀರಿ ಎಂದು ಸುದ್ದಿ ಹಬ್ಬಿಸಿದರೆ ನೀವು ಒಪ್ಪೇ ಒಪ್ಪುವಿರಿ ಎಂದೆ ? "

" ಅದಲ್ಲ ಮೋಸ! "

" ಹಾಗಾದರೆ? "

" ಎಷ್ಟು ಹೇಳಿದರೂ ನಾನು ಒಪ್ಪಲಿಲ್ಲವಾದ್ದರಿಂದ ಅವರು ಆಕೆಯನ್ನೆ ಮುಂದುಮಾಡಿ ನನ್ನನ್ನು ಸೆಳೆಯುವ ಹೊಂಚುಹಾಕಿರಬೇಕು--"

" ಅಂದರೆ? "

" ಮನೆಯಲ್ಲಿ ಯಾರೂ ಇಲ್ಲದಾಗ ಆಕೆಯೆ ಬಂದು ನನ್ನನ್ನು ಮಾತಿಗೆ ಹಚ್ಚುವಂತೆ, ಮಾಡಿದರು—"

" ಆಗ ಗೊತ್ತಾಗಲಿಲ್ಲವೆ ನಿಮಗೆ? "

" ಹೇಗೆ ಗೊತ್ತಾಗಬೇಕು? ಇವರು ಮನಸ್ಸಿನಲ್ಲಿಟ್ಟುಕೊಂಡದ್ದು ಸುಮಿತ್ರೆಯನ್ನು ಎಂಬುದು ನನಗೆ ತಿಳಿದಿದ್ದರೆ ನಾನು ಆಕೆಯ ಕೂಡ ಮಾತನ್ನೆ ಆಡುತ್ತಿರಲಿಲ್ಲ."

" ಏನಿದ್ದರೂ ಆಕೆಯ ಕೂಡ ನೀವು ಮಾತನಾಡಲೆ ಬಾರದಾಗಿತ್ತು! "

" ಏನೊ, ಎಂದಿನಿಂದಲೂ ಗೊತ್ತಿದ್ದ ಹುಡುಗಿ—"

" ಏನು ಮಾತನಾಡಿದಳು? "

" ಏನೇನೊ ಹುಚ್ಚು ಮಾತು. ನನಗೆ ಮೊದಲೆ ತಿಳಿದಿದ್ದರೆ—"

" ಸೀರೆ ತರಲಿಕ್ಕೆ ಆಕೆಯೆ ಹೇಳಿದಳೆ? "

" ಹೌದು...."

" ಹಾಗಾದರೆ ಅದು ‘ ನಿಶ್ಚಯ ’ದ ಸೀರೆ ಅಲ್ಲವೆ? "

" ಖಂಡಿತವಾಗಿಯೂ ಅಲ್ಲ! "

" ಮತ್ತೆ ಸಿನೀಮಾಕ್ಕೆ ಹೋದದ್ದು, ಊರಲ್ಲಿ ಅಡ್ಡಾಡಿದ್ದು—ನಿಜವೆ? "

" ಸಿನೀಮಾಕ್ಕೆ ಹೋದದ್ದೇನೊ ನಿಜ; ಆದರೆ....ಅದು ಕೂಡ ಅನಿವಾರ್ಯವಾಗಿ—ಏನೊ ಮಾತು ಮುರಿಯದ್ದಕ್ಕಾಗಿ ಹೋದೆ—"

ಈ ಮಾತನ್ನು ಶ್ರೀನಿವಾಸ ಹೇಳಿರದಿದ್ದರೆಯೆ ಚೆನ್ನಾಗಿತ್ತು. ಈ ಮಾತಿನಲ್ಲಿ ಕಾವೇರಿ ವಿಶ್ವಾಸವಿಡುವುದು ಬಹಳ ಕಷ್ಟವಾಗಿತ್ತು. ಹಾಗೆ ನೋಡಿದರೆ ಶ್ರೀನಿವಾಸ ಹೆಚ್ಚು ಕಡಿಮೆ ಸಿನೀಮಾಗಳಿಗೆ ಹೋದವನೇ ಅಲ್ಲ. ಇನ್ನೊಬ್ಬ ಹೆಣ್ಣುಮಕ್ಕಳೊಡನೆ ಮುಖವೆತ್ತಿ ಮಾತನಾಡಿದವನೂ ಅಲ್ಲ. ಇದು ಕಾವೇರಿಗೆ ಎಂದಿನಿಂದಲೂ ಗೊತ್ತು. ಹೀಗಿದ್ದಾಗ, ಸುಮಿತ್ರಾ ಎಷ್ಟು ಪರಿಚಯದವಳಾದರೂ—ಯಾರೂ ಮನೆಯಲ್ಲಿ ಇಲ್ಲದಾಗ—ಬಂದು

ಮಾತನಾಡಿಸಿ ಸಿನೀಮಾಕ್ಕೆ ಕರೆದುಕೊಂಡು ಹೋಗುವುದು ಸಾಧ್ಯವಾಗ ಬೇಕಾದರೆ ಕೇವಲ ಮಾತಿಗೆ ಕಟ್ಟುಬೀಳುವುದೊಂದೆ ಕಾರಣ ಸಾಲದೆಂದು ಕಾವೇರಿಗೆ ತೋರಿತು. ಯೌವನ ಸೂಸುವ ಸುಮಿತ್ರೆಯ ದೇಹದ ಸೆಳೆತ ಆ ದಿನ ಶ್ರೀನಿವಾಸನನ್ನು ಯಾವ ರೀತಿಯಾಗಿ ಸೆರೆಹಿಡಿದಿತ್ತು ಎಂಬುದನ್ನು ಕಾವೇರಿ ತಿಳಿಯುವಂತಿದ್ದರೆ ಶ್ರೀನಿವಾಸ ಮಾತಿಗೆ ಕಟ್ಟುಬಿದ್ದಿರಬಹುದೆಂಬು ದನ್ನು ಒಪ್ಪಬಹುದಾಗಿತ್ತು. ಆದರೆ ಬಾಗಿಲುಕೋಟೆಯಲ್ಲಿ ನಡೆದ ಸನ್ನಿ ವೇಶದ ಆ ಭಾಗ ಕಾವೇರಿಗೆ ತಿಳಿಯುವುದೆಂತು? ಶ್ರೀನಿವಾಸನಾದರೂ ಅದನ್ನು ಹೇಗೆ ಹೇಳಿಯಾನು? ಹೇಳಿದ್ದರೆಯೆ ಚೆನ್ನಾಗಿತ್ತು. ಆದರೆ ಶ್ರೀನಿವಾಸನಿಗೆ ಅದನ್ನೆಲ್ಲ ವಿವರಿಸಲು ಬೇಕಾದ ನೈತಿಕ ಧೈರ್ಯ ಬರಲಿಲ್ಲ.

ಕಾವೇರಿಯ ಮುಖದ ಒತ್ತಡ ಎಷ್ಟೋ ಕಡಿಮೆಯಾಗಿತ್ತು. ಆದರೆ ಎದೆಯಲ್ಲಿಯ ಅಳುಕು ಕಡಿಮೆಯಾಗಲಿಲ್ಲ. ಕಾವೇರಿ ಸುಮ್ಮನಾದುದನ್ನು ನೋಡಿ, ಹೇಳಬೇಕಾದುದೆಲ್ಲವನ್ನೂ ಹೇಳಿದೆ ಎಂಬುದನ್ನು ನೆನೆದು ಶ್ರೀನಿವಾಸನಿಗೂ ಸಮಾಧಾನವಾಯಿತು. ಆದರೆ ಹೇಳಬೇಕಾದುದೆಲ್ಲವನ್ನೂ ಹೇಳಿರಲಿಲ್ಲವೆಂಬುದು ಆತನಿಗೆ ತಿಳಿಯದೆಹೋಯಿತು ಎಲ್ಲವನ್ನೂ— ಆಮೂಲಾಗ್ರವಾಗಿ—ಬಾಗಿಲುಕೋಟೆಯಲ್ಲಿ ನಡೆದುದೆಲ್ಲವನ್ನು, ತನ್ನ ಮೋಹವನ್ನು, ಅದರ ವಿಪರೀತವನ್ನು, ಎಲ್ಲವನ್ನೂ ಶ್ರೀನಿವಾಸ ವಿವರಿಸಿ ದ್ದರೆ ಕಾವೇರಿಯ ಹೃದಯದಲ್ಲಿ ಉಳಿದ ಅಳುಕೂ ಮಾಯವಾಗುತ್ತಿತ್ತು. ಆದರೆ ಕಾವೇರಿ ಸುಮ್ಮನಾದದ್ದನ್ನು ನೋಡಿ ಹೇಳಿದಷ್ಟು, ಹೇಳಿದ್ದು, ಸರಿಯಾಯಿತೆಂದು ಶ್ರೀನಿವಾಸ ಭಾವಿಸಿದ. ಆದರೆ ಕಾವೇರಿಗೆ ಶ್ರೀನಿವಾಸ ಸುಮಿತ್ರೆಯ ಜೊತೆಯಲ್ಲಿ ಏಕಾಂತವಾಗಿ ಇದ್ದದ್ದು, ಸಿನೀಮಾಕ್ಕೆ ಹೋದದ್ದು, ಅದರನಂತರ ಈ ವಿಷಯವನ್ನು ಪತ್ರ ಬರುವ ವರೆಗೆ ತನಗೆ ತಿಳಿಸದೆ ಇದ್ದದ್ದು, ಸೀರೆಯನ್ನು ಕೊಳ್ಳುವಾಗ ಆತ ತೋರಿಸಿದ ಆತುರ–ಅಭಿ ಲಾಷೆಗಳು, ಅದನ್ನು ಮರುದಿನವೆ ಕಳಿಸಿಕೊಟ್ಟದ್ದು—ಈ ಎಲ್ಲ ವಿಷಯಗಳು ಸಂಶಯಕ್ಕೆ ಆಸ್ಪದಕೊಡುವಂತಿದ್ದವು. ಈ ಎಲ್ಲ ವಿಷಯಗಳನ್ನು ಎತ್ತಿ ಕೊಂಡು, ಒಂದೊಂದಾಗಿ ಕೂಲಂಕಷವಾಗಿ ಕೇಳಲು ಅದೇಕೊ ಕಾವೇರಿಗೆ ಮನಸ್ಸಾಗಲಿಲ್ಲ. ಅವಳ ಯೋಚನೆ ಆಗಲೆ ಬೇರೊಂದು ದಿಕ್ಕಿನಲ್ಲಿ ಓಡ ತೊಡಗಿತ್ತು. ಈಗಾಗಲೆ ಶ್ರೀನಿವಾಸ ಬೇಕಾದಷ್ಟು ನೊಂದುಕೊಂಡಿದ್ದ.

ಆತನನ್ನು ಮತ್ತೆ ನೋಯಿಸುವುದು ಸರಿಯಲ್ಲವೆಂದುಕೊಂಡಳು. ಆತನ ಮುಖವನ್ನು ನೋಡಿದಾಗ 'ಇದು ನಿಜವಾಗಿಯೂ ಮೋಸ; ಶ್ರೀನಿವಾಸ ಹೀಗೆ ಎಂದಾದರೂ ಮಾಡಿಯಾನೆ? ಆತ ಒಪ್ಪಿರುವುದು ಸಾಧ್ಯವೆ ಇಲ್ಲ' ಎಂದೆನಿಸುತ್ತಿತ್ತು. ಆದರೆ ಉಳಿದ ವಿಷಯಗಳನ್ನು ನೆನೆದಾಗ ಆತ ನೇರ ವಾಗಿ ಪೂರ್ತಿಯಾಗಿ ಒಪ್ಪಿರದಿದ್ದರೂ ಕೆಲಮಟ್ಟಿಗಾದರೂ ಅಂಥ ಯೋಚನೆ ಆತನಲ್ಲಿರಲೇಬೇಕು; ಇಲ್ಲದಿದ್ದರೆ ನಡೆದುದೆಲ್ಲವೂ ನಡೆಯುತ್ತಿತ್ತೆ? ಎಂದೂ ಕೇಳಿಕೊಳ್ಳುವಂತಾಗುತ್ತಿತ್ತು ಮುಂದೆ ಎಷ್ಟೋಹೊತ್ತು ಮಾತು ನಡೆಯಿತು. ಪರಿಪರಿಯಿಂದ ಶ್ರೀನಿವಾಸ ಕಾವೇರಿಗೆ ಸಮಾಧಾನ ಹೇಳಿದ; ಆಶ್ವಾಸನ ಕೊಟ್ಟ. ಆದರೆ ಕಾವೇರಿಯ ಮನಸ್ಸು ವಿಶ್ವಾಸ-ಅವಿಶ್ವಾಸಗಳ ನಡುವೆ ಉಯ್ಯಾಲೆಯಾಡಿತು.

ಶ್ರೀನಿವಾಸನಿಗೆ ನಿದ್ರೆ ಹತ್ತಿತು. ನಡುರಾತ್ರಿ ಮೀರಿಹೋಗಿತ್ತು. ಕಾವೇರಿ ದೀಪವನ್ನಾರಿಸಿ ಬಂದು ಮಲಗಿದಳು. ಎಷ್ಟು ಹೊರಳಾಡಿದರೂ ನಿದ್ರೆ ಬಾರಲೆ ಇಲ್ಲ. ಕೆಲವೊಂದು ವಿಷಯದಲ್ಲಿ ಮನಸ್ಸಿಗೆ ಸಮಾಧಾನ ದೊರಕಿದ್ದರೂ ಮತ್ತೊಂದು ತುಮುಲಕ್ಕೆ ಅದು ಸಿಕ್ಕಿಕೊಂಡಿತ್ತು. ಶ್ರೀನಿವಾಸ ಎಲ್ಲವನ್ನೂ—ನಿಜವಾಗಿ ಎಲ್ಲವನ್ನೂ ಹೃದಯವನ್ನು ಬಿಚ್ಚಿಟ್ಟಂತೆ— ಹೇಳಿದನೆ? ಸಾಧ್ಯವಾಗಿ ಕಾಣಲಿಲ್ಲ. ಆತ ಹೇಳಿದ್ದು ತನ್ನ ವರ್ತನೆಗೊಂದು ಸಮರ್ಥನೆಯಾಗಿದ್ದಿತು, ಆದರೆ ಮನಸ್ಸನ್ನು ಸ್ಪಷ್ಟವಾಗಿ ಬಿಚ್ಚಿ ತೋರಿಸಿರ ಲಿಲ್ಲ. ಆದರೆ ಸಾಧ್ಯವೆ ಅದು? ಕಾವೇರಿಗೆ ವಿಚಿತ್ರವೆನಿಸಿರಬೇಕು. ಇಷ್ಟು ಹತ್ತಿರ ಮಲಗಿದ್ದರೂ ಹೃದಯ ಎಷ್ಟು ದೂರವಾಗಿದೆ? ಅಥವಾ ದೂರವಾಗಿರ ಬಹುದು? ಗಂಡ ಹೆಂಡಿರ ದೇಹ ಬೇರೆ, ಹೃದಯ ಒಂದು—ಎಂದು ಹೇಳು ವುದು ಒಂದು ಅತಿಶಯೋಕ್ತಿಯಲ್ಲವೆ? ಯಾರ ಹೃದಯವನ್ನು ಯಾರು ಬಲ್ಲರು? ಒಂದು ವ್ಯಕ್ತಿಗೆ ನಾವು ಎಷ್ಟು ಹತ್ತಿರದವರಾದರೂ ಆ ವ್ಯಕ್ತಿತ್ವದ ಹೊರವಲಯದಲ್ಲಿಯೆ ನಾವು ಸುತ್ತಾಡುತ್ತಿರುವುದು. ಹೃದಯದ ಗರ್ಭ ಗುಡಿಯಲ್ಲಿಯ ದೇವರ ಅಥವಾ ದೈತ್ಯನ ದರ್ಶನ ಇನ್ನೊಬ್ಬರಿಗೆ ಆಗುವು ದಂತೂ ಇರಲಿ, ಸ್ವತಃಕ್ಕಾದರೂ ಸಿಕ್ಕುತ್ತದೆಯೊ ಇಲ್ಲವೊ!

ಶ್ರೀನಿವಾಸನಿಗೆ ಮಕ್ಕಳ ಹಂಬಲ ಇದ್ದಿತೆಂಬುದೂ ಆ ಹಂಬಲಕ್ಕಾಗಿ ಇನ್ನೊಂದು ಮದುವೆಯನ್ನು ಮಾಡಿಕೊಳ್ಳಲು ಸ್ಪಷ್ಟವಾಗಿ ಒಪ್ಪದಿದ್ದರೂ

ಇನ್ನೊಂದು ಮದುವೆಯನ್ನು ಮಾಡಿಕೊಂಡಾದರೂ ಮಕ್ಕಳನ್ನು ಪಡೆಯಬೇಕು ಎನ್ನುವಷ್ಟು ಆ ಹಂಬಲ ಬಲವಾಗಿದೆ ಎಂಬುದೂ ಕಾವೇರಿಗೆ ಮನವರಿಕೆಯಾಯಿತು. ಆ ದಿಕ್ಕಿನಲ್ಲಿ ಆತನ ಮನಸ್ಸು ಓಡುತ್ತಲಿದೆ ಎಂಬುದರ ವಿಷಯದಲ್ಲಿ ಆಕೆಗೆ ಸಂದೇಹವೆ ಉಳಿಯಲಿಲ್ಲ. ಪತ್ರದಲ್ಲಿ ಬರೆದ ವಿಷಯ ಹೇಗೇ ಇರಲಿ, ಆತನ ಮಾತಿನಿಂದಲೆ ಇಷ್ಟು ನಿಷ್ಕರ್ಷೆಯಾಗುತ್ತಿತ್ತು. ಎಂದಮೇಲೆ? ತನಗೆ ಮಕ್ಕಳು ಬೇಡವಾಗಿವೆಯೆ? ಆದರೆ ಯಾವ ಕರ್ಮಕ್ಕೋ ಅವು ತನ್ನ ಪಾಲಿಗಿಲ್ಲ. ಇಲ್ಲ ಎಂದಮೇಲೆ ಎಲ್ಲರ ಮಕ್ಕಳೂ ತನ್ನವು ಎಂಬ ಸಮಾಧಾನವನ್ನು ಪಡೆಯುವುದು ಅಸಾಧ್ಯವೇನೂ ಅಲ್ಲ. ಆದರೆ ಶ್ರೀನಿವಾಸನಿಗೆ ಅಂಥ ಸಮಾಧಾನ ಬೇಡವಾಗಿರಬೇಕು. ಆದರೆ ಅದನ್ನೆಲ್ಲ ಏನು ಮಾಡುವುದು? ಆತ ಇನ್ನೊಂದು ಮದುವೆಯಾಗುವಂತೆ ತಾನೇ ಒಪ್ಪಿದರೆ ಏನಾದೀತು? ಯೋಚನೆ ಬೇಗನೆ ಬಲು ದೂರ ಓಡಿತು ಚಂಪಕ್ಕ ಬರೆದಿರಲಿಲ್ಲವೆ? 'ನಿನ್ನ ಕೈಯಿಂದ ನೀನೇ ನಿನ್ನ ಬದುಕನ್ನು ಹಾಳುಮಾಡಿಕೊಳ್ಳಬೇಡ' ಎಂದು. ಹಾಳೇನು ಅದರಲ್ಲಿ? ಶ್ರೀನಿವಾಸನಿಂದ ಹೆಚ್ಚಿನ ವಿಶ್ವಾಸವನ್ನು ಗಳಿಸಬಹುದಲ್ಲವೆ? ಯಾರು ಹೇಳಬೇಕು? ಸುಮಿತ್ರಾ! ಆಕೆ ಶ್ರೀನಿವಾಸನನ್ನು ತನ್ನೆಡೆಗೆ ನೋಡಲೂ ಬಿಡಲಿಕ್ಕಿಲ್ಲ! ನೋಡದೆಯೂ ಇರಲಿ! ಆತನಿಗೆ ಸುಖವಾಗಬಹುದಲ್ಲವೆ? ಆದರೆ ಅಷ್ಟಕ್ಕೇ ನಿಲ್ಲದೆ, ತನಗೆ ಒಂದು ಆಶ್ರಯಸ್ಥಾನವೂ ಇಲ್ಲದ ಹಾಗೆ ಸುಮಿತ್ರಾ ಮಾಡಿದರೆ? ಆ ಯೋಗ್ಯತೆ ಸುಮಿತ್ರೆಯಲ್ಲಿದೆ ಎಂದುಕೊಂಡಳು. ಆಗ ಮಾತ್ರ ಕಾವೇರಿಯ ಹೃದಯ ನಡಗಿತು. ತನಗೆ ಇದ್ದ ಒಂದು ಆಶ್ರಯಸ್ಥಾನ! ಅಯ್ಯೋ! ತನಗೆ ಯಾರೂ ಇಲ್ಲವಲ್ಲ! ಎಂದು ಮೊರೆ ಇಟ್ಟಿತು, ಹೃದಯ. ಆದರೂ—ಆದರೂ—ಪತಿಭಕ್ತಿ—ಎಂಥ ಹುಚ್ಚು? ಪತಿಯನ್ನು ಇನ್ನೊಬ್ಬರಿಗೆ ಕೊಟ್ಟುಬಿಡುವುದೂ ಭಕ್ತಿಯೆ? ಅದರಿಂದ ಪತಿಗೆ ಸಂತೋಷವಾಗುತ್ತಿದ್ದರೆ? ಅವನೆಂಥ ಪತಿ? ಆದರೂ ಹಿಂದೆ ಹೀಗೆ ಯಾರೂ ಮಾಡಿಲ್ಲವೆ? ಗಂಡನನ್ನು ತೊಟ್ಟಿಲಲ್ಲಿ ಹೊತ್ತುಕೊಂಡು ವೇಶ್ಯೆಯ ಮನೆಗೆ ಮುಟ್ಟಿಸುವಾಗ ಮಾಂಡವ್ಯನಿಂದ ಶಾಪಗ್ರಸ್ತಳಾದ ಸತಿ ಸೂರ್ಯನನ್ನೆ ತಡೆಯಲಿಲ್ಲವೆ? ಅಂಥ ಒಂದು ಕತೆ ಇರಲಿಲ್ಲವೆ ಪುರಾಣದಲ್ಲಿ; ಅದೆಂತಹ ಹುಚ್ಚುತನ, ' ಎಂದೆನಿಸಿತು ಒಂದು ಕ್ಷಣ. ಆದರೆ—ಅದು

ಹುಚ್ಚುತನವಲ್ಲ ಎಂದೆನಿಸಿತು ಇನ್ನೊಂದು ಕ್ಷಣ. ಅದರಿಂದಲೇ ಆಕೆಗೆ ಉದ್ಧಾರವಾಯಿತು. ಅದು ಆತ್ಮಸಮರ್ಪಣೆಯಿಂದ ಆತ್ಮೋದ್ಧಾರ! ಆತ್ಮೋದ್ಧಾರವೆ? ಛೆ! ಅದು ಆತ್ಮಹತ್ಯೆ! ಎಂದಿತು ಒಂದು ಮನಸ್ಸು. ಕಾವೇರಿಗೆ ನಿದ್ರೆ ಬಾರಲೆ ಇಲ್ಲ. ಸಾವಿರ ಯೋಜನೆಗಳಲ್ಲಿ ಸಿಲುಕಿ ಒಂದು ದಡಕ್ಕೆ ಮುಟ್ಟಲಾಗದೆ ಅಲ್ಲಿ ತಟ್ಟಿ, ಇಲ್ಲಿ ತಡೆದು, ಅತ್ತ ಓಡಿ ಇತ್ತ ನಿಂತು, ಮತ್ತೆ ಮುಂದಕ್ಕೆ ಸಾಗುವ ನದಿಯಲ್ಲಿ ತೇಲಿಬಿಟ್ಟ ಕಾಗದದ ನಾವೆಯಂತೆ ಒದ್ದಾಡಿತು ಕಾವೇರಿಯ ಮನಸ್ಸು. ತಾನು ಮಕ್ಕಳನ್ನು ಹಡೆದು, ಶ್ರೀನಿವಾಸನಿಗೆ ಸುಖವನ್ನುಂಟುಮಾಡುವ ಭಾಗ್ಯವನ್ನಂತೂ ಪಡೆಯಲಿಲ್ಲ. ಆದರೆ ತಾನು ಆತ ಇನ್ನೊಂದು ಮದುವೆಯನ್ನು ಮಾಡಿಕೊಳ್ಳುವಂತೆ ಒಪ್ಪಿಗೆ ಕೊಡದಿದ್ದರೆ—ಅದೂ ಸ್ವಾರ್ಥಕ್ಕಾಗಿ—ಅವನಿಗೆ ಸಿಕ್ಕಬಹುದಾದ ಸುಖವನ್ನು ತಾನೇ ಕಸಿದುಕೊಂಡಂತಾಗುವುದಿಲ್ಲವೆ? ಅದನ್ನು ಮಾಡಲಿಕ್ಕೆ ತನಗೇನಧಿಕಾರ? ಕಾವೇರಿಗೆ ಯಾವ ಗಳಿಗೆಯಲ್ಲಿ ಈ ವಿಚಾರ ಮೊದಲಾಯಿತೊ! ತನ್ನ ಯೋಜನೆಯೆ ಆಕೆಗೆ ಉಳಿಯಲಿಲ್ಲ. ತಾನು ಏನಾದರೂ ಸರಿ, ಶ್ರೀನಿವಾಸನಿಗೆ ಬೇಕಾದ ಸುಖ ಆತನಿಗೆ ದೊರಕುವಂತೆ ಯತ್ನಿಸಬೇಕೆಂದಳು. ತನಗೆ ಕಷ್ಟವಾಗಬಹುದು. ಆದರೆ ಆಗಬೇಕಾದದ್ದಿಲ್ಲ. ಅದಕ್ಕೂ ದಾರಿಯಿಲ್ಲವೆ? ಏನೊ ಹೊಳೆಯಿತು. 'ಕಾವೇರಿ ಹಾಸಿಗೆಯಲ್ಲಿ ಎದ್ದೇ ಕುಳಿತಳು—ಸರಿ, ಆದರೆ ಶ್ರೀನಿವಾಸನೊಬ್ಬ ಒಪ್ಪಬೇಕಲ್ಲ? ಒಪ್ಪುತ್ತಾನೆಯೆ? ಒಪ್ಪಬಹುದು—ಮೊದಮೊದಲು ಬೇಡ ಎಂದರೂ ನೋಡುವಾ, ಎಂದು ಸಮಾಧಾನ ತಂದುಕೊಂಡಳು. ಆ ಸಮಾಧಾನದ ಮಡಿಲಲ್ಲಿಯೆ ಕಾವೇರಿ ಮಲಗಿದಳು ಇಡಿ ರಾತ್ರಿ ಸೆಕೆಯಲ್ಲಿ ಬೆಂದ ದೇಹ ಬೆಳಗಿನ ಸುಳಿಗಾಳಿ ಸೂಸಿದಾಗ ನಿದ್ರೆ ಪಡೆಯುವಂತೆ ಕಾವೇರಿಯ ಮನಸ್ಸು ಯಾವುದೊ ಒಂದು ದೂರದ, ಅಪಾರವಾದ, ಅಗೋಚರವಾದ ಶಾಂತಿಯಿಂದ ನೆಮ್ಮದಿ ಪಡೆದು ನಿದ್ರೆಹೋಯಿತು.

ಬೆಳಿಗ್ಗೆ ಇಬ್ಬರೂ ದಿನದಕಿಂತ ತಡವಾಗಿಯೆ ಎದ್ದರು ದೇಹಗಳು, ಕಣ್ಣುಗಳು ಭಾರವಾಗಿದ್ದರೂ ಮನಸ್ಸು ಹಗುರಾಗಿಯೆ ಇದ್ದಿತು ರಾತ್ರಿಯ ಯೋಜನೆಗಳ ಮುಸುಕು ಇನ್ನೂ ಕೆಲಮಟ್ಟಿಗೆ ಇದ್ದಿತು. ಮಳೆಗಾಲದ ಬೆಳಗಿನಲ್ಲಿ ಬೆಳಕಾಗಿದ್ದರೂ ನಿದ್ದೆಗಣ್ಣಿನಲ್ಲಿ ಎದ್ದ ಮನುಷ್ಯನ ಮನಸ್ಸಿನಂತೆ

ಆಕಾಶ ಕವಿದದ್ದ ಇರುವುದಿಲ್ಲವೆ ? ಆದರೆ ಸೂರ್ಯ ಮೇಲಕ್ಕೇರಿದ ಹಾಗೆ ಮೋಡ ಸರಿಯುತ್ತದೆ; ಬೆಳಕು ಬೆಳೆಯುತ್ತದೆ. ಅದೆ ಸ್ನಾನ ಮುಗಿಸಿ ಹಸನಾದ ಬಣ್ಣ ಬಣ್ಣದ ಬಟ್ಟೆಗಳನ್ನು ಧರಿಸಿದ ಗೃಹಿಣಿಯಂತೆ ಸುತ್ತಲಿನ ಪ್ರಪಂಚ ಕಣ್ಣು ಸೆಳೆಯುತ್ತದೆ. ಕಾವೇರಿಗೂ ಹಾಗೆಯೆ ಆಯಿತು. ಬೆಳಗಿನ ಎಲ್ಲ ಕೆಲಸಗಳನ್ನು ಚಟುವಟಿಕೆಯಿಂದ ಪ್ರಾರಂಭಿಸಿದವಳು ಶ್ರೀನಿವಾಸನ ಎಲ್ಲ ಅಗತ್ಯಗಳನ್ನು ಪೂರೈಸುವಂತೆ ನೋಡಿಕೊಂಡಳು. ಮೊದಲ ದಿನದ ಮುಚ್ಚಂಜೆಯ ದುಗುಡ ಎಲ್ಲಿಯೊ ಮಾಯವಾಗಿತ್ತು. ಮನಸ್ಸು ಯಾವುದೊ ಒಂದು ಹೇಳಲಾಗದ ನಿತ್ಯಸಂತೋಷದ ಮಡುವಿನಲ್ಲಿ ಸಿಕ್ಕು ಅಲ್ಲಿ ಸುಳಿಯುವುದೆ ಪರಮಸಂತೋಷವೆಂದು ಬಗೆದಂತಿತ್ತು. ಆತ್ಮ ಸಮರ್ಪಣೆಯ ಸಂತೋಷಕ್ಕೆ ಸಾಟಿಯಾಗಬಲ್ಲ ಬೇರೆ ಸಂತೋಷವಿದೆಯೆ ?

ಅಂದು ಸಾಯಂಕಾಲ ಶ್ರೀನಿವಾಸ ಮನೆಗೆ ಬಂದಾಗ ಕಂಡಷ್ಟು ಚೆಲುವೆಯಾಗಿ ಕಾವೇರಿ ಎಂದಿಗೂ ಕಂಡಿರಲಿಲ್ಲ. ಸಾಧ್ಯವಿದ್ದ ಸಾತ್ವಿಕ ಸಾಧನೆಗಳೆಲ್ಲವನ್ನೂ ಬಳಸಿ ಸಾಧ್ಯವಿದ್ದಷ್ಟು ಸುಂದರಿಯಾಗಿ ಕಾಣಬೇಕೆಂಬ ಕಾವೇರಿಯ ಪ್ರಯತ್ನ ಸಫಲವಾಗಿತ್ತೆಂದೆ ಹೇಳಬೇಕು. ಆಕೆಯನ್ನು ನೋಡಿದಾಕ್ಷಣ ಶ್ರೀನಿವಾಸನೆ ಅಚ್ಚರಿಯಾದ. ಕಾವೇರಿಯೇ ಇವಳು ? ಎಂದಿರಬೇಕು ಆತನ ಮನಸ್ಸು. ಅನಿರೀಕ್ಷಿತವಾಗಿ ಆತನ ಮನಸ್ಸು ಸುಮಿತ್ರೆಯೊಡನೆ ಆಕೆಯನ್ನು ಹೋಲಿಸಿ ನೋಡಿತು ಕಾವೇರಿಯ ಎದುರು ಸುಮಿತ್ರೆಯ ಲಾವಣ್ಯ ಮಾಯವಾಯಿತು ಆ ಎಲ್ಲ ಬೆಡಗು ಬಣ್ಣದ್ದು, ಕೃತಕವಾದದ್ದು, ಅಲ್ಪ ಕಾಲದ್ದೆ ಎಂದೆನಿಸಿತೊ ಏನೊ! ಆದ್ದರಿಂದ ಕಾವೇರಿಯನ್ನು ಕೇಳದೆ ಆತನ ಕುತೂಹಲಕ್ಕೆ ಸಮಾಧಾನವಿಲ್ಲ.

"ಏನು ಇದು ? ಏನೊ ವಿಶೇಷವಾಗಿದೆಯಲ್ಲ ?"

"ವಿಶೇಷ ಏನಿದೆ ? ನಾನೇ ಇದ್ದೇನೆ !"

"ನೀನೇ ಆದರೂ—ಇಷ್ಟೇಕೆ ಎಂದೆ...."

"ಇಷ್ಟೇಕೆ ಏನು ?"

"ಏನು, ನಿನಗೆ ತಿಳಿಯದೆ ?"

"ನಿಮ್ಮ ಸಂತೋಷ ಒಂದೇ ನನಗೆ ತಿಳಿಯುವುದು !"

"ನಿನಗಿಲ್ಲವೆ ಸಂತೋಷ ?"

"ನಿಮಗಾದರೆ ನನಗೆ!"

"ಅಂದರೆ ಇಬ್ಬರಿಗೂ ಅಲ್ಲವೆ?"

ಎಂದವನೆ—.

ಉಪಹಾರ ಸಿದ್ಧವೆ ಇದ್ದಿತು. ಇದೆಲ್ಲವನ್ನು ನೋಡಿ ಶ್ರೀನಿವಾಸನಿಗೆ ಮಾತಿಗೆ ಮೀರಿದ ಸಮಾಧಾನವಾಯಿತು. ಮುನ್ನಾದಿನದ ಪತ್ರದ ಮೂಲಕ ಮತ್ತೆಲ್ಲಿ ಎಲ್ಲವೂ ಹದಗೆಟ್ಟುಹೋಗುವುದೊ ಎಂದು ಹೆದರಿದ್ದ ಆತನಿಗೆ ಬೆಳಗಿನಿಂದ ಸಿಕ್ಕುತ್ತಿದ್ದ ಎಲ್ಲವೂ ಸರಿಯಾಗಿದೆ ಎಂಬ ಆಶ್ವಾಸನ ಸಾಯಂಕಾಲದಲ್ಲಿ ಸಂಪೂರ್ಣವಾಗಿ ಸಿಕ್ಕಂತಾಯಿತು. ಉಪಹಾರದನಂತರ ಅಲ್ಲಿಯ ಇಲ್ಲಿಯ ಮಾತಾದಮೇಲೆ ಶ್ರೀನಿವಾಸನೆಂದ:

"ಎಲ್ಲಿಯಾದರೂ ಸುತ್ತಾಡಿಕೊಂಡು ಬರೋಣವೆ?"

"ಎಲ್ಲಿ ಸುಮ್ಮನೆ? ಅಲ್ಲದೆ, ನಾನು ಅಡಿಗೆಯನ್ನು ಮಾಡಿ ಇಡಲಿಲ್ಲ. ಮೊದಲೆ ಹಾಗೆ ಹೇಳಿದ್ದರೆ—"

"ಅಡಿಗೆಯದೇನು? ಬಂದಮೇಲೆ ಮಾಡಿದರೂ ಆದೀತು."

"ಅಲ್ಲದೆ, ನೀವು ಪೇಟೆಯಲ್ಲಿ ಹೋಗಿಬರಬೇಕು."

"ಸಾಮಾನು ತರಬೇಕಾಗಿದೆಯೊ? ಏನು?"

"ನಾಳೆ ಏನಾದರೂ ಪಕ್ವಾನ್ನ ಆಗಬೇಕು!"

"ಯಾಕೆ?"

"ನಾಳೆ ವಿಟಪೌರ್ಣಿಮೆ!"

"ಅದಕ್ಕೆ ಏನಾಗಬೇಕು?"

"ಆಗುವುದು ಆಗುತ್ತದೆ. ಒಂದಿಷ್ಟು ದ್ರಾಕ್ಷಿ ಕೇಶರ ಬೇಕು."

"ಸರಿ! ಏನೊ ಭಾರಿ ಕಾರ್ಯಕ್ರಮ ಇದ್ದಹಾಗಿದೆ ನಾಳೆ."

"ಹುಂ...." ಎಂದು ಅದೇಕೊ ಕಾನೇರಿ ಮುಖ ತಿರುವಿದಳು.

"ಹಾಗಿದ್ದರೆ, ಗಂಗಾಧರ ಕಾಮೇಶರಿಗೆ ಊಟಕ್ಕೆ ಹೇಳಲೆ?"

"ಹೇಳಬಹುದು. ಆದರೆ ಈಗ ಅವರ ಕಡೆಗೆ ಹೋಗುತ್ತೀರಾ?"

"ಪೇಟೆಯಿಂದ ಬರುವಾಗ ಹಾಯ್ದುಬರುತ್ತೇನೆ."

"ಇನ್ನೊಂದು ಸಾಮಾನು...."

"ಮತ್ತೇನು?"

" ಮೀಳೆಯುದೆಲೆ ! "

" ಇಂದಿಗೊ ನಾಳೆಗೊ ? " ಎಂದು ಶ್ರೀನಿವಾಸ ನಕ್ಕ.

" ತಂದಮೇಲೆ ನೀವು ಹೇಳಿದ ಹಾಗೆ ! "

" ಇಂದಿಗೆ ತಂದರೆ ನಾಳೆಗೂ ಆಗುತ್ತದಲ್ಲ...."

" ಅಂತೂ ಇಂದಿಗೆ ಮುಖ್ಯ ! " ಎಂದು ತುಂಟು ನಗೆ ಬೀರಿದಳು.

" ಅಲ್ಲವೆ ? "

ರಾತ್ರಿ ಶ್ರೀನಿವಾಸ ಬಂದಾಗ ಎಲೆ ಬಡಿಸಿಟ್ಟು ಕಾವೇರಿ ಕಾಯುತ್ತ ನಿಂತಿದ್ದಳು. ಊಟವಾಯಿತು. ಸರಸಸಲ್ಲಾಪವಾಯಿತು. ರಸದೂಟವಾಯಿತು. ವೇಳೆ ಹೇಗೆ ಸರಿಯಿತೊ ! ಅದರ ಪರಿವೆಯೆ ಇಲ್ಲ ಇಬ್ಬರಿಗೂ. ಮಾತು ನಡೆದೇ ಇತ್ತು. ಕೊನೆಗೆ, ಕಾವೇರಿ ಕೇಳಿದಳು :

" ನಿಮ್ಮನ್ನೊಂದು ಮಾತು ಕೇಳಿದರೆ ನೀವು ಕೋಪಿಸಿಕೊಳ್ಳುತ್ತೀರಾ ? "

" ಅದೇನು ಕಾವಿ, ಹೀಗೆ ಕೇಳುತ್ತೀ ? ಇಷ್ಟು ಹೊತ್ತಿನವರೆಗೆ—"

" ಆದರೂ—"

" ಉಂಟೆ ಎಲ್ಲಾದರೂ ? ಬೇಕಾದುದನ್ನು ಕೇಳು."

ನಿಜವಾಗಿಯೂ ಕಾವೇರಿ ಏನು ಬೇಕಾದುದನ್ನು ಹೇಳಿದರೂ ಕೇಳುವ ಮಾಡುವ ಮನಃಸ್ಥಿತಿಯಲ್ಲಿದ್ದ ಶ್ರೀನಿವಾಸ.

" ಕೇಳಿದರೆ ಮಾಡುತ್ತೀರಾ ? "

" ಖಂಡಿತವಾಗಿ ಮಾಡುತ್ತೇನೆ—ಸಾಧ್ಯವಿದ್ದರೆ."

" ಸಾಧ್ಯವಿದೆ...."

" ಹಾಗಾದರೆ ಹೇಳು ನೋಡುವ. ಏನದು ? "

" ಮಾಡುತ್ತೇನೆ ಎಂದು ಹೇಳಬೇಕು...."

" ಸರಿ, ಇದೆಂಥ ಮಾತು, ಕಾವಿ ? ಹೇಳಿದೆನಲ್ಲ ಮತ್ತೆ ? "

" ಸಾಧ್ಯವಿದ್ದರೆ ಎಂದಿರಿ ? "

" ಹೌದು, ಇಲ್ಲದಿದ್ದರೆ ಹೇಗೆ ಮಾಡಬಹುದು ? ಏನದು ಹೇಳಬಾರದೆ ? "

ಒಂದರೆನಿಮಿಷ ತಡೆದು ಕಾವೇರಿ ಕೇಳಿದಳು :

"ನಿಮಗೆ—ಮಕ್ಕಳೆಂದರೆ ಬಹಳ ಇಷ್ಟವಲ್ಲವೆ?"

ಶ್ರೀನಿವಾಸನಿಗೆ ಕಾವೇರಿಯ ಮಾತಿನ ಹೊಳವು ಅರ್ಥವಾಯಿತು. ಅದಕ್ಕೆ ಆತ ಸಿದ್ಧನಾಗಿಯೆ ಇದ್ದಂತಿತ್ತು. ಬೆಳಗಿನಿಂದ—ಅದೇಕೆ ತಾನು ಈ ಸಲ ಬಾಗಿಲುಕೋಟೆಯಿಂದ ಬಂದಾಗಿನಿಂದ—ಕಾವೇರಿ ನಡೆದುಕೊಳ್ಳು ತ್ತಿದ್ದ ಬಗೆಯನ್ನು ನೆನೆದು ಆತ ಆ ವಿಷಯದಲ್ಲಿ ನಿಷ್ಕರ್ಷೆಯನ್ನು ಮಾಡಿ ಕೊಂಡಿದ್ದ. ಪ್ರಶ್ನೆ ಅನಿರೀಕ್ಷಿತವಾಗಿದ್ದರೂ ಉತ್ತರ ಸ್ಪಷ್ಟವಾಗಿಯೆ ಇದ್ದಿತಾದ್ದರಿಂದ ನಿಧಾನವಾಗಿ ಹೇಳಿದ ನಸುನಕ್ಕು—

"ನಿನಗೂ ಇಷ್ಟವಲ್ಲವೆ?"

"ನನ್ನ ಮಾತಿರಲಿ. ನಿಮಗೆ?"

"ಇಷ್ಟವೊ ಅಲ್ಲವೊ! ಅದನ್ನೆಲ್ಲ ಈಗ ಏನು ಮಾಡುವುದು?"

"ನೋಡಿದಿರಾ? ಮೊದಲೇ ಗೊತ್ತು, ನೀವು ಹೀಗೆ ಹೇಳುವುದು."

"ನನಗೆ ಗೊತ್ತು ನಿನ್ನ ಮುಂದಿನ ಪ್ರಶ್ನೆ...."

"ಏನು ಹೇಳಿರಿ, ನೋಡೋಣ!"

"ಸುಮಿತ್ರೆಯನ್ನು ನಾನು ಏಕೆ ಮದುವೆ ಮಾಡಿಕೊಳ್ಳಬಾರದು ಎಂದು. ಹೌದೆ?"

"ಹೌದು—"

"ಸರಿಯಾಯಿತಲ್ಲ...."

"ಹಾಗೆ ಹೇಳಿದರೆ ಉತ್ತರ ಹೇಳಿದ ಹಾಗಾಗಲಿಲ್ಲ."

"ಅದಕ್ಕೆ ಉತ್ತರ ಹೇಳಬೇಕೆ?"

"ಉತ್ತರ ಹೇಳಬೇಕು ಎಂದು ಅಲ್ಲವೆ, ನಾನು ಕೇಳಿದ್ದು?"

"ನಿನಗೇನು ಹುಚ್ಚೆ, ಕಾವಿ?"

"ಮೊದಲು ಇದ್ದಿತು, ಈಗ ಇಲ್ಲ!"

"ಸುಮ್ಮನೆ ಏನಾದರೊಂದು ತಲೆಯಲ್ಲಿ ಹಾಕಿಕೊಳ್ಳಬೇಡ. ನಿನ್ನೆಯೆ ಹೇಳಲಿಲ್ಲವೆ ನಾನು, ಅಂಥದೇನು ಸಾಧ್ಯವಿಲ್ಲ ಎಂದು?"

"ನಾನಾಗಿಯೆ ಹೇಳುತ್ತಿದ್ದೇನಲ್ಲ...."

"ಯಾರು ಹೇಳಿದರೂ ಸಾಧ್ಯವಿಲ್ಲದ ಮಾತು ಅದು—"

"ನನ್ನ ಸಲುವಾಗಿಯೆ ಅಲ್ಲವೆ ನೀವು ಈ ನಿಶ್ಚಯಕ್ಕೆ ಬಂದದ್ದು?"

"ತಪ್ಪೇ ಅದು?"

“ ಹೌದು— ನನ್ನ ದೃಷ್ಟಿಯಿಂದ ! ”

“ ಇರಲೊಲ್ಲದೇಕೆ. ಅದರಿಂದ ಯಾವ ಅಪಾಯವೂ ಇಲ್ಲ.”

“ ನಮ್ಮ ಮನೆತನ ಮಕ್ಕಳಿಲ್ಲದ ಮನೆತನವಾಗಬೇಕೆ ? ”

“ ಅದಕ್ಕಿನ್ನೇನು ಮಾಡುವುದು. ದೈವ ಇಲ್ಲದಿದ್ದರೆ—”

“ ನನ್ನ ದೈವಕ್ಕೆ ಇರಲಿಕ್ಕಿಲ್ಲ—ಇಲ್ಲ. ಆದರೆ.... ನಿಮಗೆ—”

“ ಬೇಡ, ಕಾವಿ. ಆ ಮಾತೇ ಬೇಡ. ಯಾಕೆ ಸುಮ್ಮನೆ. ಅದೆಲ್ಲ ? ”

“ ಹಾಗಲ್ಲ, ದೊರೆ. ನನಗಿಲ್ಲದಿದ್ದರೂ ನನ್ನ ಮೂಲಕ ನಿಮಗೆ ಆಗದೆ ಹೋದರೆ ಅದರ ತಪ್ಪು ನನಗೆ. ನಾನು ಅಡ್ಡಿಯಾಗಬಾರದು.”

“ ಸರಿ. ಅದಕ್ಕೇನು ಮಾಡಬೇಕು ? ”

“ ಹೇಳಿದೆನಲ್ಲಾ—”

“ ಅದರಿಂದ ನಿನಗೆ ತೊಂದರೆಯಲ್ಲವೇನೊ. ಆ ಪಾಪವೊಂದು ಕಡಿಮೆಯಾಗಿದೆ ನನ್ನ ಪಾಲಿಗೆ—”

“ ಅದು ಪಾಪವಲ್ಲ. ನಾನು ನೊಂದುಕೊಂಡರೆ ಪಾಪವಾದೀತು ನಿಮಗೆ. ನಾನು ನೊಂದುಕೊಳ್ಳುವುದಿಲ್ಲ. ಅದಕ್ಕೆ ಅವಕಾಶವನ್ನೆ ಕೊಡುವುದಿಲ್ಲ.”

“ ಸುಮ್ಮನೆ ಏನಾದರೊಂದು ಮಾತನಾಡಿದರೆ ಆಯಿತೆ, ಕಾವಿ ? ”

“ ನಿಜವಾಗಿಯೂ. ಯಾಕೆ ತೊಂದರೆಯಾಗಬೇಕು ? ”

“ ಆಗದೆ ಏನು ? ಆಗಿಯೆ ಆಗುತ್ತದೆ.”

“ ನಾನು ಇಲ್ಲಿ ಇರದೆಯೆ ಇದ್ದರೆ ? ”

“ ಅಂದರೆ ? ”

“ ಅಂದರೆ—”

“ ಅಂದರೆ ನಿನ್ನ ತಲೆ ! ”

“ ನಾನು ಬಾಗಿಲುಕೋಟೆಯಲ್ಲಿದ್ದರೆ ? ”

“ ಅಂಥದೇನು ಈಗ ಬಂದದ್ದು ? ”

“ ಮಕ್ಕಳಾಗದೆ ಇರಬಾರದು ನೀವು, ದೊರೆ—”

“ ಅದರ ಯೋಚನೆ ದೇವರಿಗಿರಲಿ.”

“ ನಮ್ಮ ಕೈಲಾಗುವುದನ್ನು ಮಾಡದೆ ದೇವರ ಮೇಲೆ ಎಲ್ಲ ಭಾರ ಹಾಕಿದರೆ—”

ಕಾವೇರಿ ಮಾತಿನಲ್ಲಿ ಮುಣಿಯುಲಾರಳೆಂದು ಶ್ರೀನಿವಾಸನಿಗೆ ಮನವರಿಕೆಯಾಗಿ ಕೊನೆಯದಾಗಿ ಹೇಳಿದ :

" ಇದು ನೋಡು, ಕಾವಿ ನೀನು ಏನು ಹೇಳಿದರೂ ಎಷ್ಟು ಹೇಳಿದರೂ ಈ ಮಾತನ್ನು ನಾನು ನಡೆಸುವುದಿಲ್ಲ ಸಾಧ್ಯವೇ ಇಲ್ಲ ಅದು. ನೀನು ಸುಮ್ಮನೆ ಅದನ್ನು ಕಟ್ಟಿಕೊಳ್ಳಬೇಡ—"

ಕಾವೇರಿ ನಿಟ್ಟುಸಿರು ಎಳೆದು ಹೇಳಿದಳು :

" ಹಾಗಿದ್ದರೆ ನಾನೇನು ಹೇಳಲಿ? ಮತ್ತೆ ಮಾತೇ ಮುಗಿಯಿತಲ್ಲ! ಅದೊಂದೆ ನನ್ನ ಬೇಡಿಕೆ! "

" ಬೇಡಿಕೆಯೆ ? "

" ಬೇಡಿಕೆಯಲ್ಲ, ಪ್ರಾರ್ಥನೆ! "

ಕಾವೇರಿಯ ದನಿ ನಿಜವಾಗಿಯೂ ಬೇಡಿಕೆಯ ದನಿಯಾಗಿತ್ತು; ಪ್ರಾರ್ಥನೆಯ ದೈನ್ಯವಿತ್ತು ಅದರಲ್ಲಿ.

" ಪ್ರಾರ್ಥನೆಯನ್ನು ದೇವರಿಗೆ ಮಾತ್ರ ಮಾಡಬೇಕು, ಮನುಷ್ಯರಿಗಲ್ಲ, ಕಾವಿ! "

" ನನ್ನ ದೇವರಲ್ಲವೆ ನೀವು ? "

" ಆ ಯೋಗ್ಯತೆ ಬರಲಿಲ್ಲ—ಬರುವುದಿಲ್ಲ! "

ಶ್ರೀನಿವಾಸನ ಹೃದಯ ತುಂಬಿ ಬಂದಿತು, ಕೃತಜ್ಞತೆಯಿಂದ. ಬಾಗಿಲುಕೋಟೆಯಲ್ಲಿಯ ತನ್ನ ಅವಿವೇಕ ತನ್ನ ಕಣ್ಣ ಮುಂದೆ ಸುಳಿಯಿತು. 'ಇಂಥ ಗೌರಿಯನ್ನು ಬಿಟ್ಟು ಬೇರೊಂದು ಬಣ್ಣದ ಬೊಂಬೆಗಾಗಿ ಬಾಯಿ ಬಿಡಬೇಕೆ? ಛಿ! ಸಾಧ್ಯವಿಲ್ಲ, ಎಂದಿಗೂ ಸಾಧ್ಯವಿಲ್ಲ' ಎಂದುಕೊಂಡ.

" ನೀವು ಹಾಗೆ ತಿಳಿದುಕೊಂಡರೆ ನಾನೇನು ಮಾಡಲಿ? "

" ನೀನು ಏನು ಮಾಡುವುದೂ ಬೇಡ. ಈಗ ಇದ್ದಹಾಗೆ ಇದ್ದುಬಿಡು. ಇದೇ ಸ್ವರ್ಗದ ಬಾಗಿಲು! "

" ಸ್ವರ್ಗದ ಬಾಗಿಲು! " ಕಾವೇರಿ ಕನವರಿಸಿದಂತೆ ಎಂದಳು.

" ಹೌದು. ಇದೇ ಸ್ವರ್ಗದ ಬಾಗಿಲು! "

" ಇದಲ್ಲ! ಮಕ್ಕಳೇ—ಮಕ್ಕಳೇ ಸ್ವರ್ಗದ ಬಾಗಿಲು! "

" ಮಕ್ಕಳಿಲ್ಲದವರಿಗೆ ಇದೇ...."

ಶ್ರೀನಿವಾಸ ಕಾವೇರಿಯನ್ನು ತಬ್ಬಿಕೊಂಡು ಮುದ್ದಿನ ಮಳೆಗರೆದು ಆಕೆಯನ್ನು ಮುಂದೆ ಮಾತನಾಡಬಿಡಲಿಲ್ಲ!

ತಾನಾಗಿಯೆ ಮನವೊಲಿಸಿ ಹೇಳಿದರೆ, ತನ್ನ ಒಪ್ಪಿಗೆಯನ್ನು ಕೊಟ್ಟರೆ ಶ್ರೀನಿವಾಸ ಒಪ್ಪಬಹುದೆಂಬ ಕಾವೇರಿಯ ಆಸೆ ಬಯಲಾಯಿತು. ಮಕ್ಕಳ ಹಂಬಲ ಮುಗಿಲೆತ್ತರ ನಿಂತಿತು! 'ಸ್ವರ್ಗದ ಬಾಗಿಲು' ಎಂದಿದ್ದ ಶ್ರೀನಿವಾಸ. ಮಕ್ಕಳಿಲ್ಲದವರಿಗೆ ಆ ಬಾಗಿಲು ತೆರೆಯುವುದುಂಟೆ? ತನಗೆ ಮಕ್ಕಳಿಂದ ತೆರೆಯುದಿದ್ದರೆ ಇಲ್ಲ, ಹೆಂಡತಿಯಾದವಳಿಗೆ ಇನ್ನೊಂದು ಮಾರ್ಗವೂ ಇದೆ. ಪತಿಸೇವೆ! ಆತನಿಗೆ ಮಕ್ಕಳಾಗುವಂತೆ, ಆತನಿಗೆ ಸ್ವರ್ಗದ ಬಾಗಿಲು ತೆರೆಯುವಂತೆ, ತಾನು ಮಾಡಲು ಸಾಧ್ಯವಾದರೆ ಅದಕ್ಕೆ ಮಿಗಿಲಾದ ಸೇವೆ ಸತಿಗೆ ಬೇರೊಂದಿದೆಯೆ? ಆದರೆ ಶ್ರೀನಿವಾಸ ಒಪ್ಪುತ್ತಿಲ್ಲವಲ್ಲ? ಏನು ಮಾಡುವುದು? ಇದೇ ಕಾವೇರಿಗೆ ಯೋಚನೆಯಾಯಿತು ಎಷ್ಟು ಹೊತ್ತು ಯೋಚಿಸಿದಳೊ! ಶ್ರೀನಿವಾಸ ಯಾವಾಗಲೊ ನಿದ್ರೆಹೋಗಿದ್ದ. ಹಾಸಿಗೆಯಿಂದ ಎದ್ದು ಬಂದು ಕಿಟಕಿಯ ಹತ್ತಿರ ನಿಂತಳು. ಬೆಳಗು ಮುಂಜಾನೆಯ ಬಣ್ಣಗೆಟ್ಟ ಬೆಳುದಿಂಗಳು ಮ್ಲಾನವಾಗಿ ಸುತ್ತಲೆಲ್ಲವೂ ತೂಗಾಡುತ್ತಿತ್ತು. ಗಿಡ, ಬಳ್ಳಿ, ನೆಲ, ಗಗನ ಎಲ್ಲವೂ ವಿಕಾರವಾಗಿ ಕಾಣುತ್ತಿದ್ದವು. ಮನಸ್ಸು ಅದರಲ್ಲಿ ತೇಲಿಹೋಯಿತು. ಎರಡು ದಿನಗಳಿಂದಲೂ ಆಗೀಗ ಇಣಿಕಿಹೋಗುತ್ತಿದ್ದ ಯಾವುದೊ ಒಂದು ವಿಚಾರ ಸ್ಪಷ್ಟವಾಗತೊಡಗಿತು. ಯಾವುದೊ ಒಂದು ನಿರ್ಧಾರಕ್ಕೆ ಬಂದಳು. ಒಂದು ಕ್ಷಣ ಮನಸ್ಸು ವಿಪರೀತ ವೇದನೆಗೊಳಗಾಯಿತು. ಆದರೆ ಒಂದು ಕ್ಷಣ ಮಾತ್ರ. ಮರುಕ್ಷಣ ಎಲ್ಲಿಲ್ಲದ ಶಾಂತಿ ಸಮಾಧಾನ ನೆಲಸಿದಂತೆ ಭಾಸವಾಯಿತು, ಕಾವೇರಿಗೆ. ತಿರುಗಿ ಬಂದು ಮಲಗಿದ ಶ್ರೀನಿವಾಸನ ಹತ್ತಿರ ಕುಳಿತಳು. ದೀಪ ಉರಿಯುತ್ತಲೆ ಇತ್ತು. ಶ್ರೀನಿವಾಸ ಸುಖವಾಗಿ ನಿದ್ರೆಹೋಗಿದ್ದ. ಆತನ ಶಾಂತವಾದ ಮುಖವನ್ನು ಕಣ್ಣಿಟ್ಟು ನೋಡಿದಳು. ನೋಡಿಯೆ ನೋಡಿದಳು. ಕಣ್ಣುಗಳು ತೇವಗೊಂಡವು ಹೃದಯ ತುಂಬಿ ಬಂದಿತು ಕಣ್ಣೀರ ತೆರೆಯಲ್ಲಿ ಶ್ರೀನಿವಾಸನ ಚಿತ್ರ ಮಸಕಾಯಿತು. ಎರಡೂ ಕಣ್ಣುಗಳಿಂದ ಎರಡು ಹನಿ ಗಲ್ಲಗಳ ಮೇಲೆ ಇಳಿದವು. ಕಾವೇರಿಯ ಹೃದಯದಲ್ಲಿ ಒಲುಮೆ ಉಕ್ಕಿ ಬಂದಿತು. ಹೊನಲಾಗಿ ಹರಿಯಿತು.

ರಾತ್ರಿ ನಿದ್ದೆಗೇಡಾಗಿದ್ದರೂ ಕಾವೇರಿ ಒಂಬತ್ತೂವರೆಗೆ ಪಕ್ವಾನ್ನಗಳನ್ನು ಸಿದ್ಧಗೊಳಿಸಿ ಎಲ್ಲವನ್ನೂ ಅಣಿಮಾಡಿಬಿಟ್ಟಿದ್ದಳು. ಅಂದು ಮುಂಜಾನೆಯಿಂದ ಶ್ರೀನಿವಾಸನಿಗೆ ತರತರದಿಂದ ಸೇವೆಯನ್ನು ಸಲ್ಲಿಸಿದ್ದಳು. ಶ್ರೀನಿವಾಸನಿಗೆ ತಡೆಯದಾಗಿ ಕೇಳಿದ್ದ :

" ಇಂದೇನು ? ನನಗೆ ಕೈಕಾಲು ಕೂಡ ಅಲುಗಾಡಿಸಲಿಕ್ಕೆ ಬಿಡುವ ಹಾಗೆ ಕಾಣುವುದಿಲ್ಲ ! " ಎಂದು ನಗೆಯಾಡಿದ್ದ.

" ಇಂದು ನೀವು ಏನೂ ಮಾಡಕೂಡದು. "

" ಅದೇಕೆ ? "

" ಇಂದು ನನ್ನ ದಿನ ! "

" ಅಂದರೆ ? "

" ಅಂದರೆ ಸಾವಿತ್ರಿಯ ದಿನ ! ನನಗೆ ಸಾಧ್ಯವಿದ್ದಮಟ್ಟಿಗೆ ಪತಿಯ ಸೇವೆ ಮಾಡಬೇಕೆಂದಿದ್ದೇನೆ...."

" ಆಫೀಸಿಗೂ ಅಷ್ಟು ಹೋಗಿಬಿಡು ಹಾಗಾದರೆ. ಹಾಯಾಗಿ ನಾನು ಮನೆಯಲ್ಲಿ ಮಲಗಿಯಾದರೂ ಇರುತ್ತೇನೆ ! "

" ಹುಂ.... ನನ್ನ ಆಫೀಸು ನನಗೆ ಇದೆಯಲ್ಲ ! ಅಲ್ಲಿ ಯಾರು ಹಾಗಾದರೆ ? "

" ಅಲ್ಲಿ ನಾನು ! "

" ಆಯಿತು. ನಾನು ಆಧುನಿಕ ಸಾವಿತ್ರಿಯಾಗಬೇಕಾಯಿತು ! " ಎಂದು ನಕ್ಕು ಮತ್ತೆ ತನ್ನ ಕೆಲಸದಲ್ಲಿ ತೊಡಗಿದ್ದಳು.

ಗಂಗಾಧರ ಕಾಮೇಶ ಸರಿಯಾಗಿ ಒಂಬತ್ತು ಗಂಟೆಗೆ ಬಂದಿದ್ದರು. ಇಬ್ಬರೂ ಸೇರಿ ಪಡಸಾಲೆಯಲ್ಲಿ ಶ್ರೀನಿವಾಸನ ಜತೆಗೆ ಹರಟೆ ಹೊಡೆಯುತ್ತಲೆ ಇದ್ದರು. ಹೊಸದಾಗಿ ವರ್ಗವಾಗಿ ಬಂದಿದ್ದ ತಮ್ಮ ಮುಖ್ಯಾಧಿಕಾರಿಯೆ ಅವರ ಹರಟೆಗೆ ಗುರಿಯಾಗಿದ್ದ.

" ಮನುಷ್ಯನಿಗೆ ಅಧಿಕಾರ ಬರಬಾರದು. ಅಧಿಕಾರ ಮತ್ತು ಬುದ್ಧಿ ಒಂದೆ ಕಡೆಗೆ ಇರುವುದಿಲ್ಲ ! " ಎಂದು ಕಾಮೇಶನ ಅಭಿಪ್ರಾಯ.

" ಲಕ್ಷ್ಮಿ-ಸರಸ್ವತಿ ಇದ್ದಹಾಗೆ ಅನ್ನು—ನಿಸರ್ಗ ಭಿನ್ನಾಸ್ಪದ!" ಎಂದು ಗಂಗಾಧರ.

" ಆ ಉಪಮೆ ಯಾಕೆ? ಲಕ್ಷ್ಮಿಯ ಸಂಪರ್ಕವಿಲ್ಲ; ಸರಸ್ವತಿಯ ಸಂಬಂಧವಿಲ್ಲ."

" ಲಕ್ಷ್ಮಿಯ ಸಂಪರ್ಕವೇಕೆ ಇಲ್ಲ? ಒಳ್ಳೆ ಸೇವಿಂಗ್ಸ ಬ್ಯಾಂಕೇ ನಿನ್ನ ಕೈಯಲ್ಲಿದೆ..." ಎಂದು ಶ್ರೀನಿವಾಸ ನಗೆಯಾಡಿದ.

" ನನ್ನ ಕೈಯಲ್ಲಿ ಬ್ಯಾಂಕೆ? ಸರಿಯಾಯಿತು. ಏನಿಲ್ಲದೆಯೆ ಈ ಪರಿ ಹಾರಾಡುತ್ತಾನೆ ಮಹಾರಾಯ. ಅಂಥದೇನಾದರೂ ಸಿಕ್ಕರೆ ಮನೆಗೆ ಕಳಿಸಿ ಬಿಡುತ್ತಾನೆ."

" ನಾನು ಮುಖ್ಯಾಧಿಕಾರಿಯಾಗಿದ್ದರೆ ಈತನನ್ನು ಈಗಲೆ ಕಳಿಸಿ ಬಿಡುತ್ತಿದ್ದೆ."

" ಅಂಥದೇನೊ ಆತನಾದರೂ ಮಾಡುತ್ತಿರುವುದು? ಕೆಲಸ ಚೊಕ್ಕಾಗಿರಬೇಕು ಎಂದಲ್ಲವೆ ಆತ ಹೀಗೆ ಮಾತನಾಡುವುದು? ಆತ ಸುಮ್ಮನಾಗಿದ್ದರೆ ನೀವೇನು ಕೆಲಸ ಮಾಡುವವರೆ? ಇಂದಿನದು ನಾಳೆಗೆ, ನಾಳೆಯದು ನಾಡಿದ್ದು ಎಂದು ಎಲ್ಲವನ್ನು ಮೂಲೆಗೊತ್ತಿ ಮನೆಗೆ ಹೋದೀರಿ" ಎಂದು ಶ್ರೀನಿವಾಸ.

" ಆಯಿತು ಆತ ಹೀಗೆ ಸ್ಟ್ರಿಕ್ಟ್ ಆಗಿದ್ದರೆ ಕೆಲಸ ಆಗುತ್ತದೆಯೆ?"

" ಆಗದೇನು ಮಾಡುತ್ತದೆ? ಬಹಳವಾದರೆ ಈಗ ನಡಸಿದ ಹಾಗೆ ಬೆನ್ನಹಿಂದೆ ಬೈಯುತ್ತೀರಿ. ಕಣ್ಣೆದುರಿಗಿದ್ದಾಗ ಮೆತ್ತಗೆ ಕೆಲಸ ಮಾಡುತ್ತೀರಿ. ನೀವು ಬೈದದ್ದು ಆತನಿಗಂತೂ ಗೊತ್ತಾಗುವುದಿಲ್ಲ!"

ಮಾತು ನಡೆದೇ ಇತ್ತು, ಎದುರಿಗಿನ ಗೋಡೆಯ ಮೇಲಿನ ಗಡಿಯಾರದ ಮುಳ್ಳುಗಳಂತೆ. ಅಷ್ಟರಲ್ಲಿ ಕಾವೇರಿ ನಡುಬಾಗಿಲಿಗೆ ಬಂದು ಮೆತ್ತಗೆ,

" ಬಂದಿಷ್ಟು, ಒಳಗೆ...."

" ಟಾಇಮ್ ಆಯಿತಲ್ಲ?" ಎಂದು ಶ್ರೀನಿವಾಸ ಎದ್ದ. ಒಳಗೆ ಬಂದು ಎಂದ:

" ನೀನಿನ್ನೂ ವಟವೃಕ್ಷ ಪೂಜೆ ಮಾಡಿ ಬರಬೇಕಲ್ಲವೆ? ಹೊತ್ತಾಗಿ ಬಿಟ್ಟಿತಲ್ಲ?"

"ಅದಕ್ಕೆಯೆ ನಿಮ್ಮನ್ನು ಒಳಗೆ ಕರೆದದ್ದು."

"ಅಂದರೆ?"

"ಅಂದರೆ, ನೀವು ಒಂದಿಷ್ಟು ಕೂತುಕೊಳ್ಳಬೇಕು"

ಎಂದು ರಂಗವಲ್ಲಿಯಿಂದ ಸಿಂಗರಿಸಿದ ಒಂದು ಮಣೆಯನ್ನು ತೋರಿಸಿದಳು. ಶ್ರೀನಿವಾಸನಿಗೆ ಅರ್ಥವಾಗದೆ ಕೇಳಿದ:

"ಮತ್ತೆ ಅವರಿಬ್ಬರು?"

"ಊಟಕ್ಕಲ್ಲ. ಊಟಕ್ಕೆ ಇನ್ನೂ ಐದು ನಿಮಿಷ ಇದೆ."

"ಹಾಗಾದರೆ?"

"ಪೂಜೆ!"

"ನನ್ನದೆ?"

"ಹುಂ...."

"ಅಂತೂ ನಾನು ನಿನಗೆ ಗಿಡವಾದೆ ಅಂದ ಹಾಗಾಯಿತು" ಎಂದು ನಕ್ಕ.

"ಗಿಡ ಅಲ್ಲ; ಅಶ್ವತ್ಥ!"

ಶ್ರೀನಿವಾಸನಿಗೆ ಮೋಜೆನಿಸಿತು. ವಿಚಿತ್ರವೂ ಎನಿಸಿತು. ಕಾವೇರಿ ದೇವರ ಪೂಜೆಯನ್ನು ಮಾಡುವ ಭಕ್ತಿಯಿಂದ ಶ್ರೀನಿವಾಸನ ಪೂಜೆಯನ್ನು ಮಾಡಿದಳು. ಪಾದಗಳ ಮೇಲೆ ಗಂಧ ಅಕ್ಷತೆಗಳೇರಿದವು. ಆರತಿ ಬೆಳಗಿಯಾಯಿತು. ಕೊನೆಗೆ ಎರಡೂ ಪಾದಗಳನ್ನು ಕೈಯಿಂದ ಮುಟ್ಟಿ ಅವುಗಳ ಮೇಲೆ ಹಣೆಯನ್ನಿಟ್ಟಳು. ಕಣ್ಣೀರು ಹರಿಯಿತು. ತಲೆ ಮೇಲಕ್ಕೆತ್ತುವ ಮನಸ್ಸಾಗಲಿಲ್ಲ ಕಾವೇರಿಗೆ. ಆ ಕ್ಷಣದ ಯಾವ ಮಾಯೆಯೊ? ಶ್ರೀನಿವಾಸನಿಗೆ ಎದೆ ತುಂಬಿ ಬಂದಿತು. ಬಾಯಿಗೆ ಮಾತು ಬಾರದಾಯಿತು. ನಯವಾಗಿ ಕಾವೇರಿಯ ಬೆನ್ನು ತಟ್ಟಿದಾಗಲೆ ಆಕೆಗೆ ಎಚ್ಚರ. ಭಾರವಾಗಿ ತಲೆಯನ್ನು ಮೇಲಕ್ಕೆತ್ತಿದಳು. ಆಕೆಯ ಮುಖ ತೊಯ್ದು ಹೋಗಿತ್ತು. ಶ್ರೀನಿವಾಸ ನೋಡುತ್ತಲೆ ಇದ್ದ. ಕಾವೇರಿಯ ತುಟಿಗಳ ಮೇಲೊಂದು ಕಿರುನಗೆ ಮಿಗುಗಿತು—ಕಾಮನಬಿಲ್ಲೇ ಕರಗಿ ಬೇರೆ ರೂಪ ತಾಳಿದಂತೆ! ಕಾವೇರಿ ಎದ್ದಳು. ಹೇಳಿದಳು:

"ಹುಂ....ನನ್ನ ಕೆಲಸ ಆಯಿತು. ಎಬ್ಬಿಸಿರಿ ಅವರನ್ನು. ಇನ್ನು ನಿಮ್ಮ ಕೆಲಸ."

ಯಥಾವತ್ತಾಗಿ ಊಟ ನಡೆಯಿತು. ಅವಸರವಸರವಾಗಿ ವೀಳ್ಯ ಹಾಕಿಕೊಂಡು ಗೆಳೆಯರಿಬ್ಬರೂ ಹೊರಟುನಿಂತರು. ಶ್ರೀನಿವಾಸನು ಬಟ್ಟೆಗಳನ್ನು ಹಾಕಿಕೊಳ್ಳುತ್ತ,

"ತಡೆಯಿರೊ, ನಾನೂ ಬಂದೇಬಿಡುತ್ತೇನೆ" ಎಂದ

ಕಾವೇರಿ ಏನೋ ಕಣ್ಸನ್ನೆ ಮಾಡಿದಳು, 'ಅವರು ಮುಂದೆ ಸಾಗಲಿ' ಎಂಬರ್ಥದಿಂದ. ಗೆಳೆಯರಿಗೂ ತಡೆಯಲು ಸಾಧ್ಯವಿರಲಿಲ್ಲ. ಗಂಗಾಧರ ಹೇಳಿದ:

"ನಾವಿನ್ನೂ ಮನೆಗೆ ಹೋಗಿ ಬಟ್ಟೆ ಹಾಕಿಕೊಂಡು ಬರಬೇಕು."

"ಸಂಜೆಯ ಕಾರ್ಯಕ್ರಮ ಜ್ಞಾಪಕವಿದೆಯಷ್ಟೆ?" ಎಂದು ಕಾಮೇಶ ಕೇಳಿದ.

"ಹುಂ....ಆದರೆ—" ಎಂದು ಶ್ರೀನಿವಾಸ ಅನುಮಾನಿಸಿದ.

"ಆದರೆ ಇಲ್ಲ, ಯಾವುದೂ ಇಲ್ಲ. ಬರಲೇಬೇಕು. ಹುಣ್ಣಿಮೆಯ ಬೆಳುದಿಂಗಳು. ಬೆಳುದಿಂಗಳಲ್ಲಿಯೆ ಇಂದು ಊಟ—"

"ಅದೇಲ್ಲಾ ಸರಿಯಾಯಿತು. ಆದರೆ ನನಗಿಂದು ಮೇಲ್ ಡ್ಯೂಟಿ ಇದೆ. ಸ್ಟೇಶನ್ನಿಗೆ ಹೋಗಬೇಕು" ಎಂದು ಶ್ರೀನಿವಾಸ.

"ಅದಕ್ಕೇನಾಯಿತು? ಆರು ಗಂಟೆಗೆ ಬಂದುಬಿಡಬಹುದು"

"ಸರಿ. ಹಾಗಾದರೆ ಹೀಗೆ ಮಾಡಿರಿ. ನೀವಿಬ್ಬರೂ ಆಫೀಸು ಮುಗಿದ ಕೂಡಲೆ ಈ ಕಡೆಗೆ ಬಂದುಬಿಡಿರಿ. ನಾನು ನೇರವಾಗಿ ಸ್ಟೇಶನ್ನಿನಿಂದ ಬರುತ್ತೇನೆ. ಆಮೇಲೆ ಎಲ್ಲರೂ ಸೇರಿ ನಿಮ್ಮಲ್ಲಿಗೆ ಹೋಗೋಣ."

"ಆದೀತು ಮಹಾರಾಯಾ, ಯಾವಾಗಲೂ ನೀನು ಹೇಳಿದ ಹಾಗೆಯೆ ಆಗಬೇಕು" ಎಂದು ಹೇಳಿ ಗೆಳೆಯರಿಬ್ಬರೂ ಹೊರಟುಹೋದರು.

"ನಾನು ಹೊರಡುತ್ತೇನೆ ಇನ್ನು, ಹೊತ್ತಾಗಿಬಿಟ್ಟಿತು" ಎಂದು ಶ್ರೀನಿವಾಸ.

"ವೀಳ್ಯ ತೆಗೆದುಕೊಳ್ಳುವುದಿಲ್ಲವೆ?"

"ಆಯಿತಲ್ಲ?"

"ಸರಿ. ಹಾಗೆಯೆ ವೀಳ್ಯ ಹಾಕಿಕೊಳ್ಳುವುದು?"

ಎಂದು ಮೊದಲೆ ಮಡಿಸಿ, ಸಿದ್ಧವಾಗಿರಿಸಿಕೊಂಡ ವೀಳ್ಯವೊಂದನ್ನು

ಶ್ರೀನಿವಾಸನ ಬಾಯಿಗೆ ಹಾಕಿದಳು. ಶ್ರೀನಿವಾಸ ಹೊರಟು ನಿಂತಾಗ ಕಾವೇರಿ ಕೇಳಿದಳು:

"ಹೊರಟೇಬಿಡುತ್ತೀರಾ ?"

"ಇಲ್ಲದಿದ್ದರೆ ಅಲ್ಲಿಯೊಂದು ಬೇರೆ ಪೂಜೆ ನಡೆಯುತ್ತದೆ !"

"ಚೀಟಿ ಕಳಿಸಿದರೆ ?"

"ಆದರೆ ಏನು ಅಂಥದು ?"

"ಏನೂ—ಇಲ್ಲ. ಆದರೂ ಅದೇಕೋ...."

"ಸರಿ. ಹೀಗಾದರೆ—"

ಎಂದು ಕಾವೇರಿಯಿಂದ ಬಿಡುಗಡೆಹೊಂದಿ ಹೊರಟ. ಕಾವೇರಿ ಬಾಗಿಲಲ್ಲಿ ನಿಂತಳು

"ನಾನು ಬರುವ ಹೊತ್ತಿಗೆ ಸಿದ್ಧಳಾಗಿರು. ನನಗಿಂತ ಮೊದಲು ಗಂಗಾಧರ ಕಾಮೇಶ ಬಂದರೂ ಬರಬಹುದು. ಅಂ ?" ಎಂದ.

"ಹುಂ...." ಎಂದಳು ಕಾವೇರಿ ಆದರೆ ಅದು ಸಮ್ಮತಿಯಾಗಿರದೆ ಒತ್ತರಿಸಿ ಬಂದ ದುಃಖದ ಬಿಕ್ಕಿನಂತಿತ್ತು. ಶ್ರೀನಿವಾಸ ಕಣ್ಣು ಮರೆಯಾಗುವ ವರೆಗೂ ನೋಡಿದಳು. ಆ ಎರಡು ಸಲ ಆತನೂ ಹಿಂದಿರುಗಿ ನೋಡಿ ನಗುಸೂಸಿದ್ದ. ಶ್ರೀನಿವಾಸ ಬೀದಿಯ ಆಚೆ ಕಣ್ಣುಮರೆಯಾದರೂ ಕಾವೇರಿ ನಿಂತಲ್ಲಿಂದ ಕದಲಲಿಲ್ಲ ಹತ್ತು ನಿಮಿಷವಾದರೂ ಹಾಗೆಯೆ ನಿಂತಿರಬೇಕು. ಯಾವ ಯೋಚನೆ ಆಕೆಯನ್ನು ಕಾಡುತ್ತಿತ್ತೆಂಬುದನ್ನು ತಿಳಿಯುವುದೇ ಸಾಧ್ಯವಿರಲಿಲ್ಲ.

ಮಧ್ಯಾಹ್ನದ ಮೂರು ಗಂಟೆಯ ಸುಮಾರಿಗೆ ಆಫೀಸಿನಲ್ಲಿ ಅದೇಕೊ ತೀರ ಬೇಸರವೆನಿಸತೊಡಗಿತು. ಮನಸ್ಸಿನಲ್ಲಿ ಯಾವುದೊ ಒಂದು ಹೇಳಲಾಗದ ಸಂಕಟ. ಏನೆಂದು ಯೋಚಿಸಿದರೆ ಏನೂ ಹೇಳುವಂತಿಲ್ಲ. ಊಟ ಹೆಚ್ಚಾಗಿದ್ದರಿಂದ ತೂಕಡಿಕೆಯನ್ನು ತಡೆಹಿಡಿದು ಹಿಡಿದು ಸಾಕಾಗಿತ್ತು. ಅದು ಮಾಯವಾಗುವುದರಲ್ಲಿ ಹೃದಯ ಅದೇಕೊ ಭಾರವಾಗಿತ್ತು. ಎರಡು ಮೂರು ಸಲ ಗಂಗಾಧರನ ಹತ್ತಿರ ಹೋಗಿ, "ಅದೇಕೊ ನನಗೆ ಸ್ವಸ್ಥವಿಲ್ಲದಾಗಿದೆ. ಮನೆಗೆ ಹೊರಟುಬಿಡೋಣ ಅನ್ನುತ್ತಿದ್ದೇನೆ" ಎಂದಿದ್ದ. ಆದರೆ ಕೆಲಸದ ಒತ್ತಡ ವಿಪರೀತವಾಗಿತ್ತು. ರೈಲಿನ ವೇಳೆ ಸಮೀಪಿಸುತ್ತಿತ್ತು. ಚೀಲಗಳನ್ನೆಲ್ಲ ಸಿದ್ಧಗೊಳಿಸಬೇಕು ಎದೆಯಲ್ಲಿಯ ಮೂಕ ಕೊರಗು ಮೇರೆ ಮೀರುತ್ತಿತ್ತು. ಹಾಗೂ ಹೀಗೂ, ಮನಸ್ಸಿಲ್ಲದೆ ಕೆಲಸವನ್ನು ಪೂರೈಸಿಕೊಂಡು ಸ್ಟೇಶನ್ನಿಗೆ ಹೋದರೆ ಮೇಲು ಮುಕ್ಕಾಲು ಗಂಟೆ 'ಲೇಟ್' ಎಂದು ಹಲಗೆಯ ಮೇಲೆ ಬರಹ! ಶ್ರೀನಿವಾಸನ ತಾಳ್ಮೆ ಕುಸಿಯಿತು. ಸಿಡಿಮಿಡಿಗೊಂಡ ಯಾವಾಗ ಮನೆಗೊಮ್ಮೆ ಹೋದೇನು ಎಂದುಕೊಳ್ಳುವ ಸ್ಥಿತಿಯಲ್ಲಿದ್ದಾಗ ಸರಿಯಾಗಿ ಗಾಡಿ ತಡ ಮಾಡಿ ಬರಬೇಕೆಂದರೆ? ಆದರೆ ಬೇರೆ ಯಾವ ಉಪಾಯವೂ ಇರಲಿಲ್ಲ ಕೊನೆಗೊಮ್ಮೆ ರೈಲು ಬಂದಿತು. ಟಪ್ಪಾಲಿನ ಚೀಲಗಳನ್ನು ಕೊಡ ತಕ್ಕೊಳ್ಳುವ ವ್ಯವಹಾರ ಮುಗಿಯಿತು. ಅವಸರವಸರವಾಗಿ ಆಫೀಸಿನ ವರೆಗೆ ಟಪ್ಪಾಲ ಗಾಡಿಯ ಜತೆಯಲ್ಲಿ ಬಂದು ಅವುಗಳನ್ನು ಒಪ್ಪಿಸಿ ಮನೆಯ ಕಡೆಗೆ ಹೊರಟ.

ಮನೆ ಒಂದು ನೂರು ಹೆಜ್ಜೆ ಉಳಿದಿರಬೇಕು. ಮನಸ್ಸಿನಲ್ಲಿಯ ದುಗುಡ ಅದೇಕೊ ಉಸಿರು ಕಟ್ಟುವಂತಾಯಿತು. ಅದಕ್ಕೆ ಸರಿಯಾಗಿ ಮನೆಯ ಎದುರು ಯಾರೋ ನಿಂತಿದ್ದರು—ಎಲ್ಲರೂ ಸ್ತಬ್ಧರಾಗಿ ಕಾಮೇಶನಿದ್ದ, ಗಂಗಾಧರನಿದ್ದ ಏನು? ಏನಿದು? ಎಂದುಕೊಳ್ಳುವಷ್ಟರಲ್ಲಿಯೆ ಗಂಗಾಧರ ಹೆಚ್ಚುಕಡಿಮೆ ಓಡುತ್ತಲೆ ಬಂದು ಶ್ರೀವಾಸನನ್ನು ತಡೆದ.

ಗಂಗಾಧರನ ಬಾಯಿಂದ ಮಾತುಗಳೆ ಹೊರಡಲೊಲ್ಲವು. ಕಣ್ಣೀರು ಹರಿಯುತ್ತಿತ್ತು.

" ಏನೊ ? ಏನು ಗಂಗಾಧರಾ ? "

" ಘಾತವಾಯಿತು, ಶ್ರೀನಿವಾಸಾ. ಘಾತವಾಯಿತು ! "

" ಏನೊ, ಆದದ್ದಾದರೂ ಏನೊ ? "

" ಧೈರ್ಯ ಬಿಡಬಾರದು, ನೀನು ಧೈರ್ಯ ಬಿಡಬಾರದು...."

ಶ್ರೀನಿವಾಸನ ಕೈಕಾಲೇ ಹೋದವು ನೆಲಕ್ಕೆ ಕುಸಿಯುವುದರಲ್ಲಿದ್ದ

" ಅಯ್ಯೊ ... ಏನೊ ? ಗಂಗಾಧರ ? ಏನೊ...."

" ನಿನ್ನ ಹೆಂಡತಿ ಏನೋ ಮಾಡಿಕೊಂಡಿದ್ದಾಳೆ—"

" ಅಯ್ಯೋ...."

ಶ್ರೀನಿವಾಸ ಅಲ್ಲಿಂದ ಓಡಿದ—ಮನೆಯವರೆಗೆ. ಕಾಮೇಶ ನೆಲಕ್ಕೆ ಕುಳಿತಿದ್ದ. ಮೂರು ನಾಲ್ಕು ಜನ ಪೋಲೀಸ್ ಕಾನ್ಸ್ಟೇಬಲ್‌ರು ನಿರ್ವಿಕಾರ ವಾಗಿ ನಿಂತಿದ್ದರು. ಶ್ರೀನಿವಾಸನಿಗೆ ಯಾವುದರ ಪರಿವೆಯೂ ಉಳಿದಿರಲಿಲ್ಲ. ನೇರವಾಗಿ ಓಡಿ ಬಾಗಿಲನ್ನು ಬಲವಾಗಿ ತಟ್ಟಿದ ಬಾಗಿಲ ಸದ್ದಿನ ಹೊರತು ಬೇರೆ ಯಾವ ಸದ್ದೂ ಕೇಳಬರಲಿಲ್ಲ " ಕಾವೀ ! " ಎಂದು ಮೂರು ನಾಲ್ಕು ಬಾರಿ ಚೀರಿದ. ಆಚೆಯ ಈಚೆಯ ಎರಡು ಕಿಟಕಿಗಳೂ ಭದ್ರವಾಗಿದ್ದವು.

" ಅಯ್ಯೋ...." ಎಂದು ನರಳಿದ.

ಕಾಮೇಶ ಬಂದು ಆತನನ್ನು ಹಿಂದಕ್ಕೆ ಸರಿಸಿದ. ಗಂಗಾಧರ ಸಮಾಧಾನ ಹೇಳುತ್ತಲೆ ಇದ್ದ. ಶ್ರೀನಿವಾಸನ ಗಂಟಲಲ್ಲಿ ದನಿ ಇಂಗಿಹೋಯಿತು, ನೆಲಕ್ಕೆ ಕುಳಿತ. ಅವನ ನರಳುವಿಕೆ ಅಲ್ಲಿ ನಿಂತವರ ಹೃದಯವನ್ನು ಕೊರೆಯುತ್ತಿತ್ತು.

" ಇವರೆಯೆ ಈ ಮನೆಯವರು ? " ಎಂದು ಪೋಲೀಸ್ ಇನ್ಸ್‌ಪೆಕ್ಟರ್.

" ಹುಂ...." ಎಂದು ಗಂಗಾಧರನ ದನಿ

" ಬಾಗಿಲನ್ನು ಮುರಿಯಬೇಕಾಗುತ್ತದೆ...."

ಉಳಿದ ಯಾರೂ ಏನನ್ನೂ ಮಾಡುವಂತಿರಲಿಲ್ಲ ನೆರೆಯ ಎರಡು ಮನೆಯವರು ಮಕ್ಕಳನ್ನು ಒಳಗಡೆ ಇರಿಸುವುದರಲ್ಲಿ ತೊಡಗಿದ್ದರು. ಪೋಲೀಸಿನವನು ಆಚೆಯ ಮನೆಯಲ್ಲಿಂದ ಒಂದು ದೊಡ್ಡ ಹಾರೆಯನ್ನು ತಂದು ಬಾಗಿಲ ಬದಿಗೆ ಬಲವಾಗಿ ಏಟು ಹಾಕತೊಡಗಿದ. ಶ್ರೀನಿವಾಸನಿಗೆ ಯಾರೋ ತನ್ನ ಎದೆಯ ಮೇಲೆ ಹೊಡೆಯುತ್ತಿರುವ ಹಾಗೆ ಭಾಸವಾಗು

ತ್ತಿತ್ತು. ಆದರೆ ಆತನಿಗೆ ಎಷ್ಟರಮಟ್ಟಿಗೆ ಎಚ್ಚರವಿದ್ದಿತು ? ಯಾವಾಗಲೊ ಎದ್ದುನಿಂತು ಬಾಗಿಲು ಒಡೆಯುವವನ ಹತ್ತಿರ ಬಂದಿದ್ದ. ಒಂದಾಯಿತು, ಎರಡಾಯಿತು, ಮೂರಾಯಿತು. ಬಾಗಿಲು ಹಣಿಯಲಿಲ್ಲ ಎಂಟಾಯಿತು, ಒಂಬತ್ತಾಯಿತು. ಹಾರಿಯ ಪೆಟ್ಟುಗಳು ಬೀಳುತ್ತಲೆ ಇದ್ದವು. ಹತ್ತನೆಯ ಏಟಿಗೆ ಬಾಗಿಲು ಧಡಾರೆಂದು ಮುರಿದುಬಿದ್ದಿತು.

ಶ್ರೀನಿವಾಸ ನೋಡಿದ. ಚಿಟ್ಟೆಂದು ಕೆಟ್ಟ ದನಿಯಿಂದ ಚೀರಿದ! ನೆಲಕ್ಕೆ ಬಿದ್ದ. ಕಾವೇರಿ ಪಡಸಾಲೆಯ ನಡುವಿನ ಅಂಕಣದಲ್ಲಿ ನೇಣು ಹಾಕಿಕೊಂಡಿದ್ದಳು!

ಶ್ರೀನಿವಾಸನಿಗೆ ಪ್ರಜ್ಞೆ ತಪ್ಪಿಹೋಗಿತ್ತು. ನೋಡಿದಷ್ಟೇ ಆತನಿಗೆ ಸಾಕಾಗಿತ್ತು! ಅದೆ ಸ್ಥಳದಲ್ಲಿ ಕಾವೇರಿ ಒಂದು ಕಾಲಕ್ಕೆ 'ಪುಟ್ಟು'ವಿಗಾಗಿ ತೊಟ್ಟಿಲು ಕಟ್ಟಿದ್ದಳು. ಅದೆ ತೊಟ್ಟಿಲನ್ನು ಮತ್ತೊಮ್ಮೆ ಕಟ್ಟಲೆಂದು ಶ್ರೀನಿವಾಸ ತಂದಿಟ್ಟ ಗಟ್ಟಿಮುಟ್ಟಾದ ಹಗ್ಗವನ್ನೆ ಉಪಯೋಗಿಸಿದ್ದಳು!

ಗಂಗಾಧರ ಕಾಮೇಶರು ಶ್ರೀನಿವಾಸನನ್ನು ಎತ್ತಿ ಒಯ್ದು ನೆರೆಯವರ ಮನೆಯಲ್ಲಿ ಇರಿಸಿ ಉಪಚಾರ ಮಾಡಿದರು. ಗಂಗಾಧರ ಅವನ ಹತ್ತಿರವೆ ಉಳಿದ. ಎಷ್ಟು ಒದ್ದಾಡಿದರೂ ಎಷ್ಟು ಕೇಳಿಕೊಂಡರೂ ಆತನನ್ನು ಹೊರಗೆ ಬರಗೊಡಲಿಲ್ಲ "ಕೊನೆಯಾಗಿ ಒಮ್ಮೆ ನೋಡುತ್ತೇನೆ, ಬಿಡೊ, ಗಂಗಾಧರಾ. ಕೊನೆಯಾಗಿ ಒಮ್ಮೆ ನೋಡುತ್ತೇನೆ. ಅಯ್ಯೋ...." ಎಂದು ಎಷ್ಟು ನರಳಿದರೂ ಶ್ರೀನಿವಾಸನನ್ನು ಆತ ಅಲ್ಲಿಯೆ ತಡೆಹಿಡಿದ

ತಡೆಹಿಡಿದದ್ದೇ ಸರಿಯಾಯಿತು ಇತ್ತ ನಡೆದ—ನಡೆಯಲೇಬೇಕಾದ ರುದ್ರಸನ್ನಿವೇಶವನ್ನು ನೋಡಿ ತಡೆದುಕೊಳ್ಳುವುದು ಆತನಿಂದ ಆಗುತ್ತಲೆ ಇರಲಿಲ್ಲ ಹಗ್ಗವನ್ನು ಕತ್ತರಿಸಿ, ಶವವನ್ನು ಹೊರಗಡೆ ತಂದು, ನಡೆಯಬೇಕಾದ 'ಪಂಚನಾಮೆ' ನಡೆಯಬೇಕಾದರೆ ಸುಮಾರು ಒಂದು ಗಂಟೆಯ ಮೇಲೆ ಹಿಡಿಯಿತು ಶ್ರೀನಿವಾಸ ಒಳಗಿನಿಂದ ಒರಲುತ್ತಲೆ ಇದ್ದ. ಎಲ್ಲ ಕೆಲಸವನ್ನು ಕಾಮೇಶ—ಆತನಿಂದ ಕರೆಕಳಿಸಲ್ಪಟ್ಟ ಉಳಿದ ಒಬ್ಬಿಬ್ಬ ವ್ಯವಸಾಯ ಬಂಧುಗಳು ನಡೆಯಿಸಿದರು. ಪಂಚನಾಮೆ ಮುಗಿಯಿತು. ಹೊರಗಿನ ಪಡಸಾಲೆಯಲ್ಲಿಯ ಪ್ರತಿ ಒಂದು ವಸ್ತು, ಕಾಲ ಕೆಳಗೆ ಇಟ್ಟುಕೊಂಡು ಅಮೇಲೆ ಒದೆದ ಚಿಕ್ಕದಾದ ಮೇಜು, ಅದರಂತೆ ಕಾವೇರಿಯ

ಮೈಮೇಲಿನ ಹೊಸ ಸೀರೆ, ವಸ್ತ್ರ ಒಡವೆ, ಎಲ್ಲವುಗಳ ವಿವರವಾದ ವರದಿ ಆಯಿತು. ಎಲ್ಲವೂ ಮುಗಿದಮೇಲೆ ಕಾಮೇಶ ಪೊಲೀಸ್ ಇನ್ಸ್‌ಪೆಕ್ಟರನ್ನು ಕುರಿತು ಪ್ರಶ್ನಾರ್ಥಕವಾಗಿ ನೋಡಿದ.

"ಮುಂದೆ?"

"ಇಲ್ಲಿ ಎಲ್ಲಿಯಾದರೂ ಸಮೀಪದಲ್ಲಿ ಫೋನ್ ಇದೆಯೆ?"

ಕಾಮೇಶ ಸುಮ್ಮನಾಗಿಯೆ ಇದ್ದ.

"ಖಾದರ್....ಎಲ್ಲಿಂದಾದರೂ ಹಾಸ್ಪಿಟಲ್‌ಗೆ ಫೋನ್ ಮಾಡಿಬಿಡು— ಆಂಬ್ಯುಲನ್ಸ್ ಕಳಿಸಿರಿ ಅಂತ....ಅವರಿಗೆ ಹೀಗೆ ಅಂತ ಹೇಳು...."

"ಜೀ....ಸಾಬ್...." ಎಂದು ಒಬ್ಬ ಕಾನ್ಸ್‌ಟೇಬಲ್ ಹೊರಟು ಹೋದ.

"ಹಾಸ್ಪಿಟಲ್‌ಗೆ ಹೋಗಬೇಕೆ?"

"ಅಲ್ಲವೆ?"

"ಹೋಗಲೇಬೇಕೆ....?"

"ಏನು ಮಾಡುವುದು? ನಮ್ಮ ಕೈಯಲ್ಲಿಯು ಮಾತಾಗಿದ್ದರೆ ಬಿಡಬಹುದಾಗಿತ್ತು. ಎಲ್ಲ 'ಕಾಯಿದೇಶೀರ್' ನಡೆಯಬೇಕಲ್ಲ...."

ಕಾಮೇಶ ಸುಮ್ಮನಾದ—ನಿರುಪಾಯನಾಗಿ. ಶ್ರೀನಿವಾಸನಿದ್ದ ಮನೆಯ ಬಾಗಿಲ ಹತ್ತಿರ ಹೋಗಿ ಮೆಲುದನಿಯಲ್ಲಿ,

"ಗಂಗಾಧರಾ...."

"ಏನು?" ಎಂದು ಆತ ಹೊರಗಡೆ ಬಂದ. ಕಾಮೇಶ ಆತನ ಕಿವಿಯಲ್ಲಿ ಮೆತ್ತಗೆ,

"ಹಾಸ್ಪಿಟಲ್‌ಗೆ ತೆಗೆದುಕೊಂಡು ಹೋಗಬೇಕಂತಲ್ಲ?" ಉಸಿರಿದ.

"ಯಾಕಂತೆ?"

"ಪೋಸ್ಟ್‌ಮಾರ್ಟೆಮ್ ಆಗಬೇಕು...."

"ಅನ್ಯಾಯ! ಆದರೇನು ಮಾಡುವಹಾಗಿದೆ?"

ಇಷ್ಟು ಹೊತ್ತಿಗೆ ಶ್ರೀನಿವಾಸನೂ ಹೊರಗಡೆ ಬಂದ. ಕಾವೇರಿಯನ್ನು ಉದ್ದಕ್ಕಾಗಿ ನೆಲಕ್ಕೆ ಮಲಗಿಸಿದ್ದರು. ಕೆಲಸವೆಲ್ಲ ಮುಗಿದದ್ದರಿಂದ ಕಾಮೇಶ ಮನೆಯಲ್ಲಿಯ ಬಿಳಿ ಪಂಚೆಯೊಂದನ್ನು ತಂದು ಮುಖ ಮೈಗಳನ್ನು

ಪೂರ್ತಿಯಾಗಿ ಮುಚ್ಚಿದ್ದ. ಶ್ರೀನಿವಾಸ ಒಮ್ಮೆ ನೋಡಿದ. ಎರಡೂ ಕೈಗಳಿಂದ ಕಣ್ಣು ಮುಚ್ಚಿಕೊಂಡು ನೆಲಕ್ಕೆ ಕುಳಿತ. ಬಾಯಿಂದ ಯಾವ ಶಬ್ದವೂ ಹೊರಡಲಿಲ್ಲ. ಗಂಗಾಧರ ಹತ್ತಿರವೆ ಕುಳಿತ.

ಹದಿನೈದು ನಿಮಿಷಗಳಲ್ಲಿ ಹಾಸ್ಪಿಟಲ್‌ನಿಂದ ಆಂಬ್ಯುಲನ್ಸ್ ಕಾರ್ ಬಂದಿತು. ಕಾವೇರಿಯನ್ನು ಅದರಲ್ಲಿರಿಸಲಾಯಿತು. ಶ್ರೀನಿವಾಸ ನೋಡಲಾಗದೆ, ನೊಡದೆಯೂ ಇರಲಾಗದೆ ದುಃಖದಿಂದ ಹುಚ್ಚನಂತಾದ. ಗಂಗಾಧರ ಆತನಿಗೆ ಸಮಾಧಾನ ಹೇಳುತ್ತಲೆ ಇದ್ದ. ಆದರೆ ಯಾರು ಏನು ಹೇಳಿದರೆ ಏನಾಗಬೇಕು? ಐದು ನಿಮಿಷಗಳಲ್ಲಿ ಇಬ್ಬರು ಪೊಲೀಸರು ತಮ್ಮ ಮುಖ್ಯಸ್ಥನಿಂದ ಹಾಸ್ಪಿಟಲ್ ಅಧಿಕಾರಿಗಳ ಹೆಸರಿಗೆ ಕಾಗದ ಒಂದನ್ನು ಬರೆಯಿಸಿಕೊಂಡು ಹೊರಡಲನುವಾದರು. ಆಂಬ್ಯುಲನ್ಸ್‌ನ ಬಾಗಿಲು ಮುಚ್ಚಿತು. ಶ್ರೀನಿವಾಸ ಮತ್ತೆ ಕೆಟ್ಟ ದನಿಯಿಂದ ಚೀರಿದ. ಕಾರು ಹೊರಟಿತು. ಕಾವೇರಿ ಕೊನೆಯಾಗಿ ಮನೆ ಬಿಟ್ಟು ಹೊರಟಳು!

"ಇವರದೊಂದು ಜವಾಬು ಬರೆದುಕೊಳ್ಳಬೇಕಲ್ಲಾ—" ಎಂದರು ಇನ್ಸ್‌ಪೆಕ್ಟರು

"ಏನು ಜವಾಬು?" ಎಂದ ಕಾಮೇಶ.

"ಏನಿದ್ದರೂ ಅವರಿಗೆ ಹೇಳಬೇಕಾದದ್ದು...."

"ಏನು ಹೇಳುತ್ತಾನೆ, ಪಾಪ...."

"ನನಗೇನು ಗೊತ್ತಾಗುವುದಿಲ್ಲವೆ? ಆದರೂ ನಡೆಯಬೇಕಾದದ್ದು...."

ನಡುವಯಸ್ಸಿನ ಅನುಭವಸ್ಥನಾದ ಆ ಪೊಲೀಸ್ ಇನ್ಸ್‌ಪೆಕ್ಟರು ನಿಧಾನವಾಗಿ, ಸಹಾನುಭೂತಿಪೂರ್ವಕವಾಗಿ ಶ್ರೀನಿವಾಸನನ್ನು ಮಾತನಾಡಿಸಿ 'ಹೇಳಿಕೆ'ಯೊಂದನ್ನು ಬರೆದುಕೊಂಡರು. ಕೊನೆಯಾಗಿ,

"ಇದು ಯಾಕೆ ಎಂಬುದರ ಬಗ್ಗೆ ಏನಾದರೂ ನಿಮಗೆ ಗೊತ್ತಿದೆಯೆ?" ಎಂದು ಕೇಳಿದರು.

"ಇಲ್ಲ...."

"ಏನಾದರೂ ಜಗಳವಾಗಿತ್ತೆ?"

"ಎಲ್ಲಿಯ ಜಗಳ? ಇಂದು ಬೆಳಿಗ್ಗೆ ಇವರೇ ಇಬ್ಬರೂ ಬಂದಿದ್ದರು, ಕೇಳಿರಿ."

" ಅಲ್ಲ, ಅಲ್ಲ. ಅಂದರೆ ಕೇಳಿದೆ...."

" ಹಾಗಾದರೆ ನಿಮಗೆ ತಿಳಿದಮಟ್ಟಿಗೆ ಯಾವ ಕಾರಣವನ್ನೂ ಹೇಳಲು ಬರುವುದಿಲ್ಲ ಅನ್ನುತ್ತೀರಾ ? "

" ಏನು ಹೇಳಲಿ ? "

" ಇವರ ತವರುಮನೆ ಊರು ಯಾವುದು ? "

" ಬಾಗಿಲುಕೋಟೆ...."

" ಅಲ್ಲಿ ಯಾರು ಇದ್ದಾರೆ ಇವರ ಜನ ? "

" ಯಾರೂ ಇಲ್ಲ ! "

" ತಾಯಿತಂದೆ, ಅಣ್ಣತಮ್ಮ—ಯಾರೂ ಇಲ್ಲವೆ ? "

" ಯಾರೂ ಇಲ್ಲ." ಶ್ರೀನಿವಾಸನಿಗೆ ಬಿಕ್ಕು ತಡೆಯದಾಯಿತು

" ನಿಮ್ಮವರು ಮತ್ತೆ ಯಾರು ಎಲ್ಲಿದ್ದಾರೆ ? "

" ಬಾಗಿಲುಕೋಟೆಯಲ್ಲಿ ನಮ್ಮ ತಾಯಿ ಇದ್ದಾಳೆ...."

" ಅವರ ಹತ್ತಿರ ಇವರು ಎಂದಾದರೂ ಇದ್ದರೆ ? "

" ಬಹಳ ದಿವಸ ಅಲ್ಲಿಯೆ ಇದ್ದಳು. ಇಲ್ಲಿಗೆ ಬಂದು ಆರೇಳು ತಿಂಗಳು ಆಗಿತ್ತು...."

" ಸರಿ....ಇದಕ್ಕೆ ನಿಮ್ಮ ರುಜು ಹಾಕುತ್ತೀರಾ ? "

ಅದರನಂತರ ಗಂಗಾಧರ ಕಾಮೇಶ ಇಬ್ಬರ 'ಹೇಳಿಕೆ'ಯನ್ನೂ ಬರೆದುಕೊಳ್ಳಲಾಯಿತು. ಇನ್ಸ್‌ಪೆಕ್ಟರು ಹೊರಡುವ ಮುನ್ನ ಗಂಗಾಧರನಿಗೆ ಹೇಳಿದರು :

" ನಾಳೆ ಬೆಳಿಗ್ಗೆ ಹತ್ತು ಗಂಟೆಯ ಸುಮಾರಿಗೆ ಹಾಸ್ಪಿಟಲ್‌ಗೆ ಬನ್ನಿರಿ...."

" ನಾಳೆ ಬೆಳಿಗ್ಗೆಯೆ ? "

" ಹುಂ....ರಾತ್ರಿ ಪೋಸ್ಟ್‌ಮಾರ್ಟೆಮ್ ಆಗುವುದಿಲ್ಲ...."

ಪೊಲೀಸ್ ಇನ್ಸ್‌ಪೆಕ್ಟರು ಹೊರಟುಹೋದರು.

" ಕಾಮೇಶ್, ಒಂದು ಟಾಂಗಾ ತರುತ್ತೀಯಾ ? " ಎಂದ ಗಂಗಾಧರ.

" ಟಾಂಗಾ ಯಾತಕ್ಕಪ್ಪಾ ? " ಎಂದ ಶ್ರೀನಿವಾಸ.

" ನಮ್ಮಲ್ಲಿಗೆ ಹೋಗೋಣ."

"ನಾನು ಎಲ್ಲಿಯೂ ಬರುವುದಿಲ್ಲಪ್ಪಾ ನಾನಿಲ್ಲಿಯೇ ಸಾಯುತ್ತೇನೆ"

"ಏಳು ನೋಡೋಣ. ಏನು ಮಾಡುವುದು? ಆಗಿಹೋಯಿತಲ್ಲಾ...."

ಹೆಚ್ಚು ಕಡಿಮೆ ಶ್ರೀನಿವಾಸನನ್ನು ಎತ್ತಿ ಟಾಂಗಾದಲ್ಲಿ ಕುಳ್ಳಿರಿಸಲಾಯಿತು. ಕಾಮೇಶ ನಡಗುವ ಕೈಗಳಿಂದ ಪಡಸಾಲೆಯಲ್ಲಿಯ ಸಾಮಾನುಗಳನ್ನು ನಡುಮನೆಗೆ ಸಾಗಿಸಿ, ಅಲ್ಲಿಯ ಬಾಗಿಲಿಗೆ ಒಂದು ಬೀಗವನ್ನು ಹಾಕಿ ಬಂದು ಕುಳಿತ. ಗಾಡಿ ಹೊರಟಿತು—ಗಂಗಾಧರನ ಮನೆಗೆ. ಗಂಗಾಧರನ ಮನೆಗೆ ಹೋಗುವುದೆಂದೇ ಕಾರ್ಯಕ್ರಮು ಗೊತ್ತಾಗಿತ್ತಲ್ಲವೆ ?

ಹುಣ್ಣಿಮೆಯ ಚಂದ್ರ ಮೇಲಕ್ಕೇರಿದ್ದ. ಹಾಸ್ಪಿಟಲ್‌ನ ಮಾರ್ಗ (ಶವದ ಕೋಣೆ)ದಲ್ಲಿ ಕಾವೇರಿಯ ದೇಹ ಬೆಳ್ಳಗಿನ ಬಟ್ಟೆಯನ್ನು ಹೊದ್ದುಕೊಂಡು ಮಲಗಿತ್ತು. ಅದನ್ನು ಶ್ರೀನಿವಾಸ ನೋಡಿದ್ದರೆ ಹುಣ್ಣಿಮೆಯ ಚಂದ್ರನ ತುಂಬು ಬೆಳುದಿಂಗಳನ್ನು ಹೊದ್ದುಕೊಂಡು ಸುತ್ತಲಿನ ಸೃಷ್ಟಿಯೂ ಹಾಗೆಯೇ ಮಲಗಿದೆ ಎಂದು ಹೇಳಬಹುದಾಗಿತ್ತು.

## ೨೦

ಬೆಳಿಗ್ಗೆ ಹತ್ತು ಗಂಟೆಯ ಸುಮಾರಿಗೆ ಮೂವರೂ ಹಾಸ್ಪಿಟಲ್ ಸೇರಿದರು. ಅಸಿಸ್ಟೆಂಟ್ ಸರ್ಜನ್‌ರು ಇನ್ನೂ ಮಾರ್ಗದಲ್ಲಿಯೆ ಇದ್ದರು. ಇನ್ನೂ ಕೆಲಸ ಮುಗಿದಿರಲಿಲ್ಲ. ಶ್ರೀನಿವಾಸನ ಯೋಚನೆಗಳೆಲ್ಲವೂ ಬಧಿರವಾಗಿ ಹೊಗಿದ್ದವು. ಕಣ್ಣೆದುರು ಏನೇನೊ ನಡೆಯುತ್ತಲಿತ್ತು—ಕೆಟ್ಟ ಕನಸಿನಲ್ಲಿಯಂತೆ. ಪೊಲೀಸ್ ಇನ್ಸ್‌ಪೆಕ್ಟರೂ ಡಾಕ್ಟರ ಕೋಣೆಯ ಹತ್ತಿರವೆ ಸುಳಿದಾಡುತ್ತಿದ್ದರು. ಇವರು ಬಂದುದನ್ನು ನೋಡಿ ಮೂವರನ್ನೂ ಡಾಕ್ಟರ ಕೋಣೆಯಲ್ಲಿ ಕುಳ್ಳಿರಿಸಿದರು. ಗಂಗಾಧರನನ್ನು ಹೊರಗಡೆ ಕರೆದರು.

ಹತ್ತಿಪ್ಪತ್ತು ಹೆಜ್ಜೆ ದೂರ ಬಂದಮೇಲೆ,

"ಅವರನ್ನು ಮಾತನಾಡಿಸಿದಿರಾ ? ಏನಾದರೂ ಗೊತ್ತಾಯಿತೆ ?"

"ಏನು ಗೊತ್ತಾಗುವುದು ? ಯಾವುದೂ ಆತನಿಗೆ ತಿಳಿಯುವುದಿಲ್ಲ."

"ಅಂದರೆ, ಇದೇ ನೋಡಿರಿ. ನಮಗೆ ಮುಖ್ಯ ಮನವರಿಕೆಯಾಗದ ಹೊರತು—"

"ಇನ್ನೇನು ಮನವರಿಕೆಯಾಗಬೇಕಾಗಿದೆ ?"

"ಇದು ನಿಜವಾಗಿಯೂ ಆತ್ಮಹತ್ಯೆಯೊ ಅಥವಾ...."

"ಹೀಗೆ ಮಾತನಾಡಿದರೆ ನಾವು ಏನು ಹೇಳೋಣ ?...."

"ನಮ್ಮ ಕೆಲಸವನ್ನಂತೂ ನಾವು ಮಾಡಬೇಕಲ್ಲ...."

"ಅದಂತೂ ಸರಿ. ಈಗ ನಾವೇನು ಮಾಡು ಅನ್ನುತ್ತೀರಿ ?...."

"ಏನಿಲ್ಲ. ನಿಮಗೆ ತಿಳಿದಮಟ್ಟಿಗೆ ಇದಕ್ಕೆ ಏನಾದರೂ ಕಾರಣ...."

"ನಿನ್ನೆಯೆ ಹೇಳಿದೆನಲ್ಲವೆ ? ನಿನ್ನೆ ಬೆಳಿಗ್ಗೆ ನಾವು ಅಲ್ಲಿಯೆ ಊಟ ಮಾಡಿದ್ದೇವೆ. ಎಲ್ಲರೂ ನೇರಿ ಹರಟೆ ಹೊಡೆದಿದ್ದೇವೆ. ನಕ್ಕಿದ್ದೇವೆ.... ಒಮ್ಮೆಲೆ...."

"ಅದೆ....ಹೀಗೆ ಒಮ್ಮೆಲೆ ಏನಾಯಿತು ?"

"ದೇವರೇ ಬಲ್ಲ...."

"ನಾವು ಅಲ್ಲಿ ಇಲ್ಲಿ ಎನ್‌ಕ್ವಾಯರಿ ನಡಸಿದ್ದೇವೆ. ಅದನ್ನೆಲ್ಲ ನೋಡಿಕೊಂಡೆ ರಿಪೋರ್ಟ್ ಮಾಡಬೇಕು...."

" ತಮಗೆ ತಿಳಿದ ಹಾಗೆ ಮಾಡಬೇಕು. ನಾವೇನು ಹೇಳಬಹುದು! ಆದರೆ ಆ ಬಡಪಾಯಿ ಇಷ್ಟಕ್ಕೆಯೆ ನೆಲಕ್ಕೆ ಬಿದ್ದಿದ್ದಾನೆ. ಸುಮ್ಮನೆ ತೊಂದರೆ ಆಗದಂತೆ ನೀವು ನೋಡಿಕೊಳ್ಳಬೇಕು. ಅಷ್ಟೆ! "

" ಹುಂ, ನಾನು ಅನ್ನುವುದೂ ಅದೆ. ಸುಮ್ಮನೆ ತೊಂದರೆಯಾಗಬಾರದು ನೋಡಿ. ನಮಗೂ ಅಷ್ಟೆ. ನಿಮಗೂ ಅಷ್ಟೆ—"

ಗಂಗಾಧರ ಸುಮ್ಮನಾದ ಅಷ್ಟರಲ್ಲಿ ಮಾರ್ಗದ ಕಡೆಯಿಂದ ಡಾಕ್ಟರು ಬಂದಹಾಗೆ ಕಾಣಿಸಿತಾದ್ದರಿಂದ ಇನ್ಸ್‌ಪೆಕ್ಟರು ಗಂಗಾಧರನಿಗೆ ಹೇಳಿದರು :

" ಹಾಗಾದರೆ ನೀವು ನಾಳೆ ಬೆಳಿಗ್ಗೆ ಅಥವಾ ಸಾಯಂಕಾಲ ನನ್ನ ಕಡೆಗೆ ಬಂದು ಹೋಗಿರಿ. ನೋಡೋಣ, ಅಷ್ಟರಲ್ಲಿ ಏನೇನು ಬಂದಿರುತ್ತದೆ...."

ಡಾಕ್ಟರು ತಮ್ಮ ಕೋಣೆಯನ್ನು ಸೇರಿದರು ಮೂವರೂ ಎದ್ದು ನಿಂತರು. ತಮ್ಮ ಕೈಯಲ್ಲಿಯ ಕಾಗದದ ಟಿಪ್ಪಣಿಗಳನ್ನು ಟೇಬಲ್ ಮೇಲೆ ಇರಿಸುತ್ತ ಪ್ರಶ್ನಾರ್ಥಕವಾಗಿ ಮೂವರನ್ನೂ ನೋಡಿದಾಗ ಇನ್ಸ್‌ಪೆಕ್ಟರೆ ಮುಂದಾಗಿ ಹೇಳಿದರು :

" ಪೋಸ್ಟ್‌ಮಾರ್ಟೆಮ್ ಮಾಡಿದ ದೇಹಕ್ಕಾಗಿ ಕಾದಿದ್ದಾರೆ."

" ಓ...." ಎಂದು ಡಾಕ್ಟರು ಸುಮ್ಮನಾದರು. ಕೈಗಂಟೆಯನ್ನು ಬಾರಿಸಿದರು. ಅರೆನಿಮಿಷದಲ್ಲಿ ಜವಾನನೊಬ್ಬ ಬಂದ. ಡಾಕ್ಟರು,

" ಇದು ನೋಡು, ಮಾರ್ಗದಲ್ಲಿಯ ಆ ದೇಹ ಸ್ವಿಚ್ ಮಾಡು ಅಂತ ಹೇಳು. ಮತ್ತು, ಅದನ್ನೆಲ್ಲ ಚೆನ್ನಾಗಿ ಒಂದು ದೊಡ್ಡ ಬ್ಯಾಂಡೇಜ್‌ಕ್ಲಾಥ್‌ದಲ್ಲಿ ಸುತ್ತಿ ತಯಾರುಮಾಡಿ ಇಡು ಎಂದು ಹೇಳು....ತಯಾರಾದಮೇಲೆ ಬಂದು ಹೇಳು...." ಎಂದು ಹೇಳಿದರು.

" ಜೀ....ಸಾಬ್...."

ನಡುವಯಸ್ಸಿನ ಆ ಡಾಕ್ಟರ್ ಅನುಭವಸ್ಥರಾಗಿದ್ದರು. ಎದುರುಗಿದ್ದ ಮೂವರ ಬಗೆಯಲ್ಲಿ ಅವರ ಸಹಾನುಭೂತಿ ಸ್ಪಷ್ಟವಾಗಿದ್ದಿತು. ತಮ್ಮ ಕನ್ನಡಕವನ್ನು ತೆಗೆದು ಟೇಬಲ್ ಮೇಲಿರಿಸುತ್ತ ಕೇಳಿದರು :

" ಶ್ರೀನಿವಾಸರಾವ್ ಯಾರು ? "

ಶ್ರೀನಿವಾಸ ಕುರ್ಚಿಯಲ್ಲಿ ಮಿಸುಕಾಡಿದ—ಮುಂದಕ್ಕೆ ಸರಿದ. ಡಾಕ್ಟರೆಂದರು:

" ಆಯ್ ಆವ್ ವೆರಿ ಸಾರಿ, ಶ್ರೀನಿವಾಸರಾವ್ ! (ನನಗೆ ತುಂಬಾ ಕೆಡಕೆನಿಸುತ್ತದೆ, ಶ್ರೀನಿವಾಸರಾವ್ !) ಇಟ್ ಈಸ್ ರೀಯಲಿ ಅನ್ ಫಾರ್ಚುನೇಟ್ ! (ನಿಜವಾಗಿಯೂ ದುರ್ದೈವದ ಮಾತಾಗಿದೆ!)...."

ಡಾಕ್ಟರು ಇನ್ಸ್‌ಪೆಕ್ಟರಿಗೆ ಏನೊ ಒಂದು ಕೆಲಸವನ್ನು ಸೂಚಿಸಿ ಅಲ್ಲಿಂದ ಹೊರಡುವಂತೆ ಮಾಡಿದರು. ಇವರ ಜತೆಗೆ ಒಂದೆರಡು ಮಾತು ಗಳನ್ನು ಆತ್ಮೀಯವಾಗಿ ಮಾತನಾಡಬೇಕಿತ್ತು ಅವರಿಗೆ ಪೊಲೀಸಿನವರು ಹತ್ತಿರವಿದ್ದರೆ ಸರಿಯಲ್ಲವೆನಿಸಿರಬೇಕು ಅವರಿಗೆ. ಅವರು ಕೇಳಿದರು :

" ಇವರಿಗೆ ಏನಾದರೂ ಅನಾರೋಗ್ಯವಿತ್ತೆ ? "

" ಇಲ್ಲ...."

" ಈಗಲ್ಲದಿದ್ದರೂ ಈಗ ಇತ್ತೀಚೆಗೆ ಟಾಯ್‌ಫಾಯ್ಡ್‌ದಂಥ ದೊಡ್ಡ ಬೇನೆ ಏನಾದರೂ...."

" ನನಗೆ ತಿಳಿದ ಮಟ್ಟಿಗೆ ಈಗ ಏಳೆಂಟು ವರ್ಷಗಳಲ್ಲಿ ಯಾವ ತಕರಾರೂ ಇರಲಿಲ್ಲ "

" ಸ್ವಭಾವ ಹೇಗಿತ್ತು ?...."

ಶ್ರೀನಿವಾಸನಿಗೆ ಕಳೆದ ಹತ್ತಿಪ್ಪತ್ತು ದಿನಗಳ ಸರಸ ಚಿತ್ರಗಳೆಲ್ಲವೂ ಕಣ್ಣ ಮುಂದೆ ಕಟ್ಟಿದವು. ಅವನಿಗೆ ಬಾಯಿಂದ ಮಾತೇ ಹೊರಡದಾಯಿತು.

" ಏನು ಹೇಳಲಿ, ಡಾಕ್ಟರ್....ನನ್ನ ದುರ್ದೈವ. ಅಂಥವಳನ್ನು ಕಳೆದುಕೊಂಡು...."

" ಸಿಟ್ಟು, ಹಟ—ಬಹಳವಾಗಿತ್ತೆ ? "

" ಇಲ್ಲ...."

" ಹಾಗಿದ್ದರೆ ಆಶ್ಚರ್ಯ !....ಹೀಗೆ ಒಮ್ಮಿಂದೊಮ್ಮೆಲೆ...."

" ಅದೇ ನಮಗೂ ದಿಗಿಲಾಗಿದೆ...." ಎಂದ ಗಂಗಾಧರ.

" ಮಕ್ಕಳೆಷ್ಟು ?...." ಡಾಕ್ಟರರು ಪ್ರಶ್ನೆ ಮಾಡಿದರು.

ಶ್ರೀನಿವಾಸನಿಗೆ ಮತ್ತೆ ದುಃಖ ಒತ್ತರಿಸಿ ಬಂದಿತು. ಕಾಮೇಶ ಹೇಳಿದ :

" ಮಕ್ಕಳಾಗಿರಲಿಲ್ಲ...."

" ಅದನ್ನವರು ಬಹಳ ಮನಸ್ಸಿಗೆ ಹಚ್ಚಿಕೊಂಡಿದ್ದರೆ ? "

“ ಒಂದು ಕಾಲಕ್ಕೆ....ಹೌದು. ಆದರೆ ಇತ್ತೀಚೆಗೆ ಅದರ ಯಾವ ಮಾತೂ ಇರಲಿಲ್ಲ....”

“ ವಾಟ್ ಎ ಪಿಟಿ ! (ಎಂತಹ ದುಃಖದ ಸಂಗತಿ !) ಛುಃ ! ”

ಡಾಕ್ಟರು ಸುಮ್ಮನಾದರೂ ಹೇಳಬೇಕಾದುದನ್ನು ಹೇಳಬೇಕೊ ಬೇಡವೊ ಎಂಬುದೆ ಅವರಿಗೆ ಪ್ರಶ್ನೆಯಾಗಿರಬೇಕು. ಕೊನೆಗೆ ತಮ್ಮಷ್ಟಕ್ಕೆಯೆ ಎಂಬಂತೆ ಉಸಿರಿದರು :

“ ಒಂದಕ್ಕೆ ಎರಡು ಜನ್ಮ ಹಾಳು ಅಲ್ಲವೆ—”

“ ನನಗೇನಾಗಿದೆ ಡಾಕ್ಟರರೆ ? ಇಷ್ಟಾದರೂ ಹೇಗೆ ಕಲ್ಲಿನಂತಿದ್ದೇನೆ ” ಎಂದು ಶ್ರೀನಿವಾಸ ತನ್ನ ಹೃದಯದ ಉದ್ವಿಗ್ನತೆಯನ್ನು ತೋಡಿಕೊಂಡ.

“ ಎರಡು ಜನ್ಮ ಅಂದರೆ—” ಡಾಕ್ಟರು ಸುಮ್ಮನಾದರು.

“ ಏನು ಡಾಕ್ಟರೆ ?....”

“ ಬಹಳ ದುರ್ದೈವದ ಮಾತು. ಆಕೆ ಸುಮಾರು ಎರಡು ತಿಂಗಳ ಗರ್ಭಿಣಿಯಾಗಿದ್ದರು ! ”

ಶ್ರೀನಿವಾಸನಿಗೆ ಮಾತು ಎದೆಯಲ್ಲಿ ಇರಿಯಿತು. ಸುತ್ತಲಿನ ಪ್ರಪಂಚ ಕರಗಿ ಕಣ್ಣುಮರೆಯಾಗುವ ಹಾಗೆ ಕಾಣಿಸಿತು ಗಂಗಾಧರ ಕಾವೇರಿ ಇಬ್ಬರೂ ಒಬ್ಬರೊಬ್ಬರ ಮುಖ ನೋಡಿದರು. ಕೊನೆಗೆ ಡಾಕ್ಟರೆ ಸಮಾಧಾನ ಹೇಳಿದರು.

“ ಜೀವನದಲ್ಲಿ ಹೀಗೆಯೆ ನಡೆಯುತ್ತದೆ, ಶ್ರೀನಿವಾಸರಾವ್. ಕಷ್ಟ ಬಂದರೆ ಒಂದೊಂದಾಗಿ ಬರುವುದೆ ಇಲ್ಲ ಹಿಂಡುಗಟ್ಟಿ ಬಂದು ಮುತ್ತಿಗೆಯನ್ನೆ ಹಾಕುತ್ತವೆ ಧೈರ್ಯದಿಂದ ಇರಬೇಕು, ಅಷ್ಟೆ.”

“ ಆಕೆ ಹೋದದ್ದಷ್ಟೆ ಸಾಲದಿತ್ತೆ ? ಇದು ಬೇರೆ ಮೇಲೆ....” ಶ್ರೀನಿವಾಸನ ಕಣ್ಣುಗಳಲ್ಲಿ ನೀರು ಚಿಮ್ಮಿತು ಜವಾನ ಬಂದು, ‘ ತಯಾರಾಗಿದೆ ’ ಎಂದು ತಿಳಿಸಿದಾಗ, ಡಾಕ್ಟರು ಕಾಗದವೊಂದನ್ನು ಮುಂದಕ್ಕೆ ಚಾಚಿ ಕಾವೇರಿಯ ಅವಶೇಷಗಳು ಮುಟ್ಟಿದವೆಂಬುದಕ್ಕೆ ರಶೀದಿಯನ್ನು ಪಡೆದರು. ಅವಶೇಷಗಳು ಎಂಬ ಮಾತು ನಿಜವಾಗಿಯೂ ಅನ್ವರ್ಥಕವಾಗಿತ್ತು. ಹೆಚ್ಚುಕಡಿಮೆ ಅಡಿಯಿಂದ ಮುಡಿಯವರೆಗೆ ಎಲ್ಲ ಭಾಗಗಳನ್ನು ಕತ್ತರಿಸಿ ಬಿಚ್ಚಿ ಪರೀಕ್ಷಿಸಲಾಗಿತ್ತು. ಅದನ್ನು ತಿಳಿದ ಗಂಗಾಧರ ಡಾಕ್ಟರ ಹೇಳಿಕೆ

ಯಂತೆ ಯಾವುದನ್ನೂ ಬಿಚ್ಚದೆ ತೆರೆಯದೆ ಅಂತ್ಯವಿಧಿಯನ್ನು ಮುಗಿಸಿದ. ಕಾವೇರಿಯ ಅವಶೇಷಗಳು ಬೆಂಕಿಯಲ್ಲಿ ನಾಮಾವಶೇಷವಾಗಿ ಮೂವರೂ ಮನೆಗೆ ಹಿಂದಿರುಗಿದಾಗ ಮಧ್ಯಾಹ್ನದ ಉರಿಬಿಸಿಲು ನಿರ್ದಯವಾಗಿ ಉರಿಯುತ್ತಿತ್ತು. ಜತೆಗೆ ಬಂದ ಉಳಿದ ನಾಲ್ಕಾರು ಗೆಳೆಯರು, ಸಹವ್ಯವಸಾಯಿಗಳು ತಮ್ಮ ತಮ್ಮ ಮನೆಗಳಿಗೆ "ನಿನ್ನೆ ಹಾಗೆ, ಇಂದು ಹೀಗೆ!" ಎಂದು ಯೋಚಿಸುತ್ತ ಮರಳಿದರು.

೨೧

‘ಆಕೆ ಹೋದುದಷ್ಟೆ ಸಾಲದಾಗಿತ್ತೆ?’ ಎಂದು ಶ್ರೀನಿವಾಸ ಮತ್ತೊಮ್ಮೆ ಅನ್ನುವಂತಹ ಸನ್ನಿವೇಶ ಇನ್ನೂ ಮುಗಿದಿರಲಿಲ್ಲ. ಪೊಲೀಸರು ಯಾರ ಹೇಳಿಕೆಗಳನ್ನೂ ನಂಬುತ್ತಿರುವಂತೆ ಕಾಣಲಿಲ್ಲ. ನಿಜವಾಗಿಯೊ, ಬೇಕೆಂತಲೊ ಕೆಲವೊಂದು ಸಂಶಯಗಳನ್ನು ಮಂಡಿಸುತ್ತಿದ್ದರು. ಇನ್ಸ್ ಪೆಕ್ಟರ ಹೇಳಿಕೆಯ ಪ್ರಕಾರ ಮರುದಿನ ಸಾಯಂಕಾಲ ಗಂಗಾಧರ ಅವರ ಮನೆಗೆ ಹೋಗಿ ಮಾತನಾಡಿ ಬಂದಿದ್ದ. ಅವರ ಮಟ್ಟಿಗೆ ಇದು ನಿಜ ವಾಗಿಯೂ ಆತ್ಮಹತ್ಯೆಯೆ! ಅದು ಹಾಗಿದ್ದರೆ, ಅದಕ್ಕೆ ಕಾರಣವೇನು ಎಂದು ಮುಂತಾಗಿ ತಮ್ಮ ಊಹೆಯನ್ನು ಮುಂದೋಡಿಸಿ ನಾನಾ ತರದ ವಿಕಲ್ಪಗಳನ್ನು ಮಂಡಿಸಿದ್ದರು. ಗಂಗಾಧರ ಎಷ್ಟೊ ಪರಿಯಿಂದ ಅವರನ್ನು ಮನವೊಲಿಸಿ, ಮನವರಿಕೆ ಮಾಡಿಕೊಡುವ ಯತ್ನಮಾಡಿದ್ದ. ಯಾವುದೂ ಬಗೆಹರಿಯದಾದಾಗ ನಡೆದ ಸನ್ನಿವೇಶದ ಇತ್ಯರ್ಥವೇನು, ಯಾವುದಾದ ರೊಂದು ರೀತಿಯಲ್ಲಿ ತೊಂದರೆಯಾಗಬಹುದೆ ಎಂಬ ಪ್ರಶ್ನೆಗಳನ್ನು ತಿಳಿಯ ಲೆಂದು ಪರಿಚಯದ ವಕೀಲರೊಬ್ಬರ ಹತ್ತಿರ ಹೋಗಿ ಸಲಹೆ ಪಡೆದೂ ಬಂದಿದ್ದ. ವಕೀಲರು ಹೇಳಿದ್ದರು: “ನಿಜವಾದ ಸಂಗತಿಯೆ ಹೀಗಿದ್ದ ಮೇಲೆ, ಪೊಲೀಸರು ಬೇರೆ ಯಾವ ಆಪಾದನೆಯನ್ನೂ ಮಾಡಲು ಸಾಧ್ಯ ವಾಗುವುದಿಲ್ಲ. ಅದಕ್ಕೆ ಪೋಷಕವಾದ ಸಾಕ್ಷ್ಯ ದೊರಕುವುದಿಲ್ಲ. ಆದರೆ ಮಾಡಬೇಕಾದ ಆಪಾದನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ವೃಥಾ ತೊಂದರೆ ಯನ್ನುಂಟುಮಾಡಲಿಕ್ಕೆ ಅವರಿಗೆ ಯಾವಾಗಲೂ ಬರುತ್ತದೆ. ಆಪಾದನೆ ಮುಂದೆ ಬಿದ್ದುಹೋದರೆ ಅವರಿಗಾಗಬೇಕಾದ ನಷ್ಟವೂ ಅಷ್ಟರಲ್ಲಿಯದೆ. ಆದರೆ ಒಮ್ಮೆ ಅವರು ಏನಾದರೊಂದನ್ನು ಹೂಡಿ ನಿಂತರೆ ಅದು ಸುಳ್ಳು, ಅಸಮರ್ಥನೀಯ ಎಂದು ಸಿದ್ಧಮಾಡುವ ಹೊಣೆ ನಮ್ಮದಾಗುತ್ತದೆ. ಅದೇ ತೊಂದರೆ. ಅಲ್ಲದೆ, ಇಲ್ಲದ ಮನಸ್ತಾಪ. ಈಗಾಗಿದ್ದೆ ಬೇಕಾದಷ್ಟಾಗಿದೆ. ನನಗೆ ತಿಳಿದಮಟ್ಟಿಗೆ ಇದರಲ್ಲಿ ಪೊಲೀಸಿನವರು ಸನ್ನಿವೇಶದ ಉಪಯೋಗ ಮಾಡಿಕೊಂಡು ಆದರಿಂದ ಏನಾದರೂ ದುರ್ಲಾಭ ಮಾಡಿಕೊಳ್ಳಬೇಕೆಂದಿರ ಬೇಕು. ಇನ್ನೇನೂ ಇಲ್ಲ. ಆದ್ದರಿಂದ ನೀವು ಅವರನ್ನೆ ಸ್ವಲ್ಪ ಮೆತ್ತಗಾಗಿ

ಮಾತನಾಡಿಸಿ ನೋಡಿ" ಎಂದು ಸಲಹೆ ಕೊಟ್ಟಿದ್ದರು. ಅದಕ್ಕೆ ತಕ್ಕಂತೆ ಗಂಗಾಧರ ಕಾಮೇಶ ಇಬ್ಬರೂ ಮರುದಿನ ಮುಂಜಾನೆ ಬೇಗನೆ ಎದ್ದು ಇನ್ಸ್‌ಪೆಕ್ಟರ ಮನೆಗೆ ಹೋಗಿ ಎಲ್ಲವನ್ನೂ ಹೊಂದಿಸಿಕೊಂಡು ಬಂದಿದ್ದರು. ಮೊದಮೊದಲು ಇನ್ಸ್‌ಪೆಕ್ಟರು ಬಿಗುವಿನಲ್ಲಿಯೆ ಇದ್ದರು. ಬಾಗಿಲುಕೋಟೆಯಿಂದ ಕೇಸಿನ ಎಲ್ಲ 'ಹಿನ್ನೆಲೆ'ಯನ್ನು ತಿಳಿದವರಾಗಿದ್ದರೆಂದೂ ಎಲ್ಲವೂ ಕಣ್ಣಿಗೆ ಕಂಡಷ್ಟು ಸರಳವಾಗಿಲ್ಲವೆಂದೂ ಬಂದ ಇಬ್ಬರನ್ನೂ ಹೆದರಿಸಲು ಪ್ರಯತ್ನಮಾಡಿದರು. ಆದರೆ ಗಂಗಾಧರ ಕಾಮೇಶರ ಧೋರಣೆಯೆ ಬೇರೆಯಾದ್ದರಿಂದ ಹತ್ತು ನಿಮಿಷಗಳಲ್ಲಿ 'ಸಾಹೇಬರು' ಹಾದಿಗೆ ಬಂದರು.

"ನಮಗಾದರೂ ಎಲ್ಲಿ ಬೇಕಾಗಿದೆ? ಯಾರಿಗಾದರೂ ಕೆಡಕು ಮಾಡಿದರೆ ನಮಗೆ ಬಂದದ್ದೇನು? ಆದರೂ ಕಾಯಿದೆ ಪ್ರಕಾರ ನಡೆಯಬೇಕಲ್ಲ?"

"ಹೌದು, ಸಾಹೇಬರೆ" ಎಂದು ಕಾಮೇಶ ಮುಂದುವರಿದಿದ್ದ: "ಈ ಕೇಸಿನಲ್ಲಿ ನೀವೇ ನೋಡಿದಿರಲ್ಲಾ, ಈಗ ಆದ ಅನಾಹುತವೇನೂ ಕಡಿಮೆಯಾಗಿಲ್ಲ. ಇನ್ನುಮುಂದೆ ಮತ್ತೆ ಅದು ಇದು ಎಂದು ವಿಚಾರಣೆ ನಡೆದರೆ ವೃಥಾ ಮನಸ್ತಾಪ. ಆಗಬೇಕಾದುದು ಯಾವುದೂ ಇಲ್ಲ"

"ಅದೇನೊ ಸರಿ, ಆದರೂ...."

"ನೀವಿದನ್ನು ಮನಸ್ಸಿನಮೇಲೆ ತೆಗೆದುಕೊಂಡು ವಿಷಯವನ್ನು ಬಗೆಹರಿಸಲಿಕ್ಕೆ ಬೇಕು...." ಎಂದು ಗಂಗಾಧರ ಆಗ್ರಹ ಸೂಚಿಸಿದ

ಇನ್ಸ್‌ಪೆಕ್ಟರ ಸಾಹೇಬರು ಮನಸ್ಸಿನಮೇಲೆ ತೆಗೆದುಕೊಂಡಿದ್ದರು. ಕಾಗದಪತ್ರಗಳನ್ನು ಮತ್ತೊಮ್ಮೆ ನೋಡಿಕೊಂಡಂತೆ ನಟಿಸಿ, ಕೊನೆಗೆ, ಕಾವೇರಿಗೆ ಪ್ರತಿ ತಿಂಗಳು ವಿಪರೀತ ಹೊಟ್ಟೆನೋವು ಬರುತ್ತಿತ್ತೆಂದೂ ಅದನ್ನು ತಾಳಲಾಗದೆ ನೇಣುಹಾಕಿಕೊಂಡಿರಬೇಕೆಂದೂ ಕಾರಣವನ್ನು ತೋರಿಸಿ, ಹೆಚ್ಚಿನ ಯಾವ ವಿಚಾರಣೆಯೂ ಅಗತ್ಯವಿಲ್ಲವೆಂದು ಶಿಫಾರಸು ಮುಗಿಸಿಬಿಡುವುದೆಂದೂ ಗೊತ್ತಾಯಿತು. ಇಷ್ಟಕ್ಕಾಗಿ, ಕನಿಷ್ಟಪಕ್ಷಕ್ಕೆ ಇನ್ನೂರು ರೂಪಾಯಿಗಳ 'ಮಾಮೂಲ'ನ್ನು ಕೊಡಬೇಕಾಗುವುದೆಂದೂ ಗೊತ್ತಾಯಿತು. ಶ್ರೀನಿವಾಸನ ಒದ್ದಾಟವನ್ನು ನೋಡಲಾಗದ್ದಕ್ಕೆ ಗೆಳೆಯರಿಬ್ಬರೂ "ಏನು ಆದರೂ ಆಗಲಿ, ಮುಗಿದದ್ದು ಒಳ್ಳೆಯದೆ ಆಯಿತು" ಎಂದು ನಿಟ್ಟುಸಿರು ಬಿಟ್ಟು ಮನೆಗೆ ಬಂದಿದ್ದರು.

ಮೂರನೆಯ ದಿನವಾದ್ದರಿಂದ ಶ್ರೀನಿವಾಸ 'ಹೊರಗಿನ' ಕೆಲಸವನ್ನು ಮುಗಿಸಿಕೊಂಡು ಆದೇ ಬಂದಿದ್ದ. ಗಂಗಾಧರ ಇದ್ದ ಪರಿಸ್ಥಿತಿಯನ್ನು ವಿವರಿಸಿದ ಶ್ರೀನಿವಾಸ ಅಸಹಾಯನಂತೆ ಸುಮ್ಮನಾದ.

"ಇಂಥ ಪರಿಸ್ಥಿತಿಯಲ್ಲಿಯೂ ಹೀಗೆ ನಡೆದುಕೊಳ್ಳುತ್ತಾರಲ್ಲಾ ಜನ? ಏನೆನ್ನಬೇಕು ಇವರಿಗೆ? ಹೃದಯವೆ ಇರುವುದಿಲ್ಲವೆ ಇವರಿಗೆ?" ಎಂದ.

"ಹಾಗೆ ನೋಡಿದರೆ ಆತನಿಂದ ಏನೂ ಆಗಲಾರದು. ಆದರೆ ಏನಾದರೊಂದು ವಿಚಾರಣೆಯನ್ನು ಎಬ್ಬಿಸಿ ತೊಂದರೆ ಮಾಡಬಹುದು. ಅದಕ್ಕೆಯೆ ನಾವು ಒಪ್ಪಿದ್ದು...." ಎಂದ ಕಾಮೇಶ.

"ಒಪ್ಪಿದ್ದೇನೊ ಸರಿಯೆ ಆಯಿತು. ಆದರೆ—"

"ಆದರೆ ಏನು?"

"ಅಷ್ಟು ಹಣ ಎಲ್ಲಿಂದ ತರುವುದು? ನನ್ನ ಹತ್ತಿರವಿದ್ದದ್ದಂತೂ ಮೊನ್ನೆಗೆ ಮುಗಿದುಹೋಗಿದೆ...."

"ನನಗೂ ಅದೆ ಯೋಚನೆಯಾಗಿದೆ. ಏನಾದರೂ ಇಂದು ಸಂಜೆಯ ಹೊತ್ತಿಗೆ ಮುಗಿಸಿಬಿಡಬೇಕು. ಈ ಜನರ ಮನಸ್ಸು ಹೀಗೆ ಎಂದು ಹೇಳಲಿಕ್ಕಾಗುವುದಿಲ್ಲ."

"ಹಾಗಾದರೆ ಏನು ಮಾಡಬೇಕು ಎನ್ನುವಿ?" ಎಂದ ಶ್ರೀನಿವಾಸ.

"ನೂರೈವತ್ತು ರೂಪಾಯಿ ಕಾಮೇಶ ಆಗಲೆ ಕಲೆಹಾಕಿದ್ದಾನೆ. ಇನ್ನು ಐವತ್ತು ರೂಪಾಯಿ...."

"ಇನ್ನು ಯಾರ ಹತ್ತಿರವಾದರೂ ಸಿಕ್ಕುವುದಿಲ್ಲವೆ?"

"ಈಗ ಯಾರ ಹತ್ತಿರ ಸಿಕ್ಕಬೇಕು? ತಿಂಗಳ ಕೊನೆ ಬೇರೆ...."

ಶ್ರೀನಿವಾಸ ಯೋಚನೆಯಲ್ಲಿ ಮುಳುಗಿದ. ಗೆಳೆಯರಿಬ್ಬರೂ ನಿರುಪಾಯರಾಗಿ ಸುಮ್ಮನಾಗಿಯೆ ಇದ್ದರು. ಕೊನೆಗೆ ಶ್ರೀನಿವಾಸನೆಂದ:

"ನನಗೇನೂ ಬೇರೆ ಮಾರ್ಗ ಕಾಣುವುದಿಲ್ಲ, ಗಂಗಾಧರಾ. ಆಕೆಯ ಮೈಮೇಲಿನದರಲ್ಲಿ ಏನಾದರೂ ಮಾರಿಬಿಡಬೇಕು. ಆಕೆಯದು ಆಕೆಗೆ ಹೋಗಲಿ."

ಶ್ರೀನಿವಾಸನ ಕಣ್ಣುಗಳು ಹನಿದುಂಬಿದವು. ಗಂಗಾಧರ ಯೋಚಿಸಿ ಹೇಳಿದ:

"ನೀನು ಹೇಳಿದ ಹಾಗೆ ಬಳೆಗಳೇನೊ ಇವೆ. ಆದರೆ ಇಷ್ಟಕ್ಕಾಗಿ ಅಷ್ಟು ದೊಡ್ಡದನ್ನು ಯಾಕೆ ಕಳೆಯಬೇಕು? ಒಮ್ಮೆ ಕೈಬಿಟ್ಟಿತೆಂದರೆ ತಿರುಗಿ ಬರುವುದು ಕಷ್ಟ."

"ಏನು ಕಷ್ಟವೊ ಏನೊ. ಆಕೆಯೆ ಹೋದಮೇಲೆ ಅವನ್ನು ಇಟ್ಟುಕೊಂಡಾದರೂ ಏನು?"

"ಅವೇನೂ ಬೇಡ. ನನ್ನ ಮಾತು ಕೇಳು. ಮತ್ತೆ ಬೇರೆ ಏನಾದರೂ ಚಿಕ್ಕದು ಇದ್ದರೆ—"

ಶ್ರೀನಿವಾಸ ಯೋಚಿಸಿದ. ಕೊನೆಗೊಂದು ವಿಚಾರ ಹೊಳೆಯಿತು. ಆ ವಿಚಾರದೊಡನೆ ಮತ್ತೆ ಕಣ್ಣೀರು ಚಿಮ್ಮಿತು ಅವನೆಂದ:

"ಹಾಗಿದ್ದರೆ ಆಕೆಯ ಟ್ರಂಕಿನಲ್ಲಿ ಎರಡು ಚಿಕ್ಕ ಬಳೆಗಳಿರಬೇಕು—ಮಗುವಿನ ಕೈಗೆ ಆಗುತ್ತಿದ್ದುವು. ಅವನ್ನಾದರೂ ಇಟ್ಟುಕೊಂಡು ಏನು ಮಾಡುವುದಿದೆ?"

ಗಂಗಾಧರನಿಗೆ ಅದೂ ಒಪ್ಪಿಗೆಯಾಗಲಿಲ್ಲ. ಆದರೆ ಕಾವೇರಿಯ ದೊಡ್ಡದಾದ ಬಳೆಗಳನ್ನು ಮಾರುವುದಕ್ಕಿಂತ ಅದೇ ಸರಿಯೆಂದು ಕೊನೆಗೆ ನಿರ್ಣಯಿಸಿ, ಸಾಯಂಕಾಲ ಅವುಗಳನ್ನು ತಂದು ಕಾಮೇಶನ ಕೈಯಲ್ಲಿಟ್ಟ. ಶ್ರೀನಿವಾಸನೆಂದುಕೊಂಡ 'ಎಲ್ಲಿಯದು ಎಲ್ಲಿಗೆ?' ಎಂದು. ಅಂದುಕೊಳ್ಳುವುದು ಯಾವುದು, ಆಗುವುದು ಏನು? ಎಂದು ಬದುಕಿನ ವಿಪರೀತಗಳ ಎದುರು ದಿಗ್ಭ್ರಾಂತನಾಗಿ ನಿಂತ. ರಾತ್ರಿಯ ಹತ್ತು ಗಂಟೆಯ ಸುಮಾರಿಗೆ ಕಾಮೇಶ ಎಲ್ಲ ವ್ಯವಹಾರವನ್ನು ಮುಗಿಸಿಕೊಂಡು ಬಂದ. ಬದುಕಿದ್ದಾಗ ಮಕ್ಕಳ ಮೇಲಿನ ಮಮತೆಗಾಗಿ, ಕಾವೇರಿ ತನ್ನ ಗೆಳತಿಯ ಮಗುವಿಗೆ ಕೊಡಬೇಕೆಂದುಕೊಂಡಿದ್ದ ಚಿನ್ನದ ಬಳೆಗಳು ಅವಳ ಸಾವಿನಿಂದ ಸ್ವತಹಕ್ಕೆ ಉಂಟಾಗಬಹುದಾದ ತೊಂದರೆಯನ್ನು ನಿವಾರಿಸಲಿಕ್ಕೆಂದು ಉಪಯೋಗಿಸಬೇಕಾಗಿ ಬರಬೇಕೆಂದರೆ ಎಂಥ ವಿಪರೀತ? ಶ್ರೀನಿವಾಸನ ವಿಚಾರಚಕ್ರ ತಿರುಗುತ್ತಲೆ ಇತ್ತು. ಹುಚ್ಚನಂತಾದ. ಆತನ ಮನಸ್ಸು ಏನೇನನ್ನೊ ಯೋಚಿಸುತ್ತಿತ್ತು. ಕಳೆದ ಹದಿನೈದು ದಿನಗಳ ಚಿತ್ರ ಕಣ್ಣೆದುರು ನಿಂತಾಗ ಬುದ್ಧಿ ದಿಕ್ಕುಗಾಣದಾಗುತ್ತಿತ್ತು.

ಕಾವೇರಿ ಹೀಗೇಕೆ ಮಾಡಿದಳು? ಪತಿಸೇವೆಯಿಂದಾಗಿ ಸತಿಗೆ ಸ್ವರ್ಗದ ಬಾಗಿಲು ತೆರೆಯಿತೆ? ಅಥವಾ ಪತಿಗೆ ಮಕ್ಕಳಾಗಿ ಸದ್ಗತಿ ಸಿಕ್ಕಲೆಂದು ಸತಿ ನರಕದ ಬಾಗಿಲನ್ನು ತಟ್ಟಿದಳೆ? ಆಕೆ ಹೋದದ್ದು ಎಲ್ಲಿ? ಯಾಕೆ? ಎಷ್ಟು ಯೋಚಿಸಿದರೂ ಶ್ರೀನಿವಾಸನಿಗೆ ಹೃದಯ ದುಃಖದಿಂದ ಒಡೆದು ಸಿಡಿದುಹೋಗುತ್ತಿರುವಂತೆ ಭಾಸವಾಗುತ್ತಿತ್ತಲ್ಲದೆ ಅಲ್ಲಿ ಉಕ್ಕಿಬಂದ ಪ್ರಶ್ನೆಗಳಿಗೆ ಉತ್ತರ ದೊರಕುತ್ತಿರಲಿಲ್ಲ. ಆ ಉತ್ತರಗಳನ್ನು ಕಾವೇರಿಯಲ್ಲದೆ ಬೇರೆ ಯಾರು ಹೇಳಬೇಕು?

# ಹಿನ್ನುಡಿ

ಸುಮಾರು ಎಂಟು ವರ್ಷಗಳ ಹಿಂದೆ ವಿಮರ್ಶೆಗೆಂದು ಬಂದ ಒಂದು ಬಂಗಾಲೀ ಕಥಾಸಂಗ್ರಹವನ್ನು ಓದುತ್ತಿದ್ದಾಗ ಆ ಕಥಾಸಂಗ್ರಹದಲ್ಲಿಯ ಒಂದು ಕತೆ ನನ್ನ ಮನಸ್ಸನ್ನು ಸೆಳೆಯಿತು ಒಂದು ಕತೆ ಮನಸ್ಸನ್ನು ಸೆಳೆಯಿತೆನ್ನುವುದಕ್ಕಿಂತ ಒಂದು ಕತೆಯಲ್ಲಿ ನಿರೂಪಿತವಾದ ವಿಷಯ ಮತ್ತು ಜೀವನಸನ್ನಿವೇಶ ನನ್ನ ಮನಸ್ಸನ್ನೆಳೆಯಿತೆಂದರೆ ಹೆಚ್ಚು ಸಮಂಜಸವಾದೀತು. ಯಾಕೆಂದರೆ ಆ ಕತೆಯನ್ನು ಓದಿ ಮುಗಿಸಿದಾಗ ಕತೆಯಲ್ಲಿಯ ಸನ್ನಿವೇಶ ನನ್ನ ಮನಮುಟ್ಟಿದರೂ ಅದನ್ನು ನಿರೂಪಿಸಲಾದ ಬಗೆ ಮಾತ್ರ ನನ್ನನ್ನು ನಿರಾಶೆಗೊಳಿಸಿತ್ತು. ಹಾಗೆಂತಲೆ ಅದೆ ಸನ್ನಿವೇಶವನ್ನು ಬೇರೆಯಾದ ರೀತಿಯಲ್ಲಿ ವಿವರಿಸಲು ಸಾಧ್ಯವೆ? ಸಾಧ್ಯವಿದ್ದರೆ ಯಾವ ರೀತಿಯಲ್ಲಿ ಎಂದು ಮುಂತಾಗಿ ಯೋಚಿಸಿದಾಗ ಅಲ್ಲಿಯ ಸನ್ನಿವೇಶವನ್ನು ಬಳಸಿ ಒಂದು ಚಿಕ್ಕ ಕಾದಂಬರಿಯನ್ನೆ ಬರೆಯಬಹುದು ಎಂದು ತೋರಿತು. ಆದಾಗ ಬರೆಯೋಣವೆಂದು ಆ ಕತೆಯಲ್ಲಿಯ ಸನ್ನಿವೇಶವನ್ನು ಮನಸ್ಸಿನ ಒಳಕೋಣೆಯಲ್ಲಿ ಇಟ್ಟಿದ್ದೆ. ಇದೀಗ ಅದೆ ಹಳೆಯ ಕತೆ 'ಸ್ವರ್ಗದ ಬಾಗಿಲು' ಕಾದಂಬರಿಯಾಗಿ ಬರುತ್ತಿದೆ. ಆ ಕತೆಯ ಹೆಸರಾಗಲಿ, ಅದನ್ನು ಬರೆದವರು ಯಾರೆಂಬುದಾಗಲಿ ಯಾವುದೂ ನನ್ನ ಜ್ಞಾಪಕದಲ್ಲಿ ಉಳಿದಿಲ್ಲ. ಆದರೆ ಬರೆದವರು ಯಾರೇ ಇದ್ದರೂ ಈ ಕಾದಂಬರಿಯನ್ನು ನನ್ನಿಂದ ಬರೆಯಿಸಿದ ಶ್ರೇಯಸ್ಸು ಅವರಿಗೆಯೆ ಸಲ್ಲತಕ್ಕದ್ದೆಂಬುದನ್ನು ಮಾತ್ರ ನಾನಿಲ್ಲಿ ಕೃತಜ್ಞತೆಯಿಂದ ನೆನೆಯಬಯಸುತ್ತೇನೆ.

ಮಕ್ಕಳಿಲ್ಲದ್ದಕ್ಕಾಗಿ ಮತ್ತೊಂದು ಮದುವೆಯನ್ನು ತನ್ನ ಗಂಡ ತನಗೆ ಒಂದು ಮಾತನ್ನೂ ಹೇಳದೆ ಮಾಡಿಕೊಂಡಾಗ ಹೆಂಡತಿ ಆತ್ಮಹತ್ಯೆಯನ್ನು ಮಾಡಿಕೊಂಡಳೆಂಬುದು ಅಲ್ಲಿಯ ಕತೆ ಹೆಚ್ಚುಕಡಿಮೆ ಅದೆ ಕತೆಯನ್ನೆ ಇಲ್ಲಿ ಹೇಳಿದ್ದೇನೆ ಆದರೆ ಇಲ್ಲಿ ಶ್ರೀನಿವಾಸ ಮದುವೆಯಾಗುವುದಿಲ್ಲ; ಮಾತ್ರವಲ್ಲದೆ, ಆ ಯೋಚನೆಯನ್ನು ತಳ್ಳಿಹಾಕುವ ಯತ್ನದಲ್ಲಿದ್ದಾಗಲೆ ದುರಂತ ನಡೆಯುತ್ತದೆ ಮುಖ್ಯವಾಗಿ ಈ ಒಂದು ಬದಲಾವಣೆಯಿಂದಲ್ಲದೆ ಕೊನೆಯಲ್ಲಿ ನಡೆಯುವ ದುರಂತಕ್ಕೆ ಕಾರಣವಾಗಿ ಬೆಳೆದು ನಿಲ್ಲುವ ಸನ್ನಿವೇಶ

ಪರಂಪರೆಯನ್ನು ಬಹುಮಟ್ಟಿಗೆ ಬೇರೆಯಾಗಿ, ನನಗೆ ತೋರಿದಂತೆ ಹೆಚ್ಚು ಸ್ವಾಭಾವಿಕವಾಗಿ, ಹೆಚ್ಚು ಅನಿವಾರ್ಯವಾಗಿ ಯೋಜಿಸಿಕೊಂಡು ಮಧ್ಯವರ್ತಿಯಾದ ಪಾತ್ರಗಳ ಸ್ವಭಾವಸತ್ವವನ್ನೇ ಬೇರೆಯಾಗಿ ತೋರಿಸ ಬಯಸಿದ್ದೇನೆ. ಇದರಂತೆಯೇ ಆನುಷಂಗಿಕವಾಗಿ, ಕತೆಗೆ ಪೋಷಕವಾಗಿ ಬರುವ ಇತರ ಪಾತ್ರಗಳನ್ನೂ ನಮ್ಮಲ್ಲಿಯ ಸಾಮಾಜಿಕ ಆಚರಣಕ್ಕೆ ಸರಿಯಾಗುವಂತೆ ಮತ್ತು ನಡೆಯುತ್ತಿದ್ದ ಘಟನಾವಲಿಗೆ ಪೋಷಕವಾಗುವಂತೆ ಬದಲಾಯಿಸಿಕೊಂಡಿದ್ದೇನೆ. ಇವೆರಡನ್ನು ಸಾಧಿಸುವುದರಲ್ಲಿ ಕತೆ ವಿಸ್ತಾರಗೊಂಡಿದೆ. ಬೇರೆ ಬೇರೆ ಸನ್ನಿವೇಶಗಳಲ್ಲಿ ಹೆಚ್ಚಾಗಿ ಪಾತ್ರಗಳನ್ನು ಮಾತನಾಡಿಸಿ ಸಂಭಾಷಣೆಗಳ ಮೂಲಕ ಮತ್ತು ಆ ಸಂಭಾಷಣೆಗಳ ಮುಖಾಂತರವಾಗಿ ಚಿತ್ರಿತವಾದ ಸನ್ನಿವೇಶ ವಾಸ್ತವವೆನಿಸುವಂತೆ ಯತ್ನಮಾಡಿದ್ದೇನೆ. ಹೀಗಾಗಿ, ಕತೆಯ ವಸ್ತು ಬೇರೆಯಲ್ಲಿಯದಾದರೂ ಅದನ್ನು ನಿರೂಪಿಸುವ ಬಗೆ, ಧೋರಣೆ, ಉದ್ದಿಷ್ಟ ಎಲ್ಲವೂ ನನ್ನವಾಗಿವೆ. ಕತೆಯ ಹಂದರ ಎರವಲಾದರೂ ಕಾದಂಬರಿ ನನ್ನದಾಗಿದೆ.

ಹಾಗೆ ನೋಡಿದರೆ ಈ ಮಾತನ್ನು ಇಷ್ಟರಮಟ್ಟಿಗೆ ಎತ್ತಿಹೇಳಬೇಕಾದ ಅಗತ್ಯವೆ ಇಲ್ಲ. ಇಂಥ ಒಂದು ಕತೆಯಿಂದಾಗಿ ಈ ಕಾದಂಬರಿಯನ್ನು ಬರೆಯುವಂತಾಯಿತು ಎಂಬುದನ್ನು ಒಪ್ಪದೆ ಇರುವುದಕ್ಕೆ ಮನಸ್ಸೊಪ್ಪಲಿಲ್ಲವಾದ್ದರಿಂದ ಹೇಳುತ್ತಿದ್ದೇನೆ. ಯಾಕೆಂದರೆ ಇಂಥ ಸನ್ನಿವೇಶ ನಮ್ಮ ಸಾಮಾಜಿಕ ಜೀವನದಲ್ಲಿ ಹೊಸದೇನೂ ಅಲ್ಲ. ಮಕ್ಕಳಿಲ್ಲವೆಂಬುದಕ್ಕಾಗಿ ಬೇರೊಂದು ಮದುವೆಯನ್ನು ಮಾಡಿಕೊಂಡು ಮೊದಲ ಮಡದಿಯನ್ನು ದುಃಖಕ್ಕೆ, ದೈನ್ಯಕ್ಕೆ ತಳ್ಳಿದ ಮಹನೀಯರು ನಮ್ಮಲ್ಲಿ ಬೇಕಾದಷ್ಟು ಜನ! (ಇದೀಗ ದ್ವಿದಾಂಪತ್ಯಪ್ರತಿಬಂಧಕ ಕಾನೂನಿನ ಮೂಲಕ ಅಂಥ ಆತುರ ಕಡಿಮೆಯಾಗಿರಬಹುದೇನೊ. ಆದರೂ ಅಂಥ ಆಸೆಗಾಗಿ, ಆತುರಕ್ಕಾಗಿ ಪ್ರಗತಿಪರವಾದ ಈ ಕಾನೂನನ್ನೂ ಹಳಿಯುವವರು ಇಂದಿಗೂ ಇದ್ದಾರೆ. ಆ ಮಾತು ಹಾಗಿರಲಿ.) ಒಂದು ಕಾಲಕ್ಕೆ ಇಂಥ ಸನ್ನಿವೇಶ ಸಾಮಾನ್ಯವಾಗಿದ್ದಿತು. ಬಂಜೆಯಾದವಳು ತನ್ನ ದೈವವನ್ನು ಹಳಿಯುತ್ತ, ಹಲ್ಲು ಕಚ್ಚಿಕೊಂಡು ಇರುತ್ತಿದ್ದಳು. ಬದುಕಿ ಇರುವುದೂ ಅಸಾಧ್ಯವಾದಾಗ ಆತ್ಮಹತ್ಯೆಯ ಬಾಗಿಲಿಂದ ಸ್ವರ್ಗವನ್ನೊ ನರಕವನ್ನೊ ಸೇರುತ್ತಿದ್ದಳು. ಇದಕ್ಕೆ

ಪ್ರತಿಯಾಗಿ ಬಂದ ಸನ್ನಿವೇಶವನ್ನು ನಿರ್ಮತ್ಸರವಾಗಿ ಎದುರಿಸಿ ಸವತಿಯ ವಾಕ್ಯಗಳಿಂದಲೆ ಸಮಾಧಾನ ಪಡೆದು ಅವರು ಸುಖವಾಗಿದ್ದುದನ್ನು ನೋಡಿ ನೆಸೆಯುವುದರಲ್ಲಿಯೆ ತನ್ನ ಸುಖವನ್ನು ಕಂಡವರೂ ಇದ್ದಾರು. ಇದ್ದರು. ಇಂಥವರ ಜೀವನ ಬರಡು. ಆದರೂ ಆ ಬರಡು ಕಾಡಿನಲ್ಲಿಯೂ ಸುಖದ ಸೆಲೆಯನ್ನು ಕಂಡವರು ಅವರು. ಈ ಮನೋವೃತ್ತಿಗೆ ಮುಖ್ಯ ಕಾರಣವೆಂದರೆ ತಮ್ಮಲ್ಲಿ ಪರಂಪರಾಗತವಾಗಿ ಬಂದ—ಸತಿಗೆ ಪತಿಯೇ ಪರದೈವತವೆಂಬ ಭಾವನೆ. ಇದು ಸರಿಯೋ ಅಲ್ಲವೊ! (ಇಂದಿನ ಸಾಮಾಜಿಕ ಸಂದರ್ಭದಲ್ಲಿ ಅಲ್ಲವೆಂದೆ ಹೇಳಬೇಕಾಗಬಹುದು!) ಆದರೆ ಆ ಭಾವನೆ ನಮ್ಮ ಎಣಿಕೆಯನ್ನು ಮೀರಿ ನಮ್ಮಲ್ಲಿಯ ಸ್ತ್ರೀಯರ ಮನೋವೃತ್ತಿಯನ್ನು ಆವರಿಸಿದೆ. ಇಂದಿನ ವಿದ್ಯಾವತಿಯಾದ ತರುಣಿಯೊಬ್ಬಳು ಕಾವೇರಿಗೆ ಎದುರಾಗಿ ಬಂದ ಸನ್ನಿವೇಶದಲ್ಲಿ ಹೇಗೆ ನಡೆದುಕೊಳ್ಳಬಹುದಾಗಿತ್ತು ಎಂಬುದನ್ನು ಹೇಳುವುದೇನೂ ಕಷ್ಟವಲ್ಲ. ಆಕೆ ಹೇಗೆ ನಡೆದುಕೊಂಡರೂ ಕಾವೇರಿಯು ಹಾಗೆ ನಡೆದುಕೊಳ್ಳುತ್ತಿರಲಿಲ್ಲವೆಂಬುದನ್ನು ಮಾತ್ರ ನಿರ್ವಿವಾದವಾಗಿ ಹೇಳಬಹುದು. ಆದರೆ ನೇರವಾಗಿ ಹಾಗೆ ನಡೆದುಕೊಳ್ಳುತ್ತಿರಲಿಲ್ಲವಾದರೂ ತಾನು ಇನ್ನು ಮುಂದೆ ಬದುಕಿರಬಾರದೆಂಬ ಭಾವನೆಗಾಗಲಿ, ಆ ಭಾವನೆಯ ಮೂಲಕ ನಡೆಯಬಹುದಾದ ಆತ್ಮಘಾತಕ್ಕಾಗಲಿ ಸಂಪೂರ್ಣವಾಗಿ ಆಕೆಯಲ್ಲಿ ಆಸ್ಪದವೆ ಇರುವುದಿಲ್ಲವೆಂದು ಮಾತ್ರ ಹೇಳಲಾಗುವುದಿಲ್ಲ. ಪತಿ ಪರದೈವತವೆಂದು ಭಾವಿಸಲಾಗದಿದ್ದರೂ ಅವನಿಲ್ಲದೆ ತನಗೆ ಪರದಲ್ಲಿಯಲ್ಲದಿದ್ದರೂ ಇಹದಲ್ಲಿ ಗತಿಯಿಲ್ಲ ಎಂಬ ನಂಬಿಕೆ ಇನ್ನೂ ದೃಢವಾಗಿದೆ. ಈ ನಂಬಿಕೆ ಎಷ್ಟೇಮಟ್ಟಿಗೆ ಶಿಥಿಲವಾಗುತ್ತ ನಡೆದಿದ್ದರೂ 'ಗತಿಯಿಲ್ಲ' ಎಂಬ ನೆನಕೆ ಜೀವನವನ್ನು ಕಹಿಮಾಡಬಲ್ಲ ಸಾಮರ್ಥ್ಯವುಳ್ಳದ್ದಾಗಿರುತ್ತದೆ. ತನ್ನ ಹಕ್ಕುಗಳಿಗಾಗಿ ಹೋರಾಟ ನಡೆಸಬಹುದು. ಆದರೆ ಆ ಹೋರಾಟದಲ್ಲಿಯೂ ಪೂರ್ತಿಯಾದ ಸಂತೋಷವಿದೆ ಎಂದಾಗಲಿ, ಅದರಿಂದಲೆ ತನ್ನ ಉದ್ಧಾರವನ್ನು ತಾನಾಗಿಯೆ ಸಾಧಿಸಬಲ್ಲೆನೆಂಬ ಆತ್ಮವಿಶ್ವಾಸವಾಗಲಿ ಇನ್ನೂವರೆಗೆ ಬರಲಿಲ್ಲ. ಆದರೆ ಕಾವೇರಿಗೆ ಈ ಯಾವ ಸಮಸ್ಯೆಗಳೆ ಇರಲಿಲ್ಲ. ಆಕೆಯ ಬದುಕು ಕಹಿಯಾಗುವ ಸನ್ನಿವೇಶ ಒದಗಿತು. ಆದರೆ ಆಕೆ ಅದನ್ನು ಬೇರೆಯಾಗಿಯೆ ಎದುರಿಸಿದಳು. ಆಕೆ ಸಾವನ್ನು ಬರಮಾಡಿ

ಕೊಂಡದ್ದು ಸಂತಾಪದಿಂದಲ್ಲ; ಸಂತೋಷದಿಂದ. ಅಂತೆಯೆ ಆಕೆಯ ಸಾವು (ಆಕೆಯ ದೃಷ್ಟಿಯಿಂದಾದರೂ) ಆತ್ಮಘಾತವಾಗದೆ, ಆತ್ಮಸಮರ್ಪಣೆಯಾಯಿತು ಉಳಿದವರು ಏನೆಂದರೂ ಆಕೆ ತಿಳಿದದ್ದು ಹಾಗೆ.

ಆತ್ಮಘಾತವೆ ಆಗಲಿ, ಆತ್ಮಸಮರ್ಪಣೆಯೆ ಆಗಲಿ ಕಾವೇರಿಯನ್ನು ಆ ಕೃತಿಗೆ ಪ್ರೇರೇಪಿಸಿದ ಭಾವನೆ ಎಂಥ ಭಾವನೆ ತನ್ನ ಪತಿಗೆ ಇಹದಲ್ಲಿ ಸುಖಸಮಾಧಾನ, ಪರದಲ್ಲಿ ಸದ್ಗತಿ ಸಿಕ್ಕಲಿ ಎಂಬುದಕ್ಕಲ್ಲವೆ ಆಕೆ ಹೋದದ್ದು? ಇದಕ್ಕಿಂತ ಹೆಚ್ಚಿನ ಪತಿಸೇವೆ ಬೇರೆ ಉಂಟೆ? ಇದಕ್ಕೂ ಮೇರೆಯಾದ ಧನ್ಯತೆ ಸತೀಮಣಿಯರಿಗೆ ಬೇರೆ? ಇದು ಕಾವೇರಿಯ ವಿಚಾರ ಸರಣಿ. ಇಂದಿನ ನಾವು ಈ ವಿಚಾರಸರಣಿಯನ್ನು ಒಪ್ಪುವುದಿಲ್ಲ. ಕಾವೇರಿ ಕೊನೆಯಲ್ಲಿ ನಡೆಸಿದ್ದು ಸರಿ ಎಂದು ಎಂದಿಗೂ ಹೇಳುವುದಿಲ್ಲ. ಆದರೆ ಅದು ನಮ್ಮ ವಿಚಾರ. ಆಕೆಯ ಸ್ವಭಾವ ದೃಷ್ಟಿಯಿಂದ, ಆಕೆ ಬೆಳೆದ ಭಾವನೆ, ನಂಬಿಕೆ, ಶ್ರದ್ಧೆಗಳ ಮತ ಪರಂಪರಾ ದೃಷ್ಟಿಯಿಂದ ಇದು ಆಕೆಗೆ ಸರಿಯಾಗಿಯೆ ಕಂಡಿತು. ಹೀಗೆ ಸಹಜವಾಗಿ ಸಾಯುವುದು ತಾನೆ ತನ್ನ ಪತಿಗೆ ಯಾವ ಬಗೆಯಲ್ಲಿಯೂ ಆತಂಕವಾಗಬಾರದು ಎಂಬ ಅಪೇಕ್ಷೆಯ ಮೂಲಕ ಅಲ್ಲದೆ ತಾನು ಆತಂಕವಾಗಬಾರದೆಂಬ ಬರಿಯ ಅಪೇಕ್ಷೆ ಕೂಡ ಶ್ರೀನಿವಾಸನ ಕೇವಲ ಎರಡನೆಯ ಮದುವೆಗೆ ಸಂಬಂಧಿಸಿರದೆ ಆ ಮದುವೆಯ ಮುಖಾಂತರ ತನ್ನ ಪತಿಗೆ ಸಿಕ್ಕಬಹುದಾದ ಮಕ್ಕಳ ಸುಖ, ಅವರಿಂದ ಆತನಿಗಾಗಿ ತೆರೆಯಬಹುದಾಗಿದ್ದ ಸ್ವರ್ಗದ ಬಾಗಿಲು, ಈ ಎಲ್ಲ ಯೋಚನೆಗಳಿಗೆ ಸಂಬಂಧಪಟ್ಟದ್ದಾಗಿದ್ದಿತು. ಆ ಮನೋವೃತ್ತಿ ಆಕೆಯ ಮನಸ್ಸಿನ ಮಹತ್ತನ್ನೂ ಹುಚ್ಚುತನವನ್ನೂ ತೋರಿಸುವಂಥದಾಗಿದೆ. ಒಂದು ದೃಷ್ಟಿಯಿಂದ ಕಾವೇರಿಯು ಉದಾತ್ತಚರಿತೆ, ಪತಿಪಾರಾಯಣೆ; ಇನ್ನೊಂದು ದೃಷ್ಟಿಯಿಂದ ತನ್ನ ಹಿತವನ್ನೆ ತಿಳಿಯಲಾಗದ ಮಂದಬುದ್ಧಿ; ಮೂಢೆ ಯಾವುದಾದರೂ ಸರಿ. ಆದರೆ ಈ ಮನೋವೃತ್ತಿ ಒಂದು ಸಂಸ್ಕೃತಿಯ ಪರಂಪರೆಯ ಪರಿಣಾಮವಾಗಿದೆ ಒಂದು ಕಾಲದಲ್ಲಿ ಸಾಮಾಜಿಕ ಜೀವನದಲ್ಲಿ ಹೆಣ್ಣಿಗೆ ಇದ್ದ ಸ್ಥಾನದ ಮತ್ತು ಆ ಸ್ಥಾನದ ಪರಿಣಾಮವಾಗಿ ಹುಟ್ಟಿಕೊಂಡ ಮನೋವೃತ್ತಿಯ ಸಂಕೇತವಾಗಿದೆ. ಆರ್ಥಿಕ ದೃಷ್ಟಿಯಿಂದ ಹೆಂಗಸು ಪರಾವಲಂಬಿಯಾಗಿರಬೇಕಾದಾಗ ಪತಿಯೆ ಪರದೈವತವೆಂಬ ಮಾತು ಪರಾವಲಂಬನಕ್ಕೊಂದು

ತಾತ್ವಿಕ ಸಮರ್ಥನೆ ಮಾತ್ರ ಎಂದು ನಾವು ಇಂದು ಹೇಳುತ್ತೇವೆ. ಆದರೆ ಹಾಗೆ ಹೇಳುವುದು ಹಳೆಯದೆಲ್ಲವೂ ಹೊಲ್ಲವೆಂದು ಹೇಳುವ ಆಧುನಿಕ ಬುದ್ಧಿವಂತಿಕೆ. ಹಳೆಯ ದೃಷ್ಟಿಯಲ್ಲಾದರೂ ಬೇರೆಯಾದ ಏನಾದರೊಂದು ಅರ್ಥವಿದ್ದಿರಬೇಕೆಂಬ ಯೋಚನೆಗೆ ಆಸ್ಪದವಿಲ್ಲವೆ ಇಲ್ಲ. ಸತಿಗೆ ಪತಿಯೆ ಪರದೈವತವೆಂದು ಹೇಳಿದವರು ' ಯತ್ರ ನಾರ್ಯಸ್ತು ಪೂಜ್ಯಂತೆ, ರಮಂತೆ ತತ್ರ ದೇವತಾಃ' ಎಂದೂ ಹೇಳಿದರಲ್ಲವೆ ? ಅನ್ಯೋನ್ಯವಾದ ಈ ಆದರ ವಿಶ್ವಾಸಗಳು ಗಂಡಹೆಂಡಿರ ನಡುವೆ ಇರಬೇಕಾದ ಸಾಮರಸ್ಯಕ್ಕೆ, ಹೃದಯಗಳ ಹೊಂದಿಕೆಗೆ ತಳಹದಿಯಾಗಿ ನಿಂತು, ಬದುಕಿನಲ್ಲಿಯ ಬಹು ದೊಡ್ಡ ತೊಡಕಿನ ಸಮಸ್ಯೆ ಉದ್ಭೂತವಾಗದಂತೆ ನೋಡಿಕೊಳ್ಳುತ್ತಿದ್ದವೆಂದು ಕಾಣುತ್ತದೆ. ಹೆಣ್ಣಿಗೆ ಸಮಾನಾಧಿಕಾರ, ಸಮಾನಾವಕಾಶಗಳಿರಬೇಕೆಂದು ಹೇಳುವ ನಾವು ಆ ಸಮಾನಾವಕಾಶದ ಸಮಸ್ಯೆಗಳ ಕಡೆಗೆ ಲಕ್ಷ್ಯವನ್ನು ಪೂರೈಸುವುದಿಲ್ಲ. ದೇಹ ಎರಡಾದರೂ ಆ ಎರಡು ದೇಹಗಳಲ್ಲಿಯೂ ಮಿಡಿಯುವ ಹೃದಯ ಒಂದು ಎಂದು ಹೇಳಬಹುದಾದ ಅನ್ಯೋನ್ಯ ಸಾಮರಸ್ಯ ಗಂಡುಹೆಣ್ಣುಗಳ ಸಂಬಂಧದಲ್ಲಿ ಅತ್ಯಗತ್ಯವಾದ ಅಂಶವಾಗಿದ್ದಲ್ಲಿ, ಈ ಸಮಾನಾವಕಾಶದ ವಿಷಯವನ್ನು ನಾವು ಬಹುಮಟ್ಟಿಗೆ ಪುನರ್ವಿಮರ್ಶಿಸಬೇಕಾಗಬಹುದೆಂದು ಕಾಣುತ್ತದೆ. ಹೀಗೆ ಹೇಳಿದ ಮಾತ್ರಕ್ಕೆ ಹೆಣ್ಣಾದವಳು ಗಂಡಿಗೆ ಅಧೀನಳಾಗಿ, ಆತ್ಮಾಭಿಮಾನವಿಲ್ಲದ ಆಳಾಗಿ ಇರಬೇಕೆಂದು ಹೇಳಿದಂತಾಗಲಿಲ್ಲ. ಒಂದು ಹೆಣ್ಣು ಒಂದು ಗಂಡಿಗೆ ಮನಸೋತಾಗ, ಒಂದು ಗಂಡು ಒಂದು ಹೆಣ್ಣಿಗೆ ಒಲಿದು ಬದುಕೇ ಬಯಕೆಯಾಗಿ ನಿಂತಾಗ, ಒಬ್ಬರಿಗೊಬ್ಬರು ' ನಿನ-ಗಧೀನಮೀ ಜೀವಿತಂ' ಎಂದು ಹೇಳುವಂತಾದಾಗ, ಸಮಾನಾಧಿಕಾರ, ಸಮಾನಾವಕಾಶಗಳ ಮಾತು ಎಲ್ಲಿ ಉಳಿಯುತ್ತದೆ? ಈ ಮಾತನ್ನು ಒಬ್ಬರಿಗೊಬ್ಬರು ಹೃದಯದಾಳದಿಂದ ಹೇಳುವಂತಾದಾಗ ಯಾರು ಯಾವ ಅಧಿಕಾರಗಳನ್ನು ಪಡೆದರೂ ಸರಿ, ಅದರಿಂದ ಇಬ್ಬರಿಗೂ ಬಾಧಕವಿಲ್ಲ. ಆದರೆ ಆ ಸಂದರ್ಭದಲ್ಲಿ ಸಮಾನ ಅಧಿಕಾರ, ಸಮಾನ ಹಕ್ಕುಗಳ ಮಾತೆ ಹೊರಬರುವುದಿಲ್ಲ.

ಕಾವೇರಿಯ ದೃಷ್ಟಿ ಆಧುನಿಕವಲ್ಲ; ಒಂದು ವೇಳೆ ಇಂದಿನ ಪರಿಸ್ಥಿತಿಯಲ್ಲಿ ವಾಸ್ತವವೂ ಎನಿಸಲಿಕ್ಕಿಲ್ಲ. ಆದರೆ ಆ ದೃಷ್ಟಿಯಲ್ಲಿ ಯಾವುದೊ

ಒಂದು ಭವ್ಯವಾದ, ಪರಮೋದಾತ್ತವಾದ ಪ್ರೇರಣೆಯಿದೆ; ಶಕ್ತಿ ಇದೆ. ಪ್ರೀತಿಯ ಸ್ವರೂಪ ಅಗಾಧವೆಂದೆ ಹೇಳಬೇಕಾಗುತ್ತದೆ. ಆ ಪ್ರೀತಿಯ ಅಭಿವ್ಯಕ್ತಿಗಾಗಿ ಅಥವಾ ಅದರ ಪರಿಣಾಮವಾಗಿ ಒಂದು ಜೀವ ವ್ಯರ್ಥವಾಗಿ ಹಾಳಾಯಿತು ಹಾಳಾಗಬೇಕಾದದ್ದೆ ದುರಂತ ಆಕೆಯ ಸ್ವಭಾವ ಸತ್ವವನ್ನು ನಾವು ಒಪ್ಪುವುದಾದರೆ ಆ ದುರಂತ ಅನಿವಾರ್ಯವಾಯಿತು. ಮೊದಲಿನಿಂದಲೂ ಆಕೆಯ ಸ್ವಭಾವ, ಪ್ರತಿಕ್ರಿಯೆ, ಬಯಕೆ ಬೇಡಿಕೆಗಳು ಮುಂಬರುವುದಕ್ಕಾಗಿ ದಾರಿ ಕಡಿದವು ಮಕ್ಕಳ ಬಯಕೆಯೆ ಆಕೆಗೆ ಮುಳುವಾಯಿತು ಮಕ್ಕಳಿಲ್ಲವೆಂಬ ಮರುಕವನ್ನು ಕೃತಕವಾದ ಮಗುವಿನ ಕನಸಿನಲ್ಲಿ ಮರೆಯಲೆಳಸಿದಳು. ಆ ಕನಸು ಬಯಲಾದಾಗ ಜೀವನ ವಿರಸವೆನಿಸಿತು. ಅದರ ಪರಿಣಾಮವಾಗಿ ಮಾನವಸ್ವಭಾವಕ್ಕೆ ಸಹಜವಾಗಿ ಬೇಸರ, ಸಿಡುಕು ತಲೆದೋರಿ, ಶ್ರೀನಿವಾಸನ ಮನಸ್ಸು ಬೇರೆಡೆ ಓಡುವಂತಾಯಿತು. ಇದೆಲ್ಲಕ್ಕೂ ಅನುಕೂಲವೆಂಬಂತೆ ಭಾಗಮ್ಮ-ಲಕ್ಷ್ಮಿಯರ ಸಂಚು ನಡೆಯಿತು. ಹೀಗೆ, ಒಂದರಿಂದೊಂದಾಗಿ ಪರಿಸ್ಥಿತಿ ವಿಷಮಗೊಂಡಿತು ಒಂದಿಲ್ಲೊಂದು ಬಗೆಯಿಂದ ಆ ಪರಿಸ್ಥಿತಿಯನ್ನು ಎದುರಿಸಲು ಕಾವೇರಿ ಸಿದ್ಧಳಾಗಿಯೆ ಇದ್ದಳು. ಆಕೆಯ ಮನಸ್ಸಿನ ಸಿದ್ಧತೆಯೆ ದುರಂತಕ್ಕೆ ಸನ್ನಿಹಿತ ಕಾರಣವಾಯಿತು. ಸ್ವಭಾವದ ಮೂಲಕ ಅಪರಿಹಾರ್ಯವಾದುದನ್ನು ಸನ್ನಿವೇಶ ಅನಿವಾರ್ಯವಾಗಿ ಮಾಡಿ ದುರಂತವನ್ನು ಪರಿಣಾಮ ಮುಖವಾಗಿಸಿತು. ಆಕೆಯ ಸುತ್ತಲಿನಲ್ಲಿಯ ಎಲ್ಲರೂ, ಆಕೆಯನ್ನು ಸುತ್ತುಗಟ್ಟಿದ ಪರಿಸ್ಥಿತಿಯಲ್ಲಿಯ ಪ್ರತಿಯೊಂದು ಅಂಶವೂ ಒಳಸಂಚು ಹೂಡಿ ಒಮ್ಮುಖವಾಗಿ ದುರಂತದೆಡೆಗೆಯೆ ಆಕೆಯನ್ನು ಎಳೆಯುವಂತಾಯಿತು.

ಶ್ರೀನಿವಾಸ ಕೊನೆಯ ವರೆಗೂ ಹೊಯ್ದಾಡಿದ ಕಾವೇರಿಯ ಅಂತರಂಗವನ್ನು ಆತ ತಿಳಿಯದೆ ಹೋದ. ಆಕೆಗೆ ಬಂದ ಕಾಗದದ ವಿಚಾರವಾಗಿ ಮಾತು ನಡೆದಾದಮೇಲೆ ಆಕೆಯ ಯೋಚನೆ ಯಾವ ದಿಕ್ಕಿನಲ್ಲಿ ಓಡಲು ಆರಂಭಿಸಿತೆಂಬುದು ಆತನಿಗೆ ಕೆಲಮಟ್ಟಿಗಾದರೂ ತಿಳಿದಿದ್ದರೆ ಆತ ಅನಾಹುತವನ್ನು ಖಂಡಿತವಾಗಿಯೂ ತಪ್ಪಿಸುತ್ತಿದ್ದ. ತಾನು ಇನ್ನೊಂದು ಮದುವೆಯನ್ನು ಮಾಡಿಕೊಳ್ಳಬಹುದು, ಮಾಡಿಕೊಳ್ಳಬೇಕು ಎಂದು ಮುಂತಾಗಿ ಆಕೆಯೆ ಒತ್ತಾಯಪಡಿಸಲೆಳಸಿದಾಗ ಶ್ರೀನಿವಾಸನಿಗೆ ಆಕೆಯ ಹೃದಯದ

ಔದಾರ್ಯದ ಅರಿವು ಕೆಲಮಟ್ಟಿಗೆ ಬಂದಿತ್ತಾದರೂ ಆ ಔದಾರ್ಯ ಯಾವ ಮಟ್ಟದ್ದು, ಎಲ್ಲಿಯವರೆಗೆ ಕಾವೇರಿಯನ್ನು ಅದು ಮುಂದೂಡಬಹುದೆಂಬುದರ ಕಲ್ಪನೆ ಮಾತ್ರ ಆತನಲ್ಲಿ ಮೂಡಲಿಲ್ಲ. ಇಂಥವಳು ತನ್ನ ಹತ್ತಿರವಿರುವಾಗ, ತನ್ನವಳಾಗಿರುವಾಗ ಇನ್ನೊಂದು ಮದುವೆ ಯಾತಕ್ಕೆ? ಕಾವೇರಿಯ ಹೃದಯವೈಶಾಲ್ಯವೆದುರು ಸುಮಿತ್ರೆಯ ಯೌವನದ ಸೆಳೆತ ಯಾವ ಬೆಲೆಯದು? ಎಂಬುದನ್ನು ಶ್ರೀನಿವಾಸ ತಿಳಿದನಾದರೂ ಆ ತಿಳಿವು ಕ್ರಿಯಾಮುಖವಾಗಲಿಲ್ಲ. ಅಲ್ಲದೆ, ತಾನು ಹೇಳಿದ್ದರಿಂದ, ಹೇಳಿದಷ್ಟರಿಂದ ಕಾವೇರಿಯ ಸಂಶಯ ದೂರವಾಯಿತೆಂದು ಬಗೆದದ್ದೆ ಅನಾಹುತವಾಯಿತು. ಮಾನವಸ್ವಭಾವಕ್ಕೆ ಸಹಜವಾಗಿ ಕೆಲವೊಂದು ಮಾತುಗಳನ್ನು ಶ್ರೀನಿವಾಸ ಹೇಳುವುದು ಸಾಧ್ಯವೆ ಇರಲಿಲ್ಲ. ಆತ ಪೂರ್ತಿಯಾಗಿ ತನ್ನ ಮನಸ್ಸನ್ನು ಬಿಚ್ಚಿ ತೋರಿಸಲಿಲ್ಲವೆಂಬುದರಿಂದ ಕಾವೇರಿಯ ಹೃದಯ ಹೆಚ್ಚಿಗೆ ಸಂಶಯಗೊಳ್ಳಲಿಲ್ಲ. ಶ್ರೀನಿವಾಸನಿಗೆ ಬೇರೆ ಮದುವೆಯ ಯೋಚನೆ ಇದೆ, ಅದನ್ನು ಆತ ಬಾಯಿಂದ ಹೇಳಲಾರ ಎಂಬ ಮನವರಿಕೆ ಮಾತ್ರ ಬೆಳೆಯಿತು. ಹೀಗಿದ್ದಮೇಲೆ ಅದಕ್ಕೆ ಆಸ್ಪದವನ್ನೇಕೆ ಮಾಡಿಕೊಡಬಾರದು? ಅದರಿಂದ ಒಂದು ದೃಷ್ಟಿಯಿಂದ ತನಗೆ ಸಾಮಾನ್ಯ ಸುಖವಿಲ್ಲದಾದರೂ ಬೇರೆಯಾದ ಒಂದು ದೃಷ್ಟಿಯಿಂದ ತಾನು ನಿಜವಾಗಿಯೂ ಸತಿಯಾಗಬಹುದು, ಪತಿಯ ಬಗೆಯಲ್ಲಿ ತನ್ನ 'ಕರ್ತವ್ಯ'ವನ್ನು ನೆರವೇರಿಸಬಹುದು ಎಂಬ ವಿಚಾರಕ್ಕೆ ಅನುವಾಯಿತು. ಆ ವಿಚಾರವೆ ಪ್ರೇಮದ ಪರಮೋದಾತ್ತವಾದ ಸಮರ್ಪಣೆಯೆಡೆಗೆ ಆಕೆಯನ್ನು ಕರೆದೊಯ್ಯಿತು.

ಈ ಯಾವ ಮಾತುಗಳನ್ನೂ ನಾನು ಕಾವೇರಿಯ ಕೃತಿಗೆ ಸಮರ್ಥನೆ ಎಂದು ಹೇಳುತ್ತಿಲ್ಲ. ಆಕೆಗೆ ಯಾವ ಸಮರ್ಥನೆಯೂ ಬೇಕಿಲ್ಲ. ಇನ್ನೊಬ್ಬರಿಗಾಗಿ ಎಲ್ಲವನ್ನೂ ಸೂರೆಮಾಡಿದ ಆಕೆಯ ಹೃದಯಸಂಸ್ಕಾರವೆ ಆಕೆಗೆ ಸಮರ್ಥನೆ. ಅದೆ ಒಂದು ಸ್ಪೃಹಣೀಯವಾದ ಮೂಲ್ಯ. ಯಾವುದನ್ನೂ ಬೇಡದೆ ಎಲ್ಲವನ್ನೂ ಕೊಡಬಲ್ಲ ಆತ್ಮಸಮರ್ಪಣೆಯೆ ಪ್ರೀತಿಯ ಸತ್ವವಾದರೆ ಕಾವೇರಿಯ ಪ್ರೀತಿಗೆ ಸಾಟಿಯಿಲ್ಲ; ಸರಿಯಾದುದಿಲ್ಲ. ಈ ಸತ್ವವನ್ನುಳ್ಳ ಪ್ರೀತಿಯ ಮೂಲಕವೆ ಗಂಡ–ಹೆಂಡತಿ ಎಂಬ ಮಾತಿಗೆ ಏನಾದರೊಂದು ಮಹತ್ವದ ಅರ್ಥ ಹುಟ್ಟಬೇಕು. ಇದಿಲ್ಲದ ಸಂಬಂಧ ಕೇವಲ

ಕಾಮುಕ ಸಂಬಂಧ. ಇದಿಲ್ಲದಾದಾಗಲೆ ಹೆಂಡತಿಗೆ ಗಂಡನೆಂಬುವವನು ಉದರನಿರ್ವಾಹಕ್ಕೊಂದು ಆಶ್ರಯವಾಗುತ್ತಾನೆ; ಹೆಂಡತಿಯೆಂಬುವವಳು ಗಂಡನಿಗೆ ವಿಷಯಲಾಲಸೆಗೊ, ಸಂತಾನಾಭಿವೃದ್ಧಿಗೊ ಸಾಧನವಾಗುತ್ತಾಳೆ. ಹೆಣ್ಣುಗಂಡುಗಳ ಸಂಬಂಧ ಈ ಸತ್ವದಿಂದ ಎರಕ ಹೊಯ್ದುದಾದಾಗಲೆ ಹೆಣ್ಣು ಹೆಂಡತಿಯಾಗುತ್ತಾಳೆ; ಮಡದಿಯಾದವಳು ಮಾತೆಯಾಗುತ್ತಾಳೆ. ಒಂದು ಮನೆ ನಿಲ್ಲುತ್ತದೆ, ಬೆಳೆಯುತ್ತದೆ. ಸಮಾಜ ಎಂಬ ಸಂಸ್ಥೆ ಸ್ಥಿರವಾಗಿ, ಅರ್ಥಯುತವಾಗಿ, ಪ್ರಯೋಜನಕಾರಿಯಾಗಿ ಬೆಳೆಯುತ್ತದೆ. ಆದರೆ ಪ್ರೀತಿ ಎಂಬ ಮಾತು ಇಂದು ಬೆಲೆ ಕಳೆದುಕೊಂಡಹಾಗಿದೆ ಜೀವಸತ್ವವೆ ಉಕ್ಕಿ ಬಂದು ಅರಳಿ ಹೂವಾಗಿ ನಿಲ್ಲಬೇಕಾದುದು ಇಂದು ಕೃತ್ರಿಮ ಸಂಬಂಧಗಳ, ಅನುಕೂಲಗಳ ಕೈವಾಡವಾಗಲಿದೆ ಹಕ್ಕುಬಾಧ್ಯತೆಗಳ ಕೈಗೂಸಾಗಲಿದೆ. ಸಮಾನಾವಕಾಶಗಳ, ಸಮಾನಾಧಿಕಾರಗಳ ನಿಷ್ಠುರ ನಿಷ್ಕರ್ಷೆಗಳಲ್ಲಿ ಸುಮ ಕೋಮಲವಾದ ಸಾಮರಸ್ಯ ಸಮರ್ಪಣೆಗಳು ಬಾಡಿಹೋಗಲಿವೆ ಇಂದಿನ ವಾತಾವರಣ, ವಿಚಾರ, ಆಚಾರ, ಸಾಮಾಜಿಕ ಧೋರಣೆ ಮುನ್ನೋಟ ಗಳೆಲ್ಲವೂ ಈ ಬಗೆಯಲ್ಲಿ ಹೊಸದಾದ ಮೌಲ್ಯಗಳನ್ನು ತಿಳಿದೊ, ತಿಳಿಯದೆ ಅನಿವಾರ್ಯವಾಗಿಯೊ ನಿರ್ಮಿಸುತ್ತಲಿವೆ ಈ ಮೌಲ್ಯಗಳ ಆಶ್ರಯದಲ್ಲಿ ಉದಾತ್ತವಾದ ಯಾವ ಆದರ್ಶಬುದ್ಧಿಯಾಗಲಿ, ವಿಶಾಲ ಹೃದಯಸಂಸ್ಕಾರ ಕ್ಕಾಗಲಿ, ಸತ್ವಯುತವಾದ ಮಾನವತೆಗಾಗಲಿ ಅವಕಾಶವಿಲ್ಲವೆಂಬ ಹೆದರಿ ಕೆಗೆ ಮಾತ್ರ ಅವಕಾಶವಿದೆ. ಕಾವೇರಿಯ ಆತ್ಮಸಮರ್ಪಣೆ ಆದರ್ಶವೆಂದಾ ಗಲಿ, ಆಕೆಯ ಕೃತಿ ಅನುಕರಣೀಯವೆಂದಾಗಲಿ ನಾನು ಇಲ್ಲಿ ಪ್ರತಿಪಾದಿಸು ತ್ತಿಲ್ಲ. ಆದರೆ ಆಕೆಯ ಕೃತಿಗೆ ಹಿನ್ನೆಲೆಯಾಗಿ ನಿಂತ ಹೃದಯವಂತಿಕೆ, ಸಹನೆ, ತಿಳಿವು ತ್ಯಾಗಗಳು ಮಾತ್ರ ಹಿರಿಯಾದ ಆದರ್ಶಗಳೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿರಬಾರದು ಎಲ್ಲವನ್ನೂ ಬಯಸುವ, ಬೇಡುವ, ಸ್ವಾರ್ಥವೆ ಪರಮಾರ್ಥವೆಂದು ಬಗೆಯುವ ನಮ್ಮ ಇಂದಿನ 'ಬುದ್ಧಿವಂತಿಕೆ'ಯ ಬೆಲೆ ಕಾವೇರಿಯಂಥವರ ಜೀವನಸತ್ವದೆದುರು ಎಷ್ಟು ಎಂಬುದು ವಿಚಾರಾರ್ಹ ವಾದ ವಿಷಯವಲ್ಲವೆ?

ಈ ಎಲ್ಲ ವಿಚಾರ ಕಾವೇರಿಯ ಪಾತ್ರದರ್ಶನದ ಮೂಲಕ ವ್ಯಕ್ತವಾಗು ತ್ತದೆಯೊ ಇಲ್ಲವೊ. ಆದರೆ ಈ ವಿಚಾರಗಳ ಸೂಚನೆ ಆ ಪಾತ್ರದ ಮೂಲ

ಕಲ್ಪನೆಯಲ್ಲಿ ಅಡಕವಾಗಿದೆ ಎಂದು ನನಗಂತೂ ತೋರಿದೆ. ಶ್ರೀನಿವಾಸ ಕಾವೇರಿಯರ ಅನ್ಯೋನ್ಯ ಸಂಬಂಧಗಳೆ ಇಲ್ಲಿಯ ಕಾದಂಬರಿಗೆ ಮೂಲ ವಸ್ತು. ಆ ಸಂಬಂಧಗಳಿಂದಲಾದರೂ ಇದೆ ಸೂಚನೆ ಹೊರಬೀಳುತ್ತದೆ. ಇಬ್ಬರ ಜೀವನದ, ತಿಳಿವಿನ ಮಟ್ಟಗಳು ಬೇರೆ ಬೇರೆಯಾದರೂ ಇಬ್ಬರೂ ಮಾನವ ವ್ಯಕ್ತಿಗಳು. ಅವರಿಬ್ಬರ ಸ್ವಭಾವದರ್ಶನದಿಂದ ಮತ್ತು ವಿಶಿಷ್ಟ ವಾದ ಒಂದು ಪರಿಸ್ಥಿತಿಯಲ್ಲಿ ಅವರಿಬ್ಬರೂ ತಮ್ಮ ತಮ್ಮ ವ್ಯಕ್ತಿತ್ವಕ್ಕೆ ಸರಿಯಾಗಿ ಅವರು ಹೇಗೆ ನಡೆದುಕೊಂಡರೆಂಬುದರಿಂದ ಜೀವನದ ಒಂದು ವೈಯನ್ನು ತೋರಿಸುವುದೆ ಇಲ್ಲಿಯ ಮುಖ್ಯವಾದ ಉದ್ದೇಶವಾಗಿದೆ. ಮೊದಲಿನಿಂದ ಕೊನೆಯ ವರೆಗೆ ಯಾವ ಅಸಾಧಾರಣವಾದ, ಅನಿರೀಕ್ಷಿತವಾದ ಘಟನೆಯೂ ನಡೆಯುವುದಿಲ್ಲ ಸ್ವಾಭಾವಿಕವಾದುದರ, ಸಹಜವಾದುದರ ಮಡಿಲಲ್ಲಿಯೆ ದುಃಖ ಮೂಡಿಕೊಂಡು ಬೆಳೆದುನಿಲ್ಲುತ್ತದೆ. ಆ ದೃಷ್ಟಿಯಿಂದ ಇದೊಂದು ಜೀವನದ ದುರಂತ ಚಿತ್ರ ಮಾತ್ರ. ಜೀವನದ ಹಾಸುಹೊಕ್ಕು ಗಳಲ್ಲಿ ಹೆಣೆದುಕೊಂಡ, ಕ್ಷಣಕ್ಷಣಕ್ಕೂ ಹೆಣೆದುಕೊಳ್ಳುತ್ತಲಿದ್ದ ಮಾನವ ಸ್ವಭಾವಕ್ಕೆ ಸಹಜವಾದ ಭಾವನೆಗಳು, ವಿವಿಧ ವಿಕಾರಗಳು, ವಿಲಾಸಗಳು, ಯೋಚನೆ ಕ್ರಿಯೆ ಪ್ರತಿಕ್ರಿಯೆಗಳು, ನಂಬಿಕೆ ಶ್ರದ್ಧೆಗಳು ನಮಗೆ ತಿಳಿಯದಲೆ ನಮ್ಮ ಭವಿತವ್ಯವನ್ನು ಚಿತ್ರವಿಚಿತ್ರವಾಗಿ ನೇಯುತ್ತಿರುತ್ತವೆ. ಹೀಗೆಂದೆ, ಮನುಷ್ಯ ಮುಂಬರುವ ತನ್ನ ಭಾಗ್ಯ ದುರ್ಭಾಗ್ಯಗಳೆರಡಕ್ಕೂ ತಾನೇ ಬಹುಮಟ್ಟಿಗೆ ಕಾರಣನಾಗುತ್ತಾನೆ ; ಹೊಣೆಗಾರನಾಗುತ್ತಾನೆ

ಕಾದಂಬರಿಯಲ್ಲಿ ಮುಖ್ಯ ಪಾತ್ರಗಳ ಸ್ವಭಾವಗಳ ಗುಣದೋಷಗ ಳೊಡನೆ ಆ ಸ್ವಭಾವಗಳಲ್ಲಿ ಮಕ್ಕಳ ವಿಷಯದಲ್ಲಿ ಬೆಳೆದುನಿಂತ ಒಂದು ಹಳೆಯ ನಂಬಿಕೆಯೂ ಕೆಲಮಟ್ಟಿಗೆ ಕಾದಂಬರಿಯ ಕೊನೆಗೆ ಕಾರಣವಾಗು ತ್ತದೆ. 'ಮಕ್ಕಳಿದ್ದವರಿಗೆಯೆ ಸ್ವರ್ಗದ ಬಾಗಿಲು ತೆರೆಯುತ್ತದೆ' ಎಂಬುದೆ ಆ ನಂಬಿಕೆ. ಮನೆಗೆ ಮಕ್ಕಳಿರಬೇಕೆಂಬ ಹಂಬಲೇನೊ ಮಾನವಸಹಜ ವಾದದ್ದು. ಕೆಲವರಲ್ಲಿ ಸ್ಪಷ್ಟವಾಗಿರಬಹುದು ; ಕೆಲವರಲ್ಲಿ ಅಷ್ಟೊಂದು ಸ್ಪಷ್ಟ ವಾಗಿರಲಿಕ್ಕಿಲ್ಲ ಹೊಸ ವಿಚಾರಗಳ ಯಾವ ಸಂಪರ್ಕವೂ ಇಲ್ಲದ ಭಾಗಮ್ಮ ಕಾವೇರಿಯರಲ್ಲಿ ಆ ಹಂಬಲ ಉತ್ಕಟವಾಗಿರುವುದು ಆಶ್ಚರ್ಯವಲ್ಲ ಶ್ರೀನಿ ವಾಸನಾದರೂ ಅಷ್ಟೇ. ಮಕ್ಕಳಿರಬೇಕೆಂಬ ಆಸೆ ಆತನಿಗೂ ಇದೆ. ಈ

ಹಂಬಲು ಬರಿ ಹಂಬಲಾಗಿಯೆ ಉಳಿದಿದ್ದರೆ, ಕೇಡಿಗೆ ಕಾರಣವಾಗುತ್ತಿರಲಿಲ್ಲ. ಇಹದಲ್ಲಿಯ ಸೌಖ್ಯದೊಡನೆ ಪರದಲ್ಲಿಯ ಭೀತಿಯೊಂದು ತೊಡಕಿಕೊಂಡಿದೆ, ಈ ವಿಷಯದಲ್ಲಿ. 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ಮಾತು ಯಾವ ಕಾಲಕ್ಕೆ ಯಾವ ಕಾರಣಕ್ಕಾಗಿ ಹುಟ್ಟಿಕೊಂಡಿತೊ! ಇಹದಲ್ಲಿಯ ಸೌಖ್ಯಕ್ಕಿಂತ ಪರದಲ್ಲಿಯ ಭೀತಿಯೆ ಹೆಚ್ಚಾಗಿ ಈ ಹಂಬಲವನ್ನು ವಿಪರೀತಗೊಳಿಸುತ್ತದೆ. ಈ ಕತೆಯಲ್ಲಿ ಹಾಗೆ ನಡೆಯುತ್ತದೆ. ಈ ವಿಷಯದಲ್ಲಿ ಶ್ರೀನಿವಾಸನಿಗೆ ಸಂಪೂರ್ಣವಾಗಿ ವಿಶ್ವಾಸವಿದ್ದಿತು ಎಂದು ಹೇಳಲಾಗುವುದಿಲ್ಲ. ಇರಲಿಲ್ಲವೆಂದೂ ಹೇಳಲಾಗುವುದಿಲ್ಲ. 'ಯಾರು ಬಲ್ಲರು?' ಎಂಬ ತ್ರಿಶಂಕುವಿನ ಅವಸ್ಥೆಯಲ್ಲಿಯೆ ಇದ್ದನೆಂದು ಹೇಳಬೇಕು. ಹೀಗೆಂತಲೆ ಕೊನೆಯ ವರೆಗೂ ಆತನಿಗೆ ಎರಡನೆಯ ಮದುವೆಯ ವಿಷಯದಲ್ಲಿ ಯಾವ ನಿಷ್ಕರ್ಷೆಯನ್ನೂ ಮಾಡಲಾಗಲಿಲ್ಲವೆಂದು ಕಾಣುತ್ತದೆ. ಪರದಲ್ಲಿ ಆತನಿಗೆ ಪೂರ್ತಿಯಾಗಿ ವಿಶ್ವಾಸವಿರದೆ ಹೋಗಿದ್ದರೆ ಕಾವೇರಿಗಾಗಿ ಇಹದಲ್ಲಿಯ ಸೌಖ್ಯವನ್ನು ಆತ ಹೇಗಾದರೂ ಮರೆಯಬಹುದಾಗಿತ್ತು. ಆದರೆ ಹೊಯ್ದಾಡುವ ಆತನ ಮನಸ್ಸು ಒಂದೆಡೆಗೆ ಒಲಿಯುವಂತೆ ಭಾಗಮ್ಮ-ಕಾವೇರಿಯರಿಬ್ಬರೂ ಆತನ ಎಡಬಲದಲ್ಲಿದ್ದಾರೆ. ಅವರಿಬ್ಬರ ಮೂಲಕವೆ ಆತ ಮಕ್ಕಳಿಗಾಗಿ ಮತ್ತೊಂದು ಮದುವೆಯ ಯೋಚನೆಯನ್ನು ಮಾಡಬೇಕಾಯಿತು. ಮೊದಲು ತಾಯಿ, ಆಮೇಲೆ ಹೆಂಡತಿ—ಈ ರೀತಿಯಾಗಿ ಆತನ ಮನಸ್ಸಿನಲ್ಲಿ ಅಸ್ಪಷ್ಟವಾಗಿದ್ದ ಮಕ್ಕಳ ಕೊರಗನ್ನು ಸ್ಪಷ್ಟಗೊಳಿಸುತ್ತಾರೆ. ಸ್ಪಷ್ಟವಾದ ಕೊರಗನ್ನು ಆತನ ಮನಸ್ಸಿನ ಹಿಂಗಡೆಯಲ್ಲಿ ಎಲ್ಲಿಯೊ ಅವಿತುಕೊಂಡಿದ್ದ 'ಮಕ್ಕಳಿಲ್ಲದವರಿಗೆ ಗತಿ ಇಲ್ಲ' ಎಂಬ ಭಾವುಕ ಭೀತಿ ಇನ್ನೂ ತೀವ್ರಗೊಳಿಸುತ್ತದೆ. ಒಂದೆಡೆ ಈ ಹಂಬಲ ತೀವ್ರವಾಗುತ್ತಗೆ; ಇನ್ನೊಂದೆಡೆ ಕಾವೇರಿಯ ವಿಪರೀತ ವೃತ್ತಿಯಿಂದಾಗಿ ಮನಸ್ಸು ಬೇಸರಗೊಂಡು ಬೇರೆಡೆಯಲ್ಲಿ ಯೌವನಕ್ಕೆ ಸಹಜವಾದ ಸರಸವನ್ನು ಅಪೇಕ್ಷಿಸುತ್ತದೆ. ಸುಮಿತ್ರೆಯೆಡೆಗೆ ಒಲಿಯುತ್ತದೆ. ಭಾಗಮ್ಮನಲ್ಲಿ ಒಂದು ಬಗೆಯಲ್ಲಾದರೆ, ಶ್ರೀನಿವಾಸ ಕಾವೇರಿಯರಲ್ಲಿ ಒಂದೊಂದು ಬಗೆಯಾಗಿ ಮಕ್ಕಳ ಬಗೆಯಲ್ಲಿಯ ಈ ನಂಬಿಕೆ ಕೆಲಸಮಾಡಿ ಕಾದಂಬರಿಯಲ್ಲಿಯ ಸನ್ನಿವೇಶದ ಬೆಳವಣಿಗೆಯ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಒಟ್ಟಿನಲ್ಲಿ, ದುರಂತಕ್ಕೆ ಅಷ್ಟೇನೂ ದೂರವಲ್ಲದ ಕಾರಣವಾಗುತ್ತದೆ.

ಇಲ್ಲಿ ಚಿತ್ರಿಸಲಾದ ಸನ್ನಿವೇಶವಾಗಲಿ, ಅದನ್ನು ಸಾಧ್ಯವಾಗಿಸಿದ ಸ್ವಭಾವವಿಶೇಷಗಳಾಗಲಿ ಒಂದು ದೃಷ್ಟಿಯಿಂದ ಬಹುಮಟ್ಟಿಗೆ ಕಣ್ಮರೆಯಾಗುತ್ತಿರುವ ತಲೆಮಾರಿಗೆ ಸಂಬಂಧಪಟ್ಟವುಗಳು. ಮಕ್ಕಳ ವಿಷಯದಲ್ಲಿಯ ಹಂಬಲ ಅಥವಾ ಅದಕ್ಕೆ ಸಂಬಂಧಿಸಿದ ಈ ಹಳೆಯ ನಂಬಿಕೆ ಇಂಥ ಉತ್ಕಟಾವಸ್ಥೆಯಲ್ಲಿ ಇಂದು ಕಾಣಸಿಗುವುದು ಕಷ್ಟವೆಂದೆ ಹೇಳಬೇಕು. ಮಕ್ಕಳನ್ನು ಬಯಸುವ ಗಂಡಹೆಂಡಿರು ಇಂದಿಗೆ ಇಲ್ಲವೆ ಇಲ್ಲವೆಂದು ಹೇಳಲಾಗುವುದಿಲ್ಲ. ಆದರೆ ಆ ಬಯಕೆಗೆ ಸಂಬಂಧಿಸಿದ ಪರಲೋಕದಲ್ಲಿಯ ಭೀತಿ ಇಲ್ಲದಾಗಿದೆ. ಹೊಟ್ಟೆತುಂಬ ಅನ್ನ ಮೈತುಂಬ ಬಟ್ಟೆ ಸಿಕ್ಕದ ಇಹವೇ ಯೋಚನೆಗೀಡುಮಾಡುವಂತಾದಾಗ ಪರಲೋಕದಲ್ಲಿಯ ಗತಿಯ ಯೋಚನೆ ಯಾರಿಗೆ ಉಳಿಯಬೇಕು? ಈ ಮನೋವೃತ್ತಿಗೆ ಆನುಷಂಗಿಕವಾಗಿ ಮಕ್ಕಳೆಂದರೆ ಗಂಡಹೆಂಡಿರ ಸರಸಜೀವನಕ್ಕೆ ಆತಂಕವೆಂಬ ಭಾವನೆಯೂ ಅಲ್ಲಲ್ಲಿ ಕಾಣಬರುತ್ತದೆ. ಯಾವ ಕಾರಣವೆ ಇರಲಿ, ಇಂದಿಗೆ ಮೊದಲು ಎಂದಿಗೂ ಇಲ್ಲದ ಪ್ರಮಾಣದಲ್ಲಿ ಪ್ರಯೋಗದಲ್ಲಿದ್ದ ಸಂತತೀ ಪ್ರತಿಬಂಧಕಗಳನ್ನು ನೆನೆದರೆ ಮಕ್ಕಳ ಬಗೆಯಲ್ಲಿಯ ಇಂದಿನ ಶ್ರದ್ಧೆ, ನಂಬಿಕೆ, ಅಪೇಕ್ಷೆಗಳು ಎಂಥವು ಎಂಬುದನ್ನು ನಾವು ಊಹಿಸಬಹುದಾಗಿದೆ. ಒಂದೆಡೆ ಹೀಗಾದರೆ ಇನ್ನೊಂದೆಡೆ ಮಕ್ಕಳಿಗಾಗಿ ಬೇಕಾದುದನ್ನು ಮಾಡುವವರೂ ಇದ್ದಾರೆ. ಒಂದು ಕಾಲಕ್ಕೆ ಗುಡಿ, ಮಠ, ಸ್ವಾಮಿ, ಸನ್ಯಾಸಿಗಳ 'ಸೇವೆ'ಯಾದರೆ ಇಂದಿಗೆ ವೈದ್ಯಕೀಯ ಔಷಧೋಪಾಯ, ಶಸ್ತ್ರಚಿಕಿತ್ಸೆ, ಟೇಸ್ಟ್‌ಟ್ಯೂಬ್ ಬೇಬೀಸ್ ಮೊದಲಾದ ಸಾಧನಗಳು ತಲೆಯೆತ್ತಿ ನಿಂತಿವೆ. ಆದ್ದರಿಂದ ಒಂದೊಂದು ತಲೆಮಾರಿನಲ್ಲಿ ಒಂದೊಂದು ಬಗೆಯಾಗಿ ಈ ಹಂಬಲು ಮಾರ್ಪಟ್ಟಿದೆ; ತಲೆದೋರಿದೆ ಒಂದೊಂದು ಬಗೆಯ ಸಮಸ್ಯೆ, ಸಂತೋಷ, ಸಂತಾಪಗಳಿಗೆ ಎಡೆ ಮಾಡಿಕೊಟ್ಟಿದೆ ಹೀಗೆಂದೆ, ಇಲ್ಲಿಯ ಸನ್ನಿವೇಶ ಹಿಂದಿನ ಕಾಲಕ್ಕೆ ಸಂಬಂಧಪಟ್ಟುದೆಂದು ಹೇಳಿದಾಗ ಆ ಹಂಬಲದ ಬಾಹ್ಯ ಆವಿಷ್ಕಾರ, ಪರಿಸ್ಥಿತಿ, ಪರಿಣಾಮಗಳು ಮಾತ್ರ ಹಿಂದಿನವೆ ಹೊರತು ವ್ಯಕ್ತಿಗಳ ಜೀವನದಲ್ಲಿ ತೊಡಕುಗಳನ್ನು, ಅಸಂತೋಷಗಳ[illegible] ಹುಟ್ಟಿಸುವ ಸಾಮರ್ಥ್ಯದ ದೃಷ್ಟಿಯಿಂದಲ್ಲ. ಆದ್ದರಿಂದ ಇಂಥ ದುರಂ[illegible] ಬೀಜವಾಗಬಹುದಾದ ಉತ್ಕಂಠೆಯ ಅಥವಾ ಉಪೇಕ್ಷೆಯ ಭಾವನೆಗೆ

ಮಾನವನ ಹೃದಯಕ್ಕೆ ನಿತ್ಯವಾಗಿ ಹತ್ತಿರದಲ್ಲಿಯೆ ಇರುತ್ತವೆ. ಒಂದು ಕಾಲದಲ್ಲಿ ಒಂದು ಬಗೆಯ ನಂಬಿಕೆಗಳಿಂದಾಗಿ ಸನ್ನಿವೇಶ ಇಲ್ಲಿ ಚಿತ್ರಿಸಿದಂತೆ ರೂಪುಗೊಳ್ಳಬಹುದಾದರೆ ಇಂದಿನ ಪರಿಸ್ಥಿತಿಯಲ್ಲಿ ಹೊಸ ಅಪನಂಬಿಕೆ–ಅಪೇಕ್ಷೆ–ಆಸೆಗಳ ಪರಿಣಾಮವಾಗಿ ಬೇರೆಯಾಗಿ ರೂಪುಗೊಳ್ಳಬಹುದು, ಅಷ್ಟೆ.

ಈ ಕಾದಂಬರಿಯಲ್ಲಿಯ ಕತೆಗೆ ಹಿನ್ನೆಲೆಯಾದ ಕೆಲವೊಂದು ವಿಚಾರಗಳನ್ನು ಇಲ್ಲಿ ವಿವರಿಸಿದ್ದೇನೆ. ಕತೆಗಾಗಿ ಕಾದಂಬರಿಯನ್ನು ಓದುವವರಿಗೆ ಈ ವಿಚಾರಗಳಿಂದೇನೂ ಆಗಬೇಕಿಲ್ಲ. ಆದರೂ ಕಾದಂಬರಿಯು ಓದುಗರಿಗೆ ಕೊಡಬಹುದಾದ ಸಂತೋಷ ಈ ವಿವರದಿಂದಾಗಿ ಕೆಲಮಟ್ಟಿಗಾದರೂ ಹೆಚ್ಚಾದರೆ ಈ ಬರವಣಿಗೆ ವ್ಯರ್ಥವಲ್ಲವೆಂದು ಭಾವಿಸುತ್ತೇನೆ.

ಅಹಮ್ಮದಾಬಾದ
೮—೯—೧೯೫೧

ವಿ. ಎಂ. ಇನಾಂದಾರ್

# ಉಷಾ ಸಾಹಿತ್ಯಮಾಲೆ, ಮೈಸೂರು

## ಸ್ವತಂತ್ರ ಸಾಮಾಜಿಕ ಕಾದಂಬರಿಗಳು

| | | | | |
|---|---|---|---|---|
| *ರಕ್ತತರ್ಪಣ | ತ. ರಾ. ಸು. | ೧ | ೮ | ೦ |
| *ಪಯಣದ ಹಾದಿಯಲ್ಲಿ | ಎಸ್. ಅನಂತನಾರಾಯಣ | ೧ | ೧೨ | ೦ |
| *ಕಣ್ಣೀರು | ಅ. ನ. ಕೃಷ್ಣರಾಯ | ೧ | ೧೨ | ೦ |
| ಅಸ್ಥಿಪಂಜರ | ಅರ್ಚಿಕ ವೆಂಕಟೇಶ | ೩ | ೦ | ೦ |
| *ನಾಳ್ಕನೆಯ ಮನೆ * | ನರೇಂದ್ರಬಾಬು | ೨ | ೦ | ೦ |
| *ಕನಸಿನ ಮನೆ | ವಿ. ಎಂ. ಇನಾಂದಾರ | ೩ | ೦ | ೦ |
| *ಶಂಖವಾದ್ಯ | ನಾ. ಕಸ್ತೂರಿ | ೧ | ೧೨ | ೦ |
| ತತ್ವಜೀವಿ | ಎನ್. ಸೂರಪ್ಪ | ೧ | ೧೨ | ೦ |
| *ಹೇಮಾವತಿ | ಗೊರೂರು ರಾಮಸ್ವಾಮಯ್ಯಂಗಾರ್ | ೩ | ೮ | ೦ |
| ಸನ್ಯಾಸಿಯ ಬದುಕು | ಶಿವರಾಮ ಕಾರಂತ | ೨ | ೮ | ೦ |
| ಕುಮಾರ ಸಂಭವ | ಶ್ರೀರಂಗ | ೨ | ೧೨ | ೦ |
| ಕೊನೆಯ ದಾರಿ | ಕೃಷ್ಣಮೂರ್ತಿ ಪುರಾಣಿಕ | ೩ | ೦ | ೦ |
| ಭಸ್ಮಾಸುರ | ಮಿರ್ಜಿ ಅಣ್ಣಾರಾಯ | ೧ | ೮ | ೦ |
| ಶಾಪ | ವಿ. ಎಂ. ಇನಾಂದಾರ | ೩ | ೦ | ೦ |
| ರೂಪದರ್ಶಿ | ಕೆ. ವಿ. ಅಯ್ಯರ್ | ೪ | ೦ | ೦ |
| ಮಾಡಿ ಮಡಿದವರು ! | ಬಸವರಾಜ ಕಟ್ಟೀಮನಿ | ೩ | ೦ | ೦ |
| ದಾಸಕೂಟ | ಬಳ್ಳಾರಿ ಬೀಚಿ | ೧ | ೧೨ | ೦ |
| ಕುಡಿಯರ ಕೂಸು | ಶಿವರಾಮ ಕಾರಂತ | ೪ | ೮ | ೦ |
| ಮಂಜುಳಾ | ಕೃಷ್ಣಮೂರ್ತಿ ಪುರಾಣಿಕ | ೩ | ೦ | ೦ |
| ಮೂರಾಬಟ್ಟೆ | ವಿ. ಎಂ. ಇನಾಂದಾರ | ೩ | ೧೫ | ೦ |
| ನಟಸಾರ್ವಭೌಮ | ಅ. ನ. ಕೃಷ್ಣರಾಯ | ೧೦ | ೦ | ೦ |
| ಸ್ವರ್ಗದ ಬಾಗಿಲು | ವಿ. ಎಂ. ಇನಾಂದಾರ | ೨ | ೧೨ | ೦ |